ಭಾನುವಾರ, ಜುಲೈ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 200 | ಪುಟ 18
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಫೈನಲ್‌ಗೆ ಲೆವೊನ್
ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಲೆವೊನ್ ಅರೋನಿಯನ್ ಅವರು ಫ್ರೀಸ್ಟೈಲ್ ಚೆಸ್ ಗ್ರ್ಯಾನ್‌ಸ್ಲಾಮ್ ಟೂರ್‌ನಲ್ಲಿ ಭಾರತದ ಅರ್ಜುನ್ ಇರಿಗೇಶಿ ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿದರು



ಪ್ರತಿಭಟನೆ
ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು ವಿರೋಧಿಸಿ ಜನ ಸುರಾಜ್ ಪಕ್ಷದ ಕಾರ್ಯಕರ್ತರು ಶನಿವಾರ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು



₹40 ಕೋಟಿ ಮೌಲ್ಯದ ಕೊಕೇನ್ ಜಪ್ತಿ 6
ಬಳ್ಳಾರಿ ಜೀನ್ಸ್ ಪಾರ್ಕ್ ನಿರ್ಮಾಣ ಶೀಘ್ರ 7

ಸಿ.ಎಂ.ಗೆ ತವರು ನೆಲದ ಬಲ

ರಾಜ್ಯ ಸರ್ಕಾರದ ಸಾಧನಾ ಸಮಾವೇಶ; ರ್‍ಯಾಂಪ್‌ನಲ್ಲಿ ನಡೆದು ಬಂದ ನಾಯಕರು

ಪ್ರಜಾವಾಣಿ ವಾರ್ತೆ

ಮೈಸೂರು: ಎರಡು ವರ್ಷಗಳ ಆಡಳಿತ ಪೂರೈಸಿದ ಉತ್ಸಾಹದಲ್ಲಿರುವ ಹಾಗೂ 'ಐದು ವರ್ಷವೂ ನಾನೇ ಮುಖ್ಯಮಂತ್ರಿ' ಎಂದು ಘೋಷಿಸಿಕೊಂಡಿರುವ ಸಿದ್ದರಾಮಯ್ಯ ಅವರು, ತವರು ನೆಲದಲ್ಲಿ ಶನಿವಾರ ನಡೆದ 'ಸಾಧನಾ ಸಮಾವೇಶ'ವನ್ನು ತಮ್ಮ ಶಕ್ತಿ ಪ್ರದರ್ಶನಕ್ಕೆ ಮತ್ತು ಎದುರಾಳಿಗಳ ವಿರುದ್ಧದ ವಾಗ್ದಾಳಿಗೆ ವೇದಿಕೆಯಾಗಿ ಬಳಸಿಕೊಂಡರು.

ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ, ಜನರ ನಡುವೆ 'ರಾಜಪಥ'ದ ಮಾದರಿಯಲ್ಲಿ ಸಿದ್ಧಪಡಿಸಿದ್ದ ವಿಶೇಷ ಬಗೆಯ ರ್‍ಯಾಂಪ್‌ನಲ್ಲಿ 200 ಮೀಟರ್‌ವರೆಗೆ ವೇದಿಕೆಯತ್ತ ಮುನ್ನಡೆದ ಅವರನ್ನು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆಗೂಡಿದರು. ಕಾರ್ಯಕರ್ತರು ಹೂಮಳೆಗರೆದು ನೆಚ್ಚಿನ ನಾಯಕನ ಪರ ಜೈಕಾರ ಕೂಗಿದರು.

ಪಾಲ್ಗೊಂಡಿದ್ದವರಲ್ಲಿ ಬಹುತೇಕರು ಮುಖ್ಯಮಂತ್ರಿಯ ಫೋಟೊಗಳನ್ನು ಹಿಡಿದು ಹರ್ಷೋದ್ಗಾರ ವ್ಯಕ್ತಪಡಿಸಿದರು ಸಮಾವೇಶದುದ್ದಕ್ಕೂ ಸಿದ್ದರಾಮಯ್ಯ ಪರ ಘೋಷಣೆಗಳು ಮುಗಿಲು ಮುಟ್ಟಿದವು. ಪಕ್ಷದ ಅಧ್ಯಕ್ಷರ ಮುಂದೆ 'ಪ್ರಾಬಲ್ಯ' ಮೆರೆಯುವಲ್ಲಿ ಮುಖ್ಯಮಂತ್ರಿ ಹಾಗೂ ಅವರ ಬಣದವರು ಮೇಲುಗೈ ಸಾಧಿಸಿದ್ದು ಕಂಡುಬಂದಿತು. ▶6

> **ಇದು ಸಿದ್ದರಾಮಯ್ಯನ ಶಕ್ತಿ ಪ್ರದರ್ಶನ ಅಲ್ಲ. ಅಭಿವೃದ್ಧಿಯ ಶಕ್ತಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಬಿಜೆಪಿಯವರೇ, ನೀವು ಮೈಸೂರಿಗೆ ಏನು ಸಾಕ್ಷಿಗುಡ್ಡೆ ಬಿಟ್ಟು ಹೋಗಿದ್ದೀರಿ ಹೇಳಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಬಿಜೆಪಿಗೆ ನಾಚಿಕೆಯಿಲ್ಲವೇ'

'ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದ್ದ ಬಿಜೆಪಿ ಈಗ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಅದನ್ನೇ ಕೊಡುವುದಾಗಿ ಘೋಷಿಸಿದೆ. ಅವರಿಗೆ ನಾಚಿಕೆ ಆಗುವುದಿಲ್ಲವೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸಾಧನಾ ಸಮಾವೇಶದಲ್ಲಿ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದರೆ ಕರ್ನಾಟಕ ಸರ್ಕಾರ ದಿವಾಳಿ ಆಗಿಬಿಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ರಾಜಸ್ಥಾನದಲ್ಲಿ ಭಾಷಣ ಮಾಡಿದ್ದರು. ಈಗ ಕರ್ನಾಟಕದ ಗ್ಯಾರಂಟಿಗಳು ದೇಶಕ್ಕೆ ಮಾದರಿ ಆಗಿವೆ' ಎಂದರು. ▶6



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ 'ಸಾಧನಾ ಸಮಾವೇಶ'ದಲ್ಲಿ ವಿಶೇಷವಾಗಿ ಸಿದ್ಧಪಡಿಸಿದ್ದ ರ್‍ಯಾಂಪ್‌ನಲ್ಲಿ ಬಂದ ಸಿದ್ದರಾಮಯ್ಯ ಜನರತ್ತ ಕೈ ಬೀಸಿದರು. ಡಿ.ಕೆ. ಶಿವಕುಮಾರ್ ಜೊತೆಗಿದ್ದರು – ಪಿಟಿಐ ಚಿತ್ರ

'ಮನೆಯಲ್ಲಿ ಕೂತಿರುವವರಿಗೆಲ್ಲ ವೆಲ್‌ಕಮ್ ಮಾಡೋಕೆ ಆಗಲ್ಲ'

'ಮನೆಯಲ್ಲಿ ಕೂತಿರುವವರಿಗೆಲ್ಲ ವೆಲ್‌ಕಂ ಮಾಡೋಕೆ ಆಗಲ್ಲ' ಎನ್ನುತ್ತಾ ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ ಆದರು.

ತಮ್ಮ ಭಾಷಣದ ಆರಂಭದಲ್ಲಿ ವೇದಿಕೆಯಲ್ಲಿದ್ದವರ ಹೆಸರು ಪ್ರಸ್ತಾಪಿಸಿದ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಹೆಸರನ್ನು ಬಿಟ್ಟಿದ್ದನ್ನು ವಕೀಲರೊಬ್ಬರು ನೆನಪಿಸಿದರು. ಆಗ ಸಿಟ್ಟಾದ ಅವರು, 'ಇಲ್ಲಿ ಇಲ್ವಲ್ಲರಿ... ಹೊರಟು ಹೋಗಿದ್ದಾರೆ' ಎಂದರು.

'ಡಿ.ಕೆ. ಶಿವಕುಮಾರ್ ಹೊರಟು ಹೋದ್ರು ಬೆಂಗಳೂರಿಗೆ. ಯಾವಾಗಲೂ ಇರುವವರ ಹೆಸರು ಹೇಳಬೇಕೇ ಹೊರತು ಹೊರಟು ಹೋದವರ ಹೆಸರು ಹೇಳೋಕೆ ಆಗಲ್ಲ. ವೆಲ್‌ಕಮ್ ಮಾಡೋದು ಇರೋವರಿಗೆ. ಇಲ್ಲಿ ಯಾರೆಲ್ಲ ಇದ್ದಾರೆ ಅವರಿಗೆ ಮಾತ್ರ ವೆಲ್‌ಕಮ್ ಮಾಡೋದು. ಮನೆಯಲ್ಲಿ ಕೂತಿರುವವರಿಗೆಲ್ಲ ವೆಲ್‌ಕಮ್ ಮಾಡೋಕೆ ಆಗಲ್ಲ.. ಗೊತ್ತಾಯಿತಾ. ಈ ವಕೀಲರು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು ಇದೆಲ್ಲವನ್ನು' ಎಂದು ಸಿದ್ದರಾಮಯ್ಯ ಹೇಳಿದರು.

'ಅವರು ಪಾಪ (ವಕೀಲರು), ಡಿ.ಕೆ. ಶಿವಕುಮಾರ್ ಹೆಸರು ಹೇಳಿ ಎಂದು ಹೇಳುತ್ತಿದ್ದಾರೆ. ಅವರು ಬೆಂಗಳೂರಿಗೆ ಹೋಗ್ತೇನೆ ಎಂದು ಹೋದ್ರು. ಹೀಗಾಗಿ, ಅವರ ಹೆಸರು ನಾನು ಪ್ರಸ್ತಾಪ ಮಾಡಿಲ್ಲ' ಎಂದೂ ಎದುರಿಗಿದ್ದವರನ್ನು ಉದ್ದೇಶಿಸಿ ಗಟ್ಟಿ ಧ್ವನಿಯಲ್ಲಿ ಮುಖ್ಯಮಂತ್ರಿ ಘೋಷಿಸಿದರು.

ಸರ್ಕಾರದ ವಿರುದ್ಧ 'ಇಂಡಿಯಾ' ತಂತ್ರ

ನವದೆಹಲಿ: ಸಂಸತ್ತಿನ ಮಳೆಗಾಲ ಅಧಿವೇಶನದಲ್ಲಿ ಧ್ವನಿ ಎತ್ತಿ ಕೇಂದ್ರ ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಲು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಶನಿವಾರ ಸಭೆ ನಡೆಸಿ ಕಾರ್ಯತಂತ್ರ ರೂಪಿಸಿದವು.
ಇನ್ನಷ್ಟು ವಿವರ ▶6

ಭಾರತ–ಪಾಕ್ ಸಂಘರ್ಷ: ವಿಮಾನ ಯಾವ ದೇಶದ್ದು ಎಂದು ಸ್ಪಷ್ಟವಿಲ್ಲ

5 ಯುದ್ಧವಿಮಾನ ನಾಶ: ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್/ನವದೆಹಲಿ (ಪಿಟಿಐ): 'ಮೇ ತಿಂಗಳಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದ ವೇಳೆ ಐದು ಯುದ್ಧವಿಮಾನಗಳನ್ನು ಹೊಡೆದುರುಳಿಸಲಾಗಿತ್ತು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಅಲ್ಲದೇ, 'ಉಭಯ ದೇಶಗಳ ನಡುವಿನ ಸಂಘರ್ಷವನ್ನು ನಾನು ಮಧ್ಯಸ್ಥಿಕೆ ವಹಿಸಿ ನಿಲ್ಲಿಸಿದೆ' ಎಂಬ ತಮ್ಮ ಹೇಳಿಕೆಯನ್ನು ಸಹ ಪುನರುಚ್ಚರಿಸಿದ್ದಾರೆ. ಎರಡೂ ದೇಶಗಳದ್ದು ಸೇರಿ ಒಟ್ಟು ಐದು ಯುದ್ಧವಿಮಾನಗಳು ನಾಶವಾಗಿವೆಯೇ? ಅಥವಾ ಯಾವ ದೇಶವು ಮತ್ತೊಂದು ದೇಶದ ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದೆ ಎಂಬುದನ್ನು ಟ್ರಂಪ್ ನಿರ್ದಿಷ್ಟವಾಗಿ ಹೇಳಿಲ್ಲ.

ಟ್ರಂಪ್ ಅವರ ಈ ಹೇಳಿಕೆ ಬೆನ್ನಲ್ಲೇ, ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷ ವಾಗ್ದಾಳಿ ನಡೆಸಿದ್ದು, ಈ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯೆ ನೀಡಬೇಕು ಎಂದು ಒತ್ತಾಯಿಸಿದೆ.

ರಿಪಬ್ಲಿಕನ್ ಪಕ್ಷದ ಸೆನೆಟರ್‌ಗಳಿಗಾಗಿ ಶ್ವೇತಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಭೋಜನಕೂಟದಲ್ಲಿ ಟ್ರಂಪ್ ಈ ಕುರಿತು ಮಾತನಾಡಿದ್ದಾರೆ. ▶7



> **ಹಲವು ರಾಷ್ಟ್ರಗಳ ನಡುವಿನ ಭೀಕರ ಯುದ್ಧಗಳು ಸೇರಿ ಹಲವಾರು ಸಂಘರ್ಷಗಳನ್ನು ನಾನು ನಿಲ್ಲಿಸಿದ್ದೇನೆ. ಈ ಬಗ್ಗೆ ನನಗೆ ಹೆಮ್ಮೆ ಇದೆ**
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

ಪ್ರಧಾನಿ ಹೇಳಿಕೆಗೆ ಕಾಂಗ್ರೆಸ್ ಆಗ್ರಹ

'ಭಾರತ ಮತ್ತು ಪಾಕಿಸ್ತಾನ ನಡುವಣ ಸಂಘರ್ಷವನ್ನು ಮಧ್ಯಸ್ಥಿಕೆ ವಹಿಸಿ ನಿಲ್ಲಿಸಿದೆ' ಎಂಬುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಹೇಳಿದ್ದು, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಸ್ಪಷ್ಟನೆ ನೀಡಬೇಕು ಎಂದು ಕಾಂಗ್ರೆಸ್ ಶನಿವಾರ ಆಗ್ರಹಿಸಿದೆ.

ಈ ವಿಚಾರವಾಗಿ ಪ್ರಧಾನಿ ಮೌನ ವಹಿಸಿರುವುದನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಶ್ನಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಮೋದಿಜಿ, ಐದು ಯುದ್ಧವಿಮಾನಗಳ ಕುರಿತಾದ ಸತ್ಯಾಂಶವೇನು' ಎಂದು ಕೇಳಿದ್ದಾರೆ. ▶7



> **ದೇಶವು ಸತ್ಯ ತಿಳಿದುಕೊಳ್ಳುವ ಹಕ್ಕು ಹೊಂದಿದೆ. ಟ್ರಂಪ್ ಹೇಳಿಕೆ ಕುರಿತು ಪ್ರಧಾನಿ ಮೋದಿ ಅವರು ಸಂಸತ್‌ನಲ್ಲಿ ಸ್ಪಷ್ಟ ಹಾಗೂ ನಿಸ್ಸಂದಿಗ್ಧ ಹೇಳಿಕೆ ನೀಡಬೇಕು**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಒಳನೋಟ

ಬದಲಾಗುತ್ತಿದೆಯೇ ಅವಿಭಜಿತ ದಕ್ಷಿಣ ಕನ್ನಡ

ಕೋಮು ಗಲಭೆ, ದ್ವೇಷ ಭಾಷಣ, ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳು, ಪ್ರಚೋದನಕಾರಿ ಸುದ್ದಿ ಹರಡಿ ಸಮಾಜದಲ್ಲಿ ವಿಷಬೀಜ ಬಿತ್ತುವ ಕೃತ್ಯಗಳಿಗೆ ತಕ್ಕಮಟ್ಟಿನ ಕಡಿವಾಣ ಬಿದ್ದಿದೆ. ▶4

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಅಹೋರಾತ್ರಿ ಧರಣಿ ಕುಳಿತ ಶಾಸಕಿ

ಟೋಲ್ ಗೇಟ್ ರದ್ದುಪಡಿಸುವಂತೆ ಕರೆಮ್ಮ ಒತ್ತಾಯ

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು ಜಿಲ್ಲೆ): ಕಲ್ಮಲಾ-ತಿಂಥಣಿ ಬ್ರಿಜ್ ರಾಜ್ಯ ಹೆದ್ದಾರಿ-ಸಂಖ್ಯೆ 61ರ ಮೇಲೆ 40 ಕಿ.ಮೀ ಅಂತರದಲ್ಲಿ ಸ್ಥಾಪಿಸಿದ ಎರಡು ಟೋಲ್ ಕೇಂದ್ರಗಳಲ್ಲಿ ಶುಲ್ಕ ಸಂಗ್ರಹಿಸುತ್ತಿರುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ ಕಾಕರಗಲ್ ಟೋಲ್‌ಗೇಟ್‌ನಲ್ಲಿ ಜೆಡಿಎಸ್ ಶಾಸಕಿ ಶುಕ್ರವಾರ ಅಹೋರಾತ್ರಿ ಧರಣಿ ನಡೆಸಿದ್ದಾರೆ.

ರಾಯಚೂರಲ್ಲಿ ಶುಕ್ರವಾರ ನಡೆದ ಕೆಡಿಪಿ ಸಭೆಯಲ್ಲಿ ಟೋಲ್ ಗೇಟ್ ಅನ್ನು ರದ್ದುಪಡಿಸುವಂತೆ ಒತ್ತಾಯಿಸಿ ಶಾಸಕಿ ಧರಣಿ ನಡೆಸಿದ್ದರು. ಉಸ್ತುವಾರಿ ಸಚಿವರು ತಾತ್ಕಾಲಿಕವಾಗಿ ಟೋಲ್ ಸಂಗ್ರಹ ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದ್ದರು.

ಕರೆಮ್ಮ ಕೆಡಿಪಿ ಸಭೆ ಮುಗಿಸಿ ಶುಕ್ರವಾರ ರಾತ್ರಿ ದೇವದುರ್ಗಕ್ಕೆ ತೆರಳುತ್ತಿದ್ದಾಗ ಟೋಲ್ ಸಂಗ್ರಹ ಸ್ಥಗಿತಗೊಳಿಸಿರಲಿಲ್ಲ. ಹೀಗಾಗಿ ಕಾರ್ಯಕರ್ತರೊಂದಿಗೆ ರಸ್ತೆ ಮೇಲೆ ಕುಳಿತು ಅಹೋರಾತ್ರಿ ಧರಣಿ ನಡೆಸಿದರು.

'ಸಭೆಯಲ್ಲಿ ನಾವು ಹಾಗೆ ಹೇಳಿರುತ್ತೇವೆ; ನಿಮ್ಮ ನಿಯಮ ನೀವು ಪಾಲಿಸಿ ಎಂದು ಉಸ್ತುವಾರಿ ಸಚಿವರು ಜಿಲ್ಲಾಧಿಕಾರಿಗೆ ಪರೋಕ್ಷವಾಗಿ ಟೋಲ್ ಸಂಗ್ರಹ ಸ್ಥಗಿತಗೊಳಿಸದಂತೆ ಸೂಚಿಸಿದ್ದಾರೆ' ಎಂದು ಕರೆಮ್ಮ ಆರೋಪಿಸಿದ್ದಾರೆ.

ಲೋಕೋಪಯೋಗಿ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ಜುಲೈ 24ರಂದು ಸಭೆ ನಡೆಸಿ, ಟೋಲ್ ಕೇಂದ್ರ ರದ್ದುಗೊಳಿಸುವ ಬಗ್ಗೆ ಕ್ರಮಕೈಗೊಳ್ಳುವುದಾಗಿ ರಾಜ್ಯ ಸರ್ಕಾರದಿಂದ ಭರವಸೆ ಸಿಕ್ಕಿದ್ದರಿಂದ ಶನಿವಾರ ಮಧ್ಯಾಹ್ನದ ಬಳಿಕ ಶಾಸಕಿ ಪ್ರತಿಭಟನೆಯನ್ನು ಕೈಬಿಟ್ಟರು.



ಕರೆಮ್ಮ ನಾಯಕ

ರ್‍ಯಾವಣಕಿ-ಜಾಲಿಹಾಳ ನಡುವಣ ಹಳ್ಳದ ಸಮಸ್ಯೆಗೆ ಸಿಗದ ಪರಿಹಾರ

ಶಾಲಾ ಮಕ್ಕಳಿಗೆ 'ಪ್ರವಾಹ' ಸಂಕಟ

• ನಾರಾಯಣರಾವ ಕುಲಕರ್ಣಿ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಮಳೆಗಾಲ ಆರಂಭವಾದರೆ ತಾಲ್ಲೂಕಿನ ರ್‍ಯಾವಣಕಿ ಗ್ರಾಮದ ಶಾಲೆಯ ವಿದ್ಯಾರ್ಥಿಗಳಿಗೆ 'ಪ್ರವಾಹ' ಸಂಕಟ ಕಾಡುತ್ತದೆ. ಮಕ್ಕಳು ಜೀವ ಕೈಯಲ್ಲಿ ಹಿಡಿದು ರ್‍ಯಾವಣಕಿ-ಜಾಲಿಹಾಳದ ನಡುವಿನ ಹಳ್ಳವನ್ನು ದಾಟಿ ಶಾಲೆಗೆ ಬರಬೇಕಾಗುತ್ತದೆ.

'ದಶಕಗಳ ಸಮಸ್ಯೆಗೆ ಇನ್ನೂ ಶಾಶ್ವತ ಪರಿಹಾರ ಸಿಕ್ಕಿಲ್ಲ. ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳು ಸೇತುವೆ ನಿರ್ಮಿಸಿಕೊಡುವುದಾಗಿ ನೀಡಿದ್ದ ಭರವಸೆ ಇದುವರೆಗೆ ಈಡೇರಿಲ್ಲ' ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

ಜುಲೈ 16ರಂದು ರಾತ್ರಿ ಸುರಿದ ಭಾರಿ ಮಳೆಗೆ ಹಳ್ಳದಲ್ಲಿ ಪ್ರವಾಹ ಬಂದಿತ್ತು. ಗುರುವಾರವೂ ಹಳ್ಳ ತುಂಬಿ ಹರಿಯುತ್ತಿತ್ತು. ಪಕ್ಕದ ಜಾಲಿಹಾಳ, ಶಿರಗುಂಪಿ, ದೋಟಿಹಾಳದಲ್ಲಿರುವ ಶಾಲಾ- ಕಾಲೇಜು ವಿದ್ಯಾರ್ಥಿಗಳು ಜೀವ ಭಯದಲ್ಲೇ ಹಳ್ಳವನ್ನು ದಾಟಿದರು' ಎಂದು ಗ್ರಾಮಸ್ಥರು ಹೇಳಿದರು.

'ರ್‍ಯಾವಣಕಿಯಲ್ಲಿ 5ನೇ ತರಗತಿವರೆಗೆ ಮಾತ್ರ ಶಾಲೆಯಿದೆ. ನಂತರದ ವಿದ್ಯಾಭ್ಯಾಸಕ್ಕೆ ಮಕ್ಕಳು ಪಕ್ಕದ ಊರುಗಳಿಗೆ ಹೋಗುತ್ತಾರೆ. ಮಳೆಗಾಲದಲ್ಲಿ ಹಳ್ಳ ದಾಟುವುದೇ ದೊಡ್ಡ ಸಮಸ್ಯೆ. ಪ್ರವಾಹ ಸಂಕಟದಿಂದ ಮಕ್ಕಳ ಶೈಕ್ಷಣಿಕ ಭವಿಷ್ಯ ಹಾಳಾಗುತ್ತಿದೆ' ಎಂದು ಗೋವಿಂದಪ್ಪ ಕ್ಯಾದಗುಂಪಿ, ಅಮರೇಗೌಡ ಪೊಲೀಸಪಾಟೀಲ, ನಾಗರಾಜ ಗುಮಗೇರಿ, ವೀರಭದ್ರಪ್ಪ ವಿವರಿಸಿದರು.

'ಈ ಹಿಂದೆ ಹಳ್ಳಕ್ಕೆ ಸಿಮೆಂಟ್ ಕೊಳವೆಗಳನ್ನು ಅಳವಡಿಸಿ, ತಾತ್ಕಾಲಿಕ ದಾರಿ ಮಾಡಲಾಗಿತ್ತು. ಆದರೆ, ಹೆಚ್ಚು ನೀರು ಬಂದು ಅವು ಕೊಚ್ಚಿ ಹೋಗಿವೆ. ರಸ್ತೆ, ಹಳ್ಳದ ಸಮಸ್ಯೆಯಿಂದ ಸಾರಿಗೆ ಸಂಸ್ಥೆಯ ಬಸ್ ಕೂಡ ಬರುವುದಿಲ್ಲ. ಹಿಂದಿನ ಶಾಸಕ ಅಮರೇಗೌಡ ಬಯ್ಯಾಪುರ, ಹಾಲಿ ಶಾಸಕ ದೊಡ್ಡನಗೌಡ ಪಾಟೀಲರ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ' ಎಂದು ಗ್ರಾಮಸ್ಥ ಚಂದಪ್ಪ ಪೂಜಾರ ದೂರಿದರು.



ತುಂಬಿ ಹರಿಯುತ್ತಿರುವ ಹಳ್ಳ ದಾಟುತ್ತಿರುವ ಶಾಲಾ ವಿದ್ಯಾರ್ಥಿಗಳು

> **₹25 ಕೋಟಿ ಅಗತ್ಯವಿದ್ದರೂ ಸರ್ಕಾರ ₹15 ಕೋಟಿ ಬಿಡುಗಡೆ ಮಾಡಿತ್ತು. ಕೆಕೆಆರ್‌ಡಿಬಿ ಅನುದಾನದಲ್ಲಿ ಸೇತುವೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುತ್ತೇವೆ**
> **ದೊಡ್ಡನಗೌಡ ಪಾಟೀಲ,** ಶಾಸಕ

> **ಮಳೆಗಾಲದಲ್ಲಿ ಹಳ್ಳಕ್ಕೆ ಪ್ರವಾಹ ಬರುವುದರಿಂದ ಮಕ್ಕಳು ಶಾಲೆಗೆ ಹೋಗುವುದು ದುಸ್ತರವಾಗುತ್ತಿದೆ. ಮಕ್ಕಳು ಹಳ್ಳ ದಾಟುವಾಗ ಅನಾಹುತ ಸಂಭವಿಸಿದರೆ ಯಾರು ಹೊಣೆ?**
> **ಚಂದಪ್ಪ ಪೂಜಾರ,** ಗ್ರಾಮಸ್ಥ


ಗೌರವಾನ್ವಿತ ನಗರಾಭಿವೃದ್ಧಿ ಮತ್ತು ಪಟ್ಟಣ ಯೋಜನಾ ಸಚಿವರು
ಸನ್ಮಾನ್ಯ ಶ್ರೀ. ಬೈರತಿ ಸುರೇಶ್ ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ನಿಮ್ಮ ಮುಂದಿನ ಎಲ್ಲಾ ಪ್ರಯತ್ನಗಳಲ್ಲಿ ಯಶಸ್ಸು ಸಿಗಲಿ. ನಿಮಗೆ ಉತ್ತಮ ಆರೋಗ್ಯ,
ಸಂತೋಷ ಮತ್ತು ಸಮೃದ್ಧಿ ಸದಾ ಇರಲಿ ಎಂದು ಹಾರೈಸುವೆವು.
ನಿಮ್ಮ ದಣಿವರಿಯದ ಪ್ರಯತ್ನಗಳು ಮತ್ತು ಜನಸೇವೆ ಹೀಗೆಯೇ ಮುಂದುವರಿಯಲಿ.
ಇದೇ ರೀತಿ ರಾಷ್ಟ್ರದ ಮತ್ತು ಜನರ ಒಳಿತಿಗಾಗಿ ನೀವು ಸದಾ ಶ್ರಮಿಸುತ್ತೀರಿ.
ಶುಭಕೋರುವವರು
ಅಭಿಮಾನಿ ಬಳಗ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹಂಪಿ ಮುನ್ನಡೆ
ಭಾರತದ ಕೋನೇರು ಹಂಪಿ ಅವರು ಫಿಡೆ ಮಹಿಳಾ ಚೆಸ್ ವಿಶ್ವಕಪ್‌ನ ಕ್ವಾರ್ಟರ್ ಫೈನಲ್‌ನ ಮೊದಲ ಪಂದ್ಯದಲ್ಲಿ ಚೀನಾದ ಯುಕ್ಸಿನ್ ಸಾಂಗ್ ಅವರನ್ನು ಮಣಿಸಿ, ಆರಂಭಿಕ ಮುನ್ನಡೆ ಸಾಧಿಸಿದರು



ಮಳೆ, ಮಳೆ...
ನಗರದಲ್ಲಿ ಶನಿವಾರ ಸುರಿದ ಮಳೆಯಲ್ಲಿ ಮಹಿಳೆಯರು ರೈನ್‌ಕೋಟ್ ಧರಿಸಿ ಸಾಗಿದರು



ಕೊಮ್ಮಘಟ್ಟ: 75 ಫ್ಲ್ಯಾಟ್ ಮಾರಾಟ 3
ಹೊಸ ವಿಭಾಗ: 20 ಠಾಣೆ ಸೇರ್ಪಡೆ 4C

ಬಿಬಿಎಂಪಿ: ಐದು ನಗರ ಪಾಲಿಕೆಗಳಾಗಿ ಹೋಳು

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024' • 'ಗ್ರೇಟರ್ ಬೆಂಗಳೂರು ಪ್ರದೇಶ' ವ್ಯಾಪ್ತಿಯಲ್ಲೇ ಹೊಸ ಪಾಲಿಕೆಗಳ ರಚನೆ • ಆಕ್ಷೇಪಣೆಗೆ 30ದಿನ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು(ಬಿಬಿಎಂಪಿ) ಐದು ನಗರ ಪಾಲಿಕೆಗಳಾಗಿ ವಿಂಗಡಿಸಿ, ರಾಜ್ಯ ಸರ್ಕಾರ ಶನಿವಾರ ಕರಡು ಅಧಿಸೂಚನೆ ಹೊರಡಿಸಿದೆ.

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024' (ಜಿಬಿಜಿಎ) ಅಡಿಯಲ್ಲಿ ಬಿಬಿಎಂಪಿ ವ್ಯಾಪ್ತಿಯನ್ನು 'ಗ್ರೇಟರ್ ಬೆಂಗಳೂರು ಪ್ರದೇಶ' (ಜಿಬಿಎ) ಎಂದು ಗುರುತಿಸಿ 2025ರ ಮೇ 15ರಂದು ಸರ್ಕಾರ ಅಧಿಸೂಚಿಸಿತ್ತು. 'ಗ್ರೇಟರ್ ಬೆಂಗಳೂರು ಪ್ರದೇಶ'ದಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಲಾಗಿದ್ದು, ನಾಗರಿಕರು ಆಕ್ಷೇಪಣೆ ಸಲ್ಲಿಸಲು 30 ದಿನಗಳ ಅವಕಾಶ ನೀಡಲಾಗಿದೆ.

ಜಿಬಿಜಿಎ ಕಾಯ್ದೆಯ ಪ್ರಕರಣ 4ರ ಉಪ ಪ್ರಕರಣ (1) ಹಾಗೂ ಪ್ರಕರಣ 7ರ ಉಪ ಪ್ರಕರಣದಡಿ (1) ಅಧಿಕಾರ ಚಲಾಯಿಸಿರುವ ಸರ್ಕಾರ, ಜನಸಂಖ್ಯೆ, ವಿಸ್ತೀರ್ಣ, ಜನಸಂಖ್ಯಾ ಸಾಂದ್ರತೆ, ಉತ್ಪತ್ತಿಯಾಗುವ ಆದಾಯ, ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗ ಪ್ರಮಾಣ, ಆರ್ಥಿಕ ಪ್ರಾಮುಖ್ಯವನ್ನು ಪರಿಗಣಿಸಿ ಐದು ನಗರ ಪಾಲಿಕೆಗಳನ್ನು ರಚಿಸಲಾಗಿದೆ.

ಬೆಂಗಳೂರು ಉತ್ತರ ನಗರ ಪಾಲಿಕೆ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೆಂಗಳೂರು ಪೂರ್ವ ನಗರ ಪಾಲಿಕೆ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ಬೆಂಗಳೂರು ಕೇಂದ್ರ ನಗರ ಪಾಲಿಕೆ ಎಂದು ಹೆಸರಿಸಲಾಗಿದೆ.

ಸಾರ್ವಜನಿಕರು ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕೊಠಡಿ ಸಂಖ್ಯೆ: 436, 4ನೇ ಮಹಡಿ, ವಿಕಾಸ ಸೌಧ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001 ವಿಳಾಸಕ್ಕೆ ಸಲ್ಲಿಸಬಹುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ವಿಧಾನಸಭೆಯಂತೆ ವಿಂಗಡಣೆ ಇಲ್ಲ: ಬಿಬಿಎಂಪಿ ವ್ಯಾಪ್ತಿಯಲ್ಲಿ 225 ವಾರ್ಡ್‌ಗಳನ್ನು ಮರುರಚಿಸಿ 2023ರ ಸೆಪ್ಟೆಂಬರ್ 25ರಂದು ಸರ್ಕಾರ ಅಧಿಸೂಚಿಸಿತ್ತು. ಆದರೆ, ಇದೀಗ ಹೊಸ ಐದು ನಗರ ಪಾಲಿಕೆಗಳನ್ನು ಹಿಂದೆ ಚುನಾವಣೆ ನಡೆದಿದ್ದ 198 ವಾರ್ಡ್‌ಗಳಂತೆ ವಿಂಗಡಿಸಲಾಗಿದೆ. ಆನೇಕಲ್ ವಿಧಾನಸಭೆ ಕ್ಷೇತ್ರದಲ್ಲಿರುವ ಕೂಡ್ಲು ವಾರ್ಡ್ ಹೊಸ ನಗರ ಪಾಲಿಕೆಗಳ ವ್ಯಾಪ್ತಿಯಿಂದ ಕೈಬಿಡಲಾಗಿದೆ. ರಾಜರಾಜೇಶ್ವರಿ ನಗರ, ದಾಸರಹಳ್ಳಿ, ಪದ್ಮನಾಭನಗರ, ಯಶವಂತಪುರ, ಮಹದೇವಪುರ ವಿಧಾನಸಭೆ ವ್ಯಾಪ್ತಿಯ ವಾರ್ಡ್ ಪ್ರದೇಶಗಳು ಎರಡು ಹೊಸ ನಗರ ಪಾಲಿಕೆಗಳ ವ್ಯಾಪ್ತಿಗೆ ಸೇರಿಕೊಂಡಿವೆ.

2025ರ ಆಸ್ತಿ ತೆರಿಗೆ ಸಂಗ್ರಹವನ್ನು ಐದು ನಗರ ಪಾಲಿಕೆಗಳಿಗೆ ವಿಂಗಡಿಸಿದರೆ, ಮಹದೇವಪುರ ಹಾಗೂ ಕೆ.ಆರ್. ಪುರ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯನ್ನು ಹೊಂದಲಿರುವ ಪೂರ್ವ ನಗರ ಪಾಲಿಕೆಗೆ ಅತಿಹೆಚ್ಚು (₹912 ಕೋಟಿ) ಸಂಗ್ರಹವಿರಲಿದೆ. ಉತ್ತರ ನಗರ ಪಾಲಿಕೆಗೆ ಅತಿ ಕಡಿಮೆ (₹543 ಕೋಟಿ) ತೆರಿಗೆ ಸಂಗ್ರಹವಾಗಲಿದೆ.

712 ಚದರ ಕಿ.ಮೀಯಲ್ಲಿ ರಚನೆಯಾಗಲಿರುವ ಐದು ನಗರ ಪಾಲಿಕೆಗಳನ್ನು ಒಂದು ಚದರ ಕಿ.ಮೀಗೆ ಸರಾಸರಿ 20,225 ಜನಸಂಖ್ಯೆ ಸಾಂದ್ರತೆ ಬರುವಂತೆ ವಿಂಗಡಿಸಲಾಗಿದೆ. ಕೇಂದ್ರ ನಗರ ಪಾಲಿಕೆಯಲ್ಲಿ ಅತಿಹೆಚ್ಚು ಜನಸಂಖ್ಯೆ ಸಾಂದ್ರತೆ (32,051) ಇರಲಿದ್ದು, ಪೂರ್ವ ನಗರ ಪಾಲಿಕೆಯಲ್ಲಿ ಅತಿ ಕಡಿಮೆ ಜನಸಂಖ್ಯೆ ಸಾಂದ್ರತೆ (7,738) ಇರಲಿದೆ. ಪ್ರತಿ ನಗರ ಪಾಲಿಕೆಗಳ ಗಡಿಯಲ್ಲಿ ಅತಿದೊಡ್ಡ ರಸ್ತೆಯೇ ಇರುವಂತೆ ವಿಂಗಡಣೆ ಮಾಡಲಾಗಿದೆ.

ಜನಸಂಖ್ಯೆಯಲ್ಲಿ ಪಶ್ಚಿಮ ದೊಡ್ಡದು

ಜಿಲ್ಲಾ ಚುನಾವಣಾ ಅಧಿಕಾರಿಯವರು ವಿಧಾನಸಭೆ ಕ್ಷೇತ್ರಗಳ ಜನಸಂಖ್ಯೆಯ ಪ್ರಕಾರ, 2023ರಲ್ಲಿ ಬಿಬಿಎಂಪಿಯ ಕಂದಾಯ ವಿಭಾಗದ ವಿಶೇಷ ಆಯುಕ್ತರು ಅಂದಾಜಿಸಿರುವ ಜನಸಂಖ್ಯೆಯಂತೆ ಹೊಸ ನಗರ ಪಾಲಿಕೆಗಳನ್ನು ವಿಂಗಡಿಸಲಾಗಿದೆ.


ಜಿಬಿಜಿಎ ಕಾಯ್ದೆಯಂತೆ ಪ್ರತಿ ನಗರ ಪಾಲಿಕೆಯಲ್ಲಿ ಕನಿಷ್ಠ 10 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರಬೇಕು. ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಅತಿಹೆಚ್ಚು ಜನಸಂಖ್ಯೆಯನ್ನು (45 ಲಕ್ಷ) ಹೊಂದಲಿದೆ. ಪೂರ್ವ ನಗರ ಪಾಲಿಕೆಯಲ್ಲಿ ಅತಿ ಕಡಿಮೆ ಜನಸಂಖ್ಯೆಯಿದೆ (13 ಲಕ್ಷ). ಅತಿ ಕಡಿಮೆ ಜನಸಂಖ್ಯೆ ಹೊಂದಲಿದ್ದರೂ ಬೆಂಗಳೂರು ಪೂರ್ವ ನಗರ ಪಾಲಿಕೆ ಅತಿ ಹೆಚ್ಚಿನ ವಿಸ್ತೀರ್ಣ (168 ಚದರ ಕಿ.ಮೀ) ಹೊಂದಲಿದೆ. ಬೆಂಗಳೂರು ಕೇಂದ್ರ ನಗರ ಪಾಲಿಕೆ ಅತಿ ಕಡಿಮೆ ವಿಸ್ತೀರ್ಣ (78 ಚದರ ಕಿ.ಮೀ) ವ್ಯಾಪ್ತಿಯಲ್ಲಿರಲಿದೆ.

5 ನಗರ ಪಾಲಿಕೆಗಳು

27 ವಿಧಾನಸಭೆ ಕ್ಷೇತ್ರಗಳು

197 ವಾರ್ಡ್‌ಗಳು

150 ಪ್ರತಿ ನಗರ ಪಾಲಿಕೆಯಲ್ಲಿ ರಚಿಸಲಾಗುವ ಗರಿಷ್ಠ ವಾರ್ಡ್‌ಗಳು



ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ವ್ಯಾಪ್ತಿ : ಬಸವನಗುಡಿ, ಗೋವಿಂದರಾಜನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ರಾಜಾಜಿನಗರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು. ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಚೊಕ್ಕಸಂದ್ರ, ರಾಜಗೋಪಾಲ ನಗರ, ಹೆಗ್ಗನಹಳ್ಳಿ ವಾರ್ಡ್, ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಹೊಸಕೆರೆಹಳ್ಳಿ, ಗಣೇಶಮಂದಿರ, ಕರಿಸಂದ್ರ, ಯಡಿಯೂರು ವಾರ್ಡ್, ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದ ಎಚ್‌ಎಂಟಿ, ಲಕ್ಷ್ಮಿದೇವಿನಗರ, ಲಗ್ಗೆರೆ, ಕೊಟ್ಟಿಗೆಪಾಳ್ಯ, ಜ್ಞಾನಭಾರತಿ ವಾರ್ಡ್, ರಾಜರಾಜೇಶ್ವರಿ ನಗರ ವಾರ್ಡ್‌ನ ಕೆಲವು ಭಾಗ, ಯಶವಂತಪುರ ವಿಧಾನಸಭೆ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್‌ನ ಕೆಲವು ಭಾಗ.



ವಿಸ್ತೀರ್ಣ: **161** ಚದರ ಕಿ.ಮೀ
2023ರಂತೆ ಜನಸಂಖ್ಯೆ: **45** ಲಕ್ಷ
2011ರ ಜನಸಂಖ್ಯೆ: **26** ಲಕ್ಷ
ಜನಸಂಖ್ಯೆ ಸಾಂದ್ರತೆ: **27,950** ಪ್ರತಿ ಚದರ ಕಿ.ಮೀಗೆ
2025ರಂತೆ ಆಸ್ತಿ ತೆರಿಗೆ: ₹**580** ಕೋಟಿ

ಬೆಂಗಳೂರು ಉತ್ತರ ನಗರ ಪಾಲಿಕೆ

ವ್ಯಾಪ್ತಿ	: ಬ್ಯಾಟರಾಯನಪುರ, ಹೆಬ್ಬಾಳ, ಪುಲಕೇಶಿನಗರ, ಸರ್ವಜ್ಞನಗರ, ಯಲಹಂಕ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು ಹಾಗೂ ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಶೆಟ್ಟಿಹಳ್ಳಿ, ಮಲ್ಲಸಂದ್ರ, ಬಾಗಲಕುಂಟೆ, ಟಿ. ದಾಸರಹಳ್ಳಿ, ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದ ಜಾಲಹಳ್ಳಿ, ಜೆ.ಪಿ. ಪಾರ್ಕ್, ಯಶವಂತಪುರ ವಾರ್ಡ್‌ಗಳು.
ವಿಸ್ತೀರ್ಣ	: **158** ಚದರ ಕಿ.ಮೀ
2023ರಂತೆ ಜನಸಂಖ್ಯೆ	; **31** ಲಕ್ಷ
2011ರ ಜನಸಂಖ್ಯೆ	; **18** ಲಕ್ಷ
ಜನಸಂಖ್ಯೆ ಸಾಂದ್ರತೆ	; **19,620** ಪ್ರತಿ ಚದರ ಕಿ.ಮೀಗೆ
2025ರಂತೆ ಆಸ್ತಿ ತೆರಿಗೆ	; ₹**543** ಕೋಟಿ



ಬೆಂಗಳೂರು ದಕ್ಷಿಣ ನಗರ ಪಾಲಿಕೆ

ವ್ಯಾಪ್ತಿ : ಬಿಟಿಎಂ ಲೇಔಟ್, ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಜಯನಗರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು. ಮಹದೇವಪುರ ವಿಧಾನಸಭೆ ಕ್ಷೇತ್ರದ ಬೆಳ್ಳಂದೂರಿನ ಕೆಲವು ಭಾಗ, ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಬನಶಂಕರಿ ದೇವಸ್ಥಾನ, ಕುಮಾರಸ್ವಾಮಿ ಲೇಔಟ್, ಪದ್ಮನಾಭ ನಗರ, ಚಿಕ್ಕಲಸಂದ್ರ ವಾರ್ಡ್, ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದ ರಾಜರಾಜೇಶ್ವರಿ ನಗರ ವಾರ್ಡ್‌ನ ಕೆಲವು ಭಾಗ, ಯಶವಂತಪುರ ವಿಧಾನಸಭೆ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್‌ನ ಕೆಲವು ಭಾಗ.

ವಿಸ್ತೀರ್ಣ: **147** ಚದರ ಕಿ.ಮೀ
2023ರಂತೆ ಜನಸಂಖ್ಯೆ: **30** ಲಕ್ಷ
2011ರ ಜನಸಂಖ್ಯೆ: **17** ಲಕ್ಷ
ಜನಸಂಖ್ಯೆ ಸಾಂದ್ರತೆ: **20,408** ಪ್ರತಿ ಚದರ ಕಿ.ಮೀಗೆ
2025ರಂತೆ ಆಸ್ತಿ ತೆರಿಗೆ: ₹**733** ಕೋಟಿ

ಬೆಂಗಳೂರು ಕೇಂದ್ರ ನಗರ ಪಾಲಿಕೆ

ವ್ಯಾಪ್ತಿ	: ಸಿ.ವಿ. ರಾಮನ್‌ನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಗಾಂಧಿನಗರ, ಶಾಂತಿನಗರ, ಶಿವಾಜಿನಗರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು
ವಿಸ್ತೀರ್ಣ	: **78** ಚದರ ಕಿ.ಮೀ
2023ರಂತೆ ಜನಸಂಖ್ಯೆ	: **25** ಲಕ್ಷ
2011ರ ಜನಸಂಖ್ಯೆ	: **15** ಲಕ್ಷ
ಜನಸಂಖ್ಯೆ ಸಾಂದ್ರತೆ	: **32,051** ಪ್ರತಿ ಚದರ ಕಿ.ಮೀಗೆ
2025ರಂತೆ ಆಸ್ತಿ ತೆರಿಗೆ	: ₹**659** ಕೋಟಿ




5 ನಗರ ಪಾಲಿಕೆಗಳ ಗಡಿ ಮಾಹಿತಿಗೆ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಬೆಂಗಳೂರು ಪೂರ್ವ ನಗರ ಪಾಲಿಕೆ

ವ್ಯಾಪ್ತಿ : ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು ಹಾಗೂ ಬೆಳ್ಳಂದೂರು ವಾರ್ಡ್‌ನ ಕೆಲವು ಪ್ರದೇಶವನ್ನು ಹೊರತುಪಡಿಸಿ ಮಹದೇವಪುರ ವಿಧಾನಸಭೆ ಕ್ಷೇತ್ರದ ಎಲ್ಲ ವಾರ್ಡ್‌ಗಳು

ವಿಸ್ತೀರ್ಣ: **168** ಚದರ ಕಿ.ಮೀ
2023ರಂತೆ ಜನಸಂಖ್ಯೆ: **13** ಲಕ್ಷ
2011ರ ಜನಸಂಖ್ಯೆ: **9** ಲಕ್ಷ
ಜನಸಂಖ್ಯೆ ಸಾಂದ್ರತೆ: **7,738** ಪ್ರತಿ ಚದರ ಕಿ.ಮೀಗೆ
2025ರಂತೆ ಆಸ್ತಿ ತೆರಿಗೆ: ₹**912** ಕೋಟಿ



ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

THIRUMALA VIDYA NIKETHAN SCHOOL
#29, G.D Park Extn, Vyalikaval, Bangalore-560003
Ph: 080 - 23447560 / 23447570
Email :- tvns1984@gmail.com
WALK - IN INTERVIEW on 28-7-2025
For the Post of
Social Science & P.E.Teachers
for **High School** on 28/07/2025.
Essential Qualifications :- Graduate/ Post Graduate With B.Ed, B.PEd. Interested and eligible candidates may attend the walk - In interview between 1:00pm to 3:30pm on 28/07/2025 in the School premises with filled in application form, attested copies of testimonials & Bio-Data.
Principal
Thiurumala Vidya Nikethan School

The National Education Society Of Karnataka (R.)
Basavanagudi, Bengaluru-04
Dr. H N National College of Engineering
36th B Cross Rd, 7th Block, Jayanagar, Bengaluru, Karnataka - 560070
Approved by AICTE - Affiliated to VTU, Belagavi
CAREER OPPORTUNITIES
FACULTY
POSITION AVAILABLE
- Computer Science and Engineering
- Information Science and Engineering
- Artificial Intelligence and Data Science
- Electronics and Communication Engineering
- Mechanical Engineering
- Mathematics
- MBA
- MCA

Dr. H N National College of Engineering, established in 2024 under the National Education Society of Karnataka (R), is a prominent Academic Institution offering high-quality Engineering and Management education rigor and Educational Excellence with a Legacy of 108 years. Dr.HNNCE provides a conductive Academic ambience for its faculty to nurture students towards holistic development.
Preference will be given to candidates with PhD. Salary and benefits shall be as per the AICTE norms
Candidates passionate about teaching and research with an interest in experiencing an exciting career at Dr. HNNCE may send their completed application and resume to nes.recruitments2025@gmail.com
The application template can be downloaded at www.drhnnce.org.in
APPLICATION SHOULD BE SUBMITTED WITHIN 7 DAYS

SIDDAGANGA SREE SHIVAKUMARA SWAMIJI VIDYA PEETHA TRUST #1, 1st Stage, 2nd Phase, Chandra Layout, Bengaluru-72 Ph: 080-23397600 invites application For 1. Siddaganga Public School,Chandra Layout (1).Office Assistant- Any degree with computer knowledge (2).Counsellor M.Sc. in Clinical Psychology (3).School Van Driver Heavy Motor Vehicle License, PSV bus`& driving experience in`school`bus (4).Maintenance Asst. Diploma in Automobile or Mechanical Engineering preferred. ITI can also apply. II.SSK Degree College: Lecturer in Computer Science-MCA Interview date will be intimated. Interested candidates may send their resume, service`& salary certificates`& Testimonials to the Mail: sskvptrust.2001 @gmail.com or personally submit the above details to Trust office on or before 30/07/25 between 9am`to`4pm.

REQUIRED MATHS Teacher for High school contact Kenmore school Basavanagudi whatsapp 9901501185

Cook

WANTED HOUSE Cook- Food and Accomodation Free South Indian Style food Driver Salary only Age below 35 yrs Male only, Location: Tata guni Kanakapura Main Road Bangalore 560062 Salary 25000-30000/- Mobile: 9606956502

WANTED COOKS, KITCHEN ASSISTANTS & HELPERS for CAFE MYTHRI at Bommasandra Industrial Area, Bangalore- 560099. Boarding & Lodging Provided. Contact: 080-26601239/ 97418-62781 Email: cafemythri@gmail.com

Engg/ Production Technical

WANTED MECHANICAL ENGINEERS in B.E/ Diploma with 5- 10 years experience. Walk-in Interview. 'VINUMAC' 205A, Peenya 3rd phase, Bangalore-58 Phone: 080-28394512/ 28391959 admin@vinumac.com

Marketing & Sales

IMMEDIATE HIRING Marketing ExecutiveFor Leading FMCG Company18000 Gross Salary Upto 10000 Incentive + PF + ESIC + Other benefits Location - Bengaluru Contact: 8655684332/8655684328

NOTHING INDIA - In Store Sales Promoters Promote and demonstrate products to customers in-store Engage with walk-in customers and explain product features/benefits Salary: Rs19,500/- WhatsApp on +919867761412

Softouch that heals & protects... **WALK IN INTERVIEW**
Well established manufacturer of Wound Dressings / Surgical & Disposable Hospital Products, Needs for Bangalore Branch.
1/2 years experienced as an
AREA FIELD MANAGER / MARKETING EXECUTIVE
Bangalore to retail & detail our "Softouch" Brand Products with Medical Stores / Nursing Homes / Hospitals.
Attractive Salary offered.
Walk in interview is scheduled on
17th July, 2025 (i.e. Thursday) & 21st July, 2025 (i.e. Monday)
Timing is between 11:00 am to 4:00 pm
Softouch Hygiene Products Ltd.,
#2316, 2nd Cross, 16th 'B' Main Road, HAL 2nd Stage, Bangalore-08
OR Send your application on E-mail:-
softouchhr2018@gmail.com / softouchbengaluru@gmail.com
Contact No: 9974121705/ 9449081452.

General

FULL TIME or Part time Typist is required for law firm at Jayanagar. Send Resume to advocatenarayan@gmail.com or contact 9448359935

WANTED PROPERTY VERIFICATION PERSON. PERSONS IN AND AROUND KADUGODI / WHITEFIELD MAY CONTACT (M) 9731893764

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

SITE- SALE at BSK 2nd Stage, 30x40 S/f, near swimming pool, 30x40, BSK 6th Stage, E/f 4th H Block. 9901540494

"BANASHANKARI 1ST STAGE 40x60, 2nd Stage 30x50, 40x60, 3rd Stage 40x50, 40x60. Genuine Buyers Call: 9845286505"

Basaweshwaranagar

BASAVESHWARANAGAR SHARADA colony 40*60 South facing with old house for sale Rs.22000/- sft Contact- 9880669560

SALE SITE 1600 SQFT A KHATHA WITH 5 BHK INDEPENDENT HOUSE RATE 2 CRORES: 9035883017

J P Nagar

'AVAILABLE' JPNAGAR 4TH Phase Dollers Colony 50X80,South Facing, Full Cheque Payment Good Location Contact :9945114693

AVAILABLE BDA 40x60 WEST FACING JP.NAGAR 9TH PHASE 3RD BLOCK FOR PRICE. CONTACT: 7022435107

Kengeri

30X50 NF, BDA Site Sale, KENGERI UPANAGARA Fully Developed, Close To Ring Road: 8496030007/ 8310885235

Kanakapura Road

"KANAKA LAYOUT BDA approved 30x40, 40x60, Judicial Layout 30x40, Anjanapura 30x40 Genuine Buyers Call: 9845286505"

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

COMMERCIAL SITE For Sale 40x60,North /West Corner Holiday Village Road Near Vajarahalli: 9741296957 9845451424

K R Puram

SALE PRIVATE Layout, Seegehalli, K.R.Puram North facing Site 1500Sft. Rs.8500 Per Sft. E-Khatha. Call: 9900001351.

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Mysore

KHB ALLOTTED 30x40 Site at Kenchalgudu, Mysore City 46 Lakhs Clear Documents Owner Contact: 9606866368

Nagarabhavi

"NAGARABHAVI NEAR Deepa Complex 40x60 East & Vishveshwaraiah 6th Block 40x60 South 100% Vastu Site. 9448432633"

SITE SALE, North Facing 40x60 Sqft, Behind Namooru Tindi, Nagarbhavi, No Brokers/ No Agents: 9448377834

Rajajinagar

SALE SITE Commercial property 45x82 West Rajajinagar West of chord service road. Contact. 9845720810

R T Nagar

WANTED 40X60 Site in 2nd Block R.T.Nagar or Sanjaynagar. Site Owners Call 'Mahakaal Properties' 9900001973

Vishweshwariah Layout

"50X80 EAST FACING 60 FEET ROAD NEAR PROPOSED BDA COMPLEX 6TH BLOCK VISHWESHWARAIH LAYOUT- 9845143579"

65X80 EAST NORTH CORNER SITE SALE 60 Feet Road, Vishweswaraiah Layout, 8th Block. Brokers`Excuse. Genuine Buyers Contact: 8105688602.

COMMERCIAL BDA SITE SALE 40x60 N/F Vishveswaraiah Layout 1st Block, 100ft Road. Contact: 7411994069, 9742681666

AVAILABLE BDA Site Vishweshwariah Layout 3rd Block 30X40 West Facing Good Location Genuine Buyers: 7338688111

VISVESHSWARAIAH LAYOUT 6th Block BDA Sites Sale 40x60 North Facing and 30x40 Good Location: 7975986504

"VIDHYNIKETHAN SCHOOL near 40`feet Road East Good location, BDA-khatha 100% Vastu, Genuine Buyers. 9448733456/ 7259675150"

DIRECT OWNER 30x40 East Facing Vishweshwaraiah Layout 6th Block Near BDA Complex Contact: 9980733501/ 9900131323

30X40 7TH block West Facing, Near Nirmal School, RTO Visvesvaraya layout. 12750/- persft Negotiable. 9731151366.

Vidyaranyapura

SALE SITES 1200 SQFT & 1600 SQFT BBMP KHATHA EAST FACING VIDHYARANYAPURA 7500 PSQFT: 9035883017

Hegganahalli

PLOT SALE 160ftx100ft For Outright Sale @ Hegganahalli Cross. East Facing Bangalore-91 9900287834/ 9448377834

Agricultural Land

Hosur

HOSUR THALLI, Krishnagiri Road, 70 Acres, 25Acres, 11Acres Available, Suitable for Warehouse, Layout, Villas. 9980577227.

Jigani

FOR SALE AGRICULTURE LANDS/ PLOTS ON /OFF HAROHALLI- ANEKAL- JIGANI ROAD, SMALL EXTENT FOR GOOD INVESTMENT WITH HIGH APPRECIATION IN FUTURE, NOW HAPPENING FOR INVESTMENT. CONTACT VICTORY PROPERTIES: 7411692219/ 8618576685/ 9482303339.

South

FOR SALE NELUGULI, BANGALORE SOUTH- 560082, GREATER BANGALORE LIMITS, 5.5 GUNTAS, 2 PLOTS, VERY GOOD INVESTMENT FOR FUTURE. CONTACT VICTORY PROPERTIES: 7411692219/ 8618576685/ 9482303339.

Commercial Building

HRBR Layout

HRBR BDA commercial building 50x80 For Sale. Rental income 9 Lakhs. Brokers excuse. Contact: 7349322223

Whitefield

WHITEFIELD COMPANY Tenanted Brand New PG Building Sale 5.95cr. Getting Rent 5L. A katha. Call:9980577227

Commercial Land

Electronic City

SALE 27750SFT KIADB Industrial/ Commercial Land at Electronic City II Phase, North & South, Roads North 260ft frontage, Clear titles, VERNA DEVELOPERS, MG Road, B'lore, 9916310226/ 9620253180.

Mysore

COMMERCIAL LAND FOR SALE
52,272 sqft / 1.08 Acres
Rs.1300/- per sqft
Suitable for Hotels, Lodge, Apartment, School, Petrol Bunk, Villa Houses, Choultry, Farm House. 10km from Palace Surrounded by Layouts General Property
HD Kote Main Road Mysore.
Contact: GANISHKA PROPERTIES
97397 03467 Buy and sell

Nelamangala

120×150 18000SQFT Commercial land for Sale at Makli Near Hemalaya drug quoted 8,750/- per Sqft for More details Contact: 9902333355

17,10 ACRES Commercial Converted Land for Sale Facing 100ft Road Rs.6Cr kanamangala gate Near Nelamangala for more details Contact: 9902333355

Commerical

Hebbal

ON BELLARY Main Road Commercial Property East 25,000Sft Converted Near Nandi Upchar Hotel Clear-Titles Call:9341260828

Jayanagar

SALE COMMERCIAL 45x60 Jayanagar 7th Block With old House on 80 Feet Road Ct: 9844134068 8073859758

Mysore Road

KEMPEGOWDA LAYOUT commercial site number 4973 40'x64' 80' road south facing 7th block J sector 100 metres from National public school 13,000 per square feet not negotiable 9448706071

Rajajinagar

SALE COMMERCIAL 160x80 East Facing With old Building Rental Income 100ft Rd Rajajinagar Good Location Call:9611844667 8123515830

Flat

Chandra Layout

PENTHOUSE FLAT for Sale. 3 Bedroom.1600sft Super Built-up. 50Mtr fromAttiguppe Metro-Station. Chandra Layout, Vijaynagar 1.8Cr Negotiable. 9844060483

Indiranagar

NEAR DEFENCE Colony 3BHK Flat 3450 Sqft with 2 Carpark Flat for Sale for details Call. 9845004248

J P Nagar

FLATS FOR Sale @ Govt Guidance Value Around JP Nagar. Sarakki Homes, 9663676464

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

4BHK NEW Flats Sale, Ready to move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

Farm House/ Land/ Resorts

Devanahalli

SALE 9250 sqft industrial DC converted land Rate 3000 sq.ft Davenahalli cargo road near aerospace industrial land 6362964507, 9972417196

General

SOUTH GOA plot of 1225 Square meters at 20500 if interested message 9963998895

House

Hebbal

RESIDENTIAL PROPERTY FOR SALE
G+3 Independent Residential Property in a Prime Location behind Godrej Woodsman Apartment, Hebbal For Sale
(DC converted land & with E Khata
(Only genuine buyers)
(Brokers Excuse)
Contact : 7996992555

Jayanagar

SALE 45X90 Jayanagar 4th T Block With 5 BHK Duplex Bungalow on 40feet Road Ct: 9844134068 8073859758

J P Nagar

J.P.NAGAR 7TH phase, Bank of Baroda Layout 40'Road 40x60 East, 3BHK Duplex house, 4unit 1BHK`House 5,10,00,000/- 9980761200

SALE 40X60 J.P.Nagar 3rd Phase North Facing With 3BHK old House on 40feet Road Ct: 9844134068 8073859758

R T Nagar

SALE: 1 BHK STUDIO DUPLEX INDEPENDENT HOUSE 56 LAKHS VACANT POSITION A KHATHA GANGENAHALLI: 9035883017

Vijayanagar

SALE DUPLEX House (Ground 3BHK, 1st 4BHK) 61X36 Corner Site, RPC Layout, Contact: 9845526049 (No Brokers)

Yelahanka

"SALE 45'X70'FT with 2BHK House @Prime Location Yelahanka New Town Sector-A, Interested Buyers Contact: 9886035593"

Industrial & Factory

Tumkur Road

SALE, 2.24 Acre Land near Nelamangala, Suitable fore Warehouse, Industry, Residencial, Agriculture, Resorts. 9141326819, 9880462738

REAL ESTATE BUYING

House

Multiple Locations

WANTED 4 BHK INDEPENDENT HOUSE, AS PER VAASTU ONLY, JAYANAGAR, BTM, NAL LAYOUT. CONTACT VICTORY PROPERTIES: 7411692219/8618576685

Wilson Garden

WANTED ONE BHK INDEPENDENT HOUSE OR 250 SQFT OFFICE SPACE IN WILSON GARDEN. CONTACT VICTORY PROPERTIES: 7411692219/ 8618576685

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

General

REQUIRED SITES or with house 40x60 50x80 80x120, 100x100 Sadashivnagra RMV 2nd Stage Judicial Layout Arkavathi Layout Manyatha. Contact. 9844092859

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

REQUIRED BDA SITES @ Nagarbhavi, Vishweshwaraiya layout, Kempegowda layout. For Immediate Purchase any measurement. 9513955756, 9513119696.

RENTAL PROPERTIES

Accommodation Available

Commercial

FOR RENT COMMERCIAL OFFICEACCOMODATION ONEAST END ROAD,JAYANAGAR 4TH "T"BLOCK, 2300 SQFT,1ST FLOOR, RS.75/PER SQFT WITHOUTFITTINGS, PARTITIONS,WITH FITTINGS RS.85/.CONTACT VICTORYPROPERTIES: 7411692219/8618576685/9482303339.

COMMERCIAL BARE Space, 1000 sqft 3rd Floor, Available for RENT @ HMT Layout, Mathikere. 9740394491

FULLY FURNISHED 24,000 sft, 400 seater office space for lease at Financial District, Hyderabad. Grade A building, Central AC, Grand Atrium. Agents welcome! Ph: 9347576914.

Flats

MALLESWARAM 200METRES from MES College 2BHK Flat, 1200sft, Third Floor, South Facing, Lift, Carparking. Rent 32000/- Negotiable. (Vegetarians) Ready to move Call: 9845243757

3 BHK Flat for Rent at H.B.R. Layout, Brokers Excuse, For details Contact. JOSEPH. 9900822901.

House

HOUSE AVAILABLE FOR RENT, WILSON GARDEN, GOOD LOCATION, 3 BHK, 2 BATHROOMS, 2ND & 3RD FLOOR, RENT 45000/. CONTACT VICTORY PROPERTIES: 7411692219/ 8618576685/ 9482303339.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

ADMISSION CORNER

RASHTREEYA SIKSHANA SAMITHI TRUST INSTITUTIONS
Go, change the world®
RV Institute of Management®
Approved by AICTE, New Delhi | Accredited by NAAC with 'A+' grade | Autonomous Institution | Affiliated to Bengaluru City University
A+ NAAC
in collaboration with
Boston IT Solutions India Pvt. Ltd
is offering an
Industry-Curated One Year
POST GRADUATE DIPLOMA IN BUSINESS ANALYTICS (PGDBA)
Approved by Bengaluru City University
from July / August 2025
COURSE DETAILS
- Venue: **Centre for Business Analytics,** RV Institute of Management, Jayanagar, Bengaluru
- Eligibility: Graduates from any discipline
- Mode: Hybrid (Blend of Online & Offline)
- Duration: ONE year - 2 semesters of 5 months each & Two months Real World Capstone Project
- Tuition fees: Rs 1,60,000/-
- Timings: Mon to Fri: 6.30pm to 9.00pm
  Sat: 2.30pm to 9.00pm

Scan QR code for Course details, to register & pay the fee
Contact Person : Prof. Mithun D J
Mob: 9844284240 Ph: 08042540300
Website : www.rvim.edu.in

Contractors

FOR PROPERTY OWNERS STAYING OUT OF BANGALORE/ INDIA, WE TAKE CARE OF YOUR PROPERTY MAINTENANCE/ FIXING TENANTS/ CIVIL, PAINTING, ELECTRICAL, CARPENTRY, SOLAR WORKS, PROPERTY MANAGEMENT, PROPERTY MONITORING, CONTACT VICTORY PROPERTIES: BANGALORE, A LEADING 35- LEADING'>YEARS EXPERIENCED REAL ESTATE COMPANY. info@victoryproperties.in; www.victory properties.in; 7411692219/ 8618576685/ 9482303339.

BUSINESS

Business to Business

Investment

LOOKING FOR USA EB5 VISA Investment Projects. Full Services Provided. Please Call +91 9632369915

Business

FOR BEST BRANDING/ SOCIAL MEDIA MARKETING/ BUS BACK, AUTO BACK, HOARDINGS, STANDEES, CYCLE, VAN BRANDING, NO PARKING BOARDS FOR ALL BUSINESS, CORPORATES, EDUCATIONAL INSTITUTIONS. CONTACT VENUSCAST TECHNOLOGIES PVT LTD. 8618576685/ 9482303339/ 9632642940

LOANS FROM bank/Pvt: Mortgage (any property, with/without income). Prop sharing, Collaterals, Project, Housing, Construction, Takeover/ Personal, Business, Pension, Subsidy; NPA; Default; Cibil consider. DSA, Consultants also welcome. Cont:9019388175.

Engineering Products

SALE-INDUSTRIAL 5000SFT PEB Shed, 125KVA Genset, 5TPD Tube Ice Plant. Bangalore-9483215391

Finance

LOANS FOR HOUSING/ AUTOMOBILE/ PERSONAL/ BUSINESS LOANS AND INSURANCE GENERAL, HEALTH, AUTOMOBILE. CONTACT VICTORY INDIA: 8618576685/ 9482303339 victoryindia63@gmail.com, www.victory indiaco.in

URGENT LOAN AVAIL @ 3.5% PER ANNUM PERSONAL BUSINESS HOUSING TAKE OVER ALL TYPES LOAN SHIVGANGA FINANCE. PHONE: 8826494700.

Business Offers

Business For Sale

SALE RUNNING Mineral Water Plant DC Conversion 5500sft at Chandapura (Marsur Village) Price 2 Crore Call:7892531744 9448369117

EDUCATIONAL

Correspondence Courses

STUDY AT HOME SSLC DIRECT 2nd PUC BA, B.Com, BBA/B.Sc, BCA, BSW, B.LISc, B.Ed/M.Ed, M.LISc, MA/M.Com/M.Sc MBA, MSW/MCA, PG-Diploma Courses. Contact: Manasa Correspondence College. Malleshwaram Circle Bangalore 9880498484/ 9738761169/ 9663555154.

WEEKEND CORNER

ಕ್ಲಾಸಿಫೈಡ್ಸ್

VARAMAHALAKSHMI FESTIVAL SALE
Swadeshi Art & Craft
SILK & COTTON EXPO
Handloom & Handicraft Exhibition Cum Sale
SRI HARI KALYANA MANDAPA
Opp. KMS College, 17, 30th Main Road, Banashankari 3rd Stage, Bangalore - 85
20 to 29 July 2025
Handloom collections from different STATES
- Cotton Silk Sarees • Dress Materials
- Pochamaplli Sarees • Khadi Shrits • Suit pieces
- Jaipur hand Block Shirt • Phulkari Dupatta • Tops
- Jaipur Kids Dress • Kurtis • Jaipur Dresses
- Kantha work from west Bengal
- Carpets • Jewellery
- Lac Bangles • Cushion Cover
- hand Made Mat
- Bedsheets • Sofa Cover
- Bhagalpur Dress Materials
- Home Decoratives
- Rajashthan Chappals
- Kolkata Bags
- Terracotta Products
- Jaipur Stone Jewellery
- 1 Gram Gold Jewellery

INDIA UNDER ONE ROOF
1st time in your area
ALL ARE WELCOME ENTRY FREE
Timing : 10-00am to 9-00pm Mob: 9895790887, 8792474811

‘ದುರ್ಬಳಕೆ ಕಾರಣಕ್ಕೆ ಕಾಯ್ದೆ ರದ್ದು ಅಸಾಧ್ಯ’

ಅವೇಕ್ಷಾ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯ ಕಾನೂನು ಆಯೋಗದ ಅಧ್ಯಕ್ಷ ಅಶೋಕ ಬಿ. ಹಿಂಚಿಗೇರಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ವಾಕ್ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂಬ ಮಾತ್ರಕ್ಕೆ ಅದನ್ನು ಹಿಂಪಡೆಯಲು ಆಗುವುದಿಲ್ಲ. ಹಾಗೆಯೇ, ವರದಕ್ಷಿಣೆ ಮತ್ತು ಕೌಟುಂಬಿಕ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಆಗುತ್ತಿದೆ ಎಂಬ ಕಾರಣಕ್ಕೆ ಆ ಕಾಯ್ದೆಯನ್ನು ರದ್ದುಗೊಳಿಸಲು ಆಗುವುದಿಲ್ಲ ಎಂದು ರಾಜ್ಯ ಕಾನೂನು ಆಯೋಗದ ಅಧ್ಯಕ್ಷ ಅಶೋಕ ಬಿ. ಹಿಂಚಿಗೇರಿ ಹೇಳಿದರು.

ನಗರದಲ್ಲಿ ಶನಿವಾರ ಅವೇಕ್ಷಾ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಕೀಲೆ ಬಿಂದು ಎನ್. ದೊಡ್ಡಹಟ್ಟಿ ಮತ್ತು ಪ್ರಗ್ಯ ಸೋಲಂಕಿ ಅವರ ‘ಕಾನೂನು ಮತ್ತು ಅದರ ಮಿತಿಗಳು: ಕೌಟುಂಬಿಕ ಹಿಂಸೆ ಮತ್ತು ವೈವಾಹಿಕ ಕ್ರೌರ್ಯದ ಕುರಿತು ಪ್ರಾಯೋಗಿಕ ಅಧ್ಯಯನ’ ವರದಿ ಬಿಡುಗಡೆ ಮಾಡಿ ಮಾತನಾಡಿದರು.

‘ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯನ್ನು ಕೆಲವು ಅತೃಪ್ತ ಮಹಿಳೆಯರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂಬುದು ಪುರುಷ ಹಕ್ಕುಗಳ ಕಾರ್ಯಕರ್ತರು ಆರೋಪವಾಗಿದೆ. ಇಂತಹ ಆರೋಪಗಳು, ಕಾರಣ ಮತ್ತು ವಾದವನ್ನು ಒಪ್ಪಲು ಅರ್ಹವೇ ಎಂಬುದನ್ನು ನನಗೆ ನಾನು ಪ್ರಶ್ನಿಸಿಕೊಳ್ಳುತ್ತೇನೆ’ ಎಂದರು.

ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬೇಕು. ಇದರಲ್ಲಿ ನಾಗರಿಕ ಸಮಾಜ, ವಸ್ತುನಿಷ್ಠ ಮಾಧ್ಯಮಗಳು, ಕಾನೂನು ಜಾರಿ ಸಂಸ್ಥೆಗಳು, ನ್ಯಾಯಾಂಗದ ಪಾತ್ರ ಮುಖ್ಯವಾಗಿದೆ’ ಎಂದು ಅಭಿಪ್ರಾಯಪಟ್ಟರು.

ವಕೀಲೆ ಬಿಂದು ಎನ್. ದೊಡ್ಡಹಟ್ಟಿ ಮಾತನಾಡಿ,ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಮಹಿಳಾ ದೌರ್ಜನ್ಯಗಳ ಬಗ್ಗೆ ಪ್ರತ್ಯೇಕವಾಗಿ ಕಾರ್ಯಕ್ರಮಗಳನ್ನು ನಡೆಸಿ, ಸಮಾಜದಲ್ಲಿ ಜಾಗೃತಿ ಮೂಡಿಸಬೇಕು. ಮಹಿಳೆಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಾಂತ್ವನ ಕೇಂದ್ರಗಳಿಗೆ ಅನುದಾನವನ್ನು ನೀಡಬೇಕು ಎಂದು ಹೇಳಿದರು.

ಸಿಐಎಚ್‌ಎಟಿ ಮಾಜಿ ನಿರ್ದೇಶಕಿ ಸಂಗೀತಾ ರೇಗೆ, ಪ್ರಾಧ್ಯಾಪಕಿ ಸರಸು ಎಸ್ತರ್ ಥಾಮಸ್, ಅವೇಕ್ಷಾ ಸಂಸ್ಥೆಯ ಡೋನಾ ಫರ್ನಾಂಡಿಸ್, ವಕೀಲರಾದ ಪೂರ್ಣ ರವಿಶಂಕರ್ ಹಾಜರಿದ್ದರು.



ಕಾರ್ಯಕ್ರಮದಲ್ಲಿ ಅಶೋಕ ಬಿ. ಹಿಂಚಿಗೇರಿ ಅವರು ಅಧ್ಯಯನ ವರದಿ ಬಿಡುಗಡೆ ಮಾಡಿದರು. ಪೂರ್ಣ ರವಿಶಂಕರ್, ಸಂಗೀತಾ, ಸರಸು ಎಸ್ತರ್ ಥಾಮಸ್, ಡೋನಾ ಫರ್ನಾಂಡಿಸ್, ಬಿಂದು, ಪ್ರಗ್ಯ ಇದ್ದಾರೆ ಪ್ರಜಾವಾಣಿ ಚಿತ್ರ

ವರದಿಯ ಶಿಫಾರಸುಗಳು

- ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ದೂರು ಬಂದರೆ ಪೊಲೀಸರು ತಕ್ಷಣ ಎಫ್‌ಐಆರ್ ದಾಖಲಿಸಿ ಕ್ರಮ ವಹಿಸಬೇಕು
- ಕೌಟುಂಬಿಕ ಹಿಂಸಾಚಾರ ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಪಡೆದಿರುವ ಮಾಹಿತಿಯನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ(ಎನ್‌ಸಿಆರ್‌ಬಿ) ಪ್ರತ್ಯೇಕವಾಗಿ ದಾಖಲಿಸಬೇಕು
- ಕೌಟುಂಬಿಕ ಹಿಂಸಾಚಾರ ಪ್ರಕರಣಗಳಲ್ಲಿ ಜಾತಿ, ಧರ್ಮ, ವರ್ಗ, ಅಂಗವೈಕಲ್ಯ ಮತ್ತು ಆರ್ಥಿಕ ಸ್ಥಿತಿಯ ಮಾಹಿತಿಯನ್ನು ನಮೂದಿಸಬೇಕು.
- 18 ವರ್ಷಕ್ಕಿಂತ ಮೊದಲೇ ವಿವಾಹವಾಗಿರುವ ಬಾಲಕಿಯರು ನೀಡಿದ ದೂರನ್ನು ಪರಿಗಣಿಸಿ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರಲ್ಲಿ ದಾಖಲಿಸಬೇಕು
- ವಿವಾಹವಾಗಿ ಏಳು ವರ್ಷಗಳ ನಂತರ ವರದಕ್ಷಿಣೆ ಕಿರುಕುಳ ನೀಡಿದರೆ ದೂರು ದಾಖಲಾಗುವುದಿಲ್ಲ. ಇದು ಅವೈಜ್ಞಾನಿಕವಾಗಿದ್ದು, ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ಅವಧಿಯ ನಿರ್ಬಂಧವನ್ನು ತೆಗೆಯಬೇಕು
- ಮಹಿಳಾ ಆತ್ಮಹತ್ಯೆ ಪ್ರಕರಣಗಳಲ್ಲಿ ವರದಕ್ಷಿಣೆ ಕಿರುಕುಳ ಸೇರಿದಂತೆ ಕೌಟುಂಬಿಕ ಹಿಂಸಾಚಾರದ ಬಗ್ಗೆಯೂ ಮಾಹಿತಿಯನ್ನು ಒದಗಿಸಬೇಕು

ಕೊಮ್ಮಘಟ್ಟ: 75 ಫ್ಲ್ಯಾಟ್ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶನಿವಾರ ಕೊಮ್ಮಘಟ್ಟ ವಸತಿ ಸಮುಚ್ಚಯದಲ್ಲಿ ಆಯೋಜಿಸಿದ್ದ ಫ್ಲ್ಯಾಟ್ ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ.

100 ಫ್ಲ್ಯಾಟ್‌ಗಳನ್ನು ಕಾಯ್ದಿರಿಸಿ, 75 ಸಾರ್ವಜನಿಕರು ಫ್ಲ್ಯಾಟ್‌ನ ಪ್ರಾರಂಭಿಕ ಠೇವಣಿ ಮೊತ್ತವನ್ನು ಪಾವತಿಸಿದರು. ಇದೇ ವೇಳೆ ಅಧಿಕಾರಿಗಳು ಗ್ರಾಹಕರಿಗೆ ಹಂಚಿಕೆ ಪತ್ರ ವಿತರಿಸಿದರು. ಮೇಳದಲ್ಲಿ ಸುಮಾರು 500ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದರು.

ಕೊಮ್ಮಘಟ್ಟದಲ್ಲಿ ಮೇಳ ಆಯೋಜಿಸಿದ್ದರೂ ಕಣಿಮಿಣಿಕೆ ವಸತಿ ಸಮುಚ್ಚಯಕ್ಕೆ ಬೇಡಿಕೆ ಹೆಚ್ಚಾಗಿರುತ್ತದೆ.

ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಚ್.ಡಿ.ಎಫ್.ಸಿ. ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಸೌತ್ ಇಂಡಿಯನ್ ಬ್ಯಾಂಕ್‌ಗಳ ಪ್ರತಿನಿಧಿಗಳು ಹಾಜರಿದ್ದರು.

ಪ್ರಾಧಿಕಾರವು ಫ್ಲ್ಯಾಟ್‌ಗಳ ಖರೀದಿಗೆ ಈ ಮೊದಲು ಶೇಕಡ 25ರಷ್ಟು ಆರಂಭಿಕ ಠೇವಣಿ ನಿಗದಿಪಡಿಸಿತ್ತು. ಸದ್ಯ ಬಿಡಿಎ ಆ ಮೊತ್ತವನ್ನು ಶೇ 12.5ಕ್ಕೆ ಇಳಿಕೆ ಮಾಡಿದೆ. ಇದರಿಂದ ಹೆಚ್ಚಿನ ಮಂದಿ ಫ್ಲ್ಯಾಟ್‌ಗಳ ಖರೀದಿಗೆ ಆಸಕ್ತಿ ತೋರುತ್ತಿದ್ದಾರೆ.

ಪ್ರಾಧಿಕಾರದ ಆರ್ಥಿಕ ಸದಸ್ಯ ಎ. ಲೋಕೇಶ, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸಮೂರ್ತಿ, ಉಪ ಕಾರ್ಯದರ್ಶಿ ಜ್ಞಾನೇಶ್, ಎಂಜಿನಿಯರ್ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಇಂಬವಳ್ಳಿ, ಭುವನೇಶ್ವರ್ ಹಾಗೂ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.



ಕೊಮ್ಮಘಟ್ಟದಲ್ಲಿ ಆಯೋಜಿಸಿದ್ದ ಬಿಡಿಎ ಫ್ಲ್ಯಾಟ್ ಮೇಳದಲ್ಲಿ ಭಾಗವಹಿಸಿದ್ದ ಸಾರ್ವಜನಿಕರು

ಭತ್ತದ ತೋರಣ....

ಪ್ರಜಾವಾಣಿ ಚಿತ್ರ: ರಂಜು ಪಿ



ಬೆಂಗಳೂರಿನ ಮೈಸೂರು ರಸ್ತೆಯ ರಾಜರಾಜೇಶ್ವರಿ ನಗರದ ಆರ್ಚ್ ಬಳಿ ಪಾದಚಾರಿ ಮಾರ್ಗದ ಮೇಲೆ ವ್ಯಕ್ತಿಯೊಬ್ಬರು ಭತ್ತದ ತೋರಣಗಳನ್ನು ತಮ್ಮ ದ್ವಿಚಕ್ರ ವಾಹನದ ಮೇಲೆ ನೇತು ಹಾಕಿಕೊಂಡು ಮಾರಾಟ ಮಾಡುತಿದ್ದ ದೃಶ್ಯ ಶನಿವಾರ ಗಮನ ಸೆಳೆಯಿತು

ಚಿಟಿಕೆ ಸುದ್ದಿ

ರೈತ ಹುತಾತ್ಮರ ದಿನಾಚರಣೆ ನಾಳೆ



ಬೆಂಗಳೂರು: ‘ರೈತ ಹುತಾತ್ಮ ದಿನಾಚರಣೆಯ ಅಂಗವಾಗಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಇದೇ 21ರಂದು ಹುಬ್ಬಳ್ಳಿಯ ಕಿತ್ತೂರು ರಾಣಿ ಚನ್ನಮ್ಮ ವೃತ್ತದಿಂದ ಧಾರವಾಡ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಆಯೋಜಿಸಲಾಗಿದೆ’ ಎಂದು ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರೈತ ಹುತಾತ್ಮ ದಿನದ ಪ್ರಯುಕ್ತ ನರಗುಂದ, ನವಲಗುಂದ, ಚಿಕ್ಕನರಗುಂದ ಹಾಗೂ ಅಳಗವಾಡಿಯಲ್ಲಿರುವ ಹುತಾತ್ಮ ರೈತರ ವೀರಗಲ್ಲುಗಳಿಗೆ ಗೌರವ ಸಲ್ಲಿಸಲಾಗುವುದು. ಮಹದಾಯಿ ವಿಚಾರದಲ್ಲಿ ಎರಡು ರಾಷ್ಟ್ರೀಯ ಪಕ್ಷಗಳು ರಾಜಕೀಯ ಮಾಡುತ್ತಿದ್ದು, ಇದನ್ನು ಖಂಡಿಸಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ’ ಎಂದು ಹೇಳಿದರು.

ಸಂಘದ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ, ಪ್ರಧಾನ ಕಾರ್ಯದರ್ಶಿ ವೀರಭದ್ರಸ್ವಾಮಿ, ಕಾರ್ಯದರ್ಶಿ ಸುರೇಶ್ ಹುಸ್ಕೂರ್ ಸುದ್ದಿಗೋಷ್ಠಿಯಲ್ಲಿದ್ದರು.

ರಂಗ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಉದಯಭಾನು ರಂಗಶಾಲೆಯಿಂದ ಉದಯಭಾನು ಕಲಾ ಸಂಘದಲ್ಲಿ ಇದೇ 21ರಿಂದ ಇಪ್ಪತ್ತೊಂದು ದಿನಗಳ ‘ರಂಗ ಮುಂಗಾರು ತರಬೇತಿ ಶಿಬಿರ’ವನ್ನು ಆಯೋಜಿಸಲಾಗುತ್ತಿದೆ.

ಪ್ರತಿ ದಿನ ಸಂಜೆ ಶಿಬಿರ ನಡೆಯಲಿದೆ. ರಂಗನಟನೆ, ನೇಪತಥ್ಯ, ಮುಖವರ್ಣಿಕೆ, ವಸ್ತ್ರವಿನ್ಯಾಸ, ಮೇಳ, ಧ್ವನಿ-ಬೆಳಕು ವ್ಯವಸ್ಥೆಗಳ ಪ್ರಾಥಮಿಕ ಪರಿಚಯ ಮತ್ತು ತರಬೇತಿ ನೀಡಲಾಗುತ್ತದೆ. ರಂಗಕರ್ಮಿ, ನಿರ್ದೇಶಕ ಸಾಗರ್ ನೀನಾಸಂ ಅವರ ನೇತೃತ್ವದಲ್ಲಿ ಶಿಬಿರ ನಡೆಯಲಿದೆ.

13 ವರ್ಷಕ್ಕಿಂತ ಮೇಲ್ಪಟ್ಟವ ಆಸಕ್ತರು ಇರುವ ಶಿಬಿರದಲ್ಲಿ ಭಾಗವಹಿಸಬಹುದು.

ಹೆಚ್ಚಿನ ವಿವರಗಳಿಗೆ 080-26609343 ದೂರವಾಣಿ ಸಂಖ್ಯೆಗೆ (ಬೆಳಿಗ್ಗೆ 10ರಿಂದ ಮಧ್ಯಾಹ್ನ 1, ಸಂಜೆ 5 ರಿಂದ ರಾತ್ರಿ 8ರ ನಡುವೆ) ಸಂಪರ್ಕಿಸಬಹುದು. ವಾಟ್ಸ್‌ಆ್ಯಪ್ ಸಂಖ್ಯೆ 98441 92952 ಮೂಲಕ ಸಂದೇಶ ಕಳಿಸಿ ಹೆಸರು ನೋಂದಾಯಿಸಬಹುದು ಎಂದು ಕಲಾಸಂಘದ ಗೌರವ ಕಾರ್ಯದರ್ಶಿ ರಾಧಾಕೃಷ್ಣ ಕೌಂಡಿನ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಬಪ್ಪನಾಡು ದುರ್ಗಾಪರಮೇಶ್ವರಿ ಜಾತ್ರೆ


ಉಳ್ಳಾಲ ದರ್ಗಾ


ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಅತ್ತೂರು ಸೇಂಟ್ ಲಾರೆನ್ಸ್ ಚರ್ಚ್

ಬದಲಾಗುತ್ತಿದೆಯೇ ಅವಿಭಜಿತ ದಕ್ಷಿಣ ಕನ್ನಡ

• ಗಣೇಶ ಚಂದನಶಿವ

ಮಂಗಳೂರು: ಕೋಮು ಗಲಭೆ, ದ್ವೇಷ ಭಾಷಣ, ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳು, ಪ್ರಚೋದನಕಾರಿ ಸುದ್ದಿ ಹರಡಿ ಸಮಾಜದಲ್ಲಿ ವಿಷಬೀಜ ಬಿತ್ತುವ ಕೃತ್ಯಗಳಿಗೆ ತಕ್ಕಮಟ್ಟಿನ ಕಡಿವಾಣ ಬಿದ್ದಿದೆ. ಜಿಲ್ಲೆಯ ಅಭಿವೃದ್ಧಿ ಮತ್ತು ಮಕ್ಕಳ ಭವಿಷ್ಯದ ಬಗೆಗೆ ಸಮುದಾಯದಲ್ಲಿ ಚಿಂತನೆ ಶುರುವಾಗಿದೆ. ದಕ್ಷಿಣ ಕನ್ನಡದಲ್ಲಿ ಬದಲಾವಣೆಯ ತಂಗಾಳಿ ಬೀಸಲಾರಂಭಿಸಿದೆ ಎಂಬ ಭಾವ ಹರಡುತ್ತಿದ್ದು, ತುಳುನಾಡಿನ ಭ್ರಾತೃತ್ವ ಮತ್ತೆ ಬೆಸೆಯುವ ಆಶಾವಾದ ಒಡಮೂಡಿದೆ.

ಸಾಮರಸ್ಯ ಮರುಸ್ಥಾಪಿಸುವ ಪ್ರಯತ್ನ ಸರ್ಕಾರ–ಸಮುದಾಯದಿಂದ ನಡೆಯುತ್ತಿವೆ. ಕೋಮುದ್ವೇಷ ತಡೆಗಾಗಿಯೇ ರಾಜ್ಯ ಸರ್ಕಾರ ದೇಶದಲ್ಲೇ ಮೊದಲ ಬಾರಿಗೆ 'ವಿಶೇಷ ಕಾರ್ಯ ಪಡೆ' ರಚಿಸಿದೆ. ಪೊಲೀಸ್ ಅಧಿಕಾರಿಗಳನ್ನು ಬದಲಿಸಿದ್ದು 'ಕಿಡಿಗೇಡಿ'ಗಳ ವಿರುದ್ಧ ಕ್ರಮವಾಗುತ್ತಿವೆ. ಸೌದಿ ಅರೇಬಿಯಾದಲ್ಲಿದ್ದುಕೊಂಡು, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚೋದನಾಕಾರಿ ಸಂದೇಶಗಳನ್ನು ಹಂಚಿಕೊಂಡಿದ್ದ ಇಬ್ಬರನ್ನು ಲುಕ್ ಔಟ್ ಸುತ್ತೋಲೆ ಹೊರಡಿಸಿ ಕರೆಸಿಕೊಂಡ ಪೊಲೀಸರು, ಅವರನ್ನು ಬಂಧಿಸಿದ್ದಾರೆ. ಆ ಮೂಲಕ 'ಬಿಲದಲ್ಲಿ ಅವಿತಿದ್ದರೂ ಬಿಡುವುದಿಲ್ಲ' ಎಂಬ ಸಂದೇಶ ರವಾನಿಸಿದ್ದಾರೆ. 'ಉಪಟಳ ನೀಡುವವರ' ಗಡೀಪಾರಿಗೆ ಕಾನೂನು ಕ್ರಮ ಆರಂಭಿಸಿದ್ದಾರೆ. ಅಕ್ರಮ ದಂಧೆಗಳಿಗೆ ಕಡಿವಾಣ ಬೀಳುತ್ತಿದೆ.

ಇಂತಹ ಪ್ರಕರಣಗಳಲ್ಲಿ ಹೈಕೋರ್ಟ್‌ನಲ್ಲಿ ಪರಿಣಾಮಕಾರಿಯಾಗಿ ವಾದಿಸಲು ಅಡ್ವೊಕೇಟ್ ಜನರಲ್ ಅವರ ಕಚೇರಿಯ ನಾಲ್ವರು ಸರ್ಕಾರಿ ವಕೀಲರನ್ನು ಒಳಗೊಂಡ ವಿಶೇಷ ತಂಡ ನೇಮಿಸುವ ಮೂಲಕ ರಾಜ್ಯ ಸರ್ಕಾರ ಜಿಲ್ಲೆಯ ಪೊಲೀಸರಿಗೆ 'ಕಾನೂನು ಬಲ'ವನ್ನೂ ಒದಗಿಸಿದೆ. ಈ ಎಲ್ಲ ಕ್ರಮಗಳಿಂದಾಗಿ ಕೋಮುದ್ವೇಷದ ಕಿಡಿ ಹೊತ್ತಿಸುತ್ತಿದ್ದವರ, ಜ್ವಾಲೆಗೆ ತುಪ್ಪ ಸುರಿಯುವವರ ಧ್ವನಿ ಕ್ಷೀಣಿಸಿದೆ. ಕೆಲ ಧಾರ್ಮಿಕ ಮುಖಂಡರು ಸಹ ತಮ್ಮ ಎಂದಿನ ಶೈಲಿಯಲ್ಲಿ ಮಾತನಾಡುವುದನ್ನು ಸದ್ಯಕ್ಕೆ ನಿಲ್ಲಿಸಿದ್ದಾರೆ.

ರಾಜ್ಯದ ಕರಾವಳಿ ಪ್ರಕೃತಿದತ್ತವಾಗಿ ಸಂಪದ್ಭರಿತ. 'ದೇವರ ನಾಡು' ಎಂಬ ಪ್ರತೀತಿ. ಎಲ್ಲ ಜಾತಿ– ಪ್ರದೇಶದ ಜನರಿಗೂ ಆಶ್ರಯತಾಣ. ಕ್ರೈಸ್ತ ಮಿಷನರಿಗಳು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ಶಿಕ್ಷಣ ಕ್ರಾಂತಿಗೆ ಮುನ್ನುಡಿ ಬರೆದವು. ಇತರೆ ಸಮುದಾಯವರೂ ಶಿಕ್ಷಣ ಸಂಸ್ಥೆಗಳನ್ನು ತೆರೆದು ಕೈಜೋಡಿಸಿದ್ದರಿಂದ ಇಲ್ಲಿಯ ಶಿಕ್ಷಣ ಸಂಸ್ಥೆಗಳು ವಿದೇಶಗಳಲ್ಲೂ ಛಾಪು ಮೂಡಿಸಿವೆ. ದೀನ–ದಲಿತರಿಗೆ ಶಿಕ್ಷಣ ಒದಗಿಸಲು ಶ್ರಮಿಸಿದ ಕುದ್ಮುಲ್ ರಂಗರಾವ್ ಅವರಂಥ ಪ್ರಾತಃಸ್ಮರಣೀಯರನ್ನು ಕೊಟ್ಟ ನಾಡಿದು. ಇಲ್ಲಿಯ ಜನ ಜಗತ್ತಿನ ಬಹುತೇಕ ದೇಶಗಳಲ್ಲಿ ನೆಲೆಸಿದ್ದಾರೆ. ವ್ಯಾಸಂಗ ಮತ್ತಿತರ ಕಾರಣಗಳಿಗಾಗಿ ನೂರಕ್ಕೂ ಹೆಚ್ಚು ದೇಶಗಳವರು ಇಲ್ಲಿದ್ದಾರೆ. ದೇಶದ ಬ್ಯಾಂಕಿಂಗ್ ಕ್ಷೇತ್ರಕ್ಕೆ ಇಲ್ಲಿಯವರ ಕೊಡುಗೆ ದೊಡ್ಡದು. ಮಾತೃ ಪ್ರಧಾನ ವ್ಯವಸ್ಥೆ ಇಲ್ಲಿಯ ಇನ್ನೊಂದು ವಿಶೇಷತೆ. ದ.ಕ ಸಂಪೂರ್ಣ ಸಾಕ್ಷರ ಜಿಲ್ಲೆ ಎಂಬ ಘೋಷಣೆಗೆ ಸಿದ್ಧತೆ ನಡೆದಿವೆ.

ಇಲ್ಲಿಯ ಸೌಹಾರ್ದ ಪರಂಪರೆ ದೊಡ್ಡದು. ಬಪ್ಪನಾಡು ದುರ್ಗಾ ಪರಮೇಶ್ವರಿ ದೇವಸ್ಥಾನ ಕಟ್ಟಿಸಿದ್ದು ಬ್ಯಾರಿ ಸಮುದಾಯದ ಬಪ್ಪ ಬ್ಯಾರಿ. ಪ್ರತಿ ವರ್ಷದ ಜಾತ್ರೆಯ ಸಮಯದಲ್ಲಿ ದೇವಸ್ಥಾನ ಸಮಿತಿಯಿಂದ ಬಪ್ಪ ಬ್ಯಾರಿ ಅವರ ಕುಟುಂಬದವರಿಗೆ ಪ್ರಸಾದ (ಹೂವು) ನೀಡಲಾಗುತ್ತದೆ. ಉಳ್ಳಾಲದ ಪ್ರಸಿದ್ಧ ಮದನಿ ದರ್ಗಾಕ್ಕೆ ಜಾಗ ನೀಡಿದ್ದು ಹಿಂದೂಗಳು.

ತುಳುನಾಡಿನ ಭಾಗವಾಗಿರುವ ಮಂಜೇಶ್ವರದ ಉದ್ಯಾವರ ಶ್ರೀ ಅರಸು ದೈವಗಳ ವಾರ್ಷಿಕ ಜಾತ್ರೆಯಲ್ಲಿ ಗ್ರಾಮದ 'ಸಾವಿರ ಜಮಾತ್ ಮಸೀದಿ' ಭೇಟಿ ನೀಡುವ ಸಂಪ್ರದಾಯವಿದೆ. ಧರ್ಮಸ್ಥಳದ ಮಂಜುನಾಥ, ಕುಕ್ಕೆ ಸುಬ್ರಹ್ಮಣ್ಯ, ಕಟೀಲು ದುರ್ಗಾಪರಮೇಶ್ವರಿ, ಕೊಲ್ಲೂರು ಮೂಕಾಂಬಿಕಾ, ಕುತ್ತಾರಿನ ಸ್ವಾಮಿ ಕೊರಗಜ್ಜ ದೇವಸ್ಥಾನ, ಕಾರ್ಕಳ ಬಳಿಯ ಅತ್ತೂರಿನ ಸಂತ ಲಾರೆನ್ಸ್ ಚರ್ಚ್, ಉಳ್ಳಾಲದ ದರ್ಗಾ ಮುಂತಾದವು ಸರ್ವಧರ್ಮಗಳ ಶ್ರದ್ಧಾ ಕೇಂದ್ರಗಳಾಗಿವೆ.

ಇಂತಹ ಸೌಹಾರ್ದ ಪರಂಪರೆಗೆ ಕೊಳ್ಳಿ ಇಡುವ ಕೆಲಸ ಹಲವು ದಶಕಗಳಿಂದ ನಿರಂತರವಾಗಿ ನಡೆದಿದ್ದರಿಂದ ಕಳಂಕ ಅಂಟಿಕೊಂಡಿದೆ. ಬೇರೆಡೆಯ ರಾಜಕೀಯದಲ್ಲಿ ಜಾತಿ– ಒಳಜಾತಿ ಪ್ರಮುಖ ಪಾತ್ರ ವಹಿಸುತ್ತಿದ್ದರೆ, ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಧರ್ಮವೇ ಪ್ರಧಾನ ಎಂದಾಗಿದೆ. ಸೇರಿಗೆ ಸವ್ವಾಸೇರು ಎಂಬಂತಹ ಭಾವನೆ ಎರಡೂ ಕಡೆಯ ಕೆಲವರಲ್ಲಿ ಬಂದಿರುವುದು ಪರಿಸ್ಥಿತಿ ಬಿಗಡಾಯಿಸಲು ಕಾರಣ ಎಂಬ ವ್ಯಾಖ್ಯಾನವೂ ಇದೆ.

ಕರಾವಳಿ ಹೀಗೇಕಾಯಿತು ಎಂದು ಕೇಳಿದರೆ, 'ಎರಡೂ ಕಡೆಯ ಕೆಲವರು ಬಿತ್ತಿರುವ ಧರ್ಮದ ವಿಷಬೀಜ ಹೆಮ್ಮರವಾಗಿದೆ. ಸಮುದ್ರದ ಅಲೆಗಿಂತಲೂ ಧರ್ಮಾಭಿಮಾನದ ಅಬ್ಬರ ಜೋರಾಗಿದೆ. ಉಭಯ ಧರ್ಮಗಳಲ್ಲಿಯ ಧರ್ಮಾಂಧತೆ ಈ ಪ್ರದೇಶಕ್ಕೆ ಕಡಲ್ಕೊರೆತಕ್ಕಿಂತಲೂ ಹೆಚ್ಚಿನ ಹಾನಿ ಮಾಡಿದೆ. ಧರ್ಮದ ಅಮಲಿನೊಂದಿಗೆ ಡ್ರಗ್ಸ್ ಮಾಫಿಯಾ, ಮರಳು ಮಾಫಿಯಾ ಸೇರಿ ಹಲವು ಮಾಫಿಯಾಗಳು ಕೆಲಸ ಮಾಡಿದ್ದು, ಧರ್ಮಾಧಾರಿತ ಕೊಲೆ ನಡೆದಿವೆ. ಧರ್ಮಾಧಾರಿತ ಒಂದು ಕೊಲೆ ನಡೆದರೆ ಕೆಲವೇ ದಿನಗಳ ಅಂತರದಲ್ಲಿ ಕನಿಷ್ಠ 3–4 ಹೆಣ ಉರುಳಿವೆ ಎಂಬ ಉದಾಹರಣೆಯನ್ನು ಇಲ್ಲಿಯ ಜನ ನೀಡುತ್ತಾರೆ. ಇದರ ದುಷ್ಪರಿಣಾಮ ಇಲ್ಲಿಯ ವಾಣಿಜ್ಯೋದ್ಯಮ, ಶಿಕ್ಷಣ ಸಂಸ್ಥೆಗಳ ಮೇಲೂ ಬಿದ್ದಿದೆ. ಕೆಲ ವರ್ಷಗಳಿಂದ ಉನ್ನತ ಶಿಕ್ಷಣ ಪ್ರವೇಶ ಕಡಿಮೆಯಾಗುತ್ತಿದೆ. ಗೋವಾಕ್ಕೆ ಸರಿಸಮವಾಗಿ ಪ್ರವಾಸೋದ್ಯಮ ಬೆಳೆಯಲು ಅವಕಾಶ ಇದ್ದರೂ, ಅದು ಸಾಧ್ಯವಾಗುತ್ತಿಲ್ಲ' ಎಂಬ ಆತಂಕವನ್ನು ಹಲವರದ್ದು.

'ನಾನು 1 ಲಕ್ಷ ಚದರ ಅಡಿಯ ಕಟ್ಟಡ ಕಟ್ಟುತ್ತಿದ್ದೇನೆ. ವಿದೇಶಿ ಕಂಪನಿಯೊಂದು ಬಾಡಿಗೆಗೆ ಒಡಂಬಡಿಕೆ ಮಾಡಿಕೊಂಡಿತ್ತು. ಇಲ್ಲಿಯ ಘಟನಾವಳಿಗಳ ಕಾರಣಕ್ಕಾಗಿ ಆ ಕಂಪನಿ ಈಗ ಬರಲು ಹಿಂದೇಟು ಹಾಕುತ್ತಿದೆ. ಕೋಮುಗಲಭೆ ನಡೆದಾಗ ಕೆಲ ದಿನ ಧಾರ್ಮಿಕ ಕ್ಷೇತ್ರಗಳಿಗೂ ಹೊರಗಿನ ಜನ ಬರಲ್ಲ' ಎಂಬ ಪುತ್ತೂರು ಕಾಂಗ್ರೆಸ್ ಶಾಸಕ ಅಶೋಕ ಕುಮಾರ್ ರೈ ಅವರು ಹೇಳಿಕೆ ಇಲ್ಲಿಯ ಅಭಿವೃದ್ಧಿಗೆ ಕುತ್ತು ಎದುರಾಗಿರುವುದಕ್ಕೆ ಸಾಕ್ಷಿಯಂತಿದೆ.

'ಎರಡೂ ಜಿಲ್ಲೆಯಲ್ಲಿ 250 ಐಟಿ ಕಂಪನಿಗಳಿವೆ. 200ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳಿವೆ. ರಾಜ್ಯದ ಜಿಡಿಪಿಗೆ ಮಂಗಳೂರಿನ ಕೊಡುಗೆಯೂ ಹೆಚ್ಚಿದೆ. ವಾಣಿಜ್ಯೋದ್ಯಮ ಬೆಳವಣಿಗೆಗೆ ಸೌಹಾರ್ದ ವಾತಾವರಣವೂ ಬೇಕು' ಎಂಬುದು ಕೆನರಾ ವಾಣಿಜ್ಯೋದ್ಯಮ ಸಂಸ್ಥೆಯ ಕಳಕಳಿ.

ಹೀಗೇಕಾಯಿತು?: 'ಮಂಗಳೂರು ಮುಂಬೈಯಿಂದ ಪ್ರಭಾವಿತವಾಗಿರುವ ನಗರ. ಇಲ್ಲಿಯವರು ಕೆಲಸಕ್ಕಾಗಿ ಮುಂಬೈಗೆ ಹೋಗುತ್ತಿದ್ದರು. ಅಲ್ಲಿಯ ಭೂಗತ ಚಟುವಟಿಕೆಯತ್ತ ಕೆಲವರು ಆಕರ್ಷಿತರಾದರು. 90ರ ದಶಕದ ವರೆಗೆ ಇಲ್ಲಿಯ ಭೂಗತ ಚಟುವಟಿಕೆಗೆ ಮುಂಬೈ ಲಿಂಕ್ ಇತ್ತು. ಇಂತಹ ಗ್ಯಾಂಗ್‌ನಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಲ್ಲ ಧರ್ಮೀಯ ಕ್ರಿಮಿನಲ್‌ಗಳೂ ಇದ್ದರು. ರಾಮಜನ್ಮಭೂಮಿ– ಬಾಬರಿ ಮಸೀದಿ ಆಂದೋಲನ ಆರಂಭವಾದ ನಂತರ, ಈ ಭೂಗತ ಗ್ಯಾಂಗ್‌ಗಳು ಹಿಂದೂ–ಮುಸ್ಲಿಂ ಕ್ರಿಮಿನಲ್‌ಗಳ ಗ್ಯಾಂಗ್‌ಗಳಾಗಿ ಬದಲಾದವು. ಕ್ರಿಯೆಗೆ–ಪ್ರತಿಕ್ರಿಯೆ ಎಂಬುದು ಎರಡೂ ಕಡೆಯಿಂದ ಆರಂಭವಾಯಿತು. ಎರಡೂ ಕಡೆಯ ಕ್ರಿಮಿನಲ್‌ಗಳಿಗೆ ಧರ್ಮ ಆಶ್ರಯ ತಾಣಗಳಾದವು. ಏನೇ ಅನ್ಯಾಯ ಮಾಡಿದರೂ ಧರ್ಮದ ಹೆಸರಲ್ಲಿ ರಕ್ಷಣೆ ಸಿಗುತ್ತದೆ ಎಂಬಂತಾಯಿತು. ಜನಮಾನಸವೇ ಹಿಂದೂ– ಮುಸ್ಲಿಂ ಎಂಬ ಎರಡು ಗುಂಪು ಆಗುವ ಸ್ಥಿತಿ ಬಂತು' ಎಂಬ ವಿಶ್ಲೇಷಣೆ ಮುಂದಿಡುತ್ತಾರೆ ಹೋರಾಟಗಾರ ಮತ್ತು ಕಾಂಗ್ರೆಸ್ ರಾಜ್ಯ ವಕ್ತಾರ ಎಂ.ಜಿ. ಹೆಗಡೆ.

'ಇಲ್ಲಿ ನಡೆದ ಮತೀಯ ಕೊಲೆಗಳು ಹಿಂದೂ ಮುಸ್ಲಿಂ ಗಲಾಟೆ ಅಲ್ಲ. ಹಿಂದೂ– ಮುಸ್ಲಿಂ ಕ್ರಿಮಿನಲ್‌ಗಳ ಗಲಾಟೆ. 30 ಕೊಲೆಗಳು ನಡೆದಿದ್ದರೆ ಅವುಗಳಲ್ಲಿ 5–6 ಧರ್ಮದ ಪ್ರತೀಕಾರದ ಕೊಲೆಗಳು ಇರಬಹುದು. ಅಕ್ರಮ ಚಟುವಟಿಕೆಗಳಿಂದ ಬರುವ ಪಾಲು ಹಿಂದೆ ಭೂಗತ ಪಾತಕಿಗಳಿಗೆ ಹೋಗುತ್ತಿತ್ತು. ಈಗ ಅದು ಜಾತಿವಾದಿ ಸಂಘಟನೆಗಳಲ್ಲಿರುವ ಕ್ರಿಮಿನಲ್‌ಗಳಿಗೆ ಹೋಗುತ್ತಿದ್ದು, ಈ ಸರಪಳಿಯನ್ನು ತುಂಡರಿಸಬೇಕಿದೆ' ಎಂಬುದು ಅವರ ಪ್ರತಿಪಾದನೆ.

ಆದರೆ, ಇದನ್ನು ವಿಶ್ವ ಹಿಂದೂ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ್ಯ ಸಹಕಾರ್ಯವಾಹ ಶರಣ್ ಪಂಪ್‌ವೆಲ್ ಒಪ್ಪುವುದಿಲ್ಲ. 'ಇಲ್ಲಿಯದು ಹಿಂದೂ– ಮುಸ್ಲಿಂರ ಮಧ್ಯದ ಗಲಾಟೆ ಅಲ್ಲ. ಹಿಂದೂ ಸಮಾಜದ ಸಂಸ್ಕೃತಿ, ಹಿಂದೂಗಳ ಭಾವನೆಗೆ ನೋವುಂಟು ಮಾಡುವ ಕೆಲಸ ಹಲವಾರು ವರ್ಷಗಳಿಂದ ಆಗಿದೆ. ಗೋ ಕಳ್ಳತನ, ಗೋ ಹತ್ಯೆ, ಲವ್ ಜಿಹಾದ್ ಪ್ರಶ್ನಿಸಿದ್ದಕ್ಕೆ ನಮ್ಮ ಕಾರ್ಯಕರ್ತರಿಗೆ ತೊಂದರೆ ಕೊಡುವ ಕೆಲಸ ನಡೆದಿದೆ. ವೈಯಕ್ತಿಕ ಕಾರಣಗಳಿಗಾಗಿ ಮುಸ್ಲಿಮರ ಕೊಲೆ ನಡೆದರೆ ಅದಕ್ಕೆ ಪ್ರತೀಕಾರವಾಗಿ ಹಿಂದೂಗಳ ಕೊಲೆ ಮಾಡಲಾಗಿದೆ. ಇಸ್ಲಾಂ ಮತೀಯವಾದ ಇಲ್ಲಿ ಹೆಚ್ಚಿದೆ. ಅವರಿಗೆ ವಿದೇಶದಿಂದ ಹಣ ಬರುತ್ತಿದೆ. ಪ್ರವೀಣ್ ನೆಟ್ಟಾರು ಪ್ರಕರಣದಲ್ಲಿ ಇದು ಸಾಬೀತಾಗಿದೆ. ಪಕ್ಕದ ಕೇರಳದಲ್ಲಿ ಇಸ್ಲಾಂ ಮತೀಯವಾದಿಗಳ ಸಂಖ್ಯೆ ಹೆಚ್ಚಾಗಿದೆ. ಇಲ್ಲಿಯ ಪಿಎಫ್‌ಐ ಪ್ರೇರಿತ ಹುಡುಗರಿಗೆ ಅಲ್ಲಿಯವರಿಂದ ನೆರವು–ತರಬೇತಿ ಸುಲಭವಾಗಿ ಸಿಗುತ್ತಿದೆ. ಫಂಡಿಂಗ್– ಪ್ಲ್ಯಾನಿಂಗ್–ಟ್ರೇನಿಂಗ್ ವ್ಯವಸ್ಥಿತವಾಗಿ ನಡೆಯುತ್ತಿದೆ. ಸ್ಲೀಪರ್ ಸೆಲ್‌ಗಳು ಕೆಲಸ ಮಾಡುತ್ತಿವೆ. ಹೀಗಾಗಿ ಅವರು ದಕ್ಷಿಣ ಕನ್ನಡವನ್ನು ಟಾರ್ಗೆಟ್ ಮಾಡಿಕೊಂಡಿದ್ದಾರೆ' ಎನ್ನುತ್ತಾರೆ ಅವರು.

'ಭೂಗತ ಪಾತಕಿಗಳೇ ಧರ್ಮದ ಹೆಸರಲ್ಲಿ ರಕ್ಷಣೆ ಪಡೆಯುತ್ತಿದ್ದಾರೆ, ಅಕ್ರಮದ ದುಡ್ಡು ಅವರಿಗೆ ಸೇರುತ್ತಿದೆ ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ಇಂತಹ ಅನೈತಿಕ–ಅಕ್ರಮ ಕೆಲಸ ಹಿಂದೂಗಳು ಮಾಡುತ್ತಿಲ್ಲ' ಎಂದು ಶರಣ್ ಹೇಳುತ್ತಾರೆ.

'ವಿದೇಶಿ ನೆರವು' ಎಂಬುದನ್ನು ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ಮುಖಂಡ ಅನ್ವರ್ ಸಾದತ್ ಒಪ್ಪುವುದಿಲ್ಲ. 'ದಕ್ಷಿಣ ಕನ್ನಡದ ಆರ್ಥಿಕತೆ ನಿಂತಿರುವುದೇ ಗಲ್ಫ್‌ನಲ್ಲಿರುವ ಇಲ್ಲಿಯ ಉದ್ಯೋಗಿಗಳ ಮೇಲೆ. ಬ್ಯಾರಿ (ಮುಸ್ಲಿಂ) ಸಮುದಾಯದ ಶೇ 50ರಷ್ಟು ಜನ ಗಲ್ಫ್‌ನಲ್ಲಿ ಉದ್ಯೋಗದಲ್ಲಿದ್ದಾರೆ. ಇತರೆ ಧರ್ಮೀಯರೂ ಇದ್ದಾರೆ. ಊರಲ್ಲಿ ಸಾಮಾಜಿಕ–ಧಾರ್ಮಿಕ–ಕ್ರೀಡಾ ಕಾರ್ಯಕ್ರಮಗಳ ಕನಿಷ್ಠ ಅರ್ಧದಷ್ಟು ವೆಚ್ಚವನ್ನು ಭರಿಸುವವರು ವಿದೇಶದಲ್ಲಿ ಉದ್ಯೋಗದಲ್ಲಿರುವ ಆ ಊರಿನವರು. ಸ್ಥಿತಿವಂತರು ಹಬ್ಬದ ವೇಳೆ ತಮ್ಮ ಬಂಧುಗಳಿಗೆ ಉಡುಗೊರೆ ನೀಡುವುದು ನಮ್ಮ ಸಂಪ್ರದಾಯ. ಹೀಗೆ ಬಂದ ಹಣವನ್ನೇ ಇಲ್ಲಿಯ ಚಟುವಟಿಕೆಗೆ ವಿದೇಶಿ ಹಣ ಬರುತ್ತದೆ ಎಂದು ಹುಯಿಲೆಬ್ಬಿಸಿದರೆ ಹೇಗೆ' ಎಂಬುದು ಅವರ ಪ್ರಶ್ನೆ.

'ಬಿಜೆಪಿ ಇದನ್ನು ಹಿಂದುತ್ವದ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿದೆ. ಬಹುತೇಕ ಮಾಧ್ಯಮಗಳೂ ಏಕಮುಖವಾಗಿವೆ. ಇನ್ನೊಂದು ಕೋಮಿನವರ ಕಣ್ಣೀರು ಒರೆಸುವ ಕೆಲಸವಾಗುತ್ತಿಲ್ಲ. ಇದರಿಂದಾಗಿ ಬಿಜೆಪಿ ಮತ್ತು ಸಂಘ ಪರಿವಾರದವರಿಗೆ ನಡೆದಿದ್ದೇ ದಾರಿ ಎಂಬಂತಾಗಿದೆ' ಎನ್ನುತ್ತಾರೆ ಅನ್ವರ್ ಸಾದತ್.

ಇಲ್ಲಿಯ ಬಹುಪಾಲು ಕ್ರಿಶ್ಚಿಯನ್‌ರು ಸಮಾನಂತರ ಕಾಯ್ದುಕೊಂಡು 'ತಮ್ಮ ಪಾಡಿಗೆ ತಾವಿದ್ದಾರೆ'.

'ಇಲ್ಲಿಯದು ಸೈದ್ಧಾಂತಿಕ ಸಂಘರ್ಷ. ಅಕ್ರಮ ದಂಧೆ ಮಟ್ಟಹಾಕಬೇಕು. ವಿದ್ಯಾರ್ಥಿ ಮತ್ತು ಸಮುದಾಯದಲ್ಲಿ ಸಾಮರಸ್ಯ ಮೂಡಿಸುವ ಕೆಲಸವಾಗಬೇಕು' ಎಂಬುದು ಸಿಪಿಎಂ ಮುಖಂಡ ಮುನೀರ್ ಕಾಟಿಪಳ್ಳ ಅವರ ಸಲಹೆ.

ಗೃಹ ಸಚಿವ ಜಿ.ಪರಮೇಶ್ವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಮಂಗಳೂರಲ್ಲಿ ನಡೆದ ಸೌಹಾರ್ದ ಸಭೆಯಲ್ಲಿ ಹೊರಹೊಮ್ಮಿದ ಒಟ್ಟಾರೆ ಆಶಯವೂ ಸಾಮರಸ್ಯದ ಮೂಲಕ ಜಿಲ್ಲೆಯ ಗತವೈಭವ ಮರಳಿ ತರುವುದೇ ಆಗಿತ್ತು.

ಆದರೆ, ಇದಕ್ಕೆ ಕಪ್ಪುಚುಕ್ಕೆ ಎಂಬಂತೆ ಪುತ್ತೂರು ಮತ್ತು ವಿಟ್ಲದಲ್ಲಿ ಈ ತಿಂಗಳು ಎರಡು ಮತೀಯ ಗೂಂಡಾಗಿರಿ, ಉಡುಪಿ ಜಿಲ್ಲಾಯಲ್ಲಿ ದ್ವೇಷ ಭಾಷಣದ ಒಂದು ಪ್ರಕರಣ ದಾಖಲಾಗಿವೆ.

ಮರೆಯಾಗಿಲ್ಲ ಮಾನವೀಯತೆ: ಸಂಕಷ್ಟದಲ್ಲಿರುವವರಿಗೆ ನೆರವಾಗುವ ಇಲ್ಲಿಯವರ ಮಾನವೀಯ ಸೇವೆಗೆ ಈ ಸಂಘರ್ಷ ಅಡ್ಡಿ ಬಂದಿಲ್ಲ. ಅಶಕ್ತರಿಗೆ ಚಿಕಿತ್ಸೆ ಕೊಡಿಸುವ, ವಿವಾಹಕ್ಕೆ ನೆರವು ನೀಡುವ, ಸೂರು ಕಲ್ಪಿಸುವ... ಸಂಕಷ್ಟದಲ್ಲಿದ್ದವರ ಕಣ್ಣೀರು ಒರೆಸುವ ವಿಷಯ ಬಂದಾಗ ಎಲ್ಲ ಧರ್ಮೀಯ ದಾನಿಗಳೂ ನೆರವಿನ ಹಸ್ತ ಚಾಚುತ್ತಾರೆ.

ಇದು ಇದೇ ಜೂನ್ ತಿಂಗಳ ಪ್ರಕರಣ. ಬಂಟ್ವಾಳ ತಾಲ್ಲೂಕಿನ ದೇವಸ್ಥಾನವೊಂದರ ಅರ್ಚಕ ಹಿರಣ್ಯಾಕ್ಷ ಅವರ ಐದು ವರ್ಷ ಬಾಲಕಿಗೆ ಅಸ್ಥಿ ಮಜ್ಜೆ ಟ್ರಾನ್ಸ್‌ಪ್ಲಾಂಟ್ ಚಿಕಿತ್ಸೆಗೆ ಸುಮಾರು ₹50 ಲಕ್ಷ ಹಣ ಹೊಂದಿಸಬೇಕಿತ್ತು. ಸಮಾಜ ಸೇವಕ ಮಂಗಳೂರಿನ ಫಯಾಜ್ ಮಾಡೂರು ಹಾಗೂ ಅವರ ತಂಡದವರು ನೆರವು ಯಾಚಿಸಿ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದರು. ಕೇವಲ 15 ಗಂಟೆಗಳಲ್ಲಿ ₹75 ಲಕ್ಷ ನೆರವು ಸಂಗ್ರಹವಾಯಿತು. ಈಗ ಆ ಬಾಲೆಯ ಚಿಕಿತ್ಸೆ ನಡೆಯುತ್ತಿದೆ.

'ಈವರೆಗೆ ಹೀಗೆ ₹25 ಕೋಟಿಗೂ ಅಧಿಕ ಮೊತ್ತ ಸಂಗ್ರಹಿಸಿ ಕೊಟ್ಟಿರಬಹುದು. ಎಲ್ಲ ಧರ್ಮದವರೂ ಧಾರಾಳವಾಗಿ ಧನಸಹಾಯ ಮಾಡುತ್ತಾರೆ' ಎನ್ನುತ್ತಾರೆ ಫಯಾಜ್ ಮಾಡೂರು. ಇದು ಈ ಮಣ್ಣಿನ ಗುಣ.

ಏತನ್ಮಧ್ಯೆ ದಕ್ಷಿಣ ಕನ್ನಡ ಹೆಸರನ್ನು ಬದಲಿಸಬೇಕು ಎಂಬ ಪರ–ವಿರೋಧ ಚರ್ಚೆ, ಮಂಗಳೂರು ನೈಟ್‌ಲೈಫ್‌ಗೆ ತೆರೆದುಕೊಳ್ಳಬೇಕು ಎಂಬ ಕೂಗು ಸಹ ಎದ್ದಿದೆ. ಒಟ್ಟಾರೆ ಅಭಿವೃದ್ಧಿ ಮೇಲುಗೈ ಸಾಧಿಸಲಿ; ಕೋಮುದ್ವೇಷ ಕೊನೆಯಾಗಲಿ. ತುಳುನಾಡಿನ ಗತವೈಭವ ಮರುಕಳಿಸಲಿ ಎಂಬುದು ಇಲ್ಲಿಯ ಶ್ರೀಸಾಮಾನ್ಯರ ಆಶಾವಾದ. ❖

ಪ್ರಜಾಪ್ರಭುತ್ವ ದೇಶದಲ್ಲಿ ಮೌಲ್ಯಗಳನ್ನು ಅರಿತು ಬಾಳುವುದೇ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಭೂಮಿಯ ಋಣವನ್ನು ನಾವು ತೀರಿಸಬೇಕಿದೆ. ಗ್ರಾಮೀಣ ಪ್ರದೇಶದ ಎಲ್ಲರೂ ಒಂದಾಗಿ ದೋಣಿ ಮೂಲಕ ನಗರವನ್ನು ತಲುಪುವ ಕಾಲವಿತ್ತು. ಕಷ್ಟದ ದಿನಗಳಲ್ಲಿ ಎಲ್ಲರೂ ಪರಸ್ಪರ ಕೊಡುಕೊಳ್ಳುವಿಕೆಯಿಂದ ಜೀವನ ನಡೆಸುವುದು ನಮ್ಮ ಪದ್ಧತಿ. ಮನುಷ್ಯತ್ವ ಒಂದೇ ಧರ್ಮ. ಎಲ್ಲರೂ ಒಗ್ಗಟ್ಟಾಗಿರುವುದೇ ಸಮಾಜದ ಸುಂದರ ನೋಟ. ಬಡ ಮಕ್ಕಳಿಗೆ ಶಿಕ್ಷಣ ನೀಡುವ, ಸಾಮಾಜಿಕ ಮೌಲ್ಯಗಳನ್ನು ಬಿತ್ತುವುದು ನಮ್ಮೆಲ್ಲರ ಆದ್ಯತೆಯಾಗಬೇಕು.

ಹರೇಕಳ ಹಾಜಬ್ಬ, ಅಕ್ಷರಸಂತ, ಪದ್ಮಶ್ರೀ ಪುರಸ್ಕೃತರು

ಧರ್ಮದ ಸಮಸ್ಯೆ ಇಲ್ಲ; ಧರ್ಮ ಇಲ್ಲಿ ಮುಖವಾಡ ಅಷ್ಟೇ. ಹಿಂದೂಗಳಲ್ಲಿ ಕೋಮುವಾದಿಗಳು ಇದ್ದಂತೆ ಮುಸ್ಲಿಮರಲ್ಲಿಯೂ ಇದ್ದಾರೆ. ಇದು ಆಗಬಾರದಿತ್ತು. ಆದರೆ, ಇದು ದೊಡ್ಡ ದುರಂತ. ಮುಸ್ಲಿಂ ಕೋಮುವಾದ ಬೆಳೆದಂತೆ ಹಿಂದು ಕೋಮುವಾದ ಬಲವಾಗುತ್ತದೆ. ಇಲ್ಲಿ ಜಾತ್ಯತೀತ ಪಕ್ಷಗಳಿಗೆ ಬದ್ಧತೆ ಇಲ್ಲ. ಬಿಜೆಪಿಯ ಹಿಂದುತ್ವವನ್ನು ಧೈರ್ಯವಾಗಿ ಪ್ರಶ್ನಿಸುವ ನಾಯಕತ್ವ ಇಲ್ಲ. ಪ್ರಗತಿಪರರ ಧ್ವನಿ ಕ್ಷೀಣಿಸಿದೆ. ಎಲ್ಲವೂ ಕೋಮುವಾದೀಕರಣಗೊಂಡಿದೆ. ಇದು ಕೋಮುವಾದಿಗಳು ಬೆಳೆಯಲು ಕಾರಣವಾಗುತ್ತಿದೆ. ಜಾತ್ಯತೀತರು ಮತ್ತು ಬುದ್ಧಿಜೀವಿಗಳು ಬಲಗೊಳ್ಳಬೇಕು. ಎರಡೂ ಧರ್ಮದವರನ್ನು ಒಟ್ಟಾಗಿ ತೆಗೆದುಕೊಂಡು ಹೋಗಬಲ್ಲ ರಾಜಕೀಯ ನಾಯಕತ್ವ ಬೆಳೆಯಬೇಕು. ಸಾಹಿತ್ಯ ಮತ್ತು ಶೈಕ್ಷಣಿಕ ವಲಯ ಸಂವಿಧಾನಬದ್ಧವಾಗಿ ಇದ್ದರೆ ಸಾಕು. ಇಲಾಖೆಗಳು ಸಮರ್ಥವಾಗಿ ಕೆಲಸ ಮಾಡಬೇಕು. ಕರಾವಳಿಯ ಸೌಹಾರ್ದ ಮರುಸ್ಥಾಪನೆಗೆ ತಕ್ಷಣದ, ದೂರಗಾಮಿ ಕಾರ್ಯಯೋಜನೆ ಬೇಕು.

ಮೊಹಮ್ಮದ್ ಕುಂಞಿ, ರಾಜ್ಯ ಕಾರ್ಯದರ್ಶಿ, ಜಮಾಅತೆ ಇಸ್ಲಾಮಿ ಹಿಂದ್

ಇಲ್ಲಿ ವಿದ್ಯಾರ್ಥಿ ಚಳವಳಿ ಬಲಾಢ್ಯವಾಗಿತ್ತು. ಎಸ್‌ಎಫ್‌ಐ, ಎನ್‌ಎಸ್‌ಯುಐ, ಡಿವೈಎಫ್‌ಐ ಮತ್ತು ಇವುಗಳ ವಿರುದ್ಧ ಸಿದ್ಧಾಂತದ ಎಬಿವಿಪಿ ಪ್ರಬಲವಾಗಿದ್ದವು. ಹೀಗಾಗಿ ವೈಚಾರಿಕತೆ, ಸಾಮರಸ್ಯ ಎಂಬುದು ಸಮತೋಲನವಾಗುತ್ತಿತ್ತು. ಶೈಕ್ಷಣಿಕ ವ್ಯವಸ್ಥೆ ವ್ಯಾಪಾರೀಕರಣಗೊಂಡ ಕಾರಣ ವಿದ್ಯಾರ್ಥಿ ಸಂಘಟನೆಗಳು ದುರ್ಬಲಗೊಂಡವು. ಒಂದು ಕಡೆ ಮಾತ್ರ ಯುವಕರನ್ನು ಸೆಳೆಯಲಾಯಿತು. ಯುವಕರಲ್ಲಿ ಮತೀಯ ಭಾವನೆ ಹೆಚ್ಚಿತು. ವಿದ್ಯಾರ್ಥಿಗಳಲ್ಲಿ ವೈಚಾರಿಕತೆ ಬೆಳೆಸಬೇಕಿದೆ. ಇಲ್ಲಿ ಅವೈದಿಕ ಪದ್ಧತಿ ಇತ್ತು. ದೈವಾರಾಧನೆಯಲ್ಲಿ ಧರ್ಮಗಳ ಕಟ್ಟುಪಾಡು ಇರಲಿಲ್ಲ. ಇದು ಕೋಮು-ಸಾಮರಸ್ಯಕ್ಕೆ ಕಾರಣವಾಗಿತ್ತು.

ಗಣನಾಥ ಎಕ್ಕಾರು, ನಿವೃತ್ತ ಪ್ರಾಧ್ಯಾಪಕ


ಅತ್ತೂರು ಚರ್ಚ್ ಜಾತ್ರೆಯಲ್ಲಿ ಸರ್ವಧರ್ಮ ಭಕ್ತರ ಸಮಾಗಮ

'ಹೂವು ಕೊಡುತ್ತಾರೆ; ಹೂವು ಮಾರಲು ಬಿಡುತ್ತಿಲ್ಲ'

'ಬಪ್ಪನಾಡು ದುರ್ಗಾ ಪರಮೇಶ್ವರಿ ದೇವಸ್ಥಾನದ ಜಾತ್ರೆಯ ದಿನ ರಥದ ಸವಾರಿ ವೇಳೆ ಜಾತ್ರಾ ಸಮಿತಿಯವರು ನಮ್ಮ ಮನೆಗೆ ಬಂದು ಹೂವು, ಹಣ್ಣು ಕೊಡುವ ಪರಂಪರೆ ಇದೆ. ಅದು ನಡೆದುಕೊಂಡು ಬರುತ್ತಿದೆ. ಆದರೆ, ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಹೂವು ಮಾರಲು ಕೆಲ ವರ್ಷಗಳಿಂದ ಅವಕಾಶ ನೀಡುತ್ತಿಲ್ಲ' ಎಂದು ಹೇಳುತ್ತಾರೆ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನ ನಿರ್ಮಿಸಿರುವ ಬಪ್ಪ ಬ್ಯಾರಿ ಕುಟುಂಬಕ್ಕೆ ಸೇರಿರುವ ಅಬ್ದುಲ್ ರಜಾಕ್ ಮೂಲ್ಕಿ.

'ಬಪ್ಪನಾಡು ದೇವಸ್ಥಾನವು ಮುಜುರಾಯಿ ಇಲಾಖೆಗೆ ಸೇರಿದ್ದರಿಂದ ಎಲ್ಲ ಪ್ರಕ್ರಿಯೆ ಇಲಾಖೆಯ ನೀತಿ-ನಿಯಮದಂತೆ ನಡೆಯುತ್ತವೆ. ದೇವಳದ ಸುತ್ತಮುತ್ತ ಹೂ ಮಾರಾಟದ ವಿಷಯದಲ್ಲಾಗಲಿ, ದೇವಳ ವಠಾರದಲ್ಲಿನ ವ್ಯಾಪಾರ ವ್ಯವಹಾರಕ್ಕೆ ನಿಯಮಗಳನ್ನು ಪಾಲಿಸಿಕೊಂಡು, ಅದನ್ನು ಮೀರದಂತೆ ಕ್ರಮ ಕೈಗೊಂಡಿದ್ದೇವೆ. ಈಗ ಯಾವುದೇ ರೀತಿಯ ಗೊಂದಲಗಳಿಲ್ಲ' ಎನ್ನುವುದು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅನುವಂಶಿಕ ಮೊಕ್ತೇಸರ ಎಂ.ದುಗ್ಗಣ್ಣ ಸಾವಂತರು ಅವರ ವಿವರಣೆ.

'ಈಚೆಗೆ ಉಳ್ಳಾಲ ದರ್ಗಾದ ಉರುಸ್ ನಡೆದಾಗ ಎಲ್ಲ ಧರ್ಮೀಯರೂ ವ್ಯಾಪಾರ ನಡೆಸಿದರು. ಆದರೆ, ಕೆಲವೆಡೆ ಸೀಮಿತ ಧರ್ಮದವರಿಗೆ ಮಾತ್ರ ವ್ಯಾಪಾರಕ್ಕೆ ಅವಕಾಶ ಎಂಬ ಸಂವಿಧಾನ ವಿರೋಧ ನಡೆ ಅನುಸರಿಸಲಾಗುತ್ತಿದೆ. ಅದನ್ನು ತಡೆಯಬೇಕು. ಸಂವಿಧಾನ ವಿರೋಧಿ ಸಂಘ–ಸಂಸ್ಥೆಗಳನ್ನು ನಿಷೇಧಿಸಬೇಕು' ಎಂಬುದು ಉಳ್ಳಾಲ ದರ್ಗಾ ಸಮಿತಿ ಅಧ್ಯಕ್ಷ ಬಿ.ಜಿ. ಹನೀಫ್ ಹಾಜಿ ಅವರ ಆಗ್ರಹ.


ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ನವರಾತ್ರಿ ಮಹೋತ್ಸವದಲ್ಲಿ ಹಿಂದೂ ವರ್ತಕರ ಮಳಿಗೆಯಲ್ಲಿ ಖರೀದಿಯಲ್ಲಿ ತೊಡಗಿದ್ದ ಮುಸ್ಲಿಂ ಕುಟುಂಬ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 20-7-2000

• **ಗೋವಾ ಚರ್ಚ್‌ಸ್ಫೋಟ: ಇಬ್ಬರೂ ಆರೋಪಿಗಳು ಸೆರೆ**

ಹುಬ್ಬಳ್ಳಿ, ಜು.19 – ಗೋವಾದ ವಾಸ್ಕೊ ಚರ್ಚ್‌ನಲ್ಲಿ ಜೂನ್ 8ರಂದು ನಡೆದ ಬಾಂಬ್ ಸ್ಫೋಟ ಪ್ರಕರಣದ ಇನ್ನೊಬ್ಬ ಆರೋಪಿಯನ್ನು ಕೂಡಾ ಬಂಧಿಸುವಲ್ಲಿ ಹುಬ್ಬಳ್ಳಿ ಧಾರವಾಡದ ಪೊಲೀಸ್ ಹಾಗೂ ಸಿಓಡಿ ತಂಡ ಯಶಸ್ವಿಯಾಗಿದ್ದು ಇಂದು ಇಬ್ಬರೂ ಆರೋಪಿಗಳನ್ನು ಹುಬ್ಬಳ್ಳಿಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿ, ಜುಲೈ 30ರವರೆಗೆ ಮತ್ತೆ ತಮ್ಮ ವಶಕ್ಕೆ ಪಡೆದುಕೊಂಡಿದೆ.

ಒಬ್ಬ ಆರೋಪಿ ಬೆಳಗಾವಿ ಮೂಲದವರಾಗಿದ್ದು, ಇನ್ನೊಬ್ಬ ಆರೋಪಿ ಹೈದರಾಬಾದ್ ನಿವಾಸಿಯಾಗಿದ್ದಾರೆ.

75 ವರ್ಷಗಳ ಹಿಂದೆ

ಗುರುವಾರ, 20-7-1950

• **ಬೆಂಗಳೂರಿನಲ್ಲಿ ಕಾಲರಾ ಪರಿಸ್ಥಿತಿ**

ಬೆಂಗಳೂರು, ಜುಲೈ 19 – ಕಳೆದ 8–10 ದಿನಗಳಲ್ಲಿ ಬೆಂಗಳೂರು ನಗರ ಹಾಗೂ ಸಿವಿಲ್ ಪ್ರದೇಶಗಳಲ್ಲಿ ಅಲ್ಲಲ್ಲಿ ಕಾಲರಾ ಉಪದ್ರವ ಕಾಣಿಸಿಕೊಂಡಿವೆಯೆಂದು ಗೊತ್ತಾಗಿದೆ. ನಗರ ಭಾಗದಿಂದ ವರದಿಯಾಗಿರುವ 5–6 ಮತ್ತು ಸಿವಿಲ್ ಪ್ರದೇಶದ 5–6 ಕೇಸುಗಳಲ್ಲಿ ಒಟ್ಟು 3 ಕೇಸು ಕಾಲರಾ ಉಪದ್ರವವೆಂದು ನಿರ್ಧಾರವಾಗಿದೆ. ಉಳಿದ ಕೇಸುಗಳ ಬಗ್ಗೆ ವರದಿ ಬಂದಿಲ್ಲ.

ಕಾರ್ಪೊರೇಷನ್ ಆರೋಗ್ಯ ಇಲಾಖೆ ಎಲ್ಲಾ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುತ್ತಿದೆ. ಮನೆ–ಮನೆಗೂ ಹೋಗಿ ಲಸಿಕೆ ಹಾಕಲಾಗುತ್ತಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

20 ಜುಲೈ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದಶಮಿ ಗಂ. 12-14 **ನಕ್ಷತ್ರ:** ಕೃತ್ತಿಕಾ ಗಂ. 22-54 **ಯೋಗ:** ಗಂಡ ಗಂ. 21-48 **ಕರಣ:** ವಿಷ್ಟಿ ಗಂ. 12-14, ಕರ್ಕಾಟಕ ಮಾಸದ 04 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 1 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 – 06-00 **ಸೂರ್ಯೋದಯ:** 06-16, **ಸೂರ್ಯಾಸ್ತ:** 06-57 **ಮುಸ್ಲಿಂ ದಿನಾಂಕ:** 24 ಮೊಹರಮ್

ಅದೃಷ್ಟ ಸಂಖ್ಯೆ: 5, 12



ಮೇಷ: ಪಾಲುದಾರಿಕೆ ವ್ಯವಹಾರ ನಡೆಸಲು ಇಚ್ಛಿಸುವವರು ನಿಯಮಗಳ ಕುರಿತಾಗಿ ಇನ್ನೊಮ್ಮೆ ಮಾತನಾಡಿಕೊಳ್ಳುವುದರಿಂದ ಭವಿಷ್ಯದಲ್ಲಿ ಸ್ನೇಹ ಸಂಬಂಧ ಉಳಿಯುತ್ತದೆ. ಸನ್ಮಾರ್ಗದಲ್ಲಿ ಹಣ ವಿನಿಯೋಗವಾಗುವುದು.

ವೃಷಭ: ದೇವತಾನುಗ್ರಹದಿಂದ ಮತ್ತು ಅಪಾರವಾದ ಆತ್ಮವಿಶ್ವಾಸದಿಂದ ಕೆಲಸ ಆರಂಭಿಸಿ, ವಿಘ್ನಗಳು ದೂರವಾಗುವುದು. ನಿರೀಕ್ಷಿತ ಮೂಲಗಳಿಂದ ಬರಬೇಕಿದ್ದ ಹಣದ ವಿಚಾರದಲ್ಲಿ ಅಡ್ಡಿ ಆತಂಕ ಎದುರಾಗುವುದು.

ಮಿಥುನ: ಹೆಚ್ಚುವರಿ ಆದಾಯದ ಬಗ್ಗೆ ದೀರ್ಘವಾದ ಆಲೋಚನೆ ಮಾಡುವಿರಿ. ಕನಸನ್ನು ಸಾಕಾರಗೊಳಿಸುವ ಮನಸ್ಸು ನಿಮಗೀಗ ಬರಲಿದೆ. ನಿಯಮ ಉಲ್ಲಂಘನೆ ಸರಿಯಲ್ಲ. ಸಾಲ ಮರುಪಾವತಿಗೆ ಅವಕಾಶ ಇದೆ.

ಕರ್ಕಾಟಕ: ರೈತಾಪಿ ವರ್ಗದವರಿಗೆ ಪ್ರಾಕೃತಿಕ ವಾತಾವರಣ ಮತ್ತು ಕೂಲಿ ಕಾರ್ಮಿಕರಿಂದ ಸಹಕಾರ ಹೆಚ್ಚಿನ ಲಾಭವನ್ನು ಉಂಟುಮಾಡಲಿದೆ. ಕುಟುಂಬ ವ್ಯವಹಾರಗಳಲ್ಲಿ ಸಾಕಷ್ಟು ಸಂಯಮ ವಹಿಸುವುದು ಒಳ್ಳೆಯದು.

ಸಿಂಹ: ಮೇಲ್ನೋಟಕ್ಕೆ ಕಾಣುವುದೇ ಸತ್ಯವೆಂದು ನಂಬಬೇಡಿ, ಆಳವಾದ ಅಧ್ಯಯನ ನಡೆಸಿ ತೀರ್ಮಾನಿಸಿರಿ. ದೈನಂದಿನ ಕೆಲಸದ ಹೊರತಾಗಿ ಹೆಚ್ಚುವರಿ ಕೆಲಸದಿಂದ ಮನಸ್ಸಿಗೆ ಸಂತೋಷ ಉಂಟಾಗುತ್ತದೆ.

ಕನ್ಯಾ: ವ್ಯವಹಾರಗಳಲ್ಲಿ ಸಕಾರಾತ್ಮಕ ಬೆಳವಣಿಗೆಗಳು ಇರುವುದು. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಉತ್ಸಾಹ ಉಂಟಾಗಲಿದೆ. ತರಕಾರಿ ಬೆಳೆಗಳಿಗೆ ಉತ್ತಮ ಬೆಲೆ ದೊರೆತು ಸಮಾಧಾನದ ಜೊತೆಯಲ್ಲಿ ಆರ್ಥಿಕವಾಗಿ ಭದ್ರವಾಗುವಿರಿ.

ತುಲಾ: ಬರವಣಿಗೆ, ಮುದ್ರಣ ಕೆಲಸ ಮಾಡುತ್ತಿರುವವರಿಗೆ ಲಾಭದಾಯಕ ಅವಕಾಶ ಸಿಗಲಿದೆ. ಆದಾಯದಲ್ಲಿ ಗಣನೀಯ ವ್ಯತ್ಯಾಸವಾಗುವುದು. ಕಾರ್ಮಿಕ ವರ್ಗದವರಿಗೆ ಬಿಡುವಿಲ್ಲದ ಕೆಲಸ ಅನಾರೋಗ್ಯವನ್ನು ಉಂಟುಮಾಡಲಿದೆ.

ವೃಶ್ಚಿಕ: ನಾಟಕೀಯ ಬುದ್ಧಿ ಬಿಟ್ಟು ಪ್ರಾಮಾಣಿಕವಾಗಿರಿ. ನಿಜವಾದ ಭಾವನೆಗಳಿಂದ ಪ್ರಾಮಾಣಿಕವಾಗಿರಲು ಸಾಧ್ಯ. ವೃತ್ತಿ ಕೌಶಲ ಹಾಗೂ ಜಾಣ್ಮೆ ಮೆಚ್ಚುಗೆಗೆ ಪಾತ್ರವಾಗುವುದು. ಸಾಕಷ್ಟು ಹಣ ಹೂಡಿಕೆ ಮಾಡುವಿರಿ.

ಧನು: ಹಳೆಯ ಸಮಸ್ಯೆಗಳನ್ನು ಕೆದಕುವ ಬದಲು ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿ. ನಿಮಗೆ ವೃತ್ತಿ ಜೀವನದ ಬಗ್ಗೆ ಇರುವ ಸಂಶಯವನ್ನು ಬಿಟ್ಟು ನೆಮ್ಮದಿಯಿಂದ ಜೀವನ ನಡೆಸಿ. ಬೇಳೆಕಾಳು ಸಗಟು ವ್ಯಾಪಾರಿಗಳಿಗೆ ಲಾಭವಿದೆ.

ಮಕರ: ಕನಸುಗಳನ್ನು ನನಸು ಮಾಡಲು ಸಾಕಷ್ಟು ಶ್ರಮ ಅನಿವಾರ್ಯ. ಸಮಸ್ಯೆಗಳಿಗೆ ಉತ್ತಮ ಪರಿಹಾರಗಳು ದೊರೆಯುವವು. ವೃತ್ತಿಯ ಜೊತೆಜೊತೆಗೆ ಉನ್ನತ ವಿದ್ಯಾಭ್ಯಾಸ ಮಾಡುವ ಮನಸ್ಸಾಗಲಿದೆ.

ಕುಂಭ: ಮಕ್ಕಳ ಓದಿನ ವಿಚಾರದಲ್ಲಿ ಕಠಿಣ ಕ್ರಮ ಅಗತ್ಯವಾಗುವುದು. ದೈನಂದಿನ ಕೆಲಸಗಳಲ್ಲಿ ಬದಲಾವಣೆ ಇರುವುದಿಲ್ಲ. ಯಾವುದೇ ಪರಿಸ್ಥಿತಿಯಲ್ಲಿ ಸ್ನೇಹಿತರು ಹಾಗೂ ಕುಟುಂಬ ಸದಸ್ಯರು ನಿಮ್ಮ ಬೆಂಬಲಕ್ಕಿರುವರು.

ಮೀನ: ಕುಟುಂಬದ ಸದಸ್ಯರಲ್ಲಿ ಉತ್ತಮ ಆರೋಗ್ಯವಿರುವುದು ಮನಸ್ಸಿಗೆ ನೆಮ್ಮದಿ ತರಲಿದೆ. ಕೃಷಿ ಮೂಲದಿಂದ ಆರ್ಥಿಕವಾಗಿ ಮುನ್ನಡೆ ಸಾಧಿಸುವಿರಿ. ಸ್ನೇಹಿತರ ಕೆಲಸಕಾರ್ಯಗಳಿಗಾಗಿ ಓಡಾಟ ನಡೆಸಬೇಕಾಗುವುದು.

ಪದಬಂಧ 6109

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದೊಂದು ಬಗೆಯ ಚರ್ಮವಾದ್ಯ (4)
3.ದಾಸ್ತಾನು ಇಡುವ ಸ್ಥಳ (3)
5.ಸಾರ್ವತ್ರಿಕವಾಗಿ ಕಾಣಿಸಿಕೊಂಡಿರುವ ಪ್ರವಾಸಿ (3)
6.ಸದಾ ಕಾಲ ಚಾರನದ್ದು ಒಳ್ಳೆಯ ನಡತೆ (4)
8.ದ್ರವದಿಂದ ತುಂಬಿರುವಂಥದ್ದು (4)
10.ದೇವಾಲಯದ ಸಭಾಮಂಟಪ (4)
12.ವೃಕ್ಷದ ಹತ್ತಿರ ಬಿದ್ದಿರುವ ಪಚ್ಚೆ (4)
13.ಹುಟ್ಟಿದಕಾಲ ನಕ್ಷತ್ರ ಇತ್ಯಾದಿಗಳನ್ನು ತಿಳಿಸುವ ಪತ್ರಿಕೆ (3)
16.ವನದಲ್ಲಿರುವ ಉಡುಗೆ (3)
17.ಕತ್ತು ಬಗ್ಗಿಸಿ ಹಾಕಿದ ಸಹಿ (4)

ಮೇಲಿಂದ ಕೆಳಕ್ಕೆ

1.ವಸ್ತುಗಳನ್ನಿಡುವ ತಗಡಿನ ಪೆಟ್ಟಿಗೆ (2)
2.ಸಮಯ ಸೂಚಕ ಯಂತ್ರ (4)
3.ಮರದ ಸುತ್ತ ಹಾರಾಡುತ್ತಿರುವ ದುಂಬಿ (4)
4.ಕಬ್ಬು, ಬಿದಿರು ಇತ್ಯಾದಿಗಳ ಗಂಟು (2)
7.ದಾನ ನೀಡಿರುವ ರಾಕ್ಷಸ (3)
9.ಈತ ಹಳಬ! (3)
11.ಆನೆ ಮೊಗದವನು (4)
12.ಹೂವಿನಲ್ಲಿನ ಸಿಹಿ ರಸ (4)
14.ವರನಿಗೆ ಕೇಳಿಸಿದ ಧ್ವನಿ (2)
15.ಒಂದು ಸಲಕ್ಕೆ ನುಂಗುವಷ್ಟು ಆಹಾರ (2)

1			2	■	3		4	■
	■	■		■		■		■
■	■	■	5			■	■	■
6	7			■	8		9	
■		■	■	■	■	■		■
10			11	■	12			
■	■	■	13			■	■	■
■	14	■		■		■	■	15
■	16			■	17			

6108ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗಜಪತಿ 3.ಬಾಲಂಗೋಚಿ 5.ಲವಣ 7.ಶರ 9.ಕೊನರು 10.ಗುದ್ದು 11.ಮಂಡು 12.ನಿಕಷ 14.ರಸ 16.ಬಳಪ 18.ಕರಿಯೋಲೆ 19.ರಸಾಯನ

ಮೇಲಿಂದ ಕೆಳಕ್ಕೆ: 1.ಗರ್ಭಕೋಶ 2.ತಿಲ 3.ಬಾಣ 4.ಸಿಡಿಮದ್ದು 6.ವಚನ 8.ರಗಡು 10.ಗುಡಾರ 11.ಮಾನಸಿಕ 13.ಕಪಾಳ 15.ಸಮಾಧಾನ 16.ಬಲೆ 17.ಪರ

ಸುಡೊಕು 6493

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5	2			7			
9		1		5	8	2		4

6492 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

...ಟ್ರೋಗೆ 55 ಎಕರೆ ನೀಡಿ’

...ಡ್ ಟ್ರಾನ್ಸ್‌ಪೋರ್ಟ್ ... ಕರಂದ್ಲಾಜೆ ಒತ್ತಾಯ

ನಮ್ಮ ಮೆಟ್ರೊ

‘2000ದಲ್ಲಿ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಈ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲಾಗಿದೆ. ಆದರೆ ಈವರೆಗೂ ಯಾವುದೇ ಅಭಿವೃದ್ಧಿ ಚಟುವಟಿಕೆಗಳಾಗಿಲ್ಲ. ಈಗ 46 ಎಕರೆ ತನ್ನ ಬಳಿ ಉಳಿಸಿಕೊಂಡು, 9 ಎಕರೆಯನ್ನಷ್ಟೇ ಬಿಎಂಆರ್‌ಸಿಎಲ್‌ಗೆ ನೀಡಿದೆ’ ಎಂದರು.

‘ರಿಯಲ್ ಎಸ್ಟೇಟ್ ಉದ್ಯಮಿಗಳ ಜತೆಗೆ ಸರ್ಕಾರ ಒಪ್ಪಂದ ಮಾಡಿಕೊಂಡಿದೆಯೇ? ಯಾವ ಉದ್ದೇಶಕ್ಕೆ ಸರ್ಕಾರ ತನ್ನ ಬಳಿ ಅಪಾರ ಪ್ರಮಾಣದ ಭೂಮಿ ಉಳಿಸಿಕೊಂಡಿದೆ’ ಎಂದು ಪ್ರಶ್ನಿಸಿದರು



ಮಲ್ಟಿಮೋಡ್ ಟ್ರಾನ್ಸ್‌ಪೋರ್ಟ್ ಹಬ್ ನಿರ್ಮಾಣಕ್ಕೆಂದು ಸ್ವಾಧೀನ ಮಾಡಲಾದ ಪ್ರದೇಶದಲ್ಲಿರುವ ಗುಜರಿ ವಸ್ತುಗಳನ್ನು ಶೋಭಾ ಕರಂದ್ಲಾಜೆ ಪರಿಶೀಲಿಸಿದರು

‘ಅಕ್ರಮ ವಲಸಿಗರನ್ನು ಓಡಿಸಿ’

‘ಹಲವು ವರ್ಷಗಳಿಂದ ಈ ಜಾಗ ಖಾಲಿ ಇರುವ ಕಾರಣ, ಬಾಂಗ್ಲಾದೇಶದ ಅಕ್ರಮ ವಲಸಿಗರು ಇಲ್ಲಿ ಬಂದು ನೆಲಸಿದ್ದಾರೆ. ಸರ್ಕಾರ ಕೂಡಲೇ ತನಿಖೆ ನಡೆಸಿ, ಅವರನ್ನು ಹೊರಗಟ್ಟುವ ಕೆಲಸ ಮಾಡಬೇಕು’ ಎಂದು ಶೋಭಾ ಕರಂದ್ಲಾಜೆ ಒತ್ತಾಯಿಸಿದರು.

ಹೆಬ್ಬಾಳ–ಹೆಮ್ಮನಕೆರೆಯ ಖಾಲಿ ಪ್ರದೇಶದಲ್ಲಿ ಇರುವ ಗುಜರಿ ಮತ್ತು ಕೊಳೆಗೇರಿಗಳಿಗೆ ಭೇಟಿ ನೀಡಿದ ಅವರು, ಅಲ್ಲಿನ ನಿವಾಸಿಗಳ ದಾಖಲೆ ಪತ್ರಗಳನ್ನು ಪರಿಶೀಲಿಸಿದರು. ‘ರೋಹಿಂಗ್ಯಾಗಳು, ದೇಶದ್ರೋಹದ ಕೆಲಸ ಮಾಡುವವರು ಇಲ್ಲಿ ನೆಲಸಿದ್ದಾರೆ. ಇವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವ ಕೆಲಸ ಕೂಡಲೇ ಆಗಬೇಕು’ ಎಂದು ಆಗ್ರಹಿಸಿದರು.

...ೀಗ ತಡೆಗೆ ನಿಯಂತ್ರಣ: ತುಷಾರ್ ಮೆಹ್ತಾ

...’ ಕರ್ನಾಟಕ’ ... (ಈ ಹಿಂದಿನ ... ದಾಹರಿಸುವ ... ದುರುಪ ... ನ್ಯಮದ ... ತ್ಯಗತ್ಯ’ ... ಮೆಹ್ತಾ ... ಸುವ ... ಜ್ಞಾನ ... ಯಲ್ಲಿ

ಹೈಕೋರ್ಟ್ ಸುದ್ದಿ

ಜಾರಿಗೆ ತರಲಾಗಿರುವ ಪೋರ್ಟಲ್ ಕಾನೂನಿನ ವೈರುಧ್ಯಗಳಿಗೆ ಸಾಕ್ಷಿಯಾಗಿದೆ’ ಎಂದು ಆಕ್ಷೇಪಿಸಿ ‘ಎಕ್ಸ್’ನ ಸ್ಥಳೀಯ ಅಧಿಕೃತ ಪ್ರತಿನಿಧಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಸಹಯೋಗ್ ಪೋರ್ಟಲ್ ಅನ್ನು ಆಡಳಿತಾತ್ಮಕ ಅನುಕೂಲಕ್ಕಾಗಿ ಸ್ಥಾಪಿಸಲಾಗಿದೆ. ಇದರಿಂದ ಎಲ್ಲಾ ಆನ್‌ಲೈನ್ ಮಧ್ಯಸ್ಥಿಕೆ ಸಂಸ್ಥೆಗಳು ತಮ್ಮ ವೇದಿಕೆಗಳಲ್ಲಿ ಯಾವುದೇ ಕಾನೂನು ಬಾಹಿರ ವಿಷಯದ ಕುರಿತು ಅಧಿಕೃತ ಅಧಿಕಾರಿಗಳಿಂದ ಬರುವ ಸೂಚನೆಗಳ ಮೇಲೆ ಸುಲಭವಾಗಿ ನಿಗಾ ಇಡಬಹುದು’ ಎಂದರು.

‘ಸಾಮಾಜಿಕ ಮಾಧ್ಯಮಗಳಲ್ಲಿ ಅನಾಮಧೇಯರ ಅಪಾಯಗಳು ಮತ್ತು ಸಂಪಾದಕೀಯ ಬಳಗದ ಹೊಣೆಗಾರಿಕೆಯ ಕೊರತೆ ಇದೆ. ಈ ವೇದಿಕೆಗಳಲ್ಲಿ ನಕಲಿ ಖಾತೆ ಸೃಷ್ಟಿಸುವುದು ಸುಲಭವಾಗಿದೆ’ ಎಂದು ಕಳವಳ ವ್ಯಕ್ತಪಡಿಸಿದ ಮೆಹ್ತಾ, ಇದಕ್ಕೆ ಉದಾಹರಣೆಯಾಗಿ ‘ಸುಪ್ರೀಂಕೋರ್ಟ್ ಆಫ್ ಕರ್ನಾಟಕ’ ಎಂಬ ಎಕ್ಸ್ ಖಾತೆ ಇರುವ ಸ್ಕ್ರೀನ್ ಶಾಟ್ ಅನ್ನು ನ್ಯಾಯಪೀಠಕ್ಕೆ ಪ್ರದರ್ಶಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದೆ.

...ೆ ಜಿಟಿಜಿಟಿ ಮಳೆ

ಶ್ರೀರಾಮಪುರ, ಎಂ.ಜಿ.ರಸ್ತೆ, ಟ್ರಿನಿಟಿ, ವಿಧಾನಸೌಧ ಸುತ್ತಮುತ್ತ, ಅರಮನೆ ರಸ್ತೆ, ಹಲಸೂರು, ಕೆ.ಆರ್.ಮಾರುಕಟ್ಟೆ, ಮಾಗಡಿ ರಸ್ತೆ ಸೇರಿ ಹಲವು ಪ್ರದೇಶಗಳಲ್ಲಿ ಮಳೆ ಸುರಿಯಿತು.

ರಾತ್ರಿ ಹಲವೆಡೆ ಮಳೆ ಬಿರುಸು ಪಡೆಯಿತು. ಕೆಲವರು ಕೊಡೆ ಹಿಡಿದು ರಸ್ತೆಯಲ್ಲಿ ಸಾಗಿದರೆ, ಮತ್ತೆ ಕೆಲವರು ತೊಯ್ದುಕೊಂಡು ಹೋದರು. ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡಿದರು. ಮೈಸೂರು ರಸ್ತೆ, ಬಳ್ಳಾರಿ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.

...ೆ ಪರೀಕ್ಷೆ ಆರಂಭ

...ವಾಲಿನಲ್ಲಿ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಂದ ...ಸುವ ವಿದ್ಯಾರ್ಥಿಗಳಿಗಾಗಿ ಐಬಿಎಂ ಕ್ಯೂ2ಡಿ– ...ರಂಭಿಸಿದೆ.

...ಬು-ಬಿ ವಿಶ್ವವಿದ್ಯಾಲಯವು ಎಂಬಿಎ, ಎಂಸಿಎ ...ವಿದ್ಯಾರ್ಥಿಗಳಿಗೆ ಐಬಿಎಂ ಜೊತೆ ಪಾಲುದಾರಿ ...ಾದರಿಯನ್ನು ಕಾರ್ಯಗತಗೊಳಿಸಿದ ದೇಶದ

...ಕ್ಷೆಯು (ಜಿಇಟಿ) ಎಂಬಿಎ, ಎಂಸಿಎ ಮತ್ತು ...ಶ ಪಡೆಯಲು ಐಬಿಎಂ ಕ್ಯೂ2ಡಿ ಅವಕಾಶ ...ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳು ...ಗೆ ಸಂಯೋಜಿಸಲ್ಪಟ್ಟ ವಿಶ್ವವಿದ್ಯಾಲಯದ

...ಪಾರ್ಕ್‌ನಲ್ಲಿರುವ ಎಸ್–ವ್ಯಾಸ ಕ್ಯಾಂಪಸ್‌ನಲ್ಲಿ ... ಒದಗಿಸಲಾಗುತ್ತದೆ.

ಕೃಷ್ಣರಾಯಗೆ ಕನ್ನಡ ಪ್ರಪಂಚ 'ಪಾಪು' ಪ್ರಶಸ್ತಿ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘ ನೀಡುವ ಸಿರಿಗನ್ನಡಂ ಗೆಲ್ಗೆ ರಾ.ಹ. ದೇಶಪಾಂಡೆ ಪ್ರಶಸ್ತಿಗೆ ಹಾವೇರಿಯ 'ಗೆಳೆಯರ ಬಳಗ' ಹಾಗೂ ಕನ್ನಡ ಪ್ರಪಂಚ ಪಾಟೀಲ ಪುಟ್ಟಪ್ಪ ಪ್ರಶಸ್ತಿಗೆ ಪತ್ರಕರ್ತ ಶಾ.ಮಂ.ಕೃಷ್ಣರಾಯ ಆಯ್ಕೆಯಾಗಿದ್ದಾರೆ. ಎರಡೂ ಪ್ರಶಸ್ತಿಗಳು ತಲಾ ₹50 ಸಾವಿರ ನಗದು, ಫಲಕ ಒಳಗೊಂಡಿವೆ. ರಾ.ಹ.ದೇಶಪಾಂಡೆ ಪ್ರಶಸ್ತಿಯನ್ನು ಜುಲೈ 20ರಂದು 'ಪಾಪು' ಪ್ರಶಸ್ತಿಯನ್ನು ಜುಲೈ 26ರಂದು ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

'ಸಾರಿಗೆ ನೌಕರರ ಬೇಡಿಕೆ ಈಡೇರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020ರ ಜನವರಿ 1ರಿಂದ ಜಾರಿಗೆ ತಂದಿರುವ ವೇತನ ಪರಿಷ್ಕರಣೆ ಬಾಕಿಯನ್ನು 38 ತಿಂಗಳಿಂದಲೂ ಪಾವತಿ ಮಾಡಿಲ್ಲ. ಸುಮಾರು ₹ 1,700 ಕೋಟಿ ಬಿಡುಗಡೆ ಮಾಡುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬಿಎಂಟಿಸಿ ಮಾಜಿ ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ನಾಲ್ಕು ಸಾರಿಗೆ ನಿಗಮಗಳಲ್ಲಿನ ಮೂಲಸೌಕರ್ಯ ಕೊರತೆ, ಪಿ.ಎಫ್. ಇತ್ಯರ್ಥ, ನೌಕರರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಬಗ್ಗೆ ಉಲ್ಲೇಖಿಸಿ, ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದಾರೆ.

ನಾಲ್ಕು ಸಾರಿಗೆ ನಿಗಮಗಳಲ್ಲಿ 1 ಲಕ್ಷಕ್ಕೂ ಹೆಚ್ಚು ನೌಕರರಿದ್ದಾರೆ. ಸರ್ಕಾರಿ ನೌಕರರಿಗೆ ಮೂಲ ವೇತನವನ್ನು ತುಟ್ಟಿ ಭತ್ಯೆಯೊಂದಿಗೆ ವಿಲೀನಗೊಳಿಸಿ 2024ರಿಂದ ಹೊಸ ವೇತನ ಪರಿಷ್ಕರಣೆ ಮಾಡಿದೆ. ಅದರ ಪ್ರಕಾರ ಸಾರಿಗೆ ನಿಗಮದ ನೌಕರರಿಗೂ ಸರ್ಕಾರಿ ನೌಕರರ ವೇತನದಂತೆ ಮೂಲವೇತನಕ್ಕೆ ತುಟ್ಟಿಭತ್ಯೆ ವಿಲೀನಗೊಳಿಸಿ ನೀಡಬೇಕಿದೆ. ಇದರ ಮೊತ್ತ ಅಂದಾಜು ₹ 10 ಕೋಟಿ ಆಗಬಹುದು ಎಂದು ಹೇಳಿದ್ದಾರೆ.

ಬಿಎಂಟಿಸಿಯಲ್ಲೇ ಸುಮಾರು 1,631 ವಿದ್ಯುತ್ ಚಾಲಿತ ಬಸ್‌ಗಳಿದ್ದು, ಈ ಬಸ್‌ಗಳ ಕಂಪನಿಗಳಿಗೆ ಮೂರು ತಿಂಗಳಿನಿಂದ ₹200 ಕೋಟಿ ಬಿಲ್ ಪಾವತಿ ಮಾಡಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ನೌಕರರ ಗ್ರಾಚ್ಯುಟಿ, ರಜೆ ನಗದೀಕರಣ ಬಾಕಿ ₹ 315 ಕೋಟಿ ಬಿಡುಗಡೆ ಮಾಡುವಂತೆಯೂ ಒತ್ತಾಯಿಸಿದ್ದಾರೆ.



ಘಟಿಕೋತ್ಸವ ಸಮಾರಂಭದಲ್ಲಿ ಆಗಮ ಪರೀಕ್ಷೆಯಲ್ಲಿ ತೇರ್ಗಡೆಗೊಂಡ ಅರ್ಚಕರಿಗೆ ಪ್ರ
ಶಾಸಕ ಉದಯ ಗರುಡಾಚಾರ್, ರಾಮಲಿಂಗಾರೆಡ್ಡಿ, ನಿಶ್ಚಲಾನಂದನಾಥ ಸ್ವಾಮೀಜಿ, ವಿ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಆಯು

ಅರ್ಚಕರ ವೇತನ ತ… ನಿವಾರಣೆಗೆ ಕ್ರಮ:

ಆಗಮ ಘಟಿಕೋತ್ಸವದಲ್ಲಿ ಭರವಸೆ
• ದೇಗುಲಗಳಲ್ಲಿ ಸೌಕರ್ಯ ವೃದ್ಧಿಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಜರಾಯಿ ದೇವಸ್ಥಾನಗಳ ಅರ್ಚಕರ ವೇತನ ತಾರತಮ್ಯ ನಿವಾರಿಸಲು ಕ್ರಮವಹಿಸಲಾಗಿದೆ. ಎ ಮತ್ತು ಬಿ ದರ್ಜೆ ದೇವಾಲಯಗಳಿಗೆ ಅಗತ್ಯ ಮೂಲ ಸೌಕರ್ಯವನ್ನೂ ಒದಗಿಸಲಾಗುತ್ತದೆ' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದರು.

ಇಲಾಖೆಯ ಕರ್ನಾಟಕ ರಾಜ್ಯ ಆಗಮ ಶಿಕ್ಷಣ ಮತ್ತು ಪರೀಕ್ಷಾ ಸಮಿತಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಆಗಮ ಘಟಿಕೋತ್ಸವ'ದಲ್ಲಿ ಆಗಮ ಪರೀಕ್ಷೆಯಲ್ಲಿ ತೇರ್ಗಡೆಯಾದ ಅರ್ಚಕರಿಗೆ ಪ್ರಮಾಣ ಪತ್ರ ವಿತರಿಸಿ, ಮಾತನಾಡಿದರು.

'ಅರ್ಚಕರ ವೇತನ ತಾರತಮ್ಯತೆ ಬಗ್ಗೆ ಪರಿಶೀಲಿಸಿ ವರದಿ ನೀಡಲು ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಈ ಸಮಿತಿ ನೀಡುವ ವರದಿ ಆಧರಿಸಿ, ಕ್ರಮಕೈಗೊಳ್ಳಲಾಗುತ್ತದೆ. ಅರ್ಚಕರ ಬ್ಯಾಂಕ್ ಖಾತೆಗೆ ನೇರವಾಗಿ ತಸ್ತಿಕ್ ಜಮಾ ಮಾಡಲು ನಿರ್ಧರಿಸಿದ್ದು, ಇದಕ್ಕಾಗಿ ಇಲಾಖೆಯ ಆ್ಯಪ್‌ನಲ್ಲಿ ಅರ್ಚಕರು ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು' ಎಂದು ಅವರು ಹೇಳಿದರು.

'ಘಾಟಿ ಸುಬ್ರಹ್ಮಣ್ಯ, ಮೈಸೂರಿನ ಚಾಮುಂಡೇಶ್ವರಿ ಸೇರಿ ಪ್ರಮುಖ ದೇವಾಲಯಗಳನ್ನು, ಮಂತ್ರಾಲಯದ ರಥಬೀದಿ ಮಾದರಿಯಲ್ಲಿ, ಕ್ಷೇತ್ರದ ಮಹತ್ವ ಹಾಗೂ ಮಹಿಮೆಗಳನ್ನು ಸಾರುವ ರೀತಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು' ಎಂದು ಹೇಳಿದರು.

ಮೂಲಸೌಕರ್ಯ ಕೊರತೆ: 'ರಾಜ್ಯದಲ್ಲಿ ಎ ದರ್ಜೆಯ 205, ಬಿ ದರ್ಜೆಯ 195 ಹಾಗೂ ಸಿ ದರ್ಜೆಯ 34,217 ದೇವಾಲಯಗಳು ಮುಜರಾಯಿ ಇಲಾಖೆ ಅಡಿ ನಿರ್ವಹಣೆ ಮಾಡಲಾಗುತ್ತಿದೆ. ಎ ಮತ್ತು ಬಿ ದರ್ಜೆಯ ದೇವಾಲಯಗಳಿಗೆ ಹೆಚ್ಚಿನ ಆದಾಯ

₹15 ಕೋಟಿ ಮೌಲ್ಯದ ಆಸ್ತಿ ಇಲಾಖೆಗೆ

ಮೈಸೂರಿನ ಜಿ.ಲಕ್ಷಮ್ಮ ಎಂಬುವರು ತಮ್ಮ ಒಡೆತನದಲ್ಲಿರುವ ಅಂದಾಜು ₹ 15 ಕೋಟಿ ಮೌಲ್ಯದ ಆಸ್ತಿಯನ್ನು ಮರಣದ ನಂತರ ಧಾರ್ಮಿಕ ದತ್ತಿ ಇಲಾಖೆಗೆ ನೀಡಲು ಮರಣ ಶಾಸನ ಮಾಡಿಸಿ, ಇಲಾಖೆಗೆ ಹಸ್ತಾಂತರಿಸಿದ್ದಾರೆ. ಈ ಕಾರ್ಯಕ್ಕಾಗಿ ಅವರನ್ನು ಸಮಾರಂಭದಲ್ಲಿ ಅಭಿನಂದಿಸಲಾಯಿತು.

ಮೈಸೂರಿನ ಎ.ಎಸ್.ಗೋಪಾಲಕೃಷ್ಣ ಅಯ್ಯಂಗಾರ್ ಮತ್ತು ರಂಗನಾಯಕಮ್ಮ ದಂಪತಿಯ ಪುತ್ರಿ 84 ವರ್ಷದ ಜಿ.ಲಕ್ಷಮ್ಮ ಅವರು, ಮೈಸೂರಿನಲ್ಲಿರುವ 80x50 ಚದರ ಅಡಿ ವಿಸ್ತೀರ್ಣದ ಮನೆ, ಮಲ್ಲೇಶ್ವರದಲ್ಲಿರುವ ಅಪಾರ್ಟ್‌ಮೆಂಟ್, ಬ್ಯಾಂಕ್ ಖಾತೆಯಲ್ಲಿರುವ ₹ 6 ಕೋಟಿ ಹಾಗೂ ಚಿನ್ನ, ಬೆಳ್ಳಿಯ ಆಭರಣಗಳನ್ನು ಇಲಾಖೆಗೆ ದಾನ ಮಾಡಲು ನೋಂದಣಿ ಮಾಡಿಸಿ, ಪತ್ರವನ್ನು ಇಲಾಖೆಗೆ ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

'ಪ್ರತಿಮೆ… ಭಗವಂ…

'ದೇವಾಲಯಗಳ…
ರಕ್ಷಣೆಯ ಕೇಂದ್ರ…
ಆರಾಧನೆ ಬಗ್ಗೆ ಹಿ…
ಆಕ್ಷೇಪವಿದೆ. ವಸ್ತು…
ಪ್ರತಿಮೆಗಳಿದ್ದರೂ…
ಪೂಜಿಸುವುದಿಲ್ಲ…
ಪ್ರತಿಮೆಗಳಲ್ಲಿ ಭಗ…
ಬಳಿಕವೇ ಆರಾಧ…
ಪ್ರತಿಮೆಗಳ ಮೂ…
ಆರಾಧಿಸುತ್ತಿದ್ದೇ…
ಮತದ ವಿಶ್ವಪ್ರಸ…
ಹೇಳಿದರು.

ಐಎಎಸ್ ಅಧಿಕಾರಿಗಳಿಗೆ ಹೆಚ…

ಬೆಂಗಳೂರು: ಕಂದಾಯ ಇಲಾಖೆ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಅವರಿಗೆ ಅಟಲ್ ಜನಸ್ನೇಹಿ ಕೇಂದ್ರದ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ನೋಂದಣಿ ಐಜಿ ಮತ್ತು ಮುದ್ರಾಂಕ ಆಯುಕ್ತರಾದ ಮುಲ್ಲೈ ಮುಗಿಲನ್ ಎಂ.ಪಿ. ಅವರಿಗೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ … ಹುದ್ದೆಯನ್ನು ಹೆಚ್ಚು…

ವಿಜ್ಞಾನ ಮತ್ತು … ಕಾರ್ಯದರ್ಶಿ ದಲ್ಜೀ… (ಜಾಗೃತ) ಡಿಐಜಿ ಹ… ನೀಡಲಾಗಿದೆ.

ಸಿದ್ದರಾಮಯ್ಯ ಕಾ… ಅಭ್ಯರ್ಥಿಯಾಗಲಿ: …

ಪ್ರಜಾವಾಣಿ ವಾರ್ತೆ



ಛಲ…
ನಾರಾ…

ಬೆಂಗಳೂರು: 'ಸಿದ್ದರಾಮಯ್ಯ ಅವರೇ ಕಾಂಗ್ರೆಸ್‌ನ ಪ್ರಧಾನಿ ಅಭ್ಯರ್ಥಿಯಾಗಲಿ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದಲಿತರ ಹಕ್ಕುಗಳ ರಕ್ಷಣೆಯ ವಕ್ತಾರರು ಎಂದು ಹೇಳಿಕೊಳ್ಳುವ ಕಾಂಗ್ರೆಸ್ಸಿಗರು, ಆ ಸಮುದಾಯಕ್ಕೆ ಸೇರಿದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಲಿ ಎಂದು ನಮ್ಮ ಪಕ್ಷದ ನಾಯಕರಾದ

ಚಿಟಿಕೆ ಸುದ್ದಿ

ಚಾಲಕನನ್ನು ಕಂಬಕ್ಕೆ ಕಟ್ಟಿ ಬೆದರಿಕೆ: ಬಂಧನ

ವಿಜಯಪುರ: ವಾಹನ ಚಾಲನೆ ಕೆಲಸಕ್ಕೆ ಬರುತ್ತೇನೆ ಎಂದು ಹೇಳಿ ₹20 ಸಾವಿರ ಮುಂಗಡ ಪಡೆದು, ಕೆಲಸಕ್ಕೂ ಬಾರದೆ, ಹಣ ವಾಪಸ್ ಕೊಡದೆ ವಂಚಿಸಿದ ಆರೋಪದ ಮೇಲೆ ಗೋಡಿಹಾಳದ ಚಾಲಕ ಭಾಷಾ ಸಾಬ್ ಅಲ್ಲಾವುದ್ದೀನ್ ಮುಲ್ಲಾ (38) ಎಂಬುವವರನ್ನು ಜಿಲ್ಲೆಯ ಹತ್ತಳ್ಳಿ ಗ್ರಾಮದಲ್ಲಿ ಕಂಬಕ್ಕೆ ಸರಪಳಿಯಿಂದ ಕಟ್ಟಿ ಹಾಕಿ, ಕಾಲಿಗೆ ಕೀಲಿ ಹಾಕಿ, ಜೀವ ಬೆದರಿಕೆ ಹಾಕಿರುವ ಘಟನೆ ಶುಕ್ರವಾರ ನಡೆದಿದೆ.

ಪ್ರಕರಣದ ಆರೋಪಿಗಳಾದ ಚಡಚಣದ ಕುಮಾರ್ ಬಿರಾದಾರ ಮತ್ತು ಉಮ್ರಾಣಿಯ ಶ್ರೀಶೈಲ ಪೀರಗೊಂಡ ಎಂಬುವವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಚಡಚಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ವಿಮರ್ಶಾ ಪ್ರಶಸ್ತಿ: ಕೃತಿ ಆಹ್ವಾನ

ಧಾರವಾಡ: ಗಿರಡ್ಡಿ ಗೋವಿಂದರಾಜ ಫೌಂಡೇಷನ್ ನೀಡುವ 'ವಿಮರ್ಶಾ ಪ್ರಶಸ್ತಿಗೆ' ವಿಮರ್ಶಾ ಕೃತಿಗಳನ್ನು ಆಹ್ವಾನಿಸಲಾಗಿದೆ. ಪುರಸ್ಕಾರವು ₹ 25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಕೃತಿಯು 2024 ಜ.1ರಿಂದ ಡಿ.31ರೊಳಗೆ ಪ್ರಥಮ ಮುದ್ರಣವಾಗಿರಬೇಕು. ಅಧ್ಯಕ್ಷರು, ಗಿರಡ್ಡಿ ಗೋವಿಂದರಾಜ ಫೌಂಡೇಶನ್, ಹಿರೇಮಲ್ಲೂರ ಈಶ್ವರನ್ ಪಿಯು ವಿದ್ಯಾಲಯ, ಕಲ್ಯಾಣನಗರ, ಧಾರವಾಡ-580007. ಈ ವಿಳಾಸಕ್ಕೆ ಆ.10ರೊಳಗೆ ಕಳಿಸಬೇಕು. ಮಾಹಿತಿಗಾಗಿ ಮೊ:9448621142 ಸಂಪರ್ಕಿಸಬಹುದು.

ಯಕ್ಷಗಾನ ಕಲಾವಿದ ಪಾತಾಳ ವೆಂಕಟರಮಣ ಭಟ್ ನಿಧನ

ಮಂಗಳೂರು: ಯಕ್ಷಗಾನದ ಮೇರು ಕಲಾವಿದ ಪಾತಾಳ ವೆಂಕಟರಮಣ ಭಟ್ (92) ವಯೋಸಹಜ ಅನಾರೋಗ್ಯದಿಂದ ಶನಿವಾರ ಉಪ್ಪಿನಂಗಡಿಯ ಸ್ವಗೃಹದಲ್ಲಿ ನಿಧನರಾದರು.

ಅವರಿಗೆ ಯಕ್ಷಗಾನ ಕಲಾವಿದ ಅಂಬಾಪ್ರಸಾದ ಪಾತಾಳ ಸೇರಿದಂತೆ ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ.

ತೆಂಕು ಹಾಗೂ ಬಡಗು ತಿಟ್ಟುಗಳ ವೇಷಧಾರಿಯಾಗಿ ಅವರು ಯಕ್ಷಪ್ರೇಮಿಗಳ ಮನದಲ್ಲಿ ನೆಲೆಯಾದವರು. 16 ನವೆಂಬರ್ 1933ರಲ್ಲಿ ಪುತ್ತೂರು ಸಮೀಪದ ಬೈಪದವು ಎಂಬಲ್ಲಿ ಜನಿಸಿದ ಅವರು, ಚಿಕ್ಕಂದಿನಲ್ಲೇ ಯಕ್ಷಗಾನ ಆಸಕ್ತಿ ಬೆಳೆಸಿಕೊಂಡವರು.



ಕಾಂಚನ ಮೇಳ, ಸೌಕೂರು ಮೇಳ, 1954ರಲ್ಲಿ ಮೂಲ್ಕಿ ಮೇಳ, 1963ರಲ್ಲಿ ಧರ್ಮಸ್ಥಳ ಮೇಳದಲ್ಲಿ ಹೆಸರು ಮಾಡಿದ್ದರು.

ರಂಭೆ, ಊರ್ವಶಿ, ಮೇನಕೆ, ಮೋಹಿನಿ, ಸತ್ಯಭಾಮೆ, ದ್ರೌಪದಿ, ಮೀನಾಕ್ಷಿ ಮೊದಲಾದ ಪಾತ್ರಗಳಿಗೆ ಜೀವ ತುಂಬಿದವರು ವೆಂಕಟರಮಣ ಭಟ್ಟರು.

50ರ ಹರೆಯದಲ್ಲೇ ವೃತ್ತಿ ಜೀವನಕ್ಕೆ ವಿದಾಯ ಹೇಳಿ, ತಮ್ಮ ಬದುಕನ್ನು ಸ್ತ್ರೀಪಾತ್ರಗಳ ಅಧ್ಯಯನಕ್ಕೆ ಮೀಸಲಿಟ್ಟಿದ್ದರು. ಸ್ತ್ರೀ ವೇಷಗಳ ವಿವಿಧ ಆಭರಣಗಳ ವಿನ್ಯಾಸ ರೂಪಿಸಿದ ಶ್ರೇಯಸ್ಸು ಅವರಿಗಿದೆ. ಯಕ್ಷಗಾನ ಸ್ತ್ರೀ ಪಾತ್ರದ ಕುರಿತು ಅನೇಕ ಸಂಶೋಧನೆ ನಡೆಸಿದ್ದಾರೆ.

ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿ ದೊರೆತಿವೆ. ಅನೇಕ ಸಂಘ–ಸಂಸ್ಥೆಗಳು ಅವರನ್ನು ಗೌರವಿಸಿವೆ.

ಹೊಸ ವಿಭಾಗ: 20 ಠಾಣೆ ಸೇರ್ಪಡೆ

ಪ್ರತಿ ವಿಭಾಗಕ್ಕೆ 13 ಕಾರ್ಯಕಾರಿ ಹುದ್ದೆಗಳ ಮಂಜೂರು

• ಆದಿತ್ಯ ಕೆ.ಎ.

ಬೆಂಗಳೂರು: ನಗರದ ವ್ಯಾಪ್ತಿ ವಿಸ್ತಾರಗೊಂಡ ಬೆನ್ನಲ್ಲೇ ಬೆಂಗಳೂರು ಪೊಲೀಸ್ ಕಮಿಷನರೇಟ್‌ನಲ್ಲಿ ಹೊಸದಾಗಿ ಮೂರು ಪೊಲೀಸ್ ವಿಭಾಗಗಳನ್ನು ಸೃಜಿಸಲಾಗಿದ್ದು, 20 ಪೊಲೀಸ್ ಠಾಣೆಗಳನ್ನು ಸೇರ್ಪಡೆ ಮಾಡಲಾಗಿದೆ. ಹೊಸ ವಿಭಾಗಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ನೂತನ ಡಿಸಿಪಿಗಳನ್ನೂ ನೇಮಿಸಿದೆ.

ಇದುವರೆಗೂ ನಗರದಲ್ಲಿ 8 ಪೊಲೀಸ್ ವಿಭಾಗಗಳಿದ್ದವು. ಅವುಗಳ ಸಂಖ್ಯೆ 11ಕ್ಕೆ ಏರಿಕೆಯಾಗಿದೆ. ಹೊಸ ವಿಭಾಗಗಳಾದ ವಾಯವ್ಯ, ನೈಋತ್ಯ ಹಾಗೂ ಎಲೆಕ್ಟ್ರಾನಿಕ್ ಸಿಟಿ ವಿಭಾಗಕ್ಕೆ ತಲಾ 13 ಕಾರ್ಯಕಾರಿ ಹುದ್ದೆಗಳನ್ನು ಸರ್ಕಾರ ಮಂಜೂರು ಮಾಡಿದ್ದು, ಪ್ರತ್ಯೇಕವಾಗಿ ಕೆಲಸ ಆರಂಭವಾಗಿದೆ.

ಉದ್ಯೋಗ, ಶಿಕ್ಷಣ, ವ್ಯಾಪಾರಕ್ಕೆಂದು ನಗರಕ್ಕೆ ಬರುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಗರೀಕರಣದ ಜತೆಗೆ ಅಪರಾಧ ಪ್ರಕರಣಗಳೂ ನಗರದಲ್ಲಿ ಹೆಚ್ಚಾಗುತ್ತಿವೆ. ಮನೆ ಕಳ್ಳತನ, ಮಹಿಳೆಯರು ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು, ಸೈಬರ್ ಅಪರಾಧ ಪ್ರಕರಣಗಳು, ದ್ವಿಚಕ್ರ ವಾಹನಗಳ ಕಳ್ಳತನ ಪ್ರಕರಣಗಳೂ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿವೆ. ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡುವುದು, ತನಿಖೆಯಲ್ಲಿ ಗುಣಮಟ್ಟ ಹೆಚ್ಚಿಸುವುದು ಹಾಗೂ ಆರೋಪಿಗಳನ್ನು ತ್ವರಿತವಾಗಿ ಬಂಧಿಸಿ, ಕ್ರಮ ಕೈಗೊಳ್ಳಲು ನೆರವಾಗಲೆಂದು ಹೊಸ ವಿಭಾಗಗಳನ್ನು ಸೃಜಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು.

ಐದು ವಿಭಾಗಗಳಿದ್ದವು: ಜನಸಂಖ್ಯೆ ಹಾಗೂ ಅಪರಾಧ ಪ್ರಕರಣಗಳನ್ನು ಆಧರಿಸಿ 2008ರ ಅಂತ್ಯದವರೆಗೂ ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಕೇವಲ 5 ಕಾನೂನು ಸುವ್ಯವಸ್ಥೆ ವಿಭಾಗಗಳು ಹಾಗೂ ಎರಡು ಸಂಚಾರ ಪೊಲೀಸ್ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದವು. ನಗರದ ವ್ಯಾಪ್ತಿ ಕ್ರಮೇಣ ವಿಸ್ತಾರವಾದ ಕಾರಣಕ್ಕೆ ಕಾನೂನು ಸುವ್ಯವಸ್ಥೆ ವಿಭಾಗಗಳನ್ನು ಎಂಟಕ್ಕೆ ಹಾಗೂ ಸಂಚಾರ ವಿಭಾಗಗಳನ್ನು ನಾಲ್ಕಕ್ಕೆ ಏರಿಕೆ ಮಾಡಲಾಗಿತ್ತು. ಇದೀಗ ಕಾನೂನು ವಿಭಾಗಗಳ ಸಂಖ್ಯೆಯೇ 11ಕ್ಕೆ ಏರಿದೆ.

ಭಾರತೀಯ ದಂಡ ಸಂಹಿತೆ (ಐಪಿಸಿ) ಹಾಗೂ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳು, ಮಾದಕ ದ್ರವ್ಯ ನಿಗ್ರಹ ಕಾಯ್ದೆ (ಎನ್‌ಡಿಪಿಎಸ್) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ (ಐಟಿ) ನಾಲ್ಕು ವರ್ಷಗಳಲ್ಲಿ (ಎಂಟು ವಿಭಾಗದಲ್ಲಿ) 2.42 ಲಕ್ಷ ಅಪರಾಧ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಶ್ಚಿಮ ವಿಭಾಗದಲ್ಲಿ ನಾಲ್ಕು ಎಸಿಪಿ ಉಪ ವಿಭಾಗಗಳು ಹಾಗೂ 21 ಪೊಲೀಸ್ ಠಾಣೆಗಳಿದ್ದವು. ಪಶ್ಚಿಮ ವಿಭಾಗವು ಭೌಗೋಳಿಕವಾಗಿ ದೊಡ್ಡ ವಿಭಾಗವಾಗಿತ್ತು. ಕೆಂಗೇರಿ ಪ್ರದೇಶವು ಅತಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು, 'ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್' ಸಹ ಇದೆ. ವಿವಿಧೆಡೆ ವಸತಿ ಪ್ರದೇಶಗಳೂ ಅಭಿವೃದ್ಧಿ ಹೊಂದುತ್ತಿವೆ. ಹೀಗಾಗಿ, ಹೊಸದಾಗಿ ನೈಋತ್ಯ ವಿಭಾಗ ಸೃಜಿಸಲಾಗಿದೆ. ಎಲೆಕ್ಟ್ರಾನಿಕ್ ಸಿಟಿಯಲ್ಲಿ ಸಾಕಷ್ಟು ಐ.ಟಿ ಕಂಪನಿಗಳಿವೆ. ಈ ಪ್ರದೇಶದಲ್ಲೂ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಐ.ಟಿ ಕಂಪನಿಗಳು ಸ್ಥಾಪನೆಯಾಗುವ ನಿರೀಕ್ಷೆಯಿದೆ. ಈ ಪ್ರದೇಶವನ್ನು ಒಳಗೊಂಡಂತೆ ಎಲೆಕ್ಟ್ರಾನಿಕ್ ಸಿಟಿ ವಿಭಾಗವನ್ನು ಅಸ್ತಿತ್ವಕ್ಕೆ ತರಲಾಗಿದೆ. ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಸ್ತುತ ಎರಡು ಟರ್ಮಿನಲ್‌ಗಳಿವೆ. ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಿದ್ದು, ವಾಯವ್ಯ ವಿಭಾಗವನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಾಂಶಗಳು
- ಮೂರು ಹೊಸ ಪೊಲೀಸ್ ವಿಭಾಗಗಳ ಸೃಷ್ಟಿ
- ನಗರದ ಪೊಲೀಸ್ ವಿಭಾಗಗಳ ಸಂಖ್ಯೆ 11ಕ್ಕೆ ಏರಿಕೆ
- ನೂತನ ಡಿಸಿಪಿಗಳ ನೇಮಕ



ಬೆಂಗಳೂರು ನಗರದ ನೋಟ

ಎಲೆಕ್ಟ್ರಾನಿಕ್ ಸಿಟಿ

ಉಪ ವಿಭಾಗ	ಪೊಲೀಸ್ ಠಾಣೆಗಳು	ಜನಸಂಖ್ಯೆ	ಮೂರು ವರ್ಷದಲ್ಲಿ ವರದಿಯಾದ ಅಪರಾಧ ಪ್ರಕರಣಗಳು
ಎಲೆಕ್ಟ್ರಾನಿಕ್ ಸಿಟಿ	ಎಲೆಕ್ಟ್ರಾನಿಕ್ ಸಿಟಿ	3.50 ಲಕ್ಷ	1,306
	ಹುಳಿಮಾವು	3.95 ಲಕ್ಷ	1,483
	ಬೇಗೂರು	3.40 ಲಕ್ಷ	1,237
	ಪರಪ್ಪನ ಅಗ್ರಹಾರ	3.50 ಲಕ್ಷ	1,782
	ಬಂಡೇಪಾಳ್ಯ	2 ಲಕ್ಷ	888
	ಹೆಬ್ಬಗೋಡಿ	3.50 ಲಕ್ಷ	2,141

ಹೊಸ ಡಿಸಿಪಿಗಳು

ವಾಯವ್ಯ ವಿಭಾಗ	ಡಿ.ಎಲ್.ನಾಗೇಶ್
ನೈಋತ್ಯ ವಿಭಾಗ	ಅನಿತಾ ಭೀಮಪ್ಪ ಹದ್ದಣ್ಣನವರ್
ಎಲೆಕ್ಟ್ರಾನಿಕ್ ಸಿಟಿ	ಎಂ.ನಾರಾಯಣ

ಹೊಸ ವಿಭಾಗಕ್ಕೆ ಮಂಜೂರಾದ ಕಾರ್ಯಕಾರಿ ಹುದ್ದೆಗಳು

ಘಟಕ	ಹುದ್ದೆಗಳು			
	ಡಿಸಿಪಿ	ಎಎಸ್‌ಐ	ಎಚ್‌ಸಿ	ಪಿಸಿ
ವಾಯವ್ಯ ವಿಭಾಗ	1	1	5	6
ನೈಋತ್ಯ	1	1	5	6
ಎಲೆಕ್ಟ್ರಾನಿಕ್ ಸಿಟಿ	1	1	5	6

ಹೊಸ ವಿಭಾಗಕ್ಕೆ ಸೇರ್ಪಡೆಯಾಗುವ ಠಾಣೆಗಳ ವಿವರ

ವಾಯವ್ಯ ವಿಭಾಗ

ಉಪ ವಿಭಾಗ	ಪೊಲೀಸ್ ಠಾಣೆಗಳು	ಜನಸಂಖ್ಯೆ	ಮೂರು ವರ್ಷದಲ್ಲಿ ವರದಿಯಾದ ಅಪರಾಧ ಪ್ರಕರಣಗಳು
ಎಸಿಪಿ ಪೀಣ್ಯ	ಪೀಣ್ಯ	5 ಲಕ್ಷ	1,060
	ರಾಜಗೋಪಾಲನಗರ	5 ಲಕ್ಷ	1,351
	ಬಾಗಲಗುಂಟೆ	5.50 ಲಕ್ಷ	1,352
	ಬ್ಯಾಡರಹಳ್ಳಿ	3.34 ಲಕ್ಷ	2,533
	ಸೋಲದೇವನಹಳ್ಳಿ	2.75 ಲಕ್ಷ	1,054
	ಗಂಗಮ್ಮನಗುಡಿ	86 ಸಾವಿರ	556

ನೈಋತ್ಯ ವಿಭಾಗ

ಉಪ ವಿಭಾಗ	ಪೊಲೀಸ್ ಠಾಣೆಗಳು	ಜನಸಂಖ್ಯೆ	ಮೂರು ವರ್ಷದಲ್ಲಿ ವರದಿಯಾದ ಅಪರಾಧ ಪ್ರಕರಣಗಳು
ಕೆಂಗೇರಿ	ಕೆಂಗೇರಿ	4.50 ಲಕ್ಷ	1,771
	ಜ್ಞಾನಭಾರತಿ	2.30 ಲಕ್ಷ	1,379
	ರಾಜರಾಜೇಶ್ವರಿನಗರ	2.96 ಲಕ್ಷ	1,295
	ಕುಂಬಳಗೋಡು	54 ಸಾವಿರ	1,190
ಸುಬ್ರಹ್ಮಣ್ಯಪುರ	ತಲಘಟ್ಟಪುರ	3.20 ಲಕ್ಷ	1,318
	ಸುಬ್ರಹ್ಮಣ್ಯಪುರ	3.60 ಲಕ್ಷ	1,387
	ಕುಮಾರಸ್ವಾಮಿ ಲೇಔಟ್	1.90 ಲಕ್ಷ	1,196
	ಕೋಣನಕುಂಟೆ	4.50 ಲಕ್ಷ	1,419

'ಜಿಎಸ್‌ಟಿ: ಸಿ.ಎಂ ಪರಿಹಾರ ಸೂಚಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಎಸ್‌ಟಿ ಪಾವತಿಸಿ ಎಂದು ಸಣ್ಣ ವ್ಯಾಪಾರಿಗಳಿಗೆ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ವ್ಯಾಪಾರಿಗಳು ಗಾಬರಿಗೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಧ್ಯಪ್ರವೇಶಿಸಿ ಪರಿಹಾರ ಒದಗಿಸಬೇಕು' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, 'ಸಣ್ಣ ಮತ್ತು ಅತಿಸಣ್ಣ ವ್ಯಾಪಾರಿಗಳ ವಿಚಾರದಲ್ಲಿ ಅಧಿಕಾರಿಗಳು ದುಡುಕಿನ ಕ್ರಮ ತೆಗೆದುಕೊಂಡಿದ್ದಾರೆ. ಹಲವಾರು ವರ್ಷದ ತೆರಿಗೆ ಬಾಕಿ, ಬಡ್ಡಿ ಮತ್ತು ದಂಡವನ್ನು ಸೇರಿಸಿ ದೊಡ್ಡ ಮೊತ್ತದ ಬಾಕಿ ಪಾವತಿ ಮಾಡಿ ಎಂದು ಸೂಚಿಸಿದ್ದಾರೆ. ಸಣ್ಣ ವ್ಯಾಪಾರಿಗಳು ಅಷ್ಟು ಹಣ ಎಲ್ಲಿಂದ ತರುತ್ತಾರೆ' ಎಂದು ಪ್ರಶ್ನಿಸಿದ್ದಾರೆ.

'ವ್ಯಾಪಾರಿಗಳು ಹೆದರಿದ್ದಾರೆ. ಅವರ ಪ್ರತಿನಿಧಿಗಳನ್ನು ಕರೆದು ಚರ್ಚೆ ಮಾಡಿ. ಇತರ ತೆರಿಗೆದಾರರಿಗೆ ಕರ ಸಮಾಧಾನ ಯೋಜನೆ ಅಡಿಯಲ್ಲಿ ರಿಯಾಯಿತಿ ನೀಡಲಾಗುತ್ತದೆಯೋ, ಇವರಿಗೂ ನೀಡಿ. ಬೇರೆ ರಾಜ್ಯಗಳಲ್ಲಿ ಈ ವಿಚಾರದಲ್ಲಿ ಯಾವ ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಪರಿಶೀಲಿಸಿ, ನೀವೂ ಕ್ರಮ ತೆಗೆದುಕೊಳ್ಳಿ' ಎಂದಿದ್ದಾರೆ.



ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದಲ್ಲಿ ತೆರಿಗೆ ಸಂಗ್ರಹ ಕಡಿಮೆಯಾಗಿದೆ. ಹೀಗಾಗಿಯೇ ಇಂತಹ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಮಾತು ಅಧಿಕಾರಿಗಳ ವಲಯದಲ್ಲಿದೆ
ಬಸವರಾಜ ಬೊಮ್ಮಾಯಿ
ಬಿಜೆಪಿ ಸಂಸದ

ವ್ಯಾಪಾರಿಗಳ ನೆರವಿಗೆ ಬಿಜೆಪಿ ಸಹಾಯವಾಣಿ ಆರಂಭ

'ನೋಟಿಸ್ ಪಡೆದಿರುವ ವ್ಯಾಪಾರಿಗಳ ಅನುಕೂಲಕ್ಕಾಗಿ ಬಿಜೆಪಿಯಿಂದ ಸಹಾಯವಾಣಿ (88842 45123) ಆರಂಭಿಸಲಾಗುತ್ತದೆ. ಸೋಮವಾರದಿಂದ ಇದು ಕಾರ್ಯಾರಂಭ ಮಾಡಲಿದೆ. ವ್ಯಾಪಾರಿಗಳಿಗೆ ಅಗತ್ಯವಿರುವ ಮಾಹಿತಿ ನೀಡುತ್ತೇವೆ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಈ ನಡೆಯಿಂದ ಸಣ್ಣ ವ್ಯಾಪಾರಿಗಳಲ್ಲಿ ಗೊಂದಲ ಮತ್ತು ಆತಂಕ ಉಂಟಾಗಿದೆ. ಅದನ್ನು ಪರಿಹರಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿಲ್ಲ ಎಂದು ದೂರಿದರು.

'ಜಿಎಸ್‌ಟಿ ನೋಂದಣಿ, ಜಿಎಸ್‌ಟಿ ಪಾವತಿ ಬಗ್ಗೆ ಸಣ್ಣ ವ್ಯಾಪಾರಿಗಳಲ್ಲಿ ಅರಿವು ಮೂಡಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿಯೇ ಇಲ್ಲ. ಆದರೆ, ಈಗ ಏಕಾಏಕಿ ತೆರಿಗೆ ಪಾವತಿಸಿ ಎಂದು ನೋಟಿಸ್ ನೀಡಿದೆ' ಎಂದರು.

'ಬಿಜೆಪಿಗೆ ಜಾತಿ ವಿನಾಶ ಬೇಡವಾಗಿದೆ'

ಬೆಂಗಳೂರು: 'ಜಾತಿ ವಿನಾಶವಾಗುವುದು ಬಿಜೆಪಿಯವರಿಗೆ ಬೇಡವಾಗಿದೆ. ಅದಕ್ಕೆ ಸಂವಿಧಾನದ ಪ್ರಸ್ತಾವನೆಯಿಂದ ಜಾತ್ಯತೀತ ಪದ ತೆಗೆಯಲು ಅವರು ಹೊರಟಿದ್ದಾರೆ' ಎಂದು ಮಾಜಿ ಸಚಿವ ಕಾಂಗ್ರೆಸ್‌ನ ಕಿಮ್ಮನೆ ರತ್ನಾಕರ ದೂರಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಶ್ರೇಣೀಕೃತ ವ್ಯವಸ್ಥೆ ಉಳಿಸಿ ಸಮಾನತೆ ಅಳಿಸಿ ಹಾಕಬೇಕು ಎನ್ನುವುದು ಬಿಜೆಪಿಯವರ ಉದ್ದೇಶ' ಎಂದರು.

'ಮೀಸಲಾತಿ ಬಳಸಿಕೊಂಡು ಜನ ಪ್ರತಿನಿಧಿಗಳಾಗಿರುವ ಬಿಜೆಪಿಯವರು, ನೈತಿಕತೆ ಇದ್ದರೆ ರಾಜೀನಾಮೆ ನೀಡಿ ಅದರ ವಿರುದ್ಧ ಹೋರಾಟ ಮಾಡಲಿ' ಎಂದು ಸವಾಲು ಹಾಕಿದರು.

ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಮಾತನಾಡಿ, 'ಬಿಜೆಪಿಯವರಲ್ಲಿ ಇದ್ದಕ್ಕಿದ್ದಂತೆ ದಲಿತರ ಮೇಲೆ, ಮಲ್ಲಿಕಾರ್ಜುನ ಖರ್ಗೆಯವರ ಮೇಲೆ ಪ್ರೀತಿ ಉಕ್ಕಿ ಹರಿಯುತ್ತಿದೆ. ಕರ್ನಾಟಕದಲ್ಲಿ ಒಬಿಸಿ ಸಮುದಾಯಕ್ಕೆ ಸೇರಿದ ಈಶ್ವರಪ್ಪ ಅವರನ್ನು ಬಿಟ್ಟರೆ ಇಲ್ಲಿಯವರೆಗೆ ದಲಿತರು, ಅಲ್ಪಸಂಖ್ಯಾತರು ಹೀಗೆ ಯಾರನ್ನೂ ಬಿಜೆಪಿ ಅಧ್ಯಕ್ಷರನ್ನಾಗಿ ಮಾಡಿಲ್ಲ' ಎಂದರು.

ಕಬಡ್ಡಿ ಟೂರ್ನಿ: ಎಪಿಎಸ್ ಶಾಲೆಗೆ ಪ್ರಶಸ್ತಿ

ಬೆಂಗಳೂರು: ಎಪಿಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಈಚೆಗೆ ನಡೆದ ವಲಯ ಮಟ್ಟದ ಐಸಿಎಸ್‌ಇ 17 ವರ್ಷದೊಳಗಿನ ಬಾಲಕಿಯರ ಕಬಡ್ಡಿ ಟೂರ್ನಿಯಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

ನ್ಯಾಷನಲ್ ಪಬ್ಲಿಕ್ ಶಾಲೆ ಆಯೋಜಿಸಿದ್ದ ಅಂತರ ಶಾಲಾ ಸಾಂಸ್ಕೃತಿಕ ಭಾಷಣ ಸ್ಪರ್ಧೆಯಲ್ಲಿಯೂ ಎಪಿಎಸ್ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿ ಮಾನ್ವಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಚ್‌ಎಎಲ್ ಠಾಣೆಯ ಪೊಲೀಸರ ಕಾರ್ಯಾಚರಣೆ

ರೌಡಿ ಶೀಟರ್ ಕೊಲೆ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಮೊಹಮ್ಮದ್ ನಯೀಂ ಕೊಲೆ ಪ್ರಕರಣದಲ್ಲಿ ಐವರು ಆರೋಪಿಗಳನ್ನು ವೈಟ್‌ಫೀಲ್ಡ್ ವಿಭಾಗದ ಎಚ್‌ಎಎಲ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಟಿ.ಎಸ್.ಶಫೀಕ್ (25), ಶೇಖ್ ಸದ್ದಾಂ ಹುಸೇನ್ (27), ಯತೀಶ್ (29), ಇರ್ಫಾನ್ ಪಾಷಾ (27) ಹಾಗೂ ಇಮ್ರಾನ್ ಖಾನ್ (26) ಬಂಧಿತ ಆರೋಪಿಗಳು.

ಮಾರುತಿನಗರದ ಸೊನ್ನೇನಹಳ್ಳಿ ಎಂಟನೇ ಕ್ರಾಸ್‌ನ ನಿವಾಸಿ ಮೊಹಮ್ಮದ್ ನಯೀಂ (26) ಎಂಬಾತನನ್ನು ಹಳೇ ದ್ವೇಷದಿಂದ ಐವರು ಆರೋಪಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ನಯೀಂ ಅವರ ತಂದೆ ಮೊಹಮ್ಮದ್ ಅವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮೊಹಮ್ಮದ್ ನಯೀಂ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟರ್ ತೆರೆಯಲಾಗಿತ್ತು. ಪ್ರಕರಣದ ಒಂದನೇ ಆರೋಪಿ ಶಫೀಕ್ ವಿರುದ್ಧ ಎಚ್‌ಎಎಲ್ ಹಾಗೂ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಏಳು ಪ್ರಕರಣಗಳು ದಾಖಲಾಗಿದ್ದು ಈತನ ವಿರುದ್ಧ ರೌಡಿ ಶೀಟರ್ ತೆರೆಯುವಂತೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ನಯೀಂ, ಅನ್ನಸಂದ್ರಪಾಳ್ಯದಲ್ಲಿರುವ ತನ್ನ ಚಿಕ್ಕಮ್ಮ ಶಾಹೀನಾ ಬಾನು ಅವರ ಮನೆಗೆ ಹೋಗಿ ವಾಪಸ್ ಬರುತ್ತಿದ್ದರು. ಆಗ ನಯೀಂ ಅವರನ್ನು ಅಡ್ಡಗಟ್ಟಿದ ಆರೋಪಿಗಳು, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.



ಟಿ.ಎಸ್.ಶಫೀಕ್



ಟಿ.ಎಸ್.ಶಫೀಕ್



ಶೇಖ್ ಸದ್ದಾಂ ಹುಸೇನ್



ಇಮ್ರಾನ್ ಖಾನ್



ಇರ್ಫಾನ್ ಪಾಷಾ

ಮದ್ಯ ಹಗರಣ: ವೈಎಸ್‌ಆರ್ ಸಂಸದ ಮಿಥುನ್ ರೆಡ್ಡಿ ಬಂಧನ

ಅಮರಾವತಿ (ಆಂಧ್ರ ಪ್ರದೇಶ) (ಪಿಟಿಐ): ಮದ್ಯದ ಹಗರಣಕ್ಕೆ ಸಂಬಂಧಿಸಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸಂಸದ ಮಿಥುನ್ ರೆಡ್ಡಿ ಅವರನ್ನು ಆಂಧ್ರ ಪ್ರದೇಶ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ವಿಜಯವಾಡಕ್ಕೆ ತೆರಳಿದ್ದ ಮಿಥುನ್ ರೆಡ್ಡಿ, ಎಸ್‌ಐಟಿ ನಡೆಸಿದ ವಿಚಾರಣೆ ಎದುರಿಸಿದರು. ಹಲವು ಗಂಟೆ ವಿಚಾರಣೆಗೆ ಒಳಪಡಿಸಿದ ನಂತರ, ರಾತ್ರಿ 7.30ಕ್ಕೆ ಅವರನ್ನು ಎಸ್‌ಐಟಿ ಬಂಧಿಸಿತು.



ಮಿಥುನ್ ರೆಡ್ಡಿ ಅವರು ರಾಜಮ್‌ಪೇಟ್ ಲೋಕಸಭಾ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ₹3,200 ಕೋಟಿ ಹಗರಣ ಇದಾಗಿದೆ.

ಹಗರಣಕ್ಕೆ ಸಂಬಂಧಿಸಿ ಪೊಲೀಸರು ಈಗಾಗಲೇ ಧನಂಜಯ ರೆಡ್ಡಿ, ಕೃಷ್ಣಮೋಹನ ರೆಡ್ಡಿ ಹಾಗೂ ಬಾಲಾಜಿ ಗೋವಿಂದಪ್ಪ ಅವರನ್ನು ಬಂಧಿಸಿದ್ದಾರೆ.

'ಕೃಷ್ಣಾ ಮೇಲ್ದಂಡೆ ಯೋಜನೆ: ಪರಿಹಾರಕ್ಕೆ ಬೇಕು ₹2 ಲಕ್ಷ ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಧಿಕಾರಿಗಳ ತಪ್ಪಿನಿಂದಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಭೂಸ್ವಾಧೀನಕ್ಕೆ ₹2.01 ಲಕ್ಷ ಕೋಟಿ ಬೇಕಾಗಲಿದೆ. ಅಧಿಕಾರಿಗಳ ಬೇಜವಾಬ್ದಾರಿಯಿಂದ ಸರ್ಕಾರಕ್ಕೆ ₹1 ಲಕ್ಷ ಕೋಟಿ ನಷ್ಟವಾಗುತ್ತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಕಂದಾಯ ಇಲಾಖೆಯ ಅಧಿಕಾರಿಗಳಿಗಾಗಿ ಆಯೋಜಿಸಲಾಗಿದ್ದ, 'ಭೂಸ್ವಾಧೀನ ಮತ್ತು ನ್ಯಾಯಾಲಯ ಪ್ರಕರಣಗಳ ನಿರ್ವಹಣೆ' ವಿಶೇಷ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. 'ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನಕ್ಕೆ ಸಂಪುಟದಲ್ಲಿ ಒಪ್ಪಿಗೆ ಪಡೆದಿರುವ ಹಣ ₹17,000 ಕೋಟಿ ಮತ್ತು ಯೋಜನೆಯ ಒಟ್ಟು ವೆಚ್ಚ ₹51,000 ಕೋಟಿ' ಎಂದರು.



ಅಧಿಕಾರಿಗಳು ಸರಿಯಾದ ಸಮಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಿದ್ದರೆ, ಸರ್ಕಾರಕ್ಕೆ ಇಷ್ಟು ಹೊರೆಯಾಗುತ್ತಿರಲಿಲ್ಲ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

'ಭೂಸ್ವಾಧೀನವಾದ ಜಮೀನಿಗೆ ಅಧಿಕಾರಿಗಳು ನಿಗದಿಪಡಿಸಿದ್ದ ಪರಿಹಾರದ ದರವನ್ನು ನ್ಯಾಯಾಲಯವು ಹಲವು ಪಟ್ಟು ಹೆಚ್ಚಿಸಿದೆ. ಮುಳುಗಡೆ ಭೂಮಿಗೆ ₹1.26 ಕೋಟಿ (ಎಕರೆಗೆ), ಕಾಲುವೆ ಭೂಸ್ವಾಧೀನ ₹74 ಲಕ್ಷ (ಎಕರೆಗೆ), ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯ ಭೂಮಿಗೆ ₹23.50 ಕೋಟಿ (ಎಕರೆಗೆ) ನಿಗದಿ ಮಾಡಿದೆ' ಎಂದರು.

'ಈಗಾಗಲೇ 29,400 ಎಕರೆ ಸ್ವಾಧೀನಗೊಂಡಿದ್ದು, ಅದಕ್ಕೆ ₹66,000 ಕೋಟಿ ಪರಿಹಾರ ನೀಡಬೇಕಿದೆ. ಇನ್ನೂ 1.04 ಲಕ್ಷ ಎಕರೆ ಅಗತ್ಯವಿದ್ದು, ನ್ಯಾಯಾಲಯ ನಿಗದಿಪಡಿಸಿದ ದರದಲ್ಲೇ ಪರಿಹಾರ ನೀಡಿದರೂ ₹2.01 ಲಕ್ಷ ಕೋಟಿ ಬೇಕಾಗುತ್ತದೆ. ಈ ವಿಚಾರದಲ್ಲಿ ಸರ್ಕಾರದ ವಕೀಲರು, ಕೃಷ್ಣ ಭಾಗ್ಯ ಜಲ ನಿಗಮ ಮತ್ತು ಜನಪ್ರತಿನಿಧಿಗಳ ತಪ್ಪೂ ಇದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಮಹತ್ವದ ಕೃಷ್ಣಾ ಮೇಲ್ದಂಡೆ ಯೋಜನೆ ಭವಿಷ್ಯ ಏನಾಗಲಿದೆ' ಎಂದು ಪ್ರಶ್ನಿಸಿದರು.

'ಬೇರೆ ಯೋಜನೆಗಳ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಜಮೀನಿನ ಮಾಲೀಕರಿಗೆ 2017ರ ದರವನ್ನು ಅನ್ವಯ ಮಾಡುವ ಬದಲಿಗೆ, 2023ರ ಪರಿಷ್ಕೃತ ದರವನ್ನು ಅಧಿಕಾರಿಗಳು ನಿಗದಿ ಮಾಡಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ನಷ್ಟ ಉಂಟಾಗುತ್ತಿದೆ' ಎಂದರು.

ಬೆಂಗಳೂರು ರೇಸ್

ರಾಂಕ್ವೆಲಿನೊ ಗೆಲ್ಲುವ ನಿರೀಕ್ಷೆ

ಬೆಂಗಳೂರು ಸೇಂಟ್ ಲೆಗೆರ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಂಕ್ವೆಲಿನೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಶನಿವಾರದ ಕೊನೆಯ ರೇಸ್ ಭಾನುವಾರಕ್ಕೆ ಮುಂದೂಡಲ್ಪಟ್ಟಿದ್ದು, ಭಾನುವಾರ ದಿನದ ಆರು ರೇಸ್‌ಗಳಿಗಿಂತಲೂ ಮುಂಚೆ (ಮಧ್ಯಾಹ್ನ 1.30) ನಡೆಯಲಿದೆ. ಇದರಿಂದಾಗಿ ಭಾನುವಾರ ಒಟ್ಟು ಏಳು ರೇಸ್‌ಗಳು ನಡೆಯಲಿವೆ. ನಮ್ಮ ಆಯ್ಕೆ ಈ ಕೆಳಕಂಡಂತಿವೆ:

ಶನಿವಾರದ ರೇಸ್: ಕಂಟಿನ್ಯೂಸ್ 5, ಸ್ಮಾಲ್ ಡ್ರೀಮ್ಸ್ 4, ವಿನ್‌ಫೀಲ್ಡ್ 11
1ನೇ ರೇಸ್: ಡೇಸ್ ಡೇಟ್ 2, ಅಕಂಥ 3, ಮೆಹ್ರ 1
2ನೇ ರೇಸ್: ಅನಾಬೆಲೆ 2, ಕ್ಯಾಷಬಲ್ 4, ಮ್ಯೂಚುವಲ್ ಟ್ರಸ್ಟ್ 6
3ನೇ ರೇಸ್: ಫ್ಲಾಶ್ 1, ಬ್ಲೈಂಡ್ ಫೈತ್ 6, ಎಟರ್ನಲ್ ಗ್ಲೋರಿ 4
4ನೇ ರೇಸ್: ಲೇಡಿ ಇನ್ವಿಕ್ಟಸ್ 2, ಪ್ರೈಮ್ ಅಬ್ಸೆನ್ಸ್ 1, ಅಹರ್ನೆ 3
5ನೇ ರೇಸ್: ರಾಂಕ್ವೆಲಿನೊ 6, ಡಿಫ್ 2, ಟ್ರೂತ್ 4
6ನೇ ರೇಸ್: ಸೂಪರ್ ಕೈಂಡ್ 8, ಅಗೆರ 2, ಎಂಪ್ರೆಸ್ ಬೆಲ್ಲಾ 12

ಉತ್ತಮ ಬೆಟ್: ಸೂಪರ್ ಕೈಂಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಚಿತ್ರಾವಳಿ



ರಾಜಭವನದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ, ಕರ್ನಾಟಕ ಹೈಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿ ವಿಭು ಬಾಖ್ರು (ಎಡದಿಂದ ಮೊದಲನೆಯವರು) ಅವರಿಗೆ ಪ್ರಮಾಣ ವಚನ ಬೋಧಿಸಿದ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ನ್ಯಾ. ಬಾಖ್ರು ಅವರಿಗೆ ಶುಭಾಶಯ ಕೋರಿದರು



ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಜಾನಪದ ವಿದ್ವಾಂಸ ಬಿ.ಎಸ್. ತಲ್ವಾಡಿ ಹಾಗೂ ಅನುವಾದಕ ಪಿ.ಸಿ. ಅಂಥೋನಿ ಸ್ವಾಮಿ ಅವರಿಗೆ 'ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಕಸಾಪ ಗೌರವ ಕಾರ್ಯದರ್ಶಿ ಬಿ.ಎಂ.ಪಟೇಲ್ ಪಾಂಡು, ದತ್ತಿದಾನಿಗಳ ಪರವಾಗಿ ರೀಟಾರೀನಿ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದ ಸ್ವಾಮೀಜಿ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಡಿ.ಡೊಮಿನಿಕ್ ಹಾಗೂ ಕಸಾಪ ಗೌರವ ಕೋಶಾಧ್ಯಕ್ಷ ಡಿ.ಆರ್. ವಿಜಯ ಕುಮಾರ್ ಉಪಸ್ಥಿತರಿದ್ದರು

ನಗರದಲ್ಲಿ ಇಂದು

'ಹಿಂಗುಳಾಂಬಿಕ ದೇವಿಯ ಪೂಜಾ ಆರಾಧನೆ, ಗೊಂಧಳ್' ಕಾರ್ಯಕ್ರಮ: ಆಯೋಜನೆ: ಶ್ರೀ ಹಿಂಗುಳಾಂಬಿಕ ಭಾವಸಾರ ಕ್ಷತ್ರಿಯ ಸೇವಾ ಸಮಿತಿ, ಸ್ಥಳ: ಭವಾನಿ ಕಲ್ಯಾಣ ಮಂಟಪ, ಗಾಂಧಿ ಬಜಾರ್, ಬಸವನಗುಡಿ, ಬೆಳಿಗ್ಗೆ 7ರಿಂದ

ಸುವರ್ಣ ಮಹೋತ್ಸವ ಸಂಭ್ರಮ ಆಚರಣೆ, ಆಟಿಡೊಂಜಿ: ಆಯೋಜನೆ: ಬಿಲ್ಲವ ಅಸೋಸಿಯೇಷನ್, ಸ್ಥಳ: ಬಿಲ್ಲವ ಭವನ, ಬೆಳಿಗ್ಗೆ 9ರಿಂದ

ಗಂಗೂಬಾಯಿ ಹಾನಗಲ್ ಸ್ಮಾರಕ ಸಂಗೀತ ಕಛೇರಿ: ಗಾಯನ, ಸಿತಾರ್: ರೈಸ್ ಬಾಲೇಖಾನ್, ಮೊಹಸಿನ್ ಖಾನ್, ತಬಲಾ: ನಿಸಾರ್ ಅಹ್ಮದ್, ಹಾರ್ಮೋನಿಯಂ: ಉಮಾಕಾಂತ ಪುರಾಣಿಕ್, ಗಾಯನ: ಮಂಜುಶಾ ಪಾಟೀಲ್, ತಬಲಾ: ರವಿಂದ್ರ ಯಾವಗಲ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬೆಳಿಗ್ಗೆ 9.30

'ಸಮ್ಮಿಲನ–2025'– ವಾರ್ಷಿಕ ಕ್ರೀಡಾ ಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರತಿಭಾ ಪುರಸ್ಕಾರ ಸಮಾರಂಭ: ಆಯೋಜನೆ ಮತ್ತು ಸ್ಥಳ: ಉತ್ತರ ಕನ್ನಡ ಭವನ, ಉತ್ತರ ಕನ್ನಡ ಸಂಘ, ಬಿಎಂಟಿಸಿ ಬಸ್ ತಂಗುದಾಣದ ಹತ್ತಿರ, ನಂದಿನಿ ಬಡಾವಣೆ, ಬೆಳಿಗ್ಗೆ 9.30ರಿಂದ


25ನೇ ವಾರ್ಷಿಕೋತ್ಸವ 'ರಜತ ಪರ್ವ–2025': 'ಶ್ರೀವಿಷ್ಣುಸಹಸ್ರನಾಮ ಹೋಮ' ಸಾನ್ನಿಧ್ಯ: ಅರಳುಮಲ್ಲಿಗೆ ಪಾರ್ಥಸಾರಥಿ, ದಿನೇಶ್ ಗುರೂಜಿ, ಉಪಸ್ಥಿತಿ: ಎ. ಮಾಧವ ಉಡುಪ, 'ಚಂದ್ರಮಂಡಲ ಚರಿತೆ' ಯಕ್ಷಗಾನ ಪ್ರದರ್ಶನ, 'ಶ್ರೀಕೃಷ್ಣಗಾರುಡಿ' ಯಕ್ಷಗಾನ ಪ್ರದರ್ಶನ, ಪ್ರಶಸ್ತಿ ಪ್ರದಾನ, ಅಭಿನಂದನೆ: ಸಾನ್ನಿಧ್ಯ: ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಉಪಸ್ಥಿತಿ: ಗುರುರಾಜ ಗಂಟಿಹೊಳೆ, ವಿಶ್ವೇಶ್ವರ ಭಟ್, ರವಿ ಬಸ್ರೂರು, ರಾಜೇಶ ಶೆಟ್ಟಿ, ಮುರಲಿ ಕಡೆಕಾರ್, ವಸಂತಿ ಗಿಳಿಯಾರ್, 'ರಂಗಸ್ಥಳ' ಪ್ರಶಸ್ತಿ ಸ್ವೀಕರಿಸುವವರು: ಕೆ.ಪಿ. ಹೆಗಡೆ ಗೋಳಗೋಡು, ಹೆರಿಯ ಮೊಗವೀರ ಮೊಗೆಬೆಟ್ಟು, 'ದತ್ತಿನಿಧಿ' ಪ್ರಶಸ್ತಿ ಸ್ವೀಕರಿಸುವವರು: ಕಕ್ಕುಂಜೆ ಗೋಪಾಲ ಬಳೆಗಾರ, ಕೋಡಿ ವಿಶ್ವನಾಥ ಗಾಣಿಗರು, ನಾಗೇಶ ಭಂಡಾರಿ ಕರ್ವ, ಮಾರಣಕಟ್ಟೆ ನಾರಾಯಣ ನಾಯ್ಕ್, ಆಯೋಜನೆ: ರಂಗಸ್ಥಳ ಯಕ್ಷಮಿತ್ರಕೂಟ, ಸ್ಥಳ: ಶ್ರೀವೇಣುಗೋಪಾಲಕೃಷ್ಣ ಸಮುದಾಯ ಭವನ, ಶ್ರೀಗಂಧಕಾವಲು, ನಾಗರಬಾವಿ, ಬೆಳಿಗ್ಗೆ 10ರಿಂದ

ಡಾ.ಎಚ್.ವಿ. ನಾಗರಾಜರಾಯ ಸಾರಸ್ವತ ಯೋಗದಾನದ ಕುರಿತು ವಿಚಾರಗೋಷ್ಠಿ, ಗೌರವಸಮರ್ಪಣೆ: ಭಾಗವಹಿಸುವವರು: ಶತಾವಧಾನಿ ಆರ್. ಗಣೇಶ್, ರಾಘವೇಂದ್ರ ಭಟ್ಟ, ಎಚ್.ಆರ್. ವಿಶ್ವಾಸ, ಮಹೇಶ ಭಟ್ಟ ಆರ್. ಹಾರ್ಯಾಡಿ, ಟಿ.ವಿ. ಸತ್ಯನಾರಾಯಣ, ಸುಧೀರ್ ಕೃಷ್ಣಸ್ವಾಮಿ ಕೇಸರಿ, ಟಿ.ಎನ್. ಪ್ರಭಾಕರ, ಎಚ್.ವಿ. ನಾಗರಾಜರಾವ್, ವೆಂ. ನಾಗರಾಜ್, ಆಯೋಜನೆ ಮತ್ತು ಸ್ಥಳ: ಡಿ.ವಿ.ಜಿ. ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಂಜನಾ ಕರೇಗೌಡ್ರ, ಸಾಧನಾ ಕರೇಗೌಡ್ರ, ಉಪಸ್ಥಿತಿ: ಶುಭಾ ಧನಂಜಯ್, ಪ್ರದೀಪ್ ಕುಮಾರ್, ಆರ್.ವಿ. ರಾಘವೇಂದ್ರ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10

'ಸೆಂಟರ್ಸ್ ಆಫ್ ಎಕ್ಸಲೆನ್ಸ್' ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಎನ್. ಚಲುವರಾಯಸ್ವಾಮಿ, ಶಿವಾನಂದ ಪಾಟೀಲ, ಜಿ.ಸಿ. ಚಂದ್ರಶೇಖರ್, ಡಿ.ಕೆ. ಸುರೇಶ್, ಆಯೋಜನೆ ಮತ್ತು ಸ್ಥಳ: ಮಾತೃ ಆಸ್ಪತ್ರೆ, ಬಸವೇಶ್ವರನಗರ, ಬೆಳಿಗ್ಗೆ 10.30

ಕೆನರಾ ಬ್ಯಾಂಕ್ ಸ್ಟಾಫ್ ಫೆಡರೇಷನ್‌ನ 20ನೇ ವರ್ಷದ ಸಂಭ್ರಮಾಚರಣೆ: ಉದ್ಘಾಟನೆ: ಪ್ರಶಾಂತ್ ಭೂಷಣ್, ಅತಿಥಿಗಳು: ಎಸ್.ಕೆ. ಕಾಂತ, ಎಸ್.ಆರ್. ಹಿರೇಮಠ, ಎಸ್. ರೇವಣ್ಣ, ಅಧ್ಯಕ್ಷತೆ: ನಾಗರಾಜ ಬಿ., ಆಯೋಜನೆ: ಕೆನರಾ ಬ್ಯಾಂಕ್ ಸ್ಟಾಫ್ ಫೆಡರೇಷನ್, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30



ಎಸ್.ಆರ್. ಹಿರೇಮಠ



ಸಮಿತಿಯ 41ನೇ ವಾರ್ಷಿಕೋತ್ಸವ, ಬಸವಣ್ಣನವರ ಜಯಂತಿ: ಸಾನ್ನಿಧ್ಯ: ಗವಿಸಿದ್ಧೇಶ್ವರ ಸ್ವಾಮೀಜಿ, ಅತಿಥಿಗಳು: ಬಿ.ಎಸ್. ಪಾಟೀಲ, ಭಾಗವಹಿಸುವವರು: ಬಿ.ಆರ್. ವಿನಯ್‌ಬಾಬು, ಧರಣಿಕುಮಾರ್ ಎನ್., ಅಧ್ಯಕ್ಷತೆ: ಬೇಲೂರಪ್ಪ ಓ., 'ಬಸವ ಸೇವಾರತ್ನ' ಪ್ರಶಸ್ತಿ ಸ್ವೀಕರಿಸುವವರು: ಸೋಮಶೇಖರ ಸ್ವಾಮೀಜಿ, 'ಅಟ್ಟಣಿಕೆಗಳು ಹದಿನೆಂಟು' ನಾಟಕ ಪ್ರದರ್ಶನ: ಆಯೋಜನೆ: ವಿಮಾನ ಕಾರ್ಖಾನೆ ಬಸವ ಸೇವಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಅತಿಥಿಗಳು: ರಾಮಲಿಂಗಾರೆಡ್ಡಿ, ಎನ್.ಎಸ್. ಭೋಸರಾಜು, ಎಚ್.ಎಂ. ರೇವಣ್ಣ, ಗಂಗಾಂಬಿಕೆ ಮಲ್ಲಿಕಾರ್ಜುನ್, ಬಿ.ಆರ್. ವಾಸುದೇವ್, ಬಿ. ಮಲ್ಲಿಕಾರ್ಜುನ್, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಆಯೋಜನೆ: ಆರ್.ಎಂ.ಆರ್. ಹಳ್ಳಿಕಾರ ಫೌಂಡೇಷನ್ ಟ್ರಸ್ಟ್, ಸ್ಥಳ: ಪೂರ್ಣಿಮಾ ಕನ್ವೆನ್ಷನ್ ಸೆಂಟರ್, ನಾಲ್ಕನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30

ಶಾಂತಿ ಕೆ. ಅಪ್ಪಣ್ಣ ಅವರ 'ಚಿತ್ರಕಾರನ ಬೆರಳು', ದೀಪಾ ಹಿರೇಗುತ್ತಿ ಅವರ 'ಸರಹದ್ದು', ಕುಸುಮಾ ಆಯರಹಳ್ಳಿ ಅವರ 'ಕಪಿಲೆ ಕಂಡ ಕತೆಗಳು' ಪುಸ್ತಕಗಳು ಬಿಡುಗಡೆ: ಎಂ.ಎಸ್. ಆಶಾದೇವಿ, ಅತಿಥಿ: ವಸುಧೇಂದ್ರ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕ ಸಮಾವೇಶ: ಆಯೋಜನೆ: ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಸ್ಥಳ: ವೈಟ್ ಪ್ಯಾಲೆಸ್, ಆರ್.ವಿ. ಕಾಲೇಜಿನ ಎದುರು, ಮೈಸೂರು ರಸ್ತೆ, ಬೆಳಿಗ್ಗೆ 11

'ಭಾಸನ ಮಧ್ಯಮ ವ್ಯಾಯೋ' ನಾಟಕ ಪ್ರದರ್ಶನ: ನಿರ್ದೇಶನ: ಎಸ್.ವಿ. ಕಶ್ಯಪ್, ಆಯೋಜನೆ ಮತ್ತು ಸ್ಥಳ: ವಿಜಯನಗರ ಬಿಂಬ, ಸಂಜೆ 4 ಮತ್ತು 7ಕ್ಕೆ

ಜಿ.ವಿ. ರೇಣುಕಾ ಅವರ 'ಸುಧಿ' ಪುಸ್ತಕ ಬಿಡುಗಡೆ: ಅನ್ನದಾನೇಶ್, ಪುಸ್ತಕ ಪರಿಚಯ: ಚೇತನಾ ಹೆಗಡೆ, ಉಪಸ್ಥಿತಿ: ದೀಪಾ ಫಡ್ಕೆ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ತರಳಬಾಳು ಮಿನಿ ಸಭಾಂಗಣ, ತರಳಬಾಳು ಕೇಂದ್ರ, ಬಿಡಿಎ ಕಾಂಪ್ಲೆಕ್ಸ್ ಬಳಿ, ಆರ್.ಟಿ. ನಗರ, ಸಂಜೆ 4


'ದಕ್ಷಯಜ್ಞ' ತಾಳಮದ್ದಳೆ ಪ್ರದರ್ಶನ: ಭಾಗವಹಿಸುವ ಕಲಾವಿದರು: ಕೇಶವ ಹೆಗಡೆ ಕೊಳಗಿ, ಶಂಕರ ಭಾಗವತ, ಗ.ನಾ. ಭಟ್ಟ, ಗಣರಾಜ ಕುಂಬ್ಳೆ, ಕಬ್ಬಿನಾಲೆ ವಸಂತ ಭಾರದ್ವಾಜ, ಆನಂದ ಹೆಗಡೆ, ಆಯೋಜನೆ: ಹವ್ಯಕ ಪ್ರತಿಷ್ಠಾನ, ಸ್ಥಳ: ವೈಟ್ ಪರ್ಲ್ ಕನ್ವೆನ್ಷನ್ ಹಾಲ್, ಮೂರನೇ ಹಂತ ರಾಜರಾಜೇಶ್ವರಿನಗರ, ಸಂಜೆ 4ರಿಂದ

ನೃತ್ಯ ಸಮಾಗಮ–2025: ಅತಿಥಿಗಳು: ಶುಭಾ ಧನಂಜಯ್, ವಿನಯಚಂದ್ರ ಬಿ., ಆಯೋಜನೆ: ಸಾಧನಾ ಸಂಗಮ ಡಾನ್ಸ್ ಸೆಂಟರ್, ಸ್ಥಳ: ಕಾಸಿಯಾ ಸಭಾಂಗಣ, ವಿಜಯನಗರ, ಸಂಜೆ 5

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಲಾವಣ್ಯ ಸುಂದರಮನ್, ಪಿಟೀಲು: ವಿಶ್ವಜಿತ್ ಎಂ.ವಿ., ಮೃದಂಗ: ರೇಣುಕಾ ಪ್ರಸಾದ್, ಘಟ: ರಮೇಶ್ ಆರ್., ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

'ವಾಲಿವಧೆ' ತಾಳಮದ್ದಳೆ ಪ್ರದರ್ಶನ: ಹಿಮ್ಮೇಳ: ಭಾಗವತರು: ಚಿತ್ಕಲಾ ಕೆ. ತುಂಗ, ಮದ್ದಳೆ: ಚಿನ್ಮಯ ಹೆಗಡೆ ಅಂಬಾರಗೋಡ್ಲು, ಚಂಡೆ: ಮಿತ್ರ ಮಧ್ಯಸ್ಥ, ಮುಮ್ಮೇಳ: ಪ್ರಸನ್ನ ಭಟ್ಟ ಮಾಗೋಡು, ಅಂಬರೀಷ್ ಭಟ್, ಶಶಾಂಕ ಅರ್ನಾಡಿ, ರವಿ ಮಡೋಡಿ, ಯಶಸ್ ನಗರ, ಆಯೋಜನೆ: ಕಲಾ ಕದಂಬ ಆರ್ಟ್ ಸೆಂಟರ್, ಸ್ಥಳ: ಮನೋರಂಜಿನಿ ಸಭಾಂಗಣ, ಚಿಕ್ಕಲ್ಲಸಂದ್ರ, ಸಂಜೆ 6

ಪಂಡಿತ್ ಶೇಷಾದ್ರಿ ಗವಾಯಿ ಸಂಗೀತೋತ್ಸವ–2025, 'ಪಂಚಾಕ್ಷರ ಕೃಪಾಭೂಷಣ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಬಸವಲಿಂಗ ಪಟ್ಟದೇವರು, ಉದ್ಘಾಟನೆ: ಗುರುಬಸವ ಪಟ್ಟದೇವರು, ಪ್ರಶಸ್ತಿ ಪ್ರದಾನ: ಮನು ಬಳಿಗಾರ್, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಉಪಸ್ಥಿತಿ: ನವಲಿಂಗ ಪಾಟೀಲ್, ಮನ್ನಾಎಖೆಳ್ಳಿ, ಪ್ರಶಸ್ತಿ ಸ್ವೀಕರಿಸುವವರು, ಗಾಯನ: ಎಂ. ವೆಂಕಟೇಶ್ ಕುಮಾರ್, ತಬಲಾ: ಕೇಶವ ಜೋಷಿ, ಹಾರ್ಮೋನಿಯಂ: ಪಂಚಾಕ್ಷರಯ್ಯ ಬಿ. ಹಿರೇಮಠ, ಆಯೋಜನೆ: ಶ್ರೀಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಮಧ್ಯಾಹ್ನ 3



ಎಂ. ವೆಂಕಟೇಶ್ ಕುಮಾರ್

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

‘ಪಂಚಮಸಾಲಿ ಪೀಠಕ್ಕೆ ಪರ್ಯಾಯ ಸ್ವಾಮೀಜಿ’

ಬಸವಜಯ ಮೃತ್ಯುಂಜಯ ಸ್ವಾಮೀಜಿ ಪೀಠ ತೊರೆದರೆ ಸಂತೋಷ: ಕಾಶಪ್ಪನವರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠಕ್ಕೆ ನೂತನ ಸ್ವಾಮೀಜಿಯನ್ನು ನೇಮಕ ಮಾಡಲು ನಿರ್ಧರಿಸಲಾಗಿದ್ದು, ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರಾಗಿಯೇ ಪೀಠ ತೊರೆದರೆ ಸಂತೋಷ’ ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

‘ಸ್ವಾಮೀಜಿ ಅವರ ವರ್ತನೆ, ನಡವಳಿಕೆಯಲ್ಲಿ ತೀವ್ರ ಬದಲಾವಣೆಯಾಗಿದೆ. ಸಮಾಜದ ಹಿರಿಯರು ಸಭೆ ನಡೆಸಿ ಪರ್ಯಾಯ ಗುರುಗಳ ನೇಮಕದ ಬಗ್ಗೆ ಚರ್ಚಿಸಿದ್ದಾರೆ. ಮೃತ್ಯುಂಜಯ ಸ್ವಾಮೀಜಿ ಅವರನ್ನು ಮಠ ಬಿಟ್ಟು ಹೋಗಿ ಎಂದು ನಾವಾಗಿಯೇ ಹೇಳುವುದಿಲ್ಲ. ಅವರಾಗಿಯೇ ಹೋದರೆ ಸಂತೋಷ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಸಮಾಜದ ಅಭಿವೃದ್ಧಿಗಾಗಿ ಟ್ರಸ್ಟ್ ರಚಿಸಿ, 2008ರಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಲಿಂಗಾಯತ ಪಂಚಮಸಾಲಿ ಮಠಕ್ಕೆ ಪೀಠಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಬಸವತತ್ವ ಪ್ರಚಾರಕ್ಕೆ ಆದ್ಯತೆ ನೀಡಬೇಕಿದ್ದ ಸ್ವಾಮೀಜಿ, ರಾಜಕೀಯ ಪಕ್ಷದ ಬ್ಯಾನರ್ ಅಡಿ ಕೂತುಕೊಳ್ಳುವುದು, ವರ್ಗಾವಣೆಗೆ ಶಿಫಾರಸ್ಸು ಮಾಡುವುದು, ಯಾವುದೋ ಒಬ್ಬ ವ್ಯಕ್ತಿ ಪರ ಮಾತನಾಡುವುದು ಮಾಡುತ್ತಿದ್ದಾರೆ. ಮಠದಲ್ಲಿ ವಾಸ್ತವ್ಯ ಮಾಡದೆ ಊರೂರು ಅಡ್ಡಾಡುತ್ತ, ಮೊಬೈಲ್‌ನಲ್ಲಿ ಮಾತನಾಡುತ್ತ ಪ್ರಚಾರದ ಹಿಂದೆ ಬಿದ್ದಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಟ್ರಸ್ಟ್ ಬೈಲಾ ಪ್ರಕಾರ ಸ್ವಾಮೀಜಿ ಸ್ವಂತ ಆಸ್ತಿ ಹೊಂದುವಂತಿಲ್ಲ. ಆದರೆ, ಬೆಳಗಾವಿಯಲ್ಲಿ ಎರಡು ಮನೆ, ಹುಬ್ಬಳ್ಳಿ-ಬೆಂಗಳೂರಲ್ಲಿ ತಲಾ ಒಂದೊಂದು ಮನೆ ಅವರ ಹೆಸರಲ್ಲಿ ಇವೆ. ಮಲಪ್ರಭಾ ದಂಡೆ ಮೇಲೆ ಮಠ ಕಟ್ಟುತ್ತೇನೆ, ಸಂಸ್ಥೆ ಕಟ್ಟಿ ಸಮಾಜದ ಬಡ ಮಕ್ಕಳಿಗೆ ಶಿಕ್ಷಣ ಕಲ್ಪಿಸುತ್ತೇನೆ ಎಂದು ಸ್ವಾಮೀಜಿ ಹೇಳುತ್ತಿರುವುದು ಬೈಲಾ ವಿರುದ್ಧವಾಗಿದೆ. ಟ್ರಸ್ಟ್‌ಗೆ ನಾವೇ ವಾರಸ್ದಾರರಾಗಿದ್ದು, ಪೀಠವನ್ನು ಮುನ್ನಡೆಸಿಕೊಂಡು ಹೋಗಲಷ್ಟೇ ಸ್ವಾಮೀಜಿಯನ್ನು ನೇಮಕಮಾಡಿದ್ದು’ ಎಂದರು.

‘ಸ್ವಾಮೀಜಿ ಅವರ ಪ್ರಚೋದನೆಯಿಂದಲೇ ಕೆಲ ದಿನಗಳ ಹಿಂದೆ ಕೆಲವರು ಮಧ್ಯರಾತ್ರಿ ಬಂದು ಮಠದ ಗೇಟ್ ಒಡೆದು ಅಕ್ರಮ ಪ್ರವೇಶ ಮಾಡಿದ್ದಾರೆ. ಆ ಕುರಿತು ಪ್ರಕರಣ ದಾಖಲಿಸಲಾಗಿದೆ. ಮಠದ ರಕ್ಷಣೆಗೆ ಟ್ರಸ್ಟ್ ಅಧ್ಯಕ್ಷನಾಗಿ ಬೀಗ ಹಾಕಿದ್ದನ್ನೇ ಸ್ವಾಮೀಜಿ ಅವರು ತಪ್ಪು ತಿಳಿದು ನನ್ನ ವಿರುದ್ಧ ಆರೋಪ ಮಾಡುತ್ತಿದ್ದಾರೆ’ ಎಂದು ಕಾಶಪ್ಪನವರ ಸ್ಪಷ್ಟಪಡಿಸಿದರು.

‘ನಾಯಿ, ನರಿಗಳು ಮಠಕ್ಕೆ ಬರುತ್ತಿದ್ದವು’

‘2019ರಲ್ಲಿ ಸ್ವಾಮೀಜಿ ಟ್ರಸ್ಟ್ ವಿರುದ್ಧವಾಗಿ ನಡೆದುಕೊಂಡಾಗ ನೋಟಿಸ್ ನೀಡಲಾಗಿತ್ತು. ತಪ್ಪು ತಿದ್ದಿಕೊಂಡು ಮುನ್ನಡೆಯುತ್ತೇನೆ ಎಂದು ಅವರು ತಪ್ಪೊಪ್ಪಿಗೆ ಪತ್ರ ಕೊಟ್ಟಿದ್ದರು. ಆದರೂ, ಅವರು ಮಠದಲ್ಲಿ ಸರಿಯಾಗಿ ಇರದೆ, ಸಂಚಾರದಲ್ಲಿ ನಿರತರಾಗುತ್ತಿದ್ದರು. ಭಕ್ತರಿಗೆ ದರ್ಶನವಾಗುತ್ತಿರಲಿಲ್ಲ. ಆಗಾಗ, ಮಠಕ್ಕೆ ನರಿ, ನಾಯಿಗಳು ಬರುತ್ತಿದ್ದವು. ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದವು. ಟ್ರಸ್ಟ್ ಅಧ್ಯಕ್ಷನಾಗಿ ಮಠದ ರಕ್ಷಣೆಗೆ ಹಿರಿಯರೊಂದಿಗೆ ಚರ್ಚಿಸಿ ನಾನೇ ಗೇಟ್ ನಿರ್ಮಿಸಿ, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದೆ’ ಎಂದು ಕಾಶಪ್ಪನವರ ವಿವರಿಸಿದರು.

ಆಸ್ಪತ್ರೆಗೆ ದಾಖಲಾದ ಸ್ವಾಮೀಜಿ

ಬಾಗಲಕೋಟೆ: ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಶನಿವಾರ ಬಾಗಲಕೋಟೆ ಕೆರೂಡಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ತಲೆನೋವು, ವಾಂತಿ, ಎದೆನೋವು ತೊಂದರೆ ಕಾಣಿಸಿ- ಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ. ತುರ್ತು ನಿಗಾ ಘಟಕದಲ್ಲಿ ತಪಾಸಣೆ ಮಾಡಿ, ನಂತರದಲ್ಲಿ ವಾರ್ಡ್‌ಗೆ ಶಿಫ್ಟ್ ಮಾಡಲಾಗಿದೆ.

‘ಆಹಾರದಲ್ಲಿ ವ್ಯತ್ಯಾಸವಾಗಿ ಆರೋಗ್ಯ ಏರುಪೇರಾಗಿದೆ. ಭಕ್ತರು ಆತಂಕ ಪಡುವ ಅಗತ್ಯವಿಲ್ಲ. ಸ್ವಾಮೀಜಿ ಆರೋಗ್ಯವಾಗಿದ್ದಾರೆ' ಎಂದು ಪಂಚಮಸಾಲಿ ಸಮಾಜದ ಕಲಬುರಗಿ ಜಿಲ್ಲಾ ಅಧ್ಯಕ್ಷ ಮಲ್ಲನಗೌಡ ಪಾಟೀಲ ಹೇಳಿದರು.

‘ಇಸಿಜಿ ಸೇರಿದಂತೆ ವಿವಿಧ ತಪಾಸಣೆ ಮಾಡಲಾಗಿದ್ದು, ಯಾವುದೇ ತೊಂದರೆ ಇಲ್ಲ. ವಿಶ್ರಾಂತಿ ಅವಶ್ಯಕತೆ ಇದೆ. ನಾಳೆ ಆಸ್ಪತ್ರೆಯಿಂದ ಬಿಡುಗಡೆ ಆಗಬಹುದು’ ಎಂದು ಡಾ.ಕ್ಷಮಿತಾ ಕೆರೂಡಿ ತಿಳಿಸಿದರು.



ಸ್ವಾಮೀಜಿ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾರೆ ಎನ್ನುವುದು ಸಹ ಪ್ರಚಾರದ ಗಿಮ್ಮಿಕ್ಕು ಆಗಿರಬಹುದು. ಅವರು ಈಗಾಗಲೇ ಅಧಿಕೃತವಾಗಿ ಬಿಜೆಪಿ ಸೇರಿದ್ದಾರೆ
ವಿಜಯಾನಂದ ಕಾಶಪ್ಪನವರ
ಅಧ್ಯಕ್ಷ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್

‘ಮೀಸಲಾತಿ ಸ್ಪಷ್ಟಪಡಿಸಲಿ’

ಹುಬ್ಬಳ್ಳಿ: ‘ಬಿಜೆಪಿಯ ರಾಜ್ಯದ ಅಗ್ರಗಣ್ಯ ನಾಯಕರೊಬ್ಬರು ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಡಿ ಮೀಸಲಾತಿ ಸಿಕ್ಕಿದೆ ಎನ್ನುತ್ತಿದ್ದಾರೆ. ಪಂಚಮಸಾಲಿ ಸಮಾಜಕ್ಕೆ 2ಡಿ ಮೀಸಲಾತಿ ಬೇಕೋ, 2ಎ ಮೀಸಲಾತಿ ಬೇಕೋ ಎಂದು ಅವರು ಸ್ಪಷ್ಟಪಡಿಸಲಿ’ ಎಂದು ವಿಜಯಾನಂದ ಕಾಶಪ್ಪನವರ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಿಂದಿನ ಬಿಜೆಪಿ ಸರ್ಕಾರ ಘೋಷಣೆ ಮಾಡಿದ್ದ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ತಡೆಯಾಜ್ಞೆಯಿದ್ದು, ತೆರವಾದ ನಂತರ ಅಸ್ತಿತ್ವ ಕಳೆದುಕೊಳ್ಳಲಿದೆ. ಈ ವಿಷಯ ತಿಳಿದು ಸಹ ಮೀಸಲಾತಿ ಕೊಡಿಸಿದ್ದೇವೆ ಎಂದು ಅಗ್ರಗಣ್ಯ ನಾಯಕ ಹೇಳುತ್ತಿದ್ದಾರೆ’ ಎಂದು ಯತ್ನಾಳ ಅವರ ಹೆಸರು ಪ್ರಸ್ತಾಪಿಸದೆ ಟೀಕಿಸಿದರು.


‘ಅಲ್ಪಸಂಖ್ಯಾತರ ಮೀಸಲಾತಿ ಕಸಿದು ನಮಗೆ ನೀಡಲಾಗಿದೆ. ಹೀಗೆ ಹೇಳುವ ನಾಯಕರು ಗೊಂದಲ ಸೃಷ್ಟಿಸದೆ, 2ಡಿ ಮೀಸಲಾತಿ ಬೇಕೋ, 2ಎ ಮೀಸಲಾತಿ ಬೇಕೋ ಎನ್ನುವುದು ಸ್ಪಷ್ಟಪಡಿಸಬೇಕು’ ಎಂದು ಆಗ್ರಹಿಸಿದರು.

‘ಎಲ್ಲಾ ಲಿಂಗಾಯತ ಒಳಪಂಗಡಗಳಿಗೆ ಕೇಂದ್ರ ಸರ್ಕಾರ ಒಬಿಸಿ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ, ಶೀಘ್ರ ಸಿಎಂ ಭೇಟಿ ಮಾಡಿ ಶಿಫಾರಸ್ಸಿಗೆ ಆಗ್ರಹಿಸುತ್ತೇವೆ. ಜಾತಿಗಣತಿ ವೇಳೆ ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದು ಬರೆಸಬೇಕು, ಜಾತಿ ಕಾಲಂನಲ್ಲಿ ಪಂಚಮಸಾಲಿ ಎಂದು ಬರೆಸಬೇಕು’ ಎಂದು ಸಲಹೆ ನೀಡಿದರು.

ಸುದ್ದಿ 2 ನಿಮಿಷ

‘ನನ್ನ ಮೇಲೆ ಕ್ರಮ ತೆಗೆದುಕೊಳ್ಳಲಿ’

ಬೆಂಗಳೂರು: ‘ಅಸ್ಸಾಂನಲ್ಲಿ ಭೂ ಜಿಹಾದ್ ನಡೆಯುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಅರಣ್ಯ ಜಮೀನು ಅತಿಕ್ರಮಣಕಾರರನ್ನು ಪ್ರಚೋದಿಸಿದ್ದೇನೆಂದು ನನ್ನ ಮೇಲೆ ಕ್ರಮ ತೆಗೆದುಕೊಳ್ಳುವುದಾದರೆ ಸ್ವಾಗತ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.



‘ಅಸ್ಸಾಂನ ಪೈಕಾನ್ ಮೀಸಲು ಅರಣ್ಯ ಪ್ರದೇಶದಲ್ಲಿ ನಡೆದ ಹಿಂಸಾತ್ಮಕ ಗಲಾಟೆಗೆ ಮಲ್ಲಿಕಾರ್ಜುನ ಖರ್ಗೆ ಅಥವಾ ರಾಹುಲ್ ಗಾಂಧಿ ಅವರ ಪ್ರಚೋದನಾಕಾರಿ ಭಾಷಣ ಕಾರಣವೇ ಎಂಬ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂಬ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಮುಖ್ಯಮಂತ್ರಿ ಯಾವಾಗ ಕ್ರಮ ತೆಗೆದುಕೊಳ್ಳುತ್ತಾರೊ ಆಗ ನಾವು ಹೋಗಿ ಉತ್ತರ ಕೊಡುತ್ತೇವೆ’ ಎಂದರು.

ನೀಟ್: ಆಪ್ಷನ್ ಎಂಟ್ರಿ ಆರಂಭ

ಬೆಂಗಳೂರು: ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಆಯ್ಕೆಗಳನ್ನು (ಇಚ್ಛೆ) ದಾಖಲಿಸುವ ಪ್ರಕ್ರಿಯೆ ಶನಿವಾರ ಆರಂಭವಾಗಿದ್ದು, ಇದೇ 22ರಂದು ಸಂಜೆ 6ಗಂಟೆವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

‘ಪ್ರಸಕ್ತ ಸಾಲಿನ ಶುಲ್ಕದ ವಿವರಗಳು ಇನ್ನೂ ಪ್ರಾಧಿಕಾರಕ್ಕೆ ಬಂದಿರದ ಕಾರಣ 2024-25ನೇ ಸಾಲಿನ ಶುಲ್ಕದ ವಿವರಗಳನ್ನೇ ಸದ್ಯಕ್ಕೆ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ಸರ್ಕಾರದಿಂದ ಪರಿಷ್ಕೃತ ಶುಲ್ಕ ಮಾಹಿತಿ ಬಂದ ನಂತರ ಅದನ್ನು ಅಪ್‌ಡೇಟ್ ಮಾಡಲಾಗುವುದು’ ಎಂದು ಅವರು ವಿವರಿಸಿದ್ದಾರೆ.

ಕರುಣಾನಿಧಿ ಮಗ ಮುತ್ತು ನಿಧನ

ಚೆನ್ನೈ: ದಿವಂಗತ ಎಂ. ಕರುಣಾನಿಧಿ ಅವರ ಹಿರಿಯ ಮಗ ನಟ ಎಂ.ಕೆ. ಮುತ್ತು (77) ಅವರು ಶನಿವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ಮೃತಪಟ್ಟಿದ್ದಾರೆ. ಕಳೆದ ಎರಡು ದಶಕಗಳಿಂದ ಮುತ್ತು ಅವರು ಅನಾರೋಗ್ಯ ಪೀಡಿತರಾಗಿದ್ದರು.

ಕರುಣಾನಿಧಿ ಹಾಗೂ ಪದ್ಮಾವತಿ (ಮೊದಲ ಪತ್ನಿ) ದಂಪತಿಯ ಪುತ್ರರಾದ ಮುತ್ತು ತಮಿಳಿನ ಆರು ಸಿನಿಮಾಗಳಲ್ಲಿ ನಟಿಸಿದ್ದರು. ಕರುಣಾನಿಧಿ ಬಳಿಕ ಮುತ್ತು ಅವರೇ ವಾರಸುದಾರರು ಎನ್ನಲಾಗಿತ್ತು. ಆದರೆ, ಈ ಎರಡೂ ಕ್ಷೇತ್ರದಲ್ಲಿ ಅವರು ಹೆಸರು ಮಾಡಲಿಲ್ಲ.

ಮುತ್ತು ಅವರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ.

ಮುತ್ತು 1970ರಲ್ಲಿ ಮೊದಲ ಬಾರಿಗೆ ನಟಿಸಿದ್ದರು. ಮದ್ಯ ವ್ಯಸನಿಯಾಗಿದ್ದ ಮುತ್ತು ಮತ್ತು ತಂದೆ ಕರುಣಾನಿಧಿ ಅವರ ಸಂಬಂಧ ಅಷ್ಟೇನು ಚೆನ್ನಾಗಿ ಇರಲಿಲ್ಲ. ಆದರೆ, ಮುತ್ತು ಅವರ ಆರೋಗ್ಯ ಹದಗೆಟ್ಟ ಕಾರಣ 2009ರಲ್ಲಿ ತಂದೆ-ಮಗ ಒಂದಾಗಿದ್ದರು.

ಮುತ್ತು ಅವರು ನನಗೆ ತಂದೆಯಿದ್ದಂತೆ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಹೇಳಿದ್ದಾರೆ.



ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬೆಂಗಾವಲು ವಾಹನ ಶ್ರೀರಂಗಪಟ್ಟಣ ತಾಲ್ಲೂಕಿನ ಟಿ.ಎಂ.ಹೊಸೂರು ಗೇಟ್ ಬಳಿ ಶನಿವಾರ ಪಲ್ಟಿಯಾಗಿದೆ

ಡಿಸಿಎಂ ಬೆಂಗಾವಲು ವಾಹನ ಪಲ್ಟಿ: ನಾಲ್ವರಿಗೆ ಗಾಯ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಟಿ.ಎಂ. ಹೊಸೂರು ಗೇಟ್ ಬಳಿ ಶನಿವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬೆಂಗಾವಲು ವಾಹನ ಪಲ್ಟಿಯಾಗಿ ಅದರಲ್ಲಿದ್ದ ನಾಲ್ವರು ಗಾಯಗೊಂಡಿದ್ದಾರೆ.

ಮೈಸೂರಿನಲ್ಲಿ ನಡೆದ ರಾಜ್ಯ ಸರ್ಕಾರದ ಸಾಧನಾ ಸಮಾವೇಶ ಮುಗಿಸಿ ಶಿವಕುಮಾರ್ ಬೆಂಗಳೂರಿಗೆ ತೆರಳುತ್ತಿದ್ದರು. ‘ಮಳೆ ನೀರು ಹೆದ್ದಾರಿಯಲ್ಲಿ ನಿಂತಿದ್ದ ಕಾರಣ ಬೆಂಗಾವಲು ವಾಹನ ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದೆ. ಆ ವಾಹನದಲ್ಲಿದ್ದ ಬೆಂಗಳೂರಿನ ದಿನೇಶ್, ಮಹೇಶ್, ಜಯಲಿಂಗು ಮತ್ತು ಕಾರ್ತಿಕ್ ಎಂಬುವರು ಗಾಯಗೊಂಡಿದ್ದಾರೆ. ಹಿಂದೆ ಕಾರಿನಲ್ಲಿ ಬರುತ್ತಿದ್ದ ಶಿವಕುಮಾರ್ ಇಳಿದು, ಮತ್ತೊಂದು ಕಾರಿನಲ್ಲಿ ಗಾಯಾಳುಗಳನ್ನು ಕೂಡಲೇ ಆಸ್ಪತ್ರೆಗೆ ಕಳುಹಿಸಿಕೊಟ್ಟರು’ ಎಂದು ಪೊಲೀಸರು ತಿಳಿಸಿದರು.

ಕರಾವಳಿಯಲ್ಲಿ ಮಳೆ ಬಿರುಸು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ: ಧಾರವಾಡ, ಗದಗ ಜಿಲ್ಲೆಯ ಕೆಲವೆಡೆ ಶನಿವಾರವೂ ಮಳೆಯಾಯಿತು. ಗದಗ ನಗರ ಸೇರಿದಂತೆ ಜಿಲ್ಲೆಯ ಲಕ್ಷ್ಮೇಶ್ವರ, ಗಜೇಂದ್ರಗಡ ಹಾಗೂ ನರೇಗಲ್ ಹೋಬಳಿಯಲ್ಲಿಯೂ ಜೋರು ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಎಡಬಿಡದೆ ಮಳೆ ಸುರಿದಿದ್ದು, ಭಟ್ಕಳ ತಾಲ್ಲೂಕಿನ ಬೇಂಗ್ರೆ ಮತ್ತು ಕಾಯ್ಕಿಣಿ ಗ್ರಾಮಗಳಲ್ಲಿ 13 ಸೆಂ.ಮೀ.,ನಷ್ಟು ಮಳೆ ದಾಖಲಾಗಿದೆ.

ಜಿಲ್ಲೆಯ ಕರಾವಳಿ ಭಾಗ, ಮಲೆನಾಡು ಭಾಗದಲ್ಲಿ ಮಳೆ ವ್ಯಾಪಕವಾಗಿದೆ. ಮುಂದಿನ ಎರಡು ದಿನ ರೆಡ್ ಅಲರ್ಟ್ ಘೋಷಿಸಲಾಗಿದೆ. ಭಾರಿ ಮಳೆಯಿಂದಾಗಿ ದಿಢೀರ್ ಪ್ರವಾಹ ಸ್ಥಿತಿ ಎದುರಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ತಗ್ಗು ಪ್ರದೇಶದಲ್ಲಿನ ಜನರು ಸುರಕ್ಷಿತ ಜಾಗಕ್ಕೆ ಸ್ಥಳಾಂತರಗೊಳ್ಳಲು ಜಿಲ್ಲಾಡಳಿತ ಸೂಚಿಸಿದೆ.



ನಾಪೋಕ್ಲು ಸಮೀಪದ ಪುಲಿಕೋಟು ಗ್ರಾಮದಲ್ಲಿ ಭತ್ತದ ನಾಟಿ ಕೆಲಸ ಬಿರುಸಿನಿಂದ ಸಾಗಿತು

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಳ್ಳಾಲ, ಬಂಟ್ವಾಳ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಶನಿವಾರ ಉತ್ತಮ ಮಳೆ ಸುರಿಯಿತು. ಈ ತಾಲ್ಲೂಕುಗಳ ಶಾಲೆ-ಪಿಯು ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಉಡುಪಿ ಜಿಲ್ಲೆಯಾದ್ಯಂತ ದಿನವಿಡೀ ಮೋಡ ಮುಸುಕಿದ ವಾತಾವರಣವಿತ್ತು. ಸಾಧಾರಣ ಮಳೆ ಸುರಿಯಿತು.

ಚಿಕ್ಕಮಗಳೂರು ಜಿಲ್ಲೆ ಕೊಪ್ಪ, ತರೀಕೆರೆಯಲ್ಲಿ ಉತ್ತಮ ಮಳೆಯಾಗಿದೆ.

ಮಡಿಕೇರಿ ವರದಿ: ನಗರದಲ್ಲಿ ಬಿರುಸಿನ ಮಳೆ ಶನಿವಾರವೂ ಮುಂದುವರಿದಿದೆ. ಬೆಳಿಗ್ಗೆ ಮತ್ತು ಮಧ್ಯಾಹ್ನ ಜೋರು ಮಳೆ ಸುರಿಯಿತು. ದಿನವಿಡೀ ಸಾಧಾರಣವಾಗಿತ್ತು. ಭಾಗಮಂಡಲ, ಸಂಪಾಜೆ, ನಾಪೋಕ್ಲು ವ್ಯಾಪ್ತಿಯಲ್ಲಿ ಬಿರುಸಿನಿಂದ ಕೂಡಿತ್ತು. ಮಳೆ ಮುಂದುವರಿಯಲಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ ‘ಆರೆಂಜ್ ಅಲರ್ಟ್’ ಘೋಷಿಸಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.25	19,983	17,721
ಹಾರಂಗಿ	2,859	2,856.93	4,276	3,312
ಕಬಿನಿ	2,284.00	2,282.51	24,180	17,292
ಹೇಮಾವತಿ	2,922	2,920.97	9,491	9,650
ಲಿಂಗನಮಕ್ಕಿ	1,819	1,803.05	20,657	6,691
ಸೂಪಾ (ಮೀ)	564	546.80	15,655.7	5,326.53
ಮಾಣಿ	595	587.68	792	0
ತುಂಗಭದ್ರಾ	1,633	1,626.06	39,690	33,716
ಮಲಪ್ರಭಾ	2,079.5	2,072.70	5,151	1,094
ಘಟಪ್ರಭಾ	2175	2,169.53	9,769	11,754
ಭದ್ರಾ *	186	178.9	10,462	3,680
ಆಲಮಟ್ಟಿ (ಮೀ)	519.6	518.16	1,00,937	90,740
ನಾರಾಯಣಪುರ (ಮೀ)	492.25	491.36	95,000	96,750

* ನೆಲಮಟ್ಟದಿಂದ

ಧಾರಾಕಾರ ಮಳೆ 18 ಮಂದಿ ಸಾವು

ನವದೆಹಲಿ(ಪಿಟಿಐ): ಉತ್ತರಪ್ರದೇಶದಲ್ಲಿ ಧಾರಾಕಾರ ಮಳೆಯಾಗುತ್ತಿದ್ದು, ಮಳೆ ಸಂಬಂಧಿ ಅನಾಹುತಗಳಿಂದ 2 ದಿನದಲ್ಲಿ 18 ಮಂದಿ ಮೃತಪಟ್ಟಿದ್ದಾರೆ.

ಕೇರಳ, ಉತ್ತರಾಖಂಡ, ಹಿಮಾಚಲಪ್ರದೇಶ ಹಾಗೂ ಪಶ್ಚಿಮ ಬಂಗಾಳದಲ್ಲಿ ವ್ಯಾಪಕ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಕೆ ನೀಡಿದೆ.

ರಾಜಸ್ಥಾನದಲ್ಲಿ ವ್ಯಾಪಕ ಮಳೆ ಆಗುತ್ತಿದ್ದು, ಪ್ರವಾಹ ಪರಿಸ್ಥಿತಿ ತಲೆದೋರಿದೆ. ಅರುಣಾಚಲ ಪ್ರದೇಶ ಹಾಗೂ ಸಿಕ್ಕಿಂನಲ್ಲಿ ಮಳೆಯಿಂದ ಭೂಕುಸಿತ ಸಂಭವಿಸಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ಜುಲೈ 18ರಿಂದ 19ರವರೆಗೆ ಉತ್ತರ ಪ್ರದೇಶದಲ್ಲಿ ಮಳೆಯಿಂದ ಸಂಭವಿಸಿದ ಅನಾಹುತದಲ್ಲಿ 18 ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ 8 ಮಂದಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದು, ಇಬ್ಬರು ಹಾವು ಕಚ್ಚಿ ಸತ್ತಿದ್ದಾರೆ.

ನಿರಂತರ ಮಳೆಯಿಂದ ರಾಜಸ್ಥಾನದ ಅಜ್ಮೇರ್, ಪುಷ್ಕರ್, ಬುಂಡಿ, ಸವಾಯಿ ಮಾಧೋಪುರ ಹಾಗೂ ಪಾಲಿ ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಅಜ್ಮೇರ್ ದರ್ಗಾದ ಸುತ್ತಲೂ ನೀರು ತುಂಬಿದ್ದು, ಹಲವಾರು ಮಂದಿ ನೀರಿನಲ್ಲಿ ಕೊಚ್ಚಿಹೋಗುವ ವೇಳೆ ಸ್ಥಳೀಯರು ರಕ್ಷಿಸಿದರು.

ಮುಖ್ಯಮಂತ್ರಿ ಜೊತೆ ಚರ್ಚೆ ನಡೆಸಿದ್ದೇನೆ; ಗೃಹ ಸಚಿವ ಜಿ. ಪರಮೇಶ್ವರ

‘ಧರ್ಮಸ್ಥಳ: ಅಗತ್ಯ ಇದ್ದರೆ ಉನ್ನತ ತನಿಖೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ಸುತ್ತಮುತ್ತ ಕಳೆದ ದಶಕಗಳಲ್ಲಿ ನಡೆದ ‘ಅಸಹಜ ಸಾವುಗಳು’ ಎಂಬ ಹಣೆಪಟ್ಟಿ ಹೊತ್ತ ಪ್ರಕರಣಗಳ ಬಗ್ಗೆ ಅಗತ್ಯ ಬಿದ್ದರೆ ಉನ್ನತ ತನಿಖೆ ನಡೆಸಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಈ ಪ್ರಕರಣಗಳ ಕುರಿತು ದೂರುದಾರನ ದೂರಿಗೆ ಸಂಬಂಧಿಸಿದಂತೆ ಈಗಾಗಲೇ ಪ್ರಾಥಮಿಕ ತನಿಖೆ ಆರಂಭವಾಗಿದೆ’ ಎಂದರು.

ದೂರಿಗೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆಗೆ ವಕೀಲರು ಆಗ್ರಹಿಸುತ್ತಿರುವ ವಿಚಾರಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಈ ವಿಷಯದ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚೆ ನಡೆಸಿದ್ದೇನೆ. ಅಗತ್ಯಗಳನ್ನು ನೋಡಿಕೊಂಡು ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದರು.

‘ಪ್ರಾಥಮಿಕ ತನಿಖೆ ನಡೆಯುತ್ತಿರುವ ಮಧ್ಯೆಯೇ ಎಸ್‌ಐಟಿ ತನಿಖೆಗೆ ಒತ್ತಾಯಿಸಿದರೆ, ಪೊಲೀಸ್ ಇಲಾಖೆ ಇರುವುದು ಏಕೆ’ ಎಂದೂ ಅವರು ಪ್ರಶ್ನಿಸಿದರು.

ಮನೆ-ಮನೆ ಪೋಸ್ಟರ್ ಅಭಿಯಾನ: ವಿಮೆನ್ ಇಂಡಿಯಾ

ಮಂಗಳೂರು: ‘ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಕೊಲೆ ಕೃತ್ಯದ ಬಗ್ಗೆ ತನಿಖೆ ನಡೆಸಲು ರಾಜ್ಯ ಸರ್ಕಾರ ಆಸಕ್ತಿ ತೋರದಿರುವುದನ್ನು ಗಮನಿಸಿದರೆ, ಇದರ ಹಿಂದೆ ದೊಡ್ಡ ವ್ಯವಸ್ಥೆಯೇ ಶಾಮೀಲಾಗಿರುವ ಅನುಮಾನ ಮೂಡುತ್ತಿದೆ’ ಎಂದು ವಿಮೆನ್ ಇಂಡಿಯಾ ಮೂವ್‌ಮೆಂಟ್‌ನ ರಾಜ್ಯ ಘಟಕದ ಅಧ್ಯಕ್ಷೆ ಫಾತಿಮಾ ನಸೀಮಾ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪೊಲೀಸ್ ಇಲಾಖೆಯು ತನಿಖೆಗೆ ವಿಳಂಬ ಮಾಡುವುನ್ನು ನೋಡಿದರೆ, ಸಾಕ್ಷಿ ನಾಶಕ್ಕೆ ಈ ರೀತಿ ಮಾಡುತ್ತಿರುವ ಬಗ್ಗೆ ಸಂಶಯ ಮೂಡಿದೆ. ಹೆಣ್ಣು ಮಕ್ಕಳ ರಕ್ಷಣೆಗೆ ತಾವಿರುವುದಾಗಿ ಹೇಳಿಕೊಳ್ಳುವ ಹಿಂದೂ ನಾಯಕರು ಈಗ ಎಲ್ಲಿದ್ದಾರೆ? ಲವ್ ಜಿಹಾದ್ ಹೆಸರಿನಲ್ಲಿ ಇಲ್ಲದ ಹೆಣ್ಣು ಮಕ್ಕಳನ್ನು ಹುಡುಕುವ ಹಿಂದೂ ನಾಯಕರಿಗೆ, ಹೂತಿಟ್ಟ ಹೆಣಗಳಲ್ಲಿ ಅವರು ಹುಡುಕುವ ಹುಡುಗಿಯರನ್ನು ಹುಡುಕಲಿ’ ಎಂದರು.

‘ಇಷ್ಟು ಗಂಭೀರ ಪ್ರಕರಣದ ವಿರುದ್ಧ ಪ್ರತಿಭಟಿಸಲು ಪೊಲೀಸ್ ಇಲಾಖೆ ಅವಕಾಶ ನೀಡುತ್ತಿಲ್ಲ. ಹೀಗಾಗಿ, ಸಂಘಟನೆಯು ಮನೆ-ಮನೆ ತಲುಪುವ ಪೋಸ್ಟರ್ ಅಭಿಯಾನ ನಡೆಸಲಿದೆ. ಈ ಘಟನೆ ಸಂಬಂಧ ನ್ಯಾಯಾಧೀಶರ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿ, ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ನಸ್ರಿಯಾ ಬೆಳ್ಳಾರೆ, ರಾಜ್ಯ ಸಮಿತಿ ಸದಸ್ಯೆ ಜಬೀನ್ ಮೈಸೂರು, ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯೆ ಆಯಿಷಾ ಬೆಂಗಳೂರು, ಶಮೀಮಾ ತುಂಬೆ, ಝಾಹಿದಾ ಪುತ್ತೂರು ಉಪಸ್ಥಿತರಿದ್ದರು.

ಎಸ್‌ಐಟಿ ತನಿಖೆಗೆ ಆಗ್ರಹ: ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಸರಣಿ ಹತ್ಯೆ ಪ್ರಕರಣದ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿ, ನಿಷ್ಪಕ್ಷಪಾತ ತನಿಖೆ ನಡೆಸಬೇಕು. ನೊಂದವರಿಗೆ ನ್ಯಾಯ ಒದಗಿಸಬೇಕು ಎಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ರಾಜ್ಯ ಸಮಿತಿ ಪ್ರಕಟಣೆಯಲ್ಲಿ ಒತ್ತಾಯಿಸಿದೆ.

ರಾಜ್ಯಸಭಾ ಸ್ಥಾನಕ್ಕೆ ಹೆಗ್ಗಡೆ ರಾಜೀನಾಮೆ ನೀಡಲಿ–ರವಿಕೃಷ್ಣ ರೆಡ್ಡಿ

ಬಳ್ಳಾರಿ: ‘ಸೌಜನ್ಯ ಅತ್ಯಾಚಾರ ಪ್ರಕರಣ ಮತ್ತು ಇತ್ತೀಚೆಗೆ ಕೇಳಿ ಬಂದಿರುವ ಸರಣಿ ಕೊಲೆಗಳ ಆರೋಪಗಳಿಂದಾಗಿ ಧರ್ಮಸ್ಥಳದ ಪಾವಿತ್ರ್ಯ ಹಾಳಾಗಿದೆ. ಇದರ ನೈತಿಕ ಹೊಣೆ ಹೊತ್ತು ಕ್ಷೇತ್ರದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಬೇಕು‘ ಎಂದು ಕೆಆರ್‌ಎಸ್ ಪಕ್ಷದ ಸಂಸ್ಥಾಪಕ ರವಿಕೃಷ್ಣರೆಡ್ಡಿ ಆಗ್ರಹಿಸಿದ್ದಾರೆ.

ಬಳ್ಳಾರಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಧರ್ಮಸ್ಥಳದ ವ್ಯಕ್ತಿಯೊಬ್ಬರು ಹಲವು ಅನಾಥ ಶವಗಳ ಅಂತ್ಯಸಂಸ್ಕಾರ ನಡೆಸಿರುವುದಾಗಿ ಹೇಳಿದ್ದಾರೆ. ಅನಾಥ ಹೆಣಗಳನ್ನು ಹೇಗೆಂದರೆ ಹಾಗೆ ಅಂತ್ಯಸಂಸ್ಕಾರ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಹಾಗಿದ್ದರೂ, ಅಂತ್ಯಸಂಸ್ಕಾರ ನಡೆದಿದ್ದು ಯಾಕೆ. ಈ ವಿಷಯ ಬಹಿರಂಗಪಡಿಸಿದ ವ್ಯಕ್ತಿಗೆ ಭದ್ರತೆ ಒದಗಿಸಬೇಕು, ಅವನ ಹೇಳಿಕೆ ಬಗ್ಗೆ ತನಿಖೆ ನಡೆಯಬೇಕು’ ಎಂದು ಒತ್ತಾಯಿಸಿದರು.

ಪೊಲೀಸರಿಂದ ವಿವಿಧ ಆಯಾಮಗಳಲ್ಲಿ ತನಿಖೆ, ರೋಷನ್ ಸಲ್ದಾನ ಬ್ಯಾಂಕ್ ಖಾತೆ ಪರಿಶೀಲನೆ

ಬಹುಕೋಟಿ ವಂಚನೆ: ಬಗೆದಷ್ಟೂ ಆಳ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಹುಕೋಟಿ ವಂಚನೆ ಪ್ರಕರಣಗಳ ಆರೋಪದ ಮೇಲೆ ಬಂಧಿತನಾಗಿರುವ ಕಂಕನಾಡಿ ಬೊಲ್ಲಗುಡ್ಡದ ರೋಷನ್ ಸಲ್ದಾನ ನಡೆಸಿರುವ ಹಣಕಾಸಿನ ವಹಿವಾಟು ಜಾಡು ಹಿಡಿದು ಸೆನ್ ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಹಲವು ಬ್ಯಾಂಕ್ ಖಾತೆ ಹೊಂದಿರುವ ಈತ, ಮೂರು ವರ್ಷಗಳಲ್ಲಿ ಒಂದು ಬ್ಯಾಂಕ್ ಖಾತೆಯಿಂದ ₹40 ಕೋಟಿಗೂ ಅಧಿಕ ವಹಿವಾಟು ನಡೆಸಿರುವುದು ಪೊಲೀಸರಿಗೆ ಪ್ರಾಥಮಿಕ ಹಂತದಲ್ಲಿ ಪತ್ತೆಯಾಗಿದೆ.

‘ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದು, ವಿಚಾರಣೆ ನಡೆಸಲು ಆರೋಪಿಯನ್ನು ಸೋಮವಾರ ಕಸ್ಟಡಿಗೆ ಪಡೆಯಲಾಗುವುದು. ಇಂತಹ ಆರ್ಥಿಕ ಅಪರಾಧ ಪ್ರಕರಣಗಳಲ್ಲಿ ಪೂರ್ಣ ಪ್ರಮಾಣದ ತನಿಖೆಯ ನಂತರವೇ ಖಚಿತವಾದ ಮಾಹಿತಿ ಲಭ್ಯವಾಗುತ್ತದೆ’ ಎಂದು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಹೇಳಿದರು.

ಆರೋಪಿ ಸಲ್ದಾನ ₹10 ಕೋಟಿ ವಂಚಿಸಿರುವುದಾಗಿ ಒಬ್ಬ ವ್ಯಕ್ತಿ ದೂರು ನೀಡಿದ್ದರೆ, ಇನ್ನೊಬ್ಬರು ಆತನಿಂದ ₹1 ಕೋಟಿ ವಂಚನೆಯಾಗಿರುವ ಬಗ್ಗೆ ದೂರು ನೀಡಿದ್ದರು. ಈ ಎರಡು ದೂರುಗಳನ್ನು ಆಧರಿಸಿ ಆತನನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ಇನ್ನೊಂದು ಪ್ರಕರಣದಲ್ಲಿ ಚಿತ್ರದುರ್ಗದ ವ್ಯಕ್ತಿಯೊಬ್ಬರು ₹45 ಲಕ್ಷ ಕಳೆದುಕೊಂಡಿರುವ ಬಗ್ಗೆ ವರದಿಯಾಗಿದೆ. ರೋಷನ್ ಬಂಧನ ಖಚಿತವಾದ ಮೇಲೆ ಮಹಾರಾಷ್ಟ್ರದ ಉದ್ಯಮಿಯೊಬ್ಬರು ₹5 ಕೋಟಿ ಹಣವನ್ನು ವರ್ಗಾಯಿಸಿರುವ ಬಗ್ಗೆ ಹಾಗೂ ಅಸ್ಸಾಂನ ವ್ಯಕ್ತಿಯೊಬ್ಬರು ₹20 ಲಕ್ಷ ಮೊತ್ತ ವರ್ಗಾಯಿಸಿರುವ ಬಗ್ಗೆ ತಿಳಿಸಿದ್ದು, ಸಂಬಂಧಪಟ್ಟ ಬ್ಯಾಂಕ್ ಸಂಪರ್ಕಿಸಿ ಮಹಾರಾಷ್ಟ್ರದ ಉದ್ಯಮಿಯ ₹3.5 ಕೋಟಿ, ಅಸ್ಸಾಂನ ವ್ಯಕ್ತಿಯ ₹20 ಲಕ್ಷ ಮೊತ್ತವನ್ನು ಫ್ರೀಜ್ ಮಾಡಲಾಗಿದೆ. ಕೇರಳದ ವ್ಯಕ್ತಿಯೊಬ್ಬರು ₹15 ಲಕ್ಷ ನಷ್ಟ ಅನುಭವಿಸಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಅವರು ದೂರು ದಾಖಲಿಸುವ ನಿರೀಕ್ಷೆ ಇದೆ ಎಂದು ಅವರು ಹೇಳಿದರು.

ಬಂಧನ ಹೇಗೆ?: ರೋಷನ್ ವಿರುದ್ಧ ಎರಡು ಎಫ್‌ಐಆರ್ ದಾಖಲಾಗಿದ್ದವು. ಆತನ ಇರುವಿಕೆ ಪತ್ತೆ ಹಚ್ಚುವ ವೇಳೆ, ಆತ ಮನೆಯಲ್ಲೇ ಇದ್ದಾನೆ ಎಂಬ ಮಾಹಿತಿ ಖಚಿತವಾದ ಮೇಲೆ ದಾಳಿ ನಡೆಸಿ ಬಂಧಿಸಲಾಯಿತು.

ದಾಳಿ ವೇಳೆ ಕೊಠಡಿಯೊಂದರ ಟೀಪೊಯ್ ಮೇಲೆ ಮದ್ಯದ ಗ್ಲಾಸ್ ಕಂಡುಬಂದಿದೆ. ಇದರಿಂದ ಆತ ಮನೆಯಲ್ಲೇ ಇದ್ದಿರಬಹುದೆಂಬ ಅನುಮಾನದಲ್ಲಿ ಪೊಲೀಸರು ಹುಡುಕಾಡಿದ್ದಾರೆ. ಯಾವ ಕುರುಹು ಗೊತ್ತಾಗದಂತೆ ಇರುವ ರಹಸ್ಯ ಕೊಠಡಿಯಲ್ಲಿ ಆತ ಅಡಗಿದ್ದ. ಏಕಾಂಗಿಯಾಗಿ ವಾಸಿಸುತ್ತಿದ್ದ ಆತನ ಮನೆಯಲ್ಲಿ ವಿದೇಶಿ ಮಹಿಳೆಯೊಬ್ಬರು ಆ ವೇಳೆ ಇದ್ದರು. ಮಹಿಳೆಯನ್ನು ಸ್ವೀಕಾರ ಕೇಂದ್ರಕ್ಕೆ ಕಳುಹಿಸಲಾಗಿದೆ. ಆ ಮಹಿಳೆಯ ಪಾಸ್‌ಪೋರ್ಟ್ ಮತ್ತಿತರ ದಾಖಲೆ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ರೋಷನ್

ನೆಲ ಮಹಡಿ ಆತನ ವಾಸ ಸ್ಥಾನ, ಮೊದಲ ಮಹಡಿಯಲ್ಲಿ ಕಚೇರಿ ಇದೆ. ಇಲ್ಲಿ ವೈಭವೋಪೇತ ಕೊಠಡಿಗಳು, ಎರಡು ಬೆಡ್‌ರೂಂ, ರಹಸ್ಯ ಕೊಠಡಿ ಇದೆ. ಮೊದಲ ಮಹಡಿಗೆ ಪ್ರತ್ಯೇಕ ಪ್ರವೇಶ ದ್ವಾರ ಇದೆ. ಬಡ ಕುಟುಂಬದ ಹಿನ್ನೆಲೆಯ ರೋಷನ್ ಐಷಾರಾಮಿ ಜೀವನ ನಡೆಸುತ್ತಿದ್ದ. ಒಂದು ಕೊಠಡಿಯ ವಿನ್ಯಾಸಕ್ಕೆ ಆತ ಕನಿಷ್ಠ ₹50 ಲಕ್ಷ ಖರ್ಚು ಮಾಡಿರಬಹುದು ಎಂದು ಪೊಲೀಸರು ಅಂದಾಜಿಸಿದ್ದಾರೆ.

ರೋಷನ್ ತನ್ನ ವಿಸಿಟಿಂಗ್ ಕಾರ್ಡ್‌ನಲ್ಲಿ ಹೈಕೋರ್ಟ್ ವಕೀಲರೊಬ್ಬರ ಹೆಸರನ್ನು ಬಳಕೆ ಮಾಡಿಕೊಂಡು, ಅವರು ತನ್ನ ಕಾನೂನು ಸಲಹೆಗಾರರು ಎಂದು ಹೇಳಿಕೊಂಡಿದ್ದ ಎನ್ನಲಾಗಿದೆ.

ಚಿತ್ರದುರ್ಗದ ತಂಡದ ಜತೆ ನಂಟು?

ರೋಷನ್ ಸಲ್ದಾನ ದೇಶದ ಬೇರೆ ಬೇರೆ ಭಾಗಗಳಲ್ಲಿ ತಂಡಗಳನ್ನು ರಚಿಸಿಕೊಂಡಿದ್ದ. ಸಾಕಷ್ಟು ಪ್ರಭಾವ ಇರುವ ತಾನು, ಸಾಲ ಕೊಡಿಸುವುದಾಗಿ ನಂಬಿಸಿ, ದೊಡ್ಡ ಉದ್ಯಮಿಗಳಲ್ಲಿ ತನ್ನ ಐಷಾರಾಮಿ ಮನೆಗೆ ಅವರನ್ನು ಕರೆಸಿಕೊಂಡು ಭ್ರಮೆ ಸೃಷ್ಟಿಸುತ್ತಿದ್ದ. ಸಾಲ ಅಗತ್ಯ ಇರುವ ಉದ್ಯಮಿಗಳು ಈತನ ಮಾತಿಗೆ ಮರುಳಾಗುತ್ತಿದ್ದರು. ಈ ಕಾರ್ಯಕ್ಕೆ ಅವನ ತಂಡದವರು ದಲ್ಲಾಳಿಗಳ ಪಾತ್ರ ನಿರ್ವಹಿಸಿ, ಕಮಿಷನ್ ಪಡೆಯುತ್ತಿದ್ದರು. ದೊಡ್ಡ ಮೊತ್ತದ ಹಣ ರೋಷನ್‌ಗೆ ಸಿಗುತ್ತಿತ್ತು. ಸ್ವತಂತ್ರವಾಗಿ ಇವುಗಳನ್ನು ನಿರ್ವಹಣೆ ಮಾಡುವ ಮೊದಲು ಆತ ಚಿತ್ರದುರ್ಗದ ಒಂದು ತಂಡದ ಜೊತೆ ಸಂಪರ್ಕ ಹೊಂದಿದ್ದ ಎಂಬ ಮಾಹಿತಿ ಲಭ್ಯವಾಗಿದೆ ಎಂದು ಮೂಲಗಳು ತಿಳಿಸಿವೆ.

ಶಾಸಕ ಬೈರತಿ ಬಸವರಾಜ್ ವಿಚಾರಣೆ

ರೌಡಿ ಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣ ಅಧಿಕಾರಿಗಳ ಎದುರು ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ


ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಐದನೇ ಆರೋಪಿ, ಕೆಆರ್ ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರು ಭಾರತಿನಗರ ಠಾಣೆಯಲ್ಲಿ ಶನಿವಾರ ಮಧ್ಯಾಹ್ನ ವಿಚಾರಣೆಗೆ ಹಾಜರಾಗಿ, ತನಿಖಾಧಿಕಾರಿಗಳ ಎದುರು ತಮ್ಮ ಹೇಳಿಕೆ ದಾಖಲಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ 'ನನ್ನ ವಿರುದ್ಧ ಭಾರತಿನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದು ಪಡಿಸಬೇಕು' ಎಂದು ಕೋರಿ ಬೈರತಿ ಬಸವರಾಜ್ ಅವರು ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ತುರ್ತು ಅರ್ಜಿಯ ವಿಚಾರಣೆ ನಡೆಸಿದ್ದ ಏಕಸದಸ್ಯ ಪೀಠವು, ಶನಿವಾರ ವಿಚಾರಣೆಗೆ ಹಾಜರಾಗುವಂತೆ ಆರೋಪಿಗೆ ಸೂಚಿಸಿತ್ತು.

ಹೈಕೋರ್ಟ್ ಸೂಚನೆಯ ಬೆನ್ನಲ್ಲೇ ಠಾಣೆಗೆ ಬಂದ ಶಾಸಕರನ್ನು ಕೆ.ಜಿ. ಹಳ್ಳಿ ಉಪ ವಿಭಾಗದ ಎಸಿಪಿ ಪ್ರಕಾಶ್ ರಾಥೋಡ್ ನೇತೃತ್ವದ ತಂಡವು ಮೂರು ತಾಸು ವಿಚಾರಣೆ ನಡೆಸಿತು.

ಜಾಗದ ವಿವಾದವಾಗಿ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಇತರರು ಶಾಸಕ ಬೈರತಿ ಬಸವರಾಜ್ ಅವರ ಕುಮ್ಮಕ್ಕಿನಿಂದ ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಶಿವಪ್ರಕಾಶ್ ತಾಯಿ ವಿಜಯಲಕ್ಷ್ಮಿ ದೂರು ನೀಡಿದ್ದರು. ದೂರು ಆಧರಿಸಿ ಎಫ್‌ಐಆರ್ ದಾಖಲಾಗಿತ್ತು.

'ಕೊಲೆಗೆ ಕುಮ್ಮಕ್ಕು ನೀಡಿದ್ದ ಆರೋಪ ನಿಮ್ಮ ಮೇಲಿದೆ. ಕೊಲೆಯಾದ ಶಿವಪ್ರಕಾಶ್ ನಿಮಗೆ ಗೊತ್ತಿತ್ತೇ? ಆರೋಪಿ ಜಗದೀಶ್ ನಿಮಗೆ ಹೇಗೆ ಪರಿಚಯ' ಎಂಬ ಪ್ರಶ್ನೆ ಕೇಳಿ ಪೊಲೀಸರು ಹೇಳಿಕೆ ದಾಖಲಿಸಿಕೊಂಡರು.


ಬೈರತಿ ಬಸವರಾಜ್

'ಈ ಹಿಂದೆ ಬಿಕ್ಲು ಶಿವ ನಿಮ್ಮ ಮೇಲೆ ದೂರು ಕೊಟ್ಟಿದ್ದು ಯಾಕೆ? ಬಿಕ್ಲು ಶಿವುಗೆ ಹೆದರಿಸುವಂತೆ ನಿಮ್ಮ ಆಪ್ತ ಜಗ್ಗನಿಗೆ ಸೂಚನೆ ನೀಡಿದ್ದೀರಾ' ಎಂಬುದೂ ಸೇರಿದಂತೆ ಹಲವು ಪ್ರಶ್ನೆ ಕೇಳಿದರು ಎಂಬುದು ಗೊತ್ತಾಗಿದೆ.

ವಿಚಾರಣೆ ಮುಗಿಸಿ ಹೊರಬಂದ ಬಳಿಕ ಬೈರತಿ ಬಸವರಾಜ್ ಮಾತನಾಡಿ, 'ಪೊಲೀಸರು ಕೇಳಿದ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದ್ದೇನೆ. ಕೊಲೆ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ ಎಂದು ತಿಳಿಸಿದ್ದೇನೆ. ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಿದ್ದರು. ಅವರ ಸೂಚನೆ ಮೇರೆಗೆ ಠಾಣೆಗೆ ಹಾಜರಾಗಿ ಉತ್ತರಿಸಿದ್ದೇನೆ. ಜುಲೈ 23ರಂದು ಮತ್ತೆ ವಿಚಾರಣೆಗೆ ಬರುವಂತೆ ತಿಳಿಸಿದ್ದಾರೆ. ಅಂದೂ ಸಹ ವಿಚಾರಣೆಗೆ ಬರುತ್ತೇನೆ' ಎಂದು ಹೇಳಿದರು.

'ಈ ಪ್ರಕರಣದಲ್ಲಿ ಕಿರಣ್, ಮದನ್, ಸ್ಯಾಮುಯೆಲ್, ಪ್ರದೀಪ್, ವಿಮಲ್‌ರನ್ನು ಬಂಧಿಸಲಾಗಿದೆ. ಮೊದಲ ಆರೋಪಿ ಜಗದೀಶ್ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

‘ದೇವೇಗೌಡರೇ ನಿಮ್ಮ ಸಂಖ್ಯೆ ಈಗೆಷ್ಟು’

ಮೋದಿ ಎದುರು ನಡುಗುವ ಎಚ್‌ಡಿಕೆ, ಜೋಶಿ, ಬೊಮ್ಮಾಯಿ: ಸಿ.ಎಂ ಲೇವಡಿ

ಪ್ರಜಾವಾಣಿ ವಾರ್ತೆ

ಮೈಸೂರು: ಜೆಡಿಎಸ್ ಶಾಸಕರ ಸಂಖ್ಯೆ ಪ್ರತಿ ಐದು ವರ್ಷಕ್ಕೆ ಕಡಿಮೆ ಆಗುತ್ತಲೇ ಇದೆ. ನಾನು ಜೆಡಿಎಸ್ ಅಧ್ಯಕ್ಷನಾಗಿದ್ದಾಗ 59 ಸ್ಥಾನ ಗೆದ್ದಿದ್ದೆವು. ದೇವೇಗೌಡರೇ, ಈಗ ಎಷ್ಟಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ಸಾಧನಾ ಸಮಾವೇಶದಲ್ಲಿ, ₹2,578 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ–ಜೆಡಿಎಸ್ ನಾಯಕರ ವಿರುದ್ಧ ಹರಿಹಾಯ್ದರು.

‘ಈಗ 18ಕ್ಕೆ ಇಳಿದಿದ್ದೀರಿ. ಮುಂದೆಂದೂ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲವೆಂದರಿತು ಬಿಜೆಪಿ ಸೇರಿದ್ದೀರಿ’ ಎಂದು ದೇವೇಗೌಡರನ್ನು ಉದ್ದೇಶಿಸಿ ಹೇಳಿದರು.

‘ನೀವೆಂದೂ ಜನರ ಆಶೀರ್ವಾದದಿಂದ ಅಧಿಕಾರಕ್ಕೆ ಬಂದವರಲ್ಲ. ಆಪರೇಷನ್ ಕಮಲದಿಂದ ಅಧಿಕಾರ ಗಿಟ್ಟಿಸಿದ್ದೀರಿ’ ಎಂದು ಬಿಜೆಪಿ ನಾಯಕರನ್ನು ಹಂಗಿಸಿದರು.

‘ಬಿಜೆಪಿ–ಜೆಡಿಎಸ್‌ನಿಂದ ಈ ಬಾರಿ 19 ಸಂಸದರು ಆಯ್ಕೆ ಆಗಿದ್ದೀರಿ. ಕರ್ನಾಟಕದಿಂದ ಸಂಗ್ರಹವಾಗುವ ಸಂಗ್ರಹವಾಗುವ ತೆರಿಗೆ ಪೈಕಿ ಶೇ 15ರಷ್ಟು ಮಾತ್ರ ವಾಪಸ್ ಬರುತ್ತಿದೆ. ಈ ಬಗ್ಗೆ ಮೋದಿ ಎದುರು ಮಾತನಾಡಲು ಕುಮಾರಸ್ವಾಮಿ, ಜೋಶಿ, ಬೊಮ್ಮಾಯಿ ಸಹಿತ ಯಾರಿಗೂ ಧೈರ್ಯವಿಲ್ಲ. ಎಲ್ಲರೂ ಪ್ರಧಾನಿ ಎದುರು ಗಡಗಡನೆ ನಡುಗುತ್ತಾರೆ’ ಎಂದು ಲೇವಡಿ ಮಾಡಿದರು.

‘ನಮ್ಮ ಸರ್ಕಾರದ ಕಾರ್ಯಕ್ರಮಗಳನ್ನು ಟೀಕಿಸುವ ಬಿಜೆಪಿ-ಜೆಡಿಎಸ್‌ನವರು ಒಂದೇ ವೇದಿಕೆಗೆ ಬನ್ನಿ. ನೀವೇನು ಮಾಡಿದ್ದೀರಿ, ನಾವೇನು ಮಾಡಿದ್ದೇವೆ ಎಂಬುದನ್ನು ಬಹಿರಂಗವಾಗಿ ಚರ್ಚಿಸೋಣ’ ಎಂದು ಸವಾಲು ಹಾಕಿದರು.

‘ಈ ಸಭೆಗೆ ಜೆಡಿಎಸ್- ಬಿಜೆಪಿಯವರು ಬರಬೇಕಿತ್ತು. ಏನೆಲ್ಲ ಕಾರ್ಯಕ್ರಮಗಳು ನಡೆಯುತ್ತಿವೆ ಎಂಬುದು ಅವರಿಗೆ ಗೊತ್ತಾಗುತ್ತಿತ್ತು. ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಸರ್ಕಾರ ದಿವಾಳಿ ಆಗಿದ್ದರೆ ಈಗ ₹2,578 ಕೋಟಿ ವೆಚ್ಚದ ಯೋಜನೆಗಳಿಗೆ ಅನುದಾನ ನೀಡಲು ಆಗುತ್ತಿತ್ತೆ’ ಎಂದು ಪ್ರಶ್ನಿಸಿದರು.

‘ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್‌ನ ಕಾರ್ಯಕರ್ತರೂ ಸೇರಿದಂತೆ ಎಲ್ಲರಿಗೂ ಗ್ಯಾರಂಟಿ ಯೋಜನೆಯ ಲಾಭ ತಲುಪುತ್ತಿದೆ. ಅದರಲ್ಲಿ ಯಾವ ಧರ್ಮ– ಜಾತಿಯೂ ಇಲ್ಲ. ಇದನ್ನು ಟೀಕಿಸುವ ಬಿಜೆಪಿಯವರಿಗೆ ನಾಚಿಕೆ ಆಗುವುದಿಲ್ಲವೇ’ ಎಂದು ಪ್ರಶ್ನಿಸಿದರು.

ಗ್ಯಾರಂಟಿ ದೇಶಕ್ಕೆ ಮಾದರಿ: ‘ನಮ್ಮ ಪಂಚ ಗ್ಯಾರಂಟಿ ಇಡೀ ದೇಶಕ್ಕೆ ಮಾದರಿ. ಈ ಯೋಜನೆ ಟೀಕಿಸಿದ್ದ ಪ್ರಧಾನಿಯೇ ಬಿಹಾರ, ಮಧ್ಯಪ್ರದೇಶ ಮೊದಲಾದ ರಾಜ್ಯಗಳಲ್ಲಿ ಈಗ ಗ್ಯಾರಂಟಿ ಘೋಷಣೆಗಳ ಮೂಲಕ ಜನರನ್ನು ಸೆಳೆಯಲು ಹೊರಟಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ದಾನ- ಧರ್ಮ ಮಾಡುವ ಕೈಯನ್ನು ಜನರು ಅಧಿಕಾರಕ್ಕೆ ತಂದಿದ್ದು, ಗ್ಯಾರಂಟಿ ಯೋಜನೆಗಳ ಮೂಲಕ ಅವರ ಋಣ ತೀರಿಸುವ ಕೆಲಸ ಮಾಡುತ್ತಿದ್ದೇವೆ. ಸರ್ಕಾರದ ಖಜಾನೆ ಖಾಲಿ ಎಂಬ ವಿರೋಧ ಪಕ್ಷಗಳ ಟೀಕೆ ಸರಿಯಲ್ಲ. ನಾವು ಭಾವನೆಗಳ ಮೇಲೆ ರಾಜಕೀಯ ಮಾಡುತ್ತಿಲ್ಲ. ಬದುಕಿಗೆ ಬೇಕಾದ ರಾಜಕೀಯ ಮಾಡುತ್ತಿದ್ದೇವೆ’ ಎಂದರು.

‘2028ರಲ್ಲಿ ಜನರು ಇದಕ್ಕಿಂತ ಹೆಚ್ಚಿನ ಆಶೀರ್ವಾದ ಮಾಡಿ ಮತ್ತೆ ಅಧಿಕಾರಕ್ಕೆ ತರಬೇಕು. ಖರ್ಗೆ- ಸಿದ್ದರಾಮಯ್ಯ ಮಾರ್ಗದರ್ಶನದಲ್ಲಿ ನಾಡಿನ ಅಭಿವೃದ್ಧಿಯ ಕೆಲಸ ಮಾಡಲಿದ್ದೇವೆ’ ಎಂದು ತಿಳಿಸಿದರು.

ಗೃಹ ಸಚಿವ ಡಾ.ಜಿ. ಪರಮೇಶ್ವರ, ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಕೆ. ವೆಂಕಟೇಶ್, ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ಶರಣಬಸಪ್ಪ ದರ್ಶನಾಪುರ, ಶಿವರಾಜ ತಂಗಡಗಿ, ರಹೀಂ ಖಾನ್, ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ಕೆ. ಹರೀಶ್ ಗೌಡ, ಟಿ. ಗುರುಮೂರ್ತಿ, ಸಿ.ಪುಟ್ಟರಂಗಶೆಟ್ಟಿ, ಎಚ್.ಎಂ.ಗಣೇಶ ಪ್ರಸಾದ್, ಎ.ಆರ್. ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ, ಚಾಮರಾಜನಗರ ಸಂಸದ ಸುನೀಲ್ ಬೋಸ್, ವಿಧಾನಪರಿಷತ್ ಸದಸ್ಯರಾದ ಡಿ.ತಿಮ್ಮಯ್ಯ, ಪುಟ್ಟಣ್ಣ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮ್ಮದ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಪಾಲ್ಗೊಂಡರು.



ಯಾವುದೇ ಯೋಜನೆ ಬಂದರೂ ಸಿದ್ದರಾಮಯ್ಯ ಮೊದಲ ಆದ್ಯತೆ ಕೊಡುವುದು ತವರು ಮೈಸೂರಿಗೆ. ಹಣಕಾಸು ಸಚಿವರಾಗಿ ಅವರು ಹೆಚ್ಚು ಅನುದಾನ ನೀಡಿದ್ದಾರೆ. ಬಿಜೆಪಿಯವರು ಬರೀ ಟೀಕಾಚಾರ್ಯರು
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಸಿದ್ದರಾಮಯ್ಯ ಹೋರಾಟ ರಾಜಕೀಯದ ಮೂಲಕ ಸಮ ಸಮಾಜ ನಿರ್ಮಾಣ ಮಾಡುತ್ತಿದ್ದು, ಅದಕ್ಕೆ ಪ್ರೇರಣೆಯಾಗಿ ಕಾಂಗ್ರೆಸ್ ಸರ್ಕಾರ ನಿಂತಿದೆ
ಡಾ.ಎಚ್.ಸಿ. ಮಹದೇವಪ್ಪ
ಜಿಲ್ಲಾ ಉಸ್ತುವಾರಿ ಸಚಿವ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ರಾಜ್ಯ ಸರ್ಕಾರದ ಸಾಧನಾ ಸಮಾವೇಶದಲ್ಲಿ ಪಾಲ್ಗೊಂಡಿದ್ದವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಫೋಟೊ ಪ್ರದರ್ಶಿಸಿದರು –ಚಿತ್ರ:ಅನೂಪ್ ರಾಘ.ಟಿ.

‘ಅಂಬೇಡ್ಕರ್ ಅಲ್ಲದೇ ಆರ್‌ಎಸ್‌ಎಸ್‌ನವರು ಸಂವಿಧಾನ ಬರೆದರೆ?’

‘ಅಂಬೇಡ್ಕರ್ ಒಬ್ಬರೇ ಸಂವಿಧಾನ ಬರೆದಿದ್ದರೇ ಎಂದು ಬಿಜೆಪಿಯವರು ಕೇಳುತ್ತಾರೆ. ಅಂಬೇಡ್ಕರ್ ಸಂವಿಧಾನ ಬರೆಯದೇ ನಿಮ್ಮ ತಾತ, ಆರ್‌ಎಸ್‌ಎಸ್ ನವರು ಬರೆದರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದರು.

‘ಸಂವಿಧಾನ ರೂಪಿಸಿದ್ದೇ ಅಂಬೇಡ್ಕರ್. ಆ ಸಂವಿಧಾನದಿಂದಲೇ ಮೋದಿ ಪ್ರಧಾನಿ ಆಗಿದ್ದು. ಈಗ ಅದೇ ಸಂವಿಧಾನವನ್ನು ಕೊಲೆ ಮಾಡಲು ಹೊರಟಿದ್ದಾರೆ’ ಎಂದು ಅವರು ಟೀಕಿಸಿದರು.

‘ಬಿಜೆಪಿ ಹಾಗೂ ಆರ್‌ಎಸ್‌ಎಸ್ ಸಂವಿಧಾನ ಬದಲಾವಣೆಯ ಪ್ರಯತ್ನ ಮುಂದುವರಿಸಿದ್ದು, ನೀವೆಷ್ಟೇ ತಿಪ್ಪರಲಾಗ ಹಾಕಿದರೂ ಈ ದೇಶದ ಜನ ಅದಕ್ಕೆ ಅವಕಾಶ ನೀಡುವುದಿಲ್ಲ’ ಎಂದರು.

‘42 ದೇಶ ಸುತ್ತಿರುವ ಮೋದಿಗೆ ಗಲಭೆಪೀಡಿತ ಮಣಿಪುರದ ಜನರ ಸಮಸ್ಯೆ ಕೇಳಲು ಸಮಯವಿಲ್ಲ. ದೂರದರ್ಶನದಲ್ಲಿ ಹಿಂದಿನ ಯಾವ ಪ್ರಧಾನಿಯೂ ಈಗಿನವರಂತೆ ನಿತ್ಯ ಬೊಗಳುತ್ತಿರಲಿಲ್ಲ. ಅವರೊಬ್ಬ ನಂ. 1 ಸುಳ್ಳುಗಾರ’ ಎಂದು ಟೀಕಿಸಿದರು.

‘ದೇಶದ ವಿವಿಧೆಡೆ ಕಾಂಗ್ರೆಸ್ ಸೋತಿರಬಹುದು. ಆದರೆ, ಬಿದ್ದವರು ಮೇಲೇಳಲೇ ಬೇಕು. ಇಂದಿಗೂ ಲಕ್ಷಾಂತರ ಜನ ಕಾಂಗ್ರೆಸ್ ಅಧಿಕಾರಕ್ಕೆ ಬರಲಿ ಎಂದು ಆಶಿಸುತ್ತಾರೆ. ಕಾಂಗ್ರೆಸ್ ದೇಶಕ್ಕೆ ಕೊಟ್ಟ ಕೊಡುಗೆ ಜನರ ಮುಂದೆ ಇದೆ. ಆದರೆ, ಮೋದಿ ಸಾರ್ವಜನಿಕ ಉದ್ಯಮ- ಗಳನ್ನು ಮುಚ್ಚಿ ಅದಾನಿ- ಅಂಬಾನಿಗೆ ದೇಶದ ಆಸ್ತಿಯನ್ನು ಮಾರುತ್ತಿದ್ದಾರೆ’ ಎಂದು ಟೀಕಿಸಿದರು.

‘ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಸರ್ಕಾರದ ಬೊಕ್ಕಸ ಖಾಲಿ ಆಗಿಲ್ಲ. ಸಿದ್ದರಾಮಯ್ಯ ಹಣಕಾಸು ಸಚಿವರಾದಾಗಲೆಲ್ಲ ಲಕ್ಷ್ಮಿ ಕುಂಟಾಗಿ ಖಜಾನೆಯಲ್ಲಿಯೇ ಕುಳಿತಿರುತ್ತಾಳೆ’ ಎಂದರು.

ಸುದ್ದಿ 2 ನಿಮಿಷ

ನೋಟುಗಳಲ್ಲಿ ಅಂಬೇಡ್ಕರ್ ಚಿತ್ರವೂ ಇರಲಿ: ಪ್ರಧಾನಿಗೆ ಪತ್ರ

ಬೆಂಗಳೂರು: ಕರೆನ್ಸಿ ನೋಟುಗಳಲ್ಲಿ ಬಿ.ಆರ್.ಅಂಬೇಡ್ಕರ್ ಅವರ ಚಿತ್ರವನ್ನೂ ಮುದ್ರಿಸಿ ಎಂದು ರಾಮ ಮನೋಹರ್ ಲೋಹಿಯಾ ವಿಚಾರ ವೇದಿಕೆಯು ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಬರೆದಿರುವ ಪತ್ರದಲ್ಲಿ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಬಂಜಗೆರೆ ಜಯಪ್ರಕಾಶ, ವೇದಿಕೆಯ ಸಂಚಾಲಕ ಬಿ.ಎಸ್. ಶಿವಣ್ಣ ಸೇರಿ ಹಲವರು ಸಹಿ ಮಾಡಿದ್ದಾರೆ.

‘ಸಂವಿಧಾನ ಬದ್ಧ ರಕ್ಷಣೆಯ ಹೊರತಾಗಿಯೂ ದೇಶದಲ್ಲಿ ಅಸ್ಪೃಶ್ಯತೆ, ಜಾತಿ ಆಧಾರಿತ ತಾರತಮ್ಯ ಇನ್ನೂ ಜೀವಂತವಾಗಿದೆ. ಇವುಗಳನ್ನು ನಿಷೇಧಿಸುವ ಸಾಮಾಜಿಕ ನ್ಯಾಯ ತತ್ವದ ಸಂಕೇತವಾಗಿ ಅಂಬೇಡ್ಕರ್ ಅವರ ಚಿತ್ರವನ್ನೂ ಕರೆನ್ಸಿ ನೋಟುಗಳಲ್ಲಿ ಮುದ್ರಿಸಬೇಕು’ ಎಂದು ಪತ್ರದಲ್ಲಿ ಕೋರಲಾಗಿದೆ.



‘ಜನರು ದಿನವೂ ಬಳಸುವ ಕರೆನ್ಸಿ ನೋಟುಗಳಲ್ಲಿ ಅಂಬೇಡ್ಕರ್ ಅವರ ಚಿತ್ರವಿದ್ದರೆ ಸಾಮಾಜಿಕ ನ್ಯಾಯ, ಸಂವಿಧಾನ ನೀಡಿರುವ ಹಕ್ಕುಗಳು ಮೊದಲಾದವುಗಳು, ಜನರಿಗೆ ಪದೇ-ಪದೇ ಮನ ದಟ್ಟಾಗುತ್ತಿರುತ್ತದೆ. ಅಂಬೇಡ್ಕರ್ ಅವರ ಚಿತ್ರ ಬಳಸುವುದರಿಂದ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಘನತೆಗೆ ಧಕ್ಕೆಯಾಗುವುದಿಲ್ಲ’ ಎಂದು ವಿವರಿಸಲಾಗಿದೆ.

ಒಪಿಎಸ್: ವರದಿ ಬಳಿಕ ನಿರ್ಣಯ: ಸಿದ್ದರಾಮಯ್ಯ

ಮೈಸೂರು: ‘ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಕುರಿತು ಸಮಿತಿ ವರದಿ ಬಳಿಕ ಸೂಕ್ತ ನಿರ್ಣಯ ಮಾಡುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಶನಿವಾರ ನಡೆದ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿ, ‘ಈಗಾಗಲೇ 5 ರಾಜ್ಯಗಳು ಒಪಿಎಸ್‌ಗೆ ಮರಳಿವೆ. ನಮ್ಮದೂ ಸೇರಿದರೆ 6 ರಾಜ್ಯಗಳಾಗುತ್ತದೆ ಅಷ್ಟೇ’ ಎಂದರು.

ಇದಕ್ಕೆ ಸಭಿಕರು ‘6ನೇ ರಾಜ್ಯ ಮತ್ತು 6ನೇ ಗ್ಯಾರಂಟಿ ನೀಡಿ’ ಎಂದು ಒತ್ತಾಯಿಸಿದರು. ‘ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಜಾರಿಗೆ ತಂದಿರುವುದು ಕೇಂದ್ರ ಸರ್ಕಾರ. ಆದರೆ, ನಮ್ಮನ್ನು ಹಿಡಿದುಕೊಂಡಿದ್ದೀರಾ. ಅದೇನೆ ಇರಲಿ, ವರದಿ ಬಂದ ಬಳಿಕ ನಿಮ್ಮೊಂದಿಗೆ ಚರ್ಚಿಸುತ್ತೇನೆ’ ಎಂದು ಭರವಸೆ ನೀಡಿದರು.

‘ಶಾಲಾ ಶಿಕ್ಷಕರ ನೇಮಕಾತಿಯಲ್ಲಿನ ‘ಸಿ ಅಂಡ್ ಆರ್’ ನಿಯಮಗಳ ಬಗ್ಗೆಯೂ ಚರ್ಚಿಸಲಾಗುವುದು. ಆರೋಗ್ಯ ಸಂಜೀವಿನಿ ಬಗ್ಗೆಯೂ ಸೂಕ್ತ ತೀರ್ಮಾನ ಮಾಡಲಾಗಿದೆ’ ಎಂದರು. ‘ನಿಮ್ಮೆಲ್ಲ ಸಮಸ್ಯೆಗಳನ್ನು ಸರ್ಕಾರ ತೆರೆದ ಮನಸ್ಸಿನಿಂದ ಬಗೆ ಹರಿಸಲಿದೆ. ಸರ್ಕಾರದ ಕಾರ್ಯ- ಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನೀವೆಲ್ಲರೂ ಮಾಡಬೇಕು. ಬಡವರು, ದಲಿತರು, ಶೋಷಿತರ ಪರವಾಗಿ ಕೆಲಸ ಮಾಡಬೇಕು’ ಎಂದು ಸೂಚಿಸಿದರು.

‘ಗಾಯದ ಉಲ್ಲೇಖ ಇರದಿದ್ದರೂ ಬಾಲಕಿ ಹೇಳಿಕೆ ತಿರಸ್ಕರಿಸಲಾಗದು’

ನವದೆಹಲಿ(ಪಿಟಿಐ): ಬಾಲಕಿಗೆ ಆಗಿರುವ ಗಾಯಗಳ ಕುರಿತು ವೈದ್ಯಕೀಯ ವರದಿಯಲ್ಲಿ ಉಲ್ಲೇಖವಿಲ್ಲ ಎಂದ ಮಾತ್ರಕ್ಕೆ ತನ್ನ ಮೇಲೆ ನಡೆದಿದೆ ಎನ್ನಲಾದ ಹಲ್ಲೆ ಬಗ್ಗೆ ಆಕೆ ನೀಡಿರುವ ‘ಸ್ಪಷ್ಟವಾದ ಹೇಳಿಕೆ’ಯನ್ನು ತಿರಸ್ಕರಿಸಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ.



ಬಾಲಕಿಯ ಮೇಲೆ ಹಲ್ಲೆ ಹಾಗೂ ಅಕ್ರಮವಾಗಿ ಬಂಧನದಲ್ಲಿಟ್ಟ ಆರೋಪಗಳಿಗೆ ಸಂಬಂಧಿಸಿ ವ್ಯಕ್ತಿ ಹಾಗೂ ಆತನ ಪತ್ನಿ ವಿರುದ್ಧ 2016ರಲ್ಲಿ ದಾಖಲಾಗಿರುವ ಪ್ರಕರಣ ಕುರಿತು ಹೊಸದಾಗಿ ಆರೋಪ ನಿಗದಿ ಮಾಡಿ, ವಿಚಾರಣೆ ನಡೆಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ಸೂಚಿಸಿದೆ.

ನ್ಯಾಯಮೂರ್ತಿ ಗಿರೀಶ ಕಠಪಾಲಿಯಾ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಸಂತ್ರಸ್ತ ಬಾಲಕಿ, ಆರೋಪಿಯ ಕಂಪನಿಯಲ್ಲಿ ಸ್ವಾಗತಗಾರ್ತಿಯಾಗಿ- ದ್ದಳು. ವ್ಯಕ್ತಿಯ ವಿರುದ್ಧ ವಿಚಾರಣಾ ನ್ಯಾಯಾಲಯವು, ಅತ್ಯಾಚಾರ ಹಾಗೂ ಅಸ್ವಾಭಾವಿಕ ಲೈಂಗಿಕಕ್ರಿಯೆ ಆರೋಪ ಹೊರಿಸಿತ್ತು. ಆದರೆ, ಹಲ್ಲೆ ಮತ್ತು ಅಕ್ರಮ ಬಂಧನದಲ್ಲಿಟ್ಟ ಆರೋಪಗಳಿಂದ ಆ ವ್ಯಕ್ತಿ ಹಾಗೂ ಆತನ ಪತ್ನಿಯನ್ನು ಖುಲಾಸೆಗೊಳಿಸಿತ್ತು. ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಬಾಲಕಿ ಹೈಕೋರ್ಟ್ ಮೆಟ್ಟಿಲೇರಿದ್ದಳು.

ವಿಚಾರಣೆ ವೇಳೆ, ‘ವೈದ್ಯಕೀಯ ವರದಿಯಲ್ಲಿ ಬಾಲಕಿಗೆ ಗಾಯಗಳಾಗಿರುವ ಕುರಿತು ಉಲ್ಲೇಖ ಇರದಿದ್ದರೂ, ತನ್ನನ್ನು ಹೊಡೆದಿರುವ ಕುರಿತು ಆಕೆಯ ಹೇಳಿಕೆ ತಳ್ಳಿಹಾಕಲಾಗುವು- ದಿಲ್ಲ. ಸಿಆರ್‌ಪಿಸಿ ಸೆಕ್ಷನ್ 164ರಡಿ ಮ್ಯಾಜಿಸ್ಟ್ರೇಟ್ ಮುಂದೆ ಬಾಲಕಿ ಹೇಳಿಕೆ ದಾಖಲಿಸಿದ್ದು, ನನ್ನ ಹೊಟ್ಟೆಗೆ ಒದೆಯಲಾಗಿದೆ ಹಾಗೂ ತಲೆಯನ್ನು ಗೋಡೆಗೆ ಜಜ್ಜಿದ ಬಗ್ಗೆ ವರದಿಯಲ್ಲಿ ಉಲ್ಲೇಖಿಸಿಲ್ಲ ಎಂದಿದ್ದಾಳೆ’ ಎಂದು ಪೀಠ ಜು.18ರಂದು ನೀಡಿದ ಆದೇಶದಲ್ಲಿ ತಿಳಿಸಿದೆ.

ಸಿ.ಎಂಗೆ ತವರು ನೆಲದ ಬಲ

ಒಂದನೇ ಪುಟದಿಂದ...

ಸಚಿವ ಸಂಪುಟದ ಅರ್ಧದಷ್ಟು ಸಹೋದ್ಯೋಗಿಗಳು, ಕಾಂಗ್ರೆಸ್ ಶಾಸಕರು ವೇದಿಕೆಯನ್ನು ತುಂಬಿದ್ದರು. ತಡವಾಗಿ ಆರಂಭವಾದ ಕಾರಣ ಸಮಾವೇಶವು ಐದು ಮಂದಿಯ ಭಾಷಣಕ್ಕಷ್ಟೆ ಸೀಮಿತವಾಯಿತು. ‘ಅನ್ಯ ಕಾರ್ಯ ನಿಮಿತ್ತ’ ಡಿ.ಕೆ. ಶಿವಕುಮಾರ್ ಅವರು ಸಿದ್ದರಾಮಯ್ಯ ಭಾಷಣಕ್ಕೂ ಮುನ್ನವೇ, ಅರ್ಧದಲ್ಲೇ ನಿರ್ಗಮಿಸಿದ್ದು ಹಲವು ಚರ್ಚೆಗೆ ಗ್ರಾಸವಾಯಿತು.

ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರದಿಂದಲೂ ಸಹಸ್ರಾರು ಸಂಖ್ಯೆಯಲ್ಲಿ ಕಾರ್ಯಕರ್ತರು, ಸಿದ್ದರಾಮಯ್ಯ ಬೆಂಬಲಿಗರು ಪಾಲ್ಗೊಂಡು ಶಕ್ತಿ ತುಂಬಿದರು. ಅವರಿಗಾಗಿ 700ಕ್ಕೂ ಹೆಚ್ಚು ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಚಾಲನೆ ನೀಡುವ ಸರ್ಕಾರಿ ಕಾರ್ಯಕ್ರಮವಾದರೂ ಬಿಜೆಪಿ–ಜೆಡಿಎಸ್‌ನ ಜನಪ್ರತಿನಿಧಿಗಳ್ಯಾರೂ ಕಾಣಿಸಿಕೊಳ್ಳಲಿಲ್ಲ. ವೇದಿಕೆಯಲ್ಲಿ ಖರ್ಗೆ ಹೊರತುಪಡಿಸಿ ಕಾಂಗ್ರೆಸ್ ಹೈಕಮಾಂಡ್‌ನ ಯಾರ ಚಿತ್ರವೂ ಇರಲಿಲ್ಲ.

ಹಾಕಲಾಗಿದ್ದ ಎಲ್ಲ ಕುರ್ಚಿಗಳಲ್ಲೂ ಸಿದ್ದರಾಮಯ್ಯ ಫೋಟೊಗಳನ್ನು ಇಡಲಾಗಿತ್ತು. ಸಮಾವೇಶದ ವೇಳೆ ಅದನ್ನು ಪ್ರದರ್ಶಿಸುವಂತೆ ಮುಖಂಡರು ಕಾರ್ಯಕರ್ತರಿಗೆ ಸೂಚಿಸಿದ್ದರು. ಆದರೆ, ಆರಂಭಕ್ಕೂ ಮುನ್ನವೇ ಒಂದಷ್ಟು ಫೋಟೊಗಳನ್ನು ಪೊಲೀಸರು ವಶಕ್ಕೆ ಪಡೆದರು. ಈ ನಡುವೆಯೂ, ಅಭಿಮಾನಿಗಳು ಮುಖ್ಯಮಂತ್ರಿಯ ಫೋಟೊಗಳನ್ನು ಪ್ರದರ್ಶಿಸಿ ಅಭಿಮಾನ ಮೆರೆದರು.

ಮಹದೇವಪ್ಪಗೆ ಗದರಿದ ಖರ್ಗೆ: ತಮ್ಮ ಭಾಷಣದ ವೇಳೆ ಸಿದ್ದರಾಮಯ್ಯ ಅವರೊಂದಿಗೆ ಮಾತುಕತೆ ನಡೆಸುತ್ತಿದ್ದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರನ್ನು ಮಲ್ಲಿಕಾರ್ಜನ ಖರ್ಗೆ ಗದರಿದರು.

‘ಏಯ್ ಮಹದೇವಪ್ಪ ಮುಖ್ಯಮಂತ್ರಿ ಕಿವಿಗೆ ಏನೇನೋ ತುಂಬಬೇಡ. ಅವರ ಕಿವಿ ಚೆನ್ನಾಗಿದೆ. ಅವರು ಇಲ್ಲಿ ಕೇಳಿಸಿಕೊಳ್ಳಲಿ’ ಎಂದು ಸಿಟ್ಟಾದರು. ಮಹದೇವಪ್ಪ ನಕ್ಕು ಸುಮ್ಮನಾದರು.

‘ಬಿಜೆಪಿಗೆ ನಾಚಿಕೆಯಿಲ್ಲವೇ’

ಒಂದನೇ ಪುಟದಿಂದ...

‘ಬಿಜೆಪಿಯವರು ಹಾಗೂ ನರೇಂದ್ರ ಮೋದಿ ದೇಶದಲ್ಲಿನ ಕೇವಲ ಶೇ 10ರಷ್ಟು ಸಿರಿವಂತರ ಬಗ್ಗೆ ಮಾತನಾಡುತ್ತಾರೆ. ಅವರಿಗೆ ಬೇಕಾದ ರೀತಿಯಲ್ಲಿ ತೆರಿಗೆ ಕಡಿತಗೊಳಿಸುತ್ತಾರೆ. ಆದರೆ, ಕಾಂಗ್ರೆಸ್ ಎಂದೂ ಬಡವರ ಪರವಿದೆ. ನಾವು ಬುದ್ಧ, ಬಸವ, ಅಂಬೇಡ್ಕರ್–ಗಾಂಧಿ ತತ್ವದಲ್ಲಿ ನಂಬಿಕೆ ಇಟ್ಟವರು’ ಎಂದರು.



ಡ್ರಗ್ಸ್ ಸಾಗಿಸುತ್ತಿದ್ದ ಮಹಿಳೆಯ ಬ್ಯಾಗ್‌ಗಳನ್ನು ಪರಿಶೀಲಿಸಿದ ಪೊಲೀಸರು

₹36 ಕೋಟಿ ಮೌಲ್ಯದ ಡ್ರಗ್ಸ್ ವಶ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಪನ್ವೇಲ್ ರೈಲ್ವೆ ನಿಲ್ದಾಣದಲ್ಲಿ ₹36 ಕೋಟಿ ಮೌಲ್ಯದ ಮಾದಕವಸ್ತು ವಶಪಡಿಸಿಕೊಂಡಿರುವ ಭದ್ರತಾ ಸಿಬ್ಬಂದಿ, ವಿದೇಶಿ ಮಹಿಳೆಯನ್ನು ಬಂಧಿಸಿದ್ದಾರೆ.

ನೈಜೀರಿಯಾದ ಎಟುಮುಡಾನ್ ಡೋರಿಸ್ ಬಂಧಿತ ಮಹಿಳೆ. ಈಕೆಯಿಂದ 2.002 ಕೆ.ಜಿ ಕೊಕೇನ್ ವಶಪಡಿಸಿ- ಕೊಳ್ಳಲಾಗಿದೆ ಎಂದು ಮಧ್ಯ ರೈಲ್ವೆಯ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನ ಮಾದಕ ವಸ್ತು ನಿಯಂತ್ರಣ ಸಂಸ್ಥೆಗೆ (ಎನ್‌ಸಿಬಿ) ದೊರೆತ ಖಚಿತ ಮಾಹಿತಿ ಆಧಾರದಲ್ಲಿ ಪನ್ವೇಲ್‌ನ ಮಧ್ಯ ರೈಲ್ವೆಯ ಆರ್‌ಪಿಎಫ್, ಮುಂಬೈನ ಕುರ್ಲಾದ ಅಪರಾಧ ಗುಪ್ತಚರ ಶಾಖೆಯ (ಸಿಐಬಿ) ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಹಜರತ್ ನಿಜಾಮುದ್ದೀನ್– ಎರ್ನಾಕುಲಂ ನಡುವೆ ಸಂಚರಿಸುವ ಮಂಗಳಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಡ್ರಗ್ಸ್ ಸಾಗಿಸುತ್ತಿರುವ ಖಚಿತ ಮಾಹಿತಿ ದೊರೆಯುತ್ತಿದ್ದಂತೆ ಕಾರ್ಯಾಚರಣೆ ಆರಂಭಿಸಿದ ಅಧಿಕಾರಿಗಳು, ಪನ್ವೇಲ್‌ನ ರೈಲ್ವೆ ನಿಲ್ದಾಣಕ್ಕೆ ರೈಲು ಬರುತ್ತಿದ್ದಂತೆ ಶೋಧ ನಡೆಸಿದರು.

ರೈಲಿನ ಎ–2 ಬೋಗಿಯಲ್ಲಿ ಮಗುವಿನೊಂದಿಗಿದ್ದ ಡೋರಿಸ್‌ನನ್ನು ವಶಕ್ಕೆ ಪಡೆದು ಪನ್ವೇಲ್‌ನ ಆರ್‌ಪಿಎಫ್ ಕಚೇರಿಗೆ ಕರೆದೊಯ್ದ ಅಧಿಕಾರಿಗಳು, ಡ್ರಗ್ಸ್ ಪತ್ತೆ ಹಚ್ಚುವ ಸಾಧನಗಳನ್ನು ಬಳಸಿ ಪರಿಶೀಲಿಸಿದಾಗ 2.002 ಕೆ.ಜಿ ಕೊಕೇನ್ ಪತ್ತೆಯಾಗಿದೆ.

ತಿನಿಸಿನ ಎರಡು ಪೊಟ್ಟಣಗಳಲ್ಲಿ ಮೆಥಾಂಫೆಟಮೈನ್ ಎಂದು ಗುರುತಿಸಲಾದ 1,488 ಗ್ರಾಂ ಬಿಳಿ ಸ್ಫಟಿಕದಂತ ಪದಾರ್ಥ ಕಂಡುಬಂದಿದ್ದು ವಶಕ್ಕೆ ಪಡೆಯಲಾಗಿದೆ ಎಂದು ಮಧ್ಯ ರೈಲ್ವೆಯ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ನಿಲ್ದಾಣದಲ್ಲಿ ₹40 ಕೋಟಿ ಮೌಲ್ಯದ ಕೊಕೇನ್ ಜಪ್ತಿ

ಹಾಳೆಯಲ್ಲಿ ಮಾದಕ ವಸ್ತು ಪುಡಿ ಅಂಟಿಸಿ ಸಾಗಣೆ, ಕತಾರ್‌ನ ಆರೋಪಿ ಬಂಧಿಸಿದ ಡಿಆರ್‌ಐ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕತಾರ್‌ನ ರಾಜಧಾನಿ ದೋಹಾದಿಂದ ಬಂದ ಪ್ರಯಾಣಿಕನ ಬಳಿ 4 ಕೆ.ಜಿ 6 ಗ್ರಾಂ ಕೊಕೇನ್ ಪತ್ತೆಯಾಗಿದ್ದು, ಆರೋಪಿಯನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.

ಡಿಆರ್‌ಐನ ಬೆಂಗಳೂರು ವಿಭಾಗದ ಅಧಿಕಾರಿಗಳು ಶುಕ್ರವಾರ ರಾತ್ರಿ ದೋಹಾದಿಂದ ಬಂದ ಪ್ರಯಾಣಿಕರನ್ನು ಖಚಿತ ಮಾಹಿತಿ ಮೇರೆಗೆ ತಪಾಸಣೆಗೆ ಒಳಪಡಿಸಿದಾಗ ಆತನ ಬಳಿ ಅಪಾರ ಪ್ರಮಾಣದ ಕೊಕೇನ್ ಪತ್ತೆಯಾಗಿತ್ತು. ತಕ್ಷಣವೇ ಆರೋಪಿಯನ್ನು ವಶಕ್ಕೆ ಪಡೆದು, ಆತನ ಬಳಿಯಿದ್ದ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ. ಆರೋಪಿಯಿಂದ ವಶಪಡಿಸಿಕೊಂಡ ಕೊಕೇನ್‌ಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹40 ಕೋಟಿ ಬೆಲೆಯಿದೆ ಎಂದು ಮೂಲಗಳು ತಿಳಿಸಿವೆ.



ಆರೋಪಿಯು ತನ್ನ ಲಗೇಜ್‌ನೊಂದಿಗೆ ಸೂಪರ್ ಹೀರೊಗಳ ಕಾಮಿಕ್ಸ್ ಪುಸ್ತಕವನ್ನು ಇರಿಸಿದ್ದ. ಪುಸ್ತಕದ ಹಾಳೆಗಳ ಮೇಲೆ ಕೊಕೇನ್‌ನ ಬಿಳಿ ಬಣ್ಣದ ಪುಡಿಯನ್ನು ಹಾಕಿಕೊಂಡು ಸಾಗಾಟ ಮಾಡುತ್ತಿದ್ದ. ಪುಸ್ತಕದ ಹಾಳೆಗಳ ಮೇಲಿದ್ದ ಬಿಳಿ ಪುಡಿ ಕಂಡು ಅನುಮಾನಗೊಂಡ ಅಧಿಕಾರಿಗಳು ಅದನ್ನು ಪರೀಕ್ಷಿಸಿದಾಗ, ಆ ಬಿಳಿ ಪುಡಿ ಕೊಕೇನ್ ಎಂದು ದೃಢಪಟ್ಟಿತ್ತು.

‘ಆರೋಪಿಯ ವಿರುದ್ಧ ಮಾದಕ ದ್ರವ್ಯ ನಿಗ್ರಹ ಕಾಯ್ದೆ (ಎನ್‌ಡಿಪಿಎಸ್) ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಡಿಆರ್‌ಐ ಅಧಿಕಾರಿಗಳು ತಿಳಿಸಿದ್ದಾರೆ.

ನಾಳೆಯಿಂದ ಸಂಸತ್ ಅಧಿವೇಶನ • ವಿವಿಧ ಪಕ್ಷಗಳ ಸಂಸದರಿಂದ 34 ಪ್ರಶ್ನೆಗಳ ಸಲ್ಲಿಕೆ

ವಿಮಾನ ಪತನ ಪ್ರಸ್ತಾಪಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಡಿಜಿಸಿಎ ನಿರ್ಲಕ್ಷ್ಯ: ಹಲವು ಸಂಸದರ ಪ್ರಶ್ನೆ
- ಜಂಟಿ ಸಂಸದೀಯ ಸಮಿತಿ ರಚನೆಗೆ ಬೇಡಿಕೆ ಸಾಧ್ಯತೆ

ನವದೆಹಲಿ: ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಬೋಯಿಂಗ್ 787–8 ‘ಡ್ರೀಮ್‌ಲೈನರ್’ ಪತನಗೊಂಡ ನಂತರ ಉದ್ಭವಿಸಿರುವ ಹತ್ತಾರು ಪ್ರಶ್ನೆಗಳು, ಇದೇ ಸೋಮವಾರದಿಂದ (ಜುಲೈ 21) ಆರಂಭವಾಗಲಿರುವ ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಮತ್ತೆ ಪ್ರತಿಧ್ವನಿಸುವ ಎಲ್ಲ ಸಾಧ್ಯತೆ ನಿಚ್ಚಳವಾಗಿದೆ.

‘ಡ್ರೀಮ್‌ಲೈನರ್’ ವಿಮಾನ ಅಪಘಾತಕ್ಕೀಡಾಗಿರುವುದಕ್ಕೆ ವಿಧ್ವಂಸಕ ಕೃತ್ಯದ ಆಯಾಮವಿದೆಯೇ? ವಿಮಾನದ ಬ್ಲ್ಯಾಕ್‌ಬಾಕ್ಸ್‌ಅನ್ನು ಪರಿಶೀಲನೆಗಾಗಿ ಒಂದು ವೇಳೆ ವಿದೇಶಕ್ಕೆ ಕಳುಹಿಸಿದಲ್ಲಿ, ಅದರಲ್ಲಿನ ದತ್ತಾಂಶಕ್ಕೆ ಸಂಬಂಧಿಸಿ ಬೋಯಿಂಗ್ ಸಂಸ್ಥೆ ದುರುದ್ದೇಶದಿಂದ ಏನಾದರೂ ಮಾಡಬಹುದೇ? ವಿಮಾನಯಾನ ನಿಯಂತ್ರಿಸುವ ಸಂಸ್ಥೆಯ ವೈಫಲ್ಯಗಳು ಹಾಗೂ ಸುರಕ್ಷತೆಯ ಗುಣಮಟ್ಟ ಕುರಿತು ತನಿಖೆ ನಡೆಸುವುದಕ್ಕಾಗಿ ಜಂಟಿ ಸಂಸದೀಯ ಸಮಿತಿಯೊಂದನ್ನು ರಚಿಸಲಾಗುತ್ತದೆಯೇ’ ಎಂಬಂತಹ ಪ್ರಶ್ನೆಗಳನ್ನು ಮಂಡಿಸಲು ವಿವಿಧ ಪಕ್ಷಗಳು ಮುಂದಾಗಿವೆ.

ಕಾಂಗ್ರೆಸ್, ಬಿಜೆಪಿ, ಟಿಎಂಸಿ, ಡಿಎಂಕೆ, ಜೆಡಿಯು, ಸಿಪಿಎಂ, ಸಿಪಿಐ, ಶಿವಸೇನಾ, ಜನಸೇನಾ ಹಾಗೂ ಎನ್‌ಸಿಪಿ(ಎಸ್‌ಪಿ) ಪಕ್ಷಗಳಿಗೆ ಸೇರಿದ 50 ಸಂಸದರು ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಶೂನ್ಯ ವೇಳೆ ವಿವಿಧ ವಿಚಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳ- ನ್ನು ಕೇಳಲು ಸಜ್ಜಾಗಿದ್ದಾರೆ.

ಈ ಪೈಕಿ, ಏರ್ ಇಂಡಿಯಾ ವಿಮಾನ ಪತನಕ್ಕೆ ಸಂಬಂಧಿಸಿ ಲೋಕಸಭೆಯಲ್ಲಿ 23 ಪ್ರಶ್ನೆಗಳು ಹಾಗೂ ರಾಜ್ಯಸಭೆಯಲ್ಲಿ 11 ಪ್ರಶ್ನೆಗಳನ್ನು ಕೇಳಲಾಗುತ್ತದೆ.

ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ಸುರಕ್ಷತೆಗೆ ಸಂಬಂಧಿಸಿ ಕನಿಷ್ಠ 7 ಪ್ರಶ್ನೆಗಳಿವೆ. ಆದರೆ, ಜೂನ್ 12ರಂದು ಅಹಮದಾಬಾದ್‌ನಲ್ಲಿ ಪತನಗೊಂಡ ಏರ್ ಇಂಡಿಯಾ ವಿಮಾನ ಕುರಿತು ಈ ಪ್ರಶ್ನೆಗಳಲ್ಲಿ ನೇರ ಪ್ರಸ್ತಾಪ ಇಲ್ಲ.

ನಾಗರಿಕ ವಿಮಾನಯಾನಕ್ಕೆ ಸಂಬಂಧಿಸಿದ ಪ್ರಶ್ನೆಗಳು ಪ್ರತಿ ಸೋಮವಾರ ರಾಜ್ಯಸಭೆಯಲ್ಲಿ ಹಾಗೂ ಗುರುವಾರಗಳಂದು ಲೋಕಸಭೆಯಲ್ಲಿ ತೆಗೆದುಕೊಳ್ಳು- ವುದನ್ನು ನಿಗದಿ ಮಾಡಲಾಗಿದೆ. ಹೀಗಾಗಿ, ಅಧಿವೇಶನದ ಮೊದಲ ದಿನವಾದ ಜುಲೈ 21ರಂದು ಸಂಸದರು ರಾಜ್ಯಸಭೆಯಲ್ಲಿ, ಏರ್ ಇಂಡಿಯಾ ವಿಮಾನ ಪತನ ಕುರಿತ ಪ್ರಶ್ನೆಗಳನ್ನು ಮುಂದಿಡುವ ಸಾಧ್ಯತೆಯೇ ಹೆಚ್ಚು.

ಹಲವು ಪ್ರಶ್ನೆ: ವಿಮಾನ ಪತನಗೊಂಡ ವಿಚಾರ ಕುರಿತು ಕೆಲ ಸಂಸದರು ವಿವಿಧ ಪ್ರಶ್ನೆಗಳನ್ನು ಕೇಳಿದ್ದಾರೆ. ವಿಮಾನ ಅಪಘಾತ ತನಿಖಾ ಬ್ಯುರೊ(ಎಎಐಬಿ) ಸಲ್ಲಿಸಿರುವ ಪ್ರಾಥಮಿಕ ವರದಿ ಸೇರಿ ಇತ್ತೀಚಿನ ಬೆಳವಣಿಗೆಗಳನ್ನು ಈ ಪ್ರಶ್ನೆಗಳಲ್ಲಿ ಉಲ್ಲೇಖಿಸಿಲ್ಲ.

‘ಮುಖ್ಯ ತನಿಖಾಧಿಕಾರಿಯನ್ನು ಯಾಕೆ ನೇಮಕ ಮಾಡಿಲ್ಲ’ ಎಂಬುದಾಗಿ ಕಾಂಗ್ರೆಸ್ ಸಂಸದ ಮನೀಷ್ ತಿವಾರಿ ಪ್ರಶ್ನಿಸಿದ್ದಾರೆ.

‘ನಿಯಂತ್ರಕ ಸಂಸ್ಥೆಯ ವೈಫಲ್ಯ ಮತ್ತು ಸುರಕ್ಷತೆ ಗುಣಮಟ್ಟಗಳ ಪರಿಶೀಲನೆಗಾಗಿ ಜಂಟಿ ಸಂಸದೀಯ ಸಮಿತಿ ರಚಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ’ ಎಂಬುದು ತಿವಾರಿ ಅವರ ಮತ್ತೊಂದು ಪ್ರಶ್ನೆ.

ಏರ್ ಇಂಡಿಯಾವನ್ನು ಟಾಟಾ ಸಮೂಹ ತನ್ನ ತೆಕ್ಕೆಗೆ ತೆಗೆದುಕೊಂಡ ನಂತರ ವಿಮಾನಗಳ ಸುರಕ್ಷತೆ ಕುರಿತು ಡಿಜಿಸಿಎಯ ನಿರ್ಲಕ್ಷ್ಯ ವಹಿಸಿದೆ ಎಂದಿರುವ ಡಿಎಂಕೆ ಸಂಸದ ದಯಾನಿಧಿ ಮಾರನ್ ಈ ಕುರಿತು ಪ್ರಶ್ನೆ ಕೇಳಿದ್ದಾರೆ.

ಬಿಜೆಪಿಯ ರಾಜ್ಯಸಭಾ ಸಂಸದ ಅಶೋಕ ಚವಾಣ್ ಅವರಿಗೂ ಸೋಮವಾರ ಪ್ರಶ್ನೆ ಕೇಳಲು ಅವಕಾಶ ಲಭಿಸಿದ್ದರೆ, 24 ಪ್ರಶ್ನೆಗಳಿಗೆ ಲಿಖಿತವಾಗಿ ಉತ್ತರ ನೀಡಲಾಗುತ್ತಿದೆ.


ಸರ್ಕಾರದ ವಿರುದ್ಧ ‘ಇಂಡಿಯಾ’ ತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಜ್ವಲಂತ ಸಮಸ್ಯೆಗಳ ಬಗ್ಗೆ ಸಂಸತ್ತಿನ ಮಳೆಗಾಲ ಅಧಿವೇಶನದಲ್ಲಿ ಒಗ್ಗಟ್ಟಿನಿಂದ ಧ್ವನಿ ಎತ್ತಿ ಕೇಂದ್ರ ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಲು ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಶನಿವಾರ ಸಭೆ ನಡೆಸಿ ಕಾರ್ಯತಂತ್ರ ರೂಪಿಸಿದವು.

ವರ್ಚುವಲ್ ರೂಪದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಆರ್‌ಜೆಡಿ, ಎಸ್‌ಪಿ, ಎನ್‌ಸಿಪಿ-ಎಸ್‌ಪಿ, ಶಿವಸೇನಾ (ಯುಬಿಟಿ), ಜೆಎಂಎಂ, ಸಿಪಿಎಂ, ಸಿಪಿಐ, ಸಿಪಿಐ-ಎಂಎಲ್, ಫಾರ್ವರ್ಡ್ ಬ್ಲಾಕ್, ಐಯುಎಂಎಲ್ ಮತ್ತು ಕೇರಳ ಕಾಂಗ್ರೆಸ್ ಸೇರಿದಂತೆ ಇಪ್ಪತ್ತನಾಲ್ಕು ರಾಜಕೀಯ ಪಕ್ಷಗಳು ಭಾಗವಹಿಸಿದ್ದವು. ಇಂಡಿಯಾ ಮೈತ್ರಿಕೂಟದಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಪಾಲುದಾರ ಅಲ್ಲ ಎಂದು ಪಕ್ಷದ ನಾಯಕರು ಈ ಹಿಂದೆಯೇ ಪ್ರಕಟಿಸಿದ್ದಾರೆ.

ಬಿಹಾರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ, ಪಹಲ್ಗಾಮ್ ದಾಳಿ ಮತ್ತು ಸಿಂಧೂರ ಕಾರ್ಯಾಚರಣೆ ಸೇರಿದಂತೆ ಹಲವಾರು ಪ್ರಮುಖ ವಿಷಯಗಳ ಕುರಿತು ನಾಯಕರು ಚರ್ಚಿಸಿದರು. ಲೋಕಸಭಾ ಚುನಾವಣೆ ಬಳಿಕ ಈ ಪಕ್ಷಗಳ ಉನ್ನತ ನಾಯಕರು ಒಟ್ಟುಸೇರಿ ರಣತಂತ್ರ ರೂಪಿಸಿದ್ದು ಇದೇ ಮೊದಲು.



ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕಾಂಗ್ರೆಸ್ ನಾಯಕ ಪ್ರಮೋದ್ ತಿವಾರಿ, ‘ಸಂಸತ್ತು ಸರಿಯಾಗಿ ಕಾರ್ಯನಿರ್ವಹಿಸಬೇಕೆಂದು ನಾವು ಬಯಸುತ್ತೇವೆ. ವಿರೋಧ ಪಕ್ಷಗಳು ಎತ್ತಿರುವ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಬೇಕೆಂದು ನಮ್ಮ ಅಪೇಕ್ಷೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನಲ್ಲಿ ಹಾಜರಿರಬೇಕು. ವಿರೋಧ ಪಕ್ಷಗಳು ಎತ್ತುವ ಪ್ರಶ್ನೆಗಳಿಗೆ ಅವರು ಉತ್ತರಿಸಬೇಕು’ ಎಂದು ಅವರು ಆಗ್ರಹಿಸಿದರು.

‘ಪಹಲ್ಗಾಮ್ ದಾಳಿ, ಕದನ ವಿರಾಮ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ, ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸೇರಿದಂತೆ ಎಂಟು ಪ್ರಮುಖ ವಿಷಯಗಳನ್ನು ಪ್ರತಿಪಕ್ಷದ ನಾಯಕರು ಸಂಸತ್ತಿನಲ್ಲಿ ಪ್ರಸ್ತಾಪಿಸಲಿದ್ದಾರೆ’ ಎಂದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೇನ್, ಶರದ್ ಪವಾರ್ (ಎನ್‌ಸಿಪಿ–ಎಸ್‌ಪಿ), ಉದ್ಧವ್ ಠಾಕ್ರೆ (ಶಿವಸೇನಾ- ಯುಬಿಟಿ), ಅಭಿಷೇಕ್ ಬ್ಯಾನರ್ಜಿ (ಟಿಎಂಸಿ), ತೇಜಸ್ವಿ ಯಾದವ್ (ಆರ್‌ಜೆಡಿ), ರಾಮ್ ಗೋಪಾಲ್ ಯಾದವ್ (ಎಸ್‌ಪಿ), ತಿರುಚ್ಚಿ ಶಿವ (ಡಿಎಂಕೆ) ಎಂ.ಎ. ಬೇಬಿ, ಡಿ. ರಾಜಾ (ಸಿಪಿಐ), ದೀಪಂಕರ್ ಭಟ್ಟಾಚಾರ್ಯ (ಸಿಪಿಐಎಂಎಲ್) ಮತ್ತಿತರ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

‘ಮೆಟೆ

ಹೆಬ್ಬಾಳ ಮಲ್ಟಿಮೋಡ
ಯೋಜನೆ: ಶೋಭಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಬ್ಬಾಳದಲ್ಲಿ ಮಲ್ಟಿಮೋಡ್ ಟ್ರಾನ್ಸ್‌ಪೋರ್ಟ್ ಹಬ್ ನಿರ್ಮಾಣಕ್ಕಾಗಿ ಭೂಸ್ವಾಧೀನಕ್ಕೆ ಪಡೆದಿರುವ 55 ಎಕರೆಯನ್ನು ಪೂರ್ಣವಾಗಿ ಬಿಎಂಆರ್‌ಸಿಎಲ್‌ಗೆ ನೀಡಬೇಕು’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಹೆಬ್ಬಾಳದಲ್ಲಿ ಬಿಎಂಆರ್‌ಸಿಎಲ್‌ಗೆ ನೀಡಿರುವ ಒಂಬತ್ತು ಎಕರೆ ಪ್ರದೇಶಕ್ಕೆ ಶನಿವಾರ ಭೇಟಿ ನೀಡಿ ಪರಿಶೀಲಿಸಿದ ಅವರು, ‘ಮೆಟ್ರೊ ರೈಲು ನಿಲ್ದಾಣ, ಬಿಎಂಟಿಸಿ ಬಸ್ ಡಿಪೊ, ಉಪನಗರ ರೈಲು ನಿಲ್ದಾಣ, ವಿಮಾನ ನಿಲ್ದಾಣಕ್ಕೆ ಎತ್ತರಿಸಿದ ರಸ್ತೆ ಎಲ್ಲವೂ ಈ ಪ್ರದೇಶದಲ್ಲೇ ನಿರ್ಮಾಣವಾಗಬೇಕಿತ್ತು. ಆದರೆ ರಾಜ್ಯ ಸರ್ಕಾರ ಅಗತ್ಯ ಭೂಮಿಯನ್ನು ನೀಡುತ್ತಿಲ್ಲ’ ಎಂದು ಆರೋಪಿಸಿದರು.

ದುರುಪಯೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಪ್ರೀಂ ಕೋರ್ಟ್ ಆಫ
ಹೆಸರಿನಲ್ಲಿ ನಕಲಿ ಖಾತೆ ತೆರೆಯಲು ಎಕ್ಸ್
ಟ್ವಿಟರ್) ಅನುಮತಿ ನೀಡಿದೆ ಎಂದು ಉ
ಮೂಲಕ ಸಾಮಾಜಿಕ ಮಾಧ್ಯಮ
ಯೋಗವಾಗುತ್ತಿದೆ. ಸಾಮಾಜಿಕ ಮಾಧ
ದುರ್ಬಳಕೆ ತಡೆಯಲು ನಿಯಂತ್ರಣ ಅ
ಎಂದು ಸಾಲಿಸಿಟರ್ ಜನರಲ್ ತುಷಾರ್
ಹೈಕೋರ್ಟ್‌ಗೆ ಅರುಹಿದರು.

‘ಮಾಹಿತಿ ಹಂಚಿಕೆಯನ್ನು ನಿರ್ಬಂಧಿ
ದಿಸೆಯಲ್ಲಿ ಮಾಹಿತಿ ತಂತ್ರ
ಕಾಯ್ದೆ–2000ರ ಕಲಂ 79(3)ರ ಅಡಿ

ನಗರದ ವಿವಿಧೆಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಶನಿವಾರ ಜಿಟಿಜಿಟಿ ಮಳೆಯಾಗಿದ್ದು, ಮಧ್ಯಾಹ್ನದಿಂದ ಆರಂಭವಾದ ಮಳೆ ತಡರಾತ್ರಿವರೆಗೂ ಸುರಿಯಿತು.

ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ಇತ್ತು. ಕೆಲವೆಡೆ ತುಂತುರು ಮಳೆ ಸುರಿಯತೊಡಗಿತು. ಮಧ್ಯಾಹ್ನದ ನಂತರ ವಿಜಯನಗರ, ದೀಪಾಂಜಲಿ ನಗರ, ಚಂದ್ರಾಲೇಔಟ್, ಹೊಸಕೆರೆಹಳ್ಳಿ, ಗಾಯತ್ರಿ ನಗರ, ಮಲ್ಲೇಶ್ವರ,

ಐಬಿಎಂ ಪ್ರವೇಶ

ಬೆಂಗಳೂರು: 2025-26ನೇ ಶೈಕ್ಷಣಿಕ
ಸ್ನಾತಕೋತ್ತರ ಪದವಿ ಪಡೆಯಲು ಬಯಸ
ಐಬಿಎಂ ಗ್ಲೋಬಲ್ ಪ್ರವೇಶ ಪರೀಕ್ಷೆ ಪ್ರಾರ

ಬೆಂಗಳೂರಿನ ಎಸ್–ವ್ಯಾಸ ಡೀಮ್ಡ್-
ಮತ್ತು ಎಂ.ಎಸ್‌ಸಿ ಕಂಡಪ್ಯೂಟರ್ ಸೈನ್ಸ್
ಕೆಯಲ್ಲಿ ತೊಡಗಿಸಿಕೊಳ್ಳುವಿಕೆಯ ಈ ಮಾ
ಮೊದಲ ವಿಶ್ವವಿದ್ಯಾಲಯವಾಗಿದೆ.

ಐಬಿಎಂ ಗ್ಲೋಬಲ್ ಪ್ರವೇಶ ಪರೀಕ
ಎಂ.ಎಸ್‌ಸಿ ಕಂಪ್ಯೂಟರ್ ಸೈನ್ಸ್‌ಗೆ ಪ್ರವೇ
ಮಾಡಿಕೊಡಲಿದೆ. ಈ ಪರೀಕ್ಷೆಯ ಮ
ಐಬಿಎಂನ ಭವಿಷ್ಯದ ಪಠ್ಯಕ್ರಮದೊಂದಿ
ಕಾರ್ಯಕ್ರಮಗಳಿಗೆ ದಾಖಲಾಗಬಹುದು.

ಕೆಂಗೇರಿಯ ಸತ್ವ ಗ್ಲೋಬಲ್ ಸಿಟಿ ಟೆಕ್
ಐಬಿಎಂ ಕ್ಯೂ2ಡಿ ಮಾಸ್ಟರ್ಸ್ ಪ್ರೊಗ್ರಾಮ್

ಶ್ರೀನಾಥ್ ಜೋಶಿ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ಸರ್ಕಾರಿ ನೌಕರರಿಂದ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಶಿ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಲೋಕಾಯುಕ್ತ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಶ್ರೀನಾಥ್ ಜೋಶಿ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ನಡೆಸಿ ಜುಲೈ 16ರಂದು ಕಾಯ್ದಿರಿಸಿದ್ದ ಆದೇಶವನ್ನು ಲೋಕಾಯುಕ್ತ ನ್ಯಾಯಾಲಯದ ನ್ಯಾಯಾಧೀಶ ಕೆ.ಎಂ.ರಾಧಾಕೃಷ್ಣ ಶುಕ್ರವಾರ ಪ್ರಕಟಿಸಿದರು ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ.

‘ಭ್ರಷ್ಟ ಅಧಿಕಾರಿಗಳ ವಿರುದ್ಧ ನಡೆಸಲಾಗುವ ದಾಳಿಗಳನ್ನು ಹೆಸರಿಸಿ ಸರ್ಕಾರಿ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುವ ಮೂಲಕ ಹಾಗೂ ದಾಳಿಗಳ ಕುರಿತು ಮುಂಚಿತವಾಗಿಯೇ ಮಾಹಿತಿಯನ್ನು ಸೋರಿಕೆ ಮಾಡುವ ಮುಖಾಂತರ ನಿಂಗಪ್ಪ ಅಪರಾಧ ಎಸಗಿದ್ದಾರೆ’ ಎಂದು ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದ್ದು, ಅವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 7ಎ ಮತ್ತು 7ಎ ಅಡಿ ಪ್ರಕರಣ ದಾಖಲಿಸಲಾಗಿದೆ.

ಸರ್ಕಾರದ ಸಾಧನೆ ತಿಳಿಸುವ ಸಮಾವೇಶ

ಹುಬ್ಬಳ್ಳಿ: ‘ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ಸಮಾವೇಶ ಯಾರ ಶಕ್ತಿ ಪ್ರದರ್ಶನದ ವೇದಿಕೆಯಲ್ಲ. ಅದು ಸರ್ಕಾರದ ಸಾಧನೆಯನ್ನು ಜನರಿಗೆ ತಿಳಿಸುವ ಸಮಾವೇಶ’ ಎಂದು ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

ಶನಿವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ನಾಡಿನಾದ್ಯಂತ ಸಿದ್ದರಾಮಯ್ಯರಿಗೆ ಜನಪ್ರಿಯತೆ ಇದೆ. ಅವರ ವರ್ಚಸ್ಸು ಕಂಡು ವಿಪಕ್ಷದವರಿಗೆ ಭಯವಾಗಿದೆ’ ಎಂದು ಹೇಳಿದರು.

‘ವೇದಾಂತ ಕುರಿತ ವೈಸ್‌ರಾಯ್ ವರದಿಗೆ ವಿಶ್ವಾಸಾರ್ಹತೆ ಇಲ್ಲ’


ಡಿ.ವೈ. ಚಂದ್ರಚೂಡ್

ನವದೆಹಲಿ (ಪಿಟಿಐ): ವೇದಾಂತ ಸಮೂಹದ ಬಗ್ಗೆ ಅಮೆರಿಕದ ಶಾರ್ಟ್ ಸೆಲ್ಲರ್ ‘ವೈಸ್‌ರಾಯ್ ರಿಸರ್ಚ್’ ಸಂಸ್ಥೆ ಸಿದ್ಧಪಡಿಸಿರುವ ವರದಿಯು ವಿಶ್ವಾಸಾರ್ಹತೆಯನ್ನು ಹೊಂದಿಲ್ಲ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ಈ ವರದಿಯ ವಿಚಾರವಾಗಿ ಕಾನೂನಿನ ಅಡಿ ಪರಿಹಾರ ಕ್ರಮಕ್ಕೆ ಮುಂದಾಗಲು ವೇದಾಂತ ಸಮೂಹಕ್ಕೆ ಅವಕಾಶ ಇದೆ ಎಂದು ಅವರು ಅಭಿಪ್ರಾಯ ನೀಡಿದ್ದಾರೆ.

ವೇದಾಂತ ಸಮೂಹವು ‘ನಿರ್ವಹಿಸಲು ಸಾಧ್ಯವಾಗದಂತಹ ಸಾಲದ ನೆಲಗಟ್ಟಿನ ಮೇಲೆ ಇಸ್ಪೀಟಿನ ಎಲೆಗಳಿಂದ ಕಟ್ಟಿರುವ ಮನೆಯಂತೆ ಇದೆ’ ಎಂದು ವೈಸ್‌ರಾಯ್ ರಿಸರ್ಚ್ ಸಂಸ್ಥೆಯು ವರದಿ ಪ್ರಕಟಿಸಿತ್ತು. ಅಲ್ಲದೆ, ವೈಸ್‌ರಾಯ್ ರಿಸರ್ಚ್ ಸಂಸ್ಥೆಯು ವೇದಾಂತ ರಿಸೋರ್ಸಸ್‌ನ ಸಾಲಪತ್ರಗಳನ್ನು ಶಾರ್ಟ್ ಸೆಲ್ಲಿಂಗ್‌ಗೆ ಸಿದ್ಧಪಡಿಸಿ ಕೊಂಡಿತ್ತು. ಈ ವರದಿಗೆ ಸಂಬಂಧಿಸಿದಂತೆ ಸ್ವತಂತ್ರವಾದ ಕಾನೂನು ಅಭಿಪ್ರಾಯ ನೀಡಬೇಕು ಎಂದು ವೇದಾಂತ ಸಮೂಹವು ನ್ಯಾಯಮೂರ್ತಿ ಚಂದ್ರಚೂಡ್ ಅವರನ್ನು ಕೋರಿತ್ತು.

‘ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಷೇರು, ಬಾಂಡ್‌ಗಳ ಶಾರ್ಟ್ ಸೆಲ್ಲಿಂಗ್ ವಹಿವಾಟಿನಲ್ಲಿ ತೊಡಗಿಕೊಂಡು, ನಂತರ ಅಂತಹ ಕಂಪನಿಗಳ ಬಗ್ಗೆ ತಪ್ಪುದಾರಿಗೆ ಎಳೆಯುವ ವರದಿ ಪ್ರಕಟಿಸಿ, ಅದರಿಂದ ಮಾರುಕಟ್ಟೆಯ ಮೇಲೆ ಆಗುವ ಪರಿಣಾಮದ ಸಂದರ್ಭದಲ್ಲಿ ಅಕ್ರಮವಾಗಿ ಲಾಭ ಮಾಡಿಕೊಳ್ಳುವ ಚರಿತ್ರೆಯು ಈ ಸಂಸ್ಥೆಗೆ ಇದೆ’ ಎಂದು ನ್ಯಾಯಮೂರ್ತಿ ಚಂದ್ರಚೂಡ್ ಅಭಿಪ್ರಾಯ ನೀಡಿದ್ದಾರೆ ಎಂದು ವೇದಾಂತ ಸಮೂಹವು ಷೇರುಪೇಟೆಗೆ ಮಾಹಿತಿ ನೀಡಿದೆ.

ವೇದಾಂತ ಸಮೂಹದ ಬಗ್ಗೆ ವೈಸ್‌ರಾಯ್ ರಿಸರ್ಚ್ ಪ್ರಕಟಿಸಿರುವ ವರದಿಯು ಗಂಭೀರ ಆರೋಪಗಳನ್ನು ಒಳಗೊಂಡಿದೆ, ವೇದಾಂತ ಸಮೂಹದ ವಹಿವಾಟುಗಳಿಗೆ ಹಾಗೂ ಪ್ರತಿಷ್ಠೆಗೆ ಕೆಡುಕು ಉಂಟುಮಾಡುವಂತೆ ಇದೆ ಎಂದು ಅವರು ಅಭಿಪ್ರಾಯ ನೀಡಿದ್ದಾರೆ.

ಬಳ್ಳಾರಿ ಜೀನ್ಸ್ ಪಾರ್ಕ್ ನಿರ್ಮಾಣ ಶೀಘ್ರ

500ಕ್ಕೂ ಅಧಿಕ ಘಟಕಗಳಿಗೆ ನೆಲೆ
‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೂಚನೆ ಅನುಸಾರ ಕ್ರಮ’

• ಹರಿಶಂಕರ್ ಆರ್.

ಬಳ್ಳಾರಿ: ಬಳ್ಳಾರಿಗೆ ನಗರಕ್ಕೆ ಹೊಂದಿಕೊಂಡಿರುವ ಸಂಜೀವರಾಯನ ಕೋಟೆ ಬಳಿ ‘ಜೀನ್ಸ್ ಪಾರ್ಕ್’ ಸ್ಥಾಪಿಸುವ ಕಾರ್ಯ ವೇಗ ಪಡೆದಿದೆ. ಇದಕ್ಕೆ ಪೂರಕವಾಗಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ಕಾರ್ಯಾದೇಶ ಸಿಕ್ಕಿದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) 154 ಎಕರೆ ಜಮೀನು ಸ್ವಾಧೀನಗೊಂಡಿದೆ. ಜಮೀನು ನೀಡಿದ ರೈತರಿಗೆ ಎಕರೆಗೆ ₹40 ಲಕ್ಷದಂತೆ ಪರಿಹಾರ ಪಾವತಿಯಾಗಿದೆ.

ಜೀನ್ಸ್ ಪಾರ್ಕ್‌ನಲ್ಲಿ 500ಕ್ಕೂ ಹೆಚ್ಚು ಘಟಕಗಳಿಗೆ ನೆಲೆ ಒದಗಿಸಲು ಕೆಐಎಡಿಬಿ ಯೋಜನೆ ರೂಪಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ 500ಕ್ಕೂ ಹೆಚ್ಚು ಜೀನ್ಸ್ ಉದ್ದಿಮೆದಾರರು ಇದ್ದಾರೆ. ಪಾರ್ಕ್ ವ್ಯಾಪ್ತಿಯಲ್ಲಿ ಉದ್ಯಮ ಆರಂಭಿಸಲು ಬಯಸಿದರೆ, ಅವರಿಗೆ ನಿವೇಶನ ಒದಗಿಸಲಾಗುತ್ತದೆ.

‘ಎಲ್ಲ ಮೂಲಸೌಲಭ್ಯಗಳು ಒಳಗೊಂಡ ಸುವ್ಯವಸ್ಥಿತ ಜೀನ್ಸ್ ಪಾರ್ಕ್‌ನಲ್ಲಿ ಕಡಿಮೆ ದರದಲ್ಲಿ ನಿವೇಶನ ಹಂಚಿಕೆ ಆಗಬೇಕು. ಈ ನಿಟ್ಟನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೂಚಿಸಿದ್ದು, ಅದಕ್ಕೆ ತಕ್ಕಂತೆ ಸರ್ಕಾರ ನಡೆದುಕೊಳ್ಳುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಸಾಮಾನ್ಯ ಸೌಲಭ್ಯ ಕೇಂದ್ರ: ಜೀನ್ಸ್ ಉದ್ಯಮದಲ್ಲಿ ಸ್ಟಿಚ್ಚಿಂಗ್, ವಾಷಿಂಗ್, ಮಾರಾಟ ಸೇರಿ ಹಲವು ಹಂತಗಳಿವೆ. ಇವುಗಳನ್ನೆಲ್ಲ ಒಂದೇ ಸೂರಿನಡಿ ತರುವ ಯೋಜನೆಯಿದೆ. ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮಾರುಕಟ್ಟೆ ಸೌಲಭ್ಯ, ಅನಾರೋಗ್ಯಕರ ದರ ಪೈಪೋಟಿ ತಪ್ಪಿಸುವ ಪ್ರಸ್ತಾವಗಳು ಯೋಜನೆಯಲ್ಲಿ ಉಲ್ಲೇಖವಾಗಿದೆ ಎನ್ನಲಾಗಿದೆ.

‘ಎಲ್ಲ ಸಿದ್ಧತೆಗಳೂ ಆಗಿದ್ದು, ಕೆಲವೇ ದಿನಗಳಲ್ಲಿ ಕೆಲಸವೂ ಆರಂಭವಾಗಲಿದೆ. ಅಡಿಗಲ್ಲು ಕಾರ್ಯಕ್ರಮಕ್ಕೆ ಸರ್ಕಾರವು ರಾಹುಲ್ ಗಾಂಧಿ ಅವರನ್ನೇ ಕರೆಸುವ ಪ್ರಯತ್ನ ನಡೆಸಿದೆ. ಒಂದರಿಂದ ಒಂದೂವರೆ ವರ್ಷದಲ್ಲಿ ಕಾಮಗಾರಿ ಪೂರ್ಣವಾಗುವ ವಿಶ್ವಾಸವಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೀನ್ಸ್ ಪಾರ್ಕ್, ರಾಹುಲ್ ಪ್ರಮಾಣ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬಳ್ಳಾರಿಯಲ್ಲಿ ಭಾರತ್ ಜೋಡೊ ಯಾತ್ರೆ ಕೈಗೊಂಡಿದ್ದ ವೇಳೆ, ‘ಬಳ್ಳಾರಿಯಲ್ಲಿ ಜೀನ್ಸ್ ಪಾರ್ಕ್ ಆರಂಭಿಸಲಾಗುವುದು. ಜಗತ್ತಿನಲ್ಲಿ ಬಳಕೆ ಆಗುವ ಜೀನ್ಸ್ ಮೇಲೆ ‘ಮೇಡ್ ಇನ್ ಬಳ್ಳಾರಿ’ ಎಂದು ಬರೆದಿರುವಂತೆ ಮಾಡುತ್ತೇವೆ’ ಎಂದಿದ್ದರು.

ಅದಾದ ಬಳಿಕ 2024ರ ರಾಜ್ಯ ಬಜೆಟ್‌ನಲ್ಲೂ ಈ ಬಗ್ಗೆ ಉಲ್ಲೇಖಿಸಲಾಗಿತ್ತು. ಲೋಕಸಭಾ ಚುನಾವಣೆ ಹೊತ್ತಲ್ಲೂ ರಾಹುಲ್ ಗಾಂಧಿ ಮತ್ತೊಮ್ಮೆ ಜೀನ್ಸ್ ಪಾರ್ಕ್‌ನ ಭರವಸೆ ನೀಡಿದ್ದರು.

ಜೀನ್ಸ್ ಪಾರ್ಕ್ ನಿರ್ಮಾಣಕ್ಕೆ ಭೂಸ್ವಾಧೀನ ಪೂರ್ಣಗೊಂಡಿದೆ. ಪರಿಸರ ಅನುಮೋದನೆ ಪ್ರಾಥಮಿಕ ಹಂತದ ಒಪ್ಪಿಗೆ ಸಿಕ್ಕಿದೆ. ಕಾರ್ಯಾದೇಶ ಸಿಕ್ಕಿದೆ. ಶೀಘ್ರ ಕೆಲಸ ಆರಂಭವಾಗಲಿದೆ

ಗೋವಿಂದ ನಾಯಕ್,
ಕಾರ್ಯನಿರ್ವಾಹಕ ಎಂಜಿನಿಯರ್, ಕೆಐಎಡಿಬಿ, ಬಳ್ಳಾರಿ ವಲಯ

ಕೆಐಎಡಿಬಿಯಿಂದ ನೀರು ಸಂಸ್ಕರಣಾ ಘಟಕ

ಬಳ್ಳಾರಿ ಜಿಲ್ಲೆಯಲ್ಲಿರುವ ಜೀನ್ಸ್ ಡೈಯಿಂಗ್ ಘಟಕಗಳು ಪ್ರತ್ಯೇಕ ಕಲುಷಿತ ನೀರು ಸಂಸ್ಕರಣ ಘಟಕಗಳನ್ನು (ಇಟಿಪಿ) ಮತ್ತು ಸಾಮಾನ್ಯ ಸಂಸ್ಕರಣಾ ಘಟಕಗಳನ್ನು (ಸಿಇಟಿಪಿ) ಮಾಡಿಕೊಂಡಿಲ್ಲ. ಕಲುಷಿತ ನೀರನ್ನು ಪರಿಸರಕ್ಕೆ ಬಿಟ್ಟಿವೆ. ಪರಿಣಾಮವಾಗಿ ಮಾಲಿನ್ಯ ಹೆಚ್ಚಿದೆ.

‘ಹೊಸ ಜೀನ್ಸ್ ಪಾರ್ಕ್‌ನಲ್ಲಿ ಕೆಐಎಡಿಬಿಯಿಂದ ಸಂಸ್ಕರಣಾ ಘಟಕ ನಿರ್ಮಿಸಲಾಗುವುದು. ಹೀಗಾಗಿ ಪ್ರತ್ಯೇಕ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿಕೊಳ್ಳುವ ಅಗತ್ಯ ಇರುವುದಿಲ್ಲ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಂಆರ್‌ಪಿಎಲ್: ₹272 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ



ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) 2025–26ರ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ₹272 ಕೋಟಿ ನಷ್ಟ ಅನುಭವಿಸಿದೆ.

ಕಂಪನಿಯ ಕ್ರೋಢೀಕೃತ ಆರ್ಥಿಕ ಫಲಿತಾಂಶಕ್ಕೆ ನಿರ್ದೇಶಕ ಮಂಡಳಿ ಶುಕ್ರವಾರ ಅನುಮೋದನೆ ನೀಡಿದೆ. ಈ ಅವಧಿಯಲ್ಲಿ ₹20,988 ಕೋಟಿ ಆದಾಯ ಗಳಿಸಿದೆ. ಕಳೆದ ವರ್ಷ ಈ ಅವಧಿಯಲ್ಲಿ ₹27,289 ಕೋಟಿ ಆದಾಯ ಗಳಿಸಿತ್ತು. ಕಳೆದ ವರ್ಷ ಮೊದಲ ತ್ರೈಮಾಸಿಕದಲ್ಲಿ ಕಂಪನಿ ₹66 ಕೋಟಿ ಲಾಭ ಗಳಿಸಿತ್ತು ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಆರ್ಥಿಕ ವರ್ಷದ ಮೊದಲ ಅವಧಿಯಲ್ಲಿ ಕಚ್ಚಾ ತೈಲ ಸಂಸ್ಕರಣೆಯ ಒಟ್ಟು ಗುರಿ (ಜಿಆರ್‌ಎಂ) ಬ್ಯಾರಲ್ ಒಂದಕ್ಕೆ 3.88 ಡಾಲರ್‌ಗೆ ತಲುಪಿದೆ. ಕಳೆದ ಬಾರಿ ಈ ಪ್ರಮಾಣ 4.70 ಡಾಲರ್ ಆಗಿತ್ತು. ಕಳೆದ ಬಾರಿ ಮೊದಲ ಅವಧಿಯಲ್ಲಿ 4.35 ಮಿಲಿಯನ್ ಟನ್ ಕಚ್ಚಾತೈಲ ಸಂಸ್ಕರಣೆ ಮಾಡಿದ್ದರೆ ಈ ಬಾರಿ 3.53 ಮಿಲಿಯನ್ ಟನ್ ಮಾತ್ರ ಸಂಸ್ಕರಿಸಲಾಗಿದೆ.

ಈ ವರ್ಷದ ಏಪ್ರಿಲ್‌ನಲ್ಲಿ ಎಂಆರ್‌ಪಿಎಲ್ ದಾಖಲೆಯ 1,512 ಸಾವಿರ ಟನ್ (ಟಿಎಂಟಿ) ಕಚ್ಚಾ ತೈಲವನ್ನು ಸಂಸ್ಕರಿಸಿದೆ. ಈ ಹಿಂದಿನ ಗರಿಷ್ಠ ಪ್ರಮಾಣದ ಸಂಸ್ಕರಣೆ 2022ರ ಏಪ್ರಿಲ್‌ನಲ್ಲಿ ಮಾಡಲಾಗಿತ್ತು. ಆಗ 1,481 ಟಿಎಂಟಿ ಸಂಸ್ಕರಣೆ ಆಗಿತ್ತು. ಕಂಪನಿ ಒಂದನೇ ಹಂತದ ಪ್ರಮುಖ ಘಟಕಗಳನ್ನು ಮುಚ್ಚುವ ಪ್ರಕ್ರಿಯೆ ಪೂರ್ಣಗೊಳಿಸಿದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100ಕ್ಕೆ	₹580
	12ಕ್ಕೆ	₹80
ಮೈಸೂರು:	100ಕ್ಕೆ	₹590

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹26700-26700
ಮಾಲೂರು	₹10000–13000

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹350-555
ದ್ವಿತಳಿ (ಬಿ.ವಿ)	₹382-708

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹207
ಆರ್‌ಎಸ್‌ಎಸ್-5	₹201
ಗುಡ್ ಲಾಟ್	₹185

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1450 (1450)
ಸೋಯಾ (ರಿಫೈನ್ಡ್)	₹1225 (1230)
ಸೂರ್ಯಕಾಂತಿ (ರಿಫೈನ್ಡ್)	₹1355 (1360)
ಪಾಮೋಲಿನ್	₹1195 (1200)

ಐಸಿಐಸಿಐ ಬ್ಯಾಂಕ್ ಲಾಭ ಶೇ 15ರಷ್ಟು ಏರಿಕೆ



ಮುಂಬೈ (ರಾಯಿಟರ್ಸ್): ದೇಶದ ಖಾಸಗಿ ವಲಯದ ಎರಡನೆಯ ಅತಿದೊಡ್ಡ ಬ್ಯಾಂಕ್ ಆಗಿರುವ ಐಸಿಐಸಿಐ ಬ್ಯಾಂಕ್‌ನ ಜೂನ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಶೇಕಡ 15.5ರಷ್ಟು ಹೆಚ್ಚಳ ಆಗಿದೆ. ಇದು ಮಾರುಕಟ್ಟೆ ತಜ್ಞರ ಅಂದಾಜಿಗಿಂತ ಹೆಚ್ಚು.

ಸಾಲ ನೀಡಿಕೆಯು ಆರೋಗ್ಯಕರ ಮಟ್ಟದಲ್ಲಿ ಹೆಚ್ಚಳ ಕಂಡಿರುವುದು ಹಾಗೂ ಅದರ ಪರಿಣಾಮವಾಗಿ ಸಾಲ ನೀಡಿಕೆಯಿಂದ ಬರುವ ವರಮಾನವು ಹೆಚ್ಚಳ ಕಂಡಿರುವುದು ಲಾಭದ ಏರಿಕೆಗೆ ನೆರವಾಗಿದೆ.

ಬ್ಯಾಂಕ್‌ನ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ₹12,768 ಕೋಟಿಗೆ ತಲುಪಿದೆ. ಇದು ಮಾರುಕಟ್ಟೆ ತಜ್ಞರ ನಿರೀಕ್ಷೆಯಾಗಿದ್ದ ₹12,024 ಕೋಟಿಗಿಂತ ಹೆಚ್ಚು. ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ಶೇ 10.6ರಷ್ಟು ಹೆಚ್ಚಾಗಿದ್ದು, ₹21,635 ಕೋಟಿಗೆ ತಲುಪಿದೆ.

ಬ್ಯಾಂಕಿಂಗ್ ಉದ್ಯಮದಾದ್ಯಂತ ಸಾಲ ನೀಡಿಕೆಯಲ್ಲಿನ ಹೆಚ್ಚಳ ಪ್ರಮಾಣವು ಮಂದಗತಿಗೆ ತಿರುಗಿದ್ದರೂ ಐಸಿಐಸಿಐ ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣದಲ್ಲಿ ಶೇ 12ರಷ್ಟು ಹೆಚ್ಚಳ ದಾಖಲಾಗಿದೆ. ಉದ್ದಿಮೆಗಳಿಗೆ ನೀಡುವ ಸಾಲಗಳ ಪ್ರಮಾಣದಲ್ಲಿ ಶೇ 29.7ರಷ್ಟು ಹೆಚ್ಚಳ ಆಗಿರುವುದು ಇದಕ್ಕೆ ಮುಖ್ಯ ಕಾರಣ.

ಬ್ಯಾಂಕಿನ ವಸೂಲಾಗದ ಸಾಲಗಳ ಪ್ರಮಾಣದಲ್ಲಿ ಸುಧಾರಣೆ ಕಂಡುಬಂದಿದೆ. ಒಟ್ಟು ಎನ್‌ಪಿಎ ಪ್ರಮಾಣವು ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 2.15ರಷ್ಟು ಇದ್ದಿದ್ದು ಈ ಬಾರಿ ಶೇ 1.67ಕ್ಕೆ ಇಳಿಕೆ ಕಂಡಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಇಳಿಕೆ

ಮುಂಬೈ (ಪಿಟಿಐ/ರಾಯಿಟರ್ಸ್): ಎಚ್‌ಡಿಎಫ್‌ಸಿ ಬ್ಯಾಂಕ್‌ನ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ಶೇ 1.31ರಷ್ಟು ಇಳಿಕೆ ಕಂಡು ₹16,258 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ಲಾಭವು ₹16,475 ಕೋಟಿ ಆಗಿತ್ತು. ಜೂನ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ವರಮಾನವು ₹99,200 ಕೋಟಿಗೆ ತಲುಪಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹83,701 ಕೋಟಿ ಇತ್ತು.

ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣವು ಶೇ 1.4ಕ್ಕೆ ಹೆಚ್ಚಳ ಕಂಡಿದೆ. ಷೇರುದಾರರಿಗೆ ಪ್ರತಿ ಷೇರಿಗೆ ಒಂದು ಬೋನಸ್ ಷೇರು ನೀಡುವ ಪ್ರಸ್ತಾವಕ್ಕೆ ಆಡಳಿತ ಮಂಡಳಿ ಒಪ್ಪಿಗೆ ನೀಡಿದೆ.

ಅಲ್ಲದೆ, ಪ್ರತಿ ಷೇರಿಗೆ ₹5ರಷ್ಟು ವಿಶೇಷ ಲಾಭಾಂಶ ನೀಡಲು ಕೂಡ ಬ್ಯಾಂಕ್ ತೀರ್ಮಾನಿಸಿದೆ.

‘ಭಾರತ–ಇಎಫ್‌ಟಿಎ ವ್ಯಾಪಾರ ಒಪ್ಪಂದ ಅ. 1ರಿಂದ ಜಾರಿ’

ಮುಂಬೈ (ಪಿಟಿಐ): ‘ಭಾರತ ಮತ್ತು ಯುರೋಪಿನ ಮುಕ್ತ ವಾಣಿಜ್ಯ ಒಕ್ಕೂಟದ (ಇಎಫ್‌ಟಿಎ) ಸದಸ್ಯ ರಾಷ್ಟ್ರಗಳ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

2024ರ ಮಾರ್ಚ್ 10ರಂದು ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕೆ (ಟಿಇಪಿಎ) ಸಹಿ ಹಾಕಲಾಗಿತ್ತು. ಈ ಒಕ್ಕೂಟವು ಐಸ್‌ಲ್ಯಾಂಡ್, ಲೀಚ್ಟೆನ್‌ಸ್ಟೀನ್, ನಾರ್ವೆ ಮತ್ತು ಸ್ವಿಟ್ಜರ್ಲೆಂಡ್ ಒಳಗೊಂಡಿದೆ.

ಈ ಒಪ್ಪಂದದ ಅಡಿ ಒಕ್ಕೂಟದ ರಾಷ್ಟ್ರಗಳು ಮುಂದಿನ 15 ವರ್ಷದಲ್ಲಿ ₹8.61 ಲಕ್ಷ ಕೋಟಿ (100 ಬಿಲಿಯನ್ ಡಾಲರ್) ಮೊತ್ತದ ಹೂಡಿಕೆಯನ್ನು ಭಾರತದಲ್ಲಿ ಮಾಡಲು ನಿರ್ಧರಿಸಿವೆ. ಜೊತೆಗೆ ಇದು 10 ಲಕ್ಷ ನೇರ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ ಎಂದು ಶನಿವಾರ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಒಪ್ಪಂದದಿಂದಾಗಿ ಸ್ವಿಸ್ ವಾಚುಗಳು, ಚಾಕೊಲೇಟ್, ಬಿಸ್ಕತ್ತುಗಳು, ಗಡಿಯಾರ ಸೇರಿದಂತೆ ಉನ್ನತ ಗುಣಮಟ್ಟದ ವಸ್ತುಗಳು ಕಡಿಮೆ ಅಥವಾ ಶೂನ್ಯ ಸುಂಕದಲ್ಲಿ ದೇಶಿ ಗ್ರಾಹಕರಿಗೆ ದೊರೆಯಲಿವೆ. ಅಲ್ಲದೆ, ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರಗಳು ಸಹ ದೊರೆಯಲಿದೆ ಎಂದು ಹೇಳಿದ್ದಾರೆ. ದೇಶದ ಸೇವಾ ವಲಯಕ್ಕೂ ಈ ಒಪ್ಪಂದವು ಉತ್ತೇಜನ ನೀಡಲಿದೆ ಎಂದು ತಿಳಿಸಿದ್ದಾರೆ.

2024–25ರ ಆರ್ಥಿಕ ವರ್ಷದಲ್ಲಿ ಭಾರತ ಮತ್ತು ಇಎಫ್‌ಟಿಎನ ದ್ವಿಪಕ್ಷೀಯ ವ್ಯಾಪಾರ ಮೌಲ್ಯವು ₹2.10 ಲಕ್ಷ ಕೋಟಿಯಾಗಿತ್ತು. ಈ ಒಕ್ಕೂಟದ ದೇಶಗಳ ಪೈಕಿ ಸ್ವಿಟ್ಜರ್ಲೆಂಡ್ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ.

48 ಗಂಟೆಯಲ್ಲಿ 2.1 ಲಕ್ಷ ಫೋನ್ ಬುಕಿಂಗ್: ಸ್ಯಾಮ್ಸಂಗ್

ನವದೆಹಲಿ (ಪಿಟಿಐ): ಸ್ಯಾಮ್ಸಂಗ್ ಕಂಪನಿಯ 7ನೇ ತಲೆಮಾರಿನ, ಫೋಲ್ಡ್ ಮಾಡಬಹುದಾದ ಸ್ಮಾರ್ಟ್‌ಫೋನ್‌ಗಳು ಬಿಡುಗಡೆಯಾದ 48 ಗಂಟೆಯಲ್ಲಿ 2.1 ಲಕ್ಷ ಮುಂಗಡ ಬುಕಿಂಗ್ ಆಗಿವೆ.

ಕಂಪನಿಯು ಜುಲೈ 9ರಂದು ಈ ಏಳನೇ ತಲೆಮಾರಿನ ಗ್ಯಾಲಕ್ಸಿ ಝೆಡ್ ಫೋಲ್ಡ್ 7, ಗ್ಯಾಲಕ್ಸಿ ಝೆಡ್ ಫ್ಲಿಪ್ 7 ಮತ್ತು ಗ್ಯಾಲಕ್ಸಿ ಝೆಡ್ ಫ್ಲಿಪ್ ಎಫ್‌ಇ ಆವೃತ್ತಿಯನ್ನು ಭಾರತದಲ್ಲಿ ಬಿಡುಗಡೆ ಮಾಡಿತು.

ಭಾರತದಲ್ಲೇ ತಯಾರಾಗಿರುವ ಈ ಸ್ಮಾರ್ಟ್‌ಫೋನ್‌ಗಳ ಬೆಲೆ ₹89 ಸಾವಿರದಿಂದ ₹2.11 ಲಕ್ಷದವರೆಗೆ ಇದೆ. ಗ್ಯಾಲಕ್ಸಿ ಝೆಡ್ ಫೋಲ್ಡ್ 7 ಆರಂಭಿಕ ಬೆಲೆ ₹1.75 ಲಕ್ಷ. ಗ್ಯಾಲಕ್ಸಿ ಝೆಡ್ ಫ್ಲಿಪ್ 7 ₹1.10 ಲಕ್ಷ ಮತ್ತು ಗ್ಯಾಲಕ್ಸಿ ಝೆಡ್ ಫ್ಲಿಪ್ 7 ಎಫ್‌ಇ ₹89 ಸಾವಿರದಿಂದ ಪ್ರಾರಂಭವಾಗಲಿದೆ ಎಂದು ಕಂಪನಿ ಶನಿವಾರ ತಿಳಿಸಿದೆ.

ಈ ವರ್ಷದ ಆರಂಭದಲ್ಲಿ ಸ್ಯಾಮ್ಸಂಗ್, ಗ್ಯಾಲಕ್ಸಿ ಎಸ್ 25 ಆವೃತ್ತಿಯನ್ನು ಬಿಡುಗಡೆ ಮಾಡಿತ್ತು. ಬಿಡುಗಡೆಯಾದ ಮೂರು ವಾರದಲ್ಲಿ 4.3 ಲಕ್ಷ ಮುಂಗಡ ಬುಕಿಂಗ್ ಸ್ವೀಕರಿಸಿತ್ತು.

ಮುಂಬೈ ಧಾರಣೆ (ಶೇಂಗಾ)	
19-07-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1460 (1460)
ಒಂದು ವಾರದ ಡೆಲಿವರಿ	1455 (1455)
ಪಾಮ್ ವಾರದ ಡೆಲಿವರಿ	1193 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1275)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,800 (97,900)
ಬೆಳ್ಳಿ ಕೆ.ಜಿಗೆ	1,12,300 (1,12,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮೆಟಾ, ಗೂಗಲ್ ಅಧಿಕಾರಿಗಳಿಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ಹಲವು ಕಾನೂನುಬಾಹಿರ ಆನ್‌ಲೈನ್ ಬೆಟ್ಟಿಂಗ್ ವೇದಿಕೆಗಳ ವಿರುದ್ಧ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ), ಈ ಪ್ರಕರಣಗಳ ಜೊತೆ ನಂಟಿನ ಹಣ ಅಕ್ರಮ ವರ್ಗಾವಣೆ ಆರೋಪಗಳಿಗೆ ಸಂಬಂಧಿಸಿ ಮೆಟಾ ಹಾಗೂ ಗೂಗಲ್ ಕಂಪನಿಗಳ ಅಧಿಕಾರಿಗಳಿಗೆ ಸಮನ್ಸ್ ಜಾರಿ ಮಾಡಿದೆ ಎಂದು ಮೂಲಗಳು ಶನಿವಾರ ಹೇಳಿವೆ.

ಇಲ್ಲಿನ ಇ.ಡಿ ಕಚೇರಿಗೆ ಜುಲೈ 21ರಂದು ಹಾಜರಾಗಿ, ಹಣ ಅಕ್ರಮ ವರ್ಗಾವಣೆ ಕಾಯ್ದೆ(ಪಿಎಂಎಲ್‌ಎ) ಅಡಿ ಹೇಳಿಕೆಗಳನ್ನು ದಾಖಲಿಸುವಂತೆ ಉಭಯ ಕಂಪನಿಗಳ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಮನ್ಸ್ ಕುರಿತಂತೆ ಮೆಟಾ ಹಾಗೂ ಗೂಗಲ್ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕಾನೂನು ಬಾಹಿರವಾಗಿ ಬೆಟ್ಟಿಂಗ್ ನಡೆಸುವ ಹಲವು ವೇದಿಕೆಗಳು, ಬೆಟ್ಟಿಂಗ್‌ಗೆ ಸಂಬಂಧಿಸಿದ ಜಾಹೀರಾತುಗಳು ಹಾಗೂ ಲಿಂಕ್‌ಗಳನ್ನು ಸಾಮಾಜಿಕ ಮಾಧ್ಯಮಗಳು ಹಾಗೂ ಆ್ಯಪ್ ಸ್ಟೋರ್‌ಗಳನ್ನು ಅಪ್‌ಲೋಡ್ ಮಾಡುತ್ತಿರುವ ಕುರಿತು ಇ.ಡಿ ತನಿಖೆ ನಡೆಸುತ್ತಿದೆ.

ಕೆಲವು ನಟರು, ಸೆಲೆಬ್ರಿಟಿಗಳು ಹಾಗೂ ಕ್ರೀಡಾಪಟುಗಳ ವಿರುದ್ಧವೂ ಇ.ಡಿ ತನಿಖೆ ಕೈಗೊಂಡಿದೆ. ಇವರಿಗೂ ಸಮನ್ಸ್ ನೀಡುವ ಸಾಧ್ಯತೆ ಇದೆ.

ನೈಜರ್: ಇಬ್ಬರು ಭಾರತೀಯರ ಹತ್ಯೆ

ನಿಯಾಮಿ (ನೈಜರ್) (ಪಿಟಿಐ): ನೈಜರ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಇಬ್ಬರು ಭಾರತೀಯರನ್ನು ಹತ್ಯೆ ಮಾಡಲಾಗಿದ್ದು, ಒಬ್ಬರನ್ನು ಅಪಹರಿಸಲಾಗಿದೆ ಎಂದು ಇಲ್ಲಿನ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ನೈಜರ್‌ನ ರಾಜಧಾನಿ ನಿಯಾಮಿಯಿಂದ ಸುಮಾರು 130 ಕಿ.ಮೀ ದೂರದಲ್ಲಿರುವ ದಾಸ್ಸೊ ಪ್ರದೇಶದಲ್ಲಿ ಜುಲೈ 15ರಂದು ದಾಳಿ ನಡೆದಿದೆ. ನಿರ್ಮಾಣ ಸ್ಥಳವೊಂದಕ್ಕೆ ಕಾವಲಿದ್ದ ಸೇನಾ ತುಕಡಿಯ ಮೇಲೆ ಬಂದೂಕುಧಾರಿ ವ್ಯಕ್ತಿಯೊಬ್ಬ ಗುಂಡಿನ ದಾಳಿ ನಡೆಸಿದ್ದಾನೆ.

5 ಯುದ್ಧವಿಮಾನ ನಾಶ: ಟ್ರಂಪ್

ಒಂದನೇ ಪುಟದಿಂದ...

‘ಭಾರತ ಮತ್ತು ಪಾಕಿಸ್ತಾನ ನಡುವೆ ಸಂಘರ್ಷ ನಡೆದಿದ್ದ ವೇಳೆ, ನಾಲ್ಕು ಅಥವಾ ಐದು ಯುದ್ಧವಿಮಾನಗಳನ್ನು ಹೊಡೆದುರುಳಿಸಲಾಗಿದೆ. ವಾಸ್ತವದಲ್ಲಿ ಐದು ಯುದ್ಧವಿಮಾನಗಳನ್ನು ಹೊಡೆದುರುಳಿಸಿರಬಹುದು’ ಎಂದು ಹೇಳಿದ್ದಾರೆ.

‘ಅಣ್ವಸ್ತ್ರ ಹೊಂದಿರುವ ಎರಡು ದೇಶಗಳು ಪರಸ್ಪರರ ಮೇಲೆ ದಾಳಿ ನಡೆಸುತ್ತಿದ್ದವು. ಆ ರಾಷ್ಟ್ರಗಳ ನಡುವಿನ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ವ್ಯಾಪಾರ ಸಂಬಂಧದ ಮೂಲಕ ಆ ಸಂಘರ್ಷವನ್ನು ನಾವು ಬಗೆಹರಿಸಿದೆವು’ ಎಂದು ಟ್ರಂಪ್ ಹೇಳಿದ್ದಾರೆ.

‘ನೀವು ಪರಸ್ಪರರ ಮೇಲೆ ಕ್ಷಿಪಣಿ, ಅಣ್ವಸ್ತ್ರಗಳಿಂದ ದಾಳಿ ಮಾಡುತ್ತಾ ಇದ್ದಲ್ಲಿ, ನಾವು ಯಾವುದೇ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂಬುದಾಗಿ ಹೇಳಿದ್ದೆ’ ಎಂದಿದ್ದಾರೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತಿಯಾಗಿ, ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಉಗ್ರರ ಅಡಗುದಾಣಗಳನ್ನು ಗುರಿಯಾಗಿಸಿ ಭಾರತ ಮೇ 7ರಂದು ‘ಆಪರೇಷನ್ ಸಿಂಧೂರ’ ಆರಂಭಿಸಿತು. ಮೇ 10ರಂದು ಉಭಯ ದೇಶಗಳು ಸಂಘರ್ಷ ನಿಲ್ಲಿಸಲು ಒಪ್ಪಿಕೊಂಡವು.

ಆದರೆ, ತಾನು ಮಧ್ಯಸ್ಥಿಕೆ ವಹಿಸಿಯೇ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ನಿಲ್ಲಿಸಿದೆ ಎಂದು ಟ್ರಂಪ್ ಮೇ 10ರಂದು ಘೋಷಿಸಿದ್ದರು. ಆಗಿನಿಂದಲೂ ಅವರು ಈ ಹೇಳಿಕೆಯನ್ನು ಪುನರುಚ್ಚರಿಸುತ್ತಲೇ ಇದ್ದಾರೆ.

ಪ್ರಧಾನಿ ಹೇಳಿಕೆಗೆ ಕಾಂಗ್ರೆಸ್ ಆಗ್ರಹ

ಒಂದನೇ ಪುಟದಿಂದ...

ಟ್ರಂಪ್ ಅವರು ಈ ರೀತಿ ಹೇಳುತ್ತಿರುವುದು 24ನೇ ಬಾರಿ. ಹಾಗಾಗಿ, ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಸಂಸತ್‌ನಲ್ಲಿ ಸ್ಪಷ್ಟ ಹೇಳಿಕೆ ನೀಡಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

‘ಭಾರತ ಮತ್ತು ಪಾಕಿಸ್ತಾನ ನಡುವಣ ಸಂಘರ್ಷವನ್ನು ತಾವೇ ನಿಲ್ಲಿಸಿದ್ದಾಗಿ ಟ್ರಂಪ್ ಅವರು ಕಳೆದ 70 ದಿನಗಳಿಂದಲೂ ಹೇಳುತ್ತಲೇ ಇದ್ದಾರೆ. ಈಗ, ಸಂಸತ್‌ನ ಮುಂಗಾರು ಅಧಿವೇಶನ ಆರಂಭಕ್ಕೆ ಎರಡು ದಿನ ಬಾಕಿ ಇವೆ. ಉಭಯ ದೇಶಗಳ ನಡುವಣ ಸಂಘರ್ಷಕ್ಕೆ ಸಂಬಂಧಿಸಿದ ‘ಟ್ರಂಪ್ ಕ್ಷಿಪಣಿ’ಯು ಈಗ 24ನೇ ಬಾರಿ ದಾಳಿ ಮಾಡಿದೆ’ ಎಂದಿದ್ದಾರೆ.

ಪಹಲ್ಗಾಮ್ ದಾಳಿ: ಎಲ್‌ಇಟಿ ಪಾತ್ರ ತಳ್ಳಿಹಾಕಿದ ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ‘ದೇಶದಲ್ಲಿ ಭಯೋತ್ಪಾದನೆಯ ಜಾಲವನ್ನು ಸಂಪೂರ್ಣ ಮಟ್ಟಹಾಕಲಾಗಿದ್ದು, ಸದ್ಯ ನಿಷ್ಕ್ರಿಯಗೊಂಡಿರುವ ಲಷ್ಕರ್ -ಎ- ತಯಬಾ (ಎಲ್‌ಇಟಿ) ಸಂಘಟನೆಯೊಂದಿಗೆ ಭಾರತವು ಪಹಲ್ಗಾಮ್ ದಾಳಿಗೆ ಸಂಬಂಧ ಕಲ್ಪಿಸುತ್ತಿರುವುದು ವಾಸ್ತವಕ್ಕೆ ವಿರುದ್ಧವಾಗಿದೆ’ ಎಂದು ಪಾಕಿಸ್ತಾನ ಶನಿವಾರ ಹೇಳಿದೆ.

ಪಹಲ್ಗಾಮ್ ದಾಳಿಯ ಹೊಣೆ ಹೊತ್ತುಕೊಂಡಿದ್ದ ಲಷ್ಕರ್-ಎ-ತಯಬಾದ ಅಧೀನ ಸಂಘಟನೆ, ಪಾಕಿಸ್ತಾನ ಮೂಲದ ‘ದಿ ರೆಸಿಸ್ಟೆನ್ಸ್ ಫ್ರಂಟ್’ಅನ್ನು (ಟಿಆರ್‌ಎಫ್) ‘ವಿದೇಶಿ ಭಯೋತ್ಪಾದಕ ಸಂಘಟನೆ’ ಎಂದು ಅಮೆರಿಕ ಘೋಷಿಸಿದ ಬೆನ್ನಲ್ಲೇ, ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಈ ಪ್ರಕಟಣೆ ಹೊರಡಿಸಿದೆ.

‘ಪಾಕಿಸ್ತಾನವು ಪರಿಣಾಮಕಾರಿಯಾಗಿ ಮತ್ತು ಸಮಗ್ರವಾಗಿ ಭಯೋತ್ಪಾದನೆಯನ್ನು ನಿಷ್ಕ್ರಿಯಗೊಳಿಸಿದೆ. ಭಯೋತ್ಪಾದಕರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಲಾಗಿದೆ. ಉಗ್ರರ ಗುಂಪುಗಳನ್ನು ನಿರ್ಮೂಲನೆ ಮಾಡಲಾಗಿದ್ದು, ಭಯೋತ್ಪಾದನೆ ವಿರುದ್ಧ ಶೂನ್ಯ ಸಹನೆ ನೀತಿಯನ್ನು ಹೊಂದಿದೆ’ ಎಂದು ಸಚಿವಾಲಯ ಹೇಳಿದೆ.

‘ಪಹಲ್ಗಾಮ್ ದಾಳಿಯ ತನಿಖೆ ಇನ್ನೂ ನಿರ್ಣಾಯಕ ಹಂತಕ್ಕೆ ಬಂದಿಲ್ಲ. ಲಷ್ಕರ್-ಎ-ತಯಬಾ ಜತೆಗೆ ಪಹಲ್ಗಾಮ್ ದಾಳಿಗೆ ಸಂಬಂಧ ಕಲ್ಪಿಸುವುದು ವಾಸ್ತವಕ್ಕೆ ವಿರುದ್ಧವಾದದ್ದು’ ಎಂದಿದೆ.

25 ಕೋಟಿ ಟನ್ ಚಹಾ ರಫ್ತು

ಕೋಲ್ಕತ್ತ (ಪಿಟಿಐ): 2024–25ರ ಆರ್ಥಿಕ ವರ್ಷದಲ್ಲಿ ದೇಶದ ಚಹಾ ರಫ್ತು ಪ್ರಮಾಣ ಶೇ 2.85ರಷ್ಟು ಹೆಚ್ಚಳವಾಗಿದೆ ಎಂದು ಚಹಾ ಮಂಡಳಿ ವರದಿ ಶನಿವಾರ ತಿಳಿಸಿದೆ.

2023-24ರ ಆರ್ಥಿಕ ವರ್ಷದಲ್ಲಿ 25.07 ಕೋಟಿ ಟನ್ ಚಹಾ ರಫ್ತಾಗಿತ್ತು. ಈ ಬಾರಿ 25.78 ಕೋಟಿ ಟನ್ ರಫ್ತಾಗಿದೆ ಎಂದು ತಿಳಿಸಿದೆ.

ಈ ಪೈಕಿ ಉತ್ತರ ಭಾರತದಿಂದ 16.12 ಕೋಟಿ ಟನ್ ಮತ್ತು ದಕ್ಷಿಣ ಭಾರತದಿಂದ 9.66 ಕೋಟಿ ಟನ್ ರಫ್ತಾಗಿದೆ.

2023–24ರ ಆರ್ಥಿಕ ವರ್ಷದಲ್ಲಿ ರಫ್ತಾದ ಪ್ರತಿ ಕೆ.ಜಿ ಚಹಾ ಬೆಲೆ ₹258 ಇತ್ತು. ಇದು ಕಳೆದ ಆರ್ಥಿಕ ವರ್ಷದಲ್ಲಿ ಶೇ 12ರಷ್ಟು ಹೆಚ್ಚಳವಾಗಿ, ₹290ರಂತೆ ರಫ್ತಾಗಿದೆ.

ವಿಶ್ವದ ಅತಿ ದೊಡ್ಡ ಅಣೆಕಟ್ಟು ನಿರ್ಮಾಣಕ್ಕೆ ಚೀನಾ ಚಾಲನೆ

ಬೀಜಿಂಗ್ (ಎಎಫ್‌ಪಿ): ಭಾರತದಲ್ಲಿ ಬ್ರಹ್ಮಪುತ್ರ ಮತ್ತು ಟಿಬೆಟ್‌ನಲ್ಲಿ ಯಾರ್ಲುಂಗ್ ಸಂಗ್ಪೊ ಎಂಬ ಹೆಸರಿನಲ್ಲಿ ಹರಿಯುವ ನದಿಗೆ ವಿಶ್ವದ ಅತಿ ದೊಡ್ಡ ಅಣೆಕಟ್ಟು ನಿರ್ಮಾಣಕ್ಕೆ ಚೀನಾ ಶನಿವಾರ ಚಾಲನೆ ನೀಡಿದೆ.

ಅಣೆಕಟ್ಟು ನಿರ್ಮಿಸಿ ಜಲವಿದ್ಯುತ್ ಉತ್ಪಾದನೆ ಮಾಡುವ ಈ ಯೋಜನೆಯನ್ನು ಚೀನಾದ ಪ್ರಧಾನಿ ಲೀ ಚಿಯಾಂಗ್ ದಕ್ಷಿಣ ಟಿಬೆಟ್‌ನ ನಿಯಾಂಚಿಯಲ್ಲಿ ಉದ್ಘಾಟಿಸಿದರು. ಭಾರತದ ಅರುಣಾಚಲ ಪ್ರದೇಶದ ಗಡಿ ಸಮೀಪ ಇದನ್ನು ನಿರ್ಮಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

‘ದೇಶದಲ್ಲಿ ಶೂನ್ಯ ಇಂಗಾಲ ಹೊರಸೂಸುವಿಕೆ ಗುರಿ ತಲುಪಲು ಮತ್ತು ಟಿಬೆಟ್ ವಲಯದ ಆರ್ಥಿಕ ಪ್ರಗತಿಯ ಮುನ್ನೋಟದೊಂದಿಗೆ, ಚೀನಾವು ಈ ಯೋಜನೆಗೆ ಕಳೆದ ಡಿಸೆಂಬರ್‌ನಲ್ಲಿ ಅನುಮತಿ ನೀಡಿತ್ತು. ಈ ಯೋಜನೆಯಡಿ ಐದು ಜಲವಿದ್ಯುತ್ ಸ್ಥಾವರಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದ್ದು, ಇದಕ್ಕಾಗಿ ಚೀನಾ 167.1 ಬಿಲಿಯನ್ ಡಾಲರ್ (₹14.39 ಲಕ್ಷ ಕೋಟಿ) ಹೂಡಿಕೆ ಮಾಡಲಿದೆ.

ಅಣೆಕಟ್ಟಿನ ಗಾತ್ರದ ಲೆಕ್ಕಾಚಾರದಂತೆ ನದಿಯಿಂದ ದೊಡ್ಡ ಪ್ರಮಾಣದಲ್ಲಿ ನೀರು ಹರಿಸಿದರೆ, ಭಾರತ ಮತ್ತು ಬಾಂಗ್ಲಾದೇಶದಲ್ಲಿ ನದಿಯ ಕೆಳಭಾಗದಲ್ಲಿ ಪ್ರವಾಹ ಸ್ಥಿತಿ ತಲೆದೋರುವ ಸಾಧ್ಯತೆ ಇದೆ ಎನ್ನಲಾಗಿದೆ. ಆದರೆ, ಚೀನಾ ಇದನ್ನು ಅಲ್ಲಗಳೆದಿದೆ. ನದಿ ಕೆಳಭಾಗದ ಜನರ ಸುರಕ್ಷತೆಗೆ ಯಾವುದೇ ಆತಂಕ ಇಲ್ಲ ಎಂದು ಹೇಳಿದೆ.

‘ವಾಲ್ ಸ್ಟ್ರೀಟ್’ ವಿರುದ್ಧ ಟ್ರಂಪ್ ದಾವೆ

ವಾಷಿಂಗ್ಟನ್ (ಎಪಿ): ತಮ್ಮ ಬಗ್ಗೆ ಮಾನಹಾನಿಕರ ವರದಿ ಪ್ರಕಟಿಸಿದ ‘ದಿ ವಾಲ್ ಸ್ಟ್ರೀಟ್ ಜರ್ನಲ್’ ಪತ್ರಿಕೆ ವಿರುದ್ಧ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 10 ಬಿಲಿಯನ್ ಡಾಲರ್ (ಸುಮಾರು ₹86,187 ಕೋಟಿ) ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

ಲೈಂಗಿಕವಾಗಿ ಬಳಸಿಕೊಳ್ಳಲು ಹೆಣ್ಣುಮಕ್ಕಳನ್ನು, ಮಹಿಳೆಯರನ್ನು ಕಳ್ಳಸಾಗಣೆ ಮಾಡುತ್ತಿದ್ದ ಆರೋಪ ಹೊತ್ತಿದ್ದ ಫೈನಾನ್ಶಿಯರ್ ಜೆಫ್ರಿ ಎಪ್‌ಸ್ಟೀನ್ ಅವರೊಂದಿಗೆ ಟ್ರಂಪ್ ಅವರಿಗೆ ಸಂಪರ್ಕ ಇತ್ತು ಎಂದು ‘ದಿ ವಾಲ್ ಸ್ಟ್ರೀಟ್ ಜರ್ನಲ್’ ಪತ್ರಿಕೆ ವರದಿ ಪ್ರಕಟಿಸಿತ್ತು.

ಪತ್ರಿಕೆ ಜೊತೆಯಲ್ಲಿ ಮಾಧ್ಯಮ ಕ್ಷೇತ್ರದ ದೈತ್ಯ ರೂಪರ್ಟ್ ಮರ್ಡೋಕ್ ಅವರ ಮೇಲೆಯೂ ದಾವೆ ಹೂಡಿದ್ದಾರೆ. ‘ಜೆಫ್ರಿ ಎಪ್‌ಸ್ಟೀನ್ ಅವರ ಪ್ರಕರಣದ ದಾಖಲೆಗಳನ್ನು ಬಿಡುಗಡೆ ಮಾಡಬೇಕು’ ಎಂದು ಕೋರಿ ನ್ಯಾಯಾಂಗ ಇಲಾಖೆಯು ಫೆಡರಲ್ ನ್ಯಾಯಾಲಯವನ್ನು ಶುಕ್ರವಾರವಷ್ಟೇ ಕೋರಿತ್ತು.

ಗ್ರೇಟರ್ ನೊಯಿಡಾದಲ್ಲಿನ ಖಾಸಗಿ ವಿಶ್ವವಿದ್ಯಾಲಯದಲ್ಲಿ ಘಟನೆ
ಪ್ರಾಧ್ಯಾಪಕರಿಂದ ಕಿರುಕುಳ: ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ಒಡಿಶಾದಲ್ಲಿ ಕಾಲೇಜು ವಿದ್ಯಾರ್ಥಿನಿಯೊಬ್ಬರು ಕಾಲೇಜು ಆವರಣದಲ್ಲಿಯೇ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿ, ಮೂರು ದಿನಗಳ ಬಳಿಕ ಆಸ್ಪತ್ರೆಯಲ್ಲಿ ಮೃತಪಟ್ಟ ಪ್ರಕರಣದ ಕುರಿತು ಆಕ್ರೋಶ ವ್ಯಕ್ತವಾಗುತ್ತಿರುವ ಹೊತ್ತಿನಲ್ಲಿಯೇ ಇಂಥದ್ದೇ ಘಟನೆ ಗ್ರೇಟರ್ ನೊಯಿಡಾದ ಶಾರದಾ ವಿಶ್ವವಿದ್ಯಾಲಯದಲ್ಲಿ ನಡೆದಿದೆ.

ದಂತ ವೈದ್ಯಕೀಯ ಪದವಿ ಓದುತ್ತಿದ್ದ ವಿದ್ಯಾರ್ಥಿನಿಯೊಬ್ಬರು ಹಾಸ್ಟೆಲ್ ಕೊಠಡಿಯಲ್ಲಿ ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಬ್ಬರು ಪ್ರಾಧ್ಯಾಪಕರು ತನಗೆ ಕಿರುಕುಳ ನೀಡಿದ್ದಾರೆ ಎಂದು ಆಕೆ ಮರಣಪತ್ರದಲ್ಲಿ ಬರೆದಿದ್ದಾರೆ. ಗ್ರೇಟರ್ ನೊಯಿಡಾದಲ್ಲಿ ಈ ಖಾಸಗಿ ವಿಶ್ವವಿದ್ಯಾಲಯವಿದೆ.

‘ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಪ್ರಾಧ್ಯಾಪಕರನ್ನು ಅಮಾನತು ಮಾಡಲಾಗಿದೆ. ಪ್ರಕರಣದ ತನಿಖೆಗೆ ವಿಶ್ವವಿದ್ಯಾಲಯವು ಉನ್ನತ ಮಟ್ಟದ ಸಮಿತಿಯೊಂದನ್ನೂ ರಚಿಸಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಇಬ್ಬರು ಪ್ರಾಧ್ಯಾಪಕರನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

ಸಂತ್ರಸ್ತೆಯ ಪೋಷಕರೊಂದಿಗೆ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಶನಿವಾರ ಮಾತುಕತೆ ನಡೆಸಿತ್ತು. ಪ್ರಕರಣದ ಸಂಬಂಧ ಕ್ರಮ ಕೈಗೊಳ್ಳಲು ಐದು ದಿನಗಳವರೆಗೆ ಅವಕಾಶ ನೀಡಿ ಎಂದು ಪೋಷಕರಲ್ಲಿ ಮಂಡಳಿ ಮನವಿ ಮಾಡಿಕೊಂಡಿತ್ತು ಎನ್ನಲಾಗಿದೆ. ಪ್ರಕರಣದ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ವಿದ್ಯಾರ್ಥಿಗಳು ಕಾಲೇಜು ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಪರೀಕ್ಷೆಯಲ್ಲಿ ಅನುತ್ತೀರ್ಣಗೊಳಿಸುವುದಾಗಿ ನನ್ನ ಮಗಳಿಗೆ ಆ ಪ್ರಾಧ್ಯಾಪಕರು ಬೆದರಿಕೆ ಒಡ್ಡಿದ್ದರು
ಮೃತ ವಿದ್ಯಾರ್ಥಿನಿಯ ತಾಯಿ

ಸಂತ್ರಸ್ತೆ ಹೇಳಿದ್ದೇನು?

‘ಇಬ್ಬರು ಪ್ರಾಧ್ಯಾಪಕರು ಮಾನಸಿಕವಾಗಿ ನನಗೆ ಹಿಂಸೆ ನೀಡಿದ್ದಾರೆ. ನನ್ನನ್ನು ಅವಮಾನಿಸಿದ್ದಾರೆ. ಅವಮಾನ ತಾಳಲಾರದೆ ಬಹಳ ದಿನಗಳಿಂದ ನಾನು ಖಿನ್ನತೆಗೆ ಒಳಗಾಗಿದ್ದೇನೆ. ನನಗಾದ ಹಿಂಸೆಯೇ ಆ ಇಬ್ಬರಿಗೂ ಆಗಬೇಕು. ಇನ್ನಷ್ಟು ದಿನ ನಾನು ಬದುಕಲಾರೆ’ ಎಂದು ವಿದ್ಯಾರ್ಥಿನಿಯು ಮರಣಪತ್ರದಲ್ಲಿ ಬರೆದಿದ್ದಾರೆ.



ರಂಗದ ಮೇಲೆ ಎದೆಯ ಹಣತೆ

ಬುಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರ ಕಥೆ 'ಎದೆಯ ಹಣತೆ'ಯನ್ನು ರಂಗದ ಮೇಲೆ ಪ್ರದರ್ಶಿಸಿತು ಹೆಗ್ಗೋಡಿನ ಜನಮನದಾಟ (9)



ಕಲೆ: ಗುರು ನಾವಳ್ಳಿ

ತಾರೆಗಳ ತೋಟದ ಧ್ರುವತಾರೆ

ಹೆಚ್ಚು ಕಡಿಮೆ ಏಳು ದಶಕ ಕನ್ನಡ ಸೇರಿದಂತೆ ದಕ್ಷಿಣ ಭಾರತದ ಚಿತ್ರರಂಗದಲ್ಲಿ ಮೆರೆದ ಮಹಾನ್ ತಾರೆ ಬಿ.ಸರೋಜಾದೇವಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಹಲವು ಸವಾಲುಗಳನ್ನು ಮೆಟ್ಟಿ, ವಿಭಿನ್ನ ಪಾತ್ರಗಳಲ್ಲಿ ನಟಿಸಿ ಅಪಾರ ಜನಮನ್ನಣೆಯನ್ನೂ ಗಳಿಸಿಕೊಂಡಿದ್ದರು. ಇವರು ಈಗ ನಮ್ಮೊಂದಿಗಿಲ್ಲ. ಆದರೆ, ಅವರ ನೆನಪುಗಳು ಸದಾ ಹಸಿರು...

• ಗಂಗಾಧರ ಮೊದಲಿಯಾರ್

ಚಲನಚಿತ್ರ ಲೋಕದಲ್ಲಿ ಸಾಂಸ್ಕೃತಿಕ ವಿನಿಮಯ, ಕೊಡುಕೊಳ್ಳುವ ಸಂಸ್ಕೃತಿಯೊಂದಿದೆ. ಅದು ತಂತ್ರಜ್ಞಾನವಾಗಿರಬಹುದು, ನಿರ್ದೇಶಕರ ವಲಸೆಯಾಗಿರಬಹುದು, ಕತೆಗಳಾಗಿರಬಹುದು, ನಟ, ನಟಿಯರ ಪರಭಾಷಾ ವಲಸೆಯೂ ಆಗಿರಬಹುದು. ಸಿನಿಮಾ ಲೋಕ ಹೀಗೆ ರಾಜ್ಯ-ಭಾಷೆಗಳ ತಾರತಮ್ಯವಿಲ್ಲದೆ ಪ್ರತಿಭಾನ್ವೇಷಣೆಯ ಮೂಲಕ ಕಲಾವಿದರನ್ನು ಕೈಬೀಸಿ ಕರೆಯುತ್ತದೆ. ಕನ್ನಡ ಚಿತ್ರರಂಗದಲ್ಲಿ ಅಂಬೆಗಾಲಿಟ್ಟು ತಮಿಳು ಚಿತ್ರರಂಗದಲ್ಲಿ ದಾಪುಗಾಲು ಹಾಕಿದ ಬಿ.ಸರೋಜಾದೇವಿ ಅವರು, ಸಿನಿಮಾ ಜಗತ್ತಿನ ಸಾಂಸ್ಕೃತಿಕ ವಿನಿಮಯದ ಪ್ರತೀಕವಾಗಿಯೇ ಇದ್ದರು.

ಬಿ.ಸರೋಜಾದೇವಿ ಅವರು ಪಂಚಭಾಷಾ ತಾರೆಯಾಗಿದ್ದುದೂ, ತಮಿಳಿನಲ್ಲಿ ಅತ್ಯಧಿಕ ಬೇಡಿಕೆಯ ನಟಿಯಾಗಿದ್ದುದು ಪರಂಪರೆಯ ಹಾದಿಯಲ್ಲಿ ನಡೆದು ಬಂದಿರುವ ಸಿನಿಮಾ ಲೋಕದ ವಿದ್ಯಮಾನವೇ ಹೊರತು ಸರೋಜಾದೇವಿಯವರಿಗಾಗಿಯೇ ಸೃಷ್ಟಿಯಾದ ವಿಶೇಷ ಭೂಮಿಕೆಯಾಗಿರಲಿಲ್ಲ. ಕೆಲವರಿಗಷ್ಟೇ ಸಿಗಬಹುದಾದ ಅದ್ಭುತ ಅವಕಾಶಗಳನ್ನು ಅವರು ಸದುಪಯೋಗ ಮಾಡಿಕೊಂಡ ಕಾರಣದಿಂದಲೇ ಅವರು ಪದ್ಮಭೂಷಣದವರೆಗೆ ಬೆಳೆದರು.

ಪ್ರಸ್ತುತ ಸಿನಿಮಾ ಲೋಕದ ವಿದ್ಯಮಾನವನ್ನೇ ಗಮನಿಸಿ. ಕನ್ನಡದ ತಾರೆಯರು ಬೇರೆ ಭಾಷಾ ಚಿತ್ರರಂಗಕ್ಕೆ ತೆರಳಿ ಅಪಾರ ಜನಪ್ರಿಯತೆ ಪಡೆಯುತ್ತಾರೆ. ಅಂತಹ ವಿಶಾಲ ಅವಕಾಶ ಅಲ್ಲಿದೆ. ಸರೋಜಾದೇವಿಯವರು, ಚಿತ್ರರಂಗದಿಂದ ನಿವೃತ್ತರಾಗಿ ವಿಶ್ರಾಂತ ಜೀವನ ನಡೆಸುತ್ತಿರುವಾಗಲೇ ಕನ್ನಡದ ನಟಿ ರಶ್ಮಿಕಾ ಮಂದಣ್ಣ ತೆಲುಗು, ತಮಿಳು, ಹಿಂದಿ ಹೀಗೆ ಬೇರೆ ಭಾಷೆಗಳಲ್ಲಿ ಅತ್ಯಂತ ಜನಪ್ರಿಯತೆ ಪಡೆದು 'ನ್ಯಾಷನಲ್ ಕ್ರಷ್' ಎನಿಸಿಕೊಂಡು ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ. ಕನ್ನಡದವರೇ ಆದ ಐಶ್ವರ್ಯ ರೈ ಹಿಂದಿ ಚಿತ್ರರಂಗದಲ್ಲಿ ನಂಬರ್ ಒನ್ ಸ್ಥಾನಕ್ಕೇರಿದರು. ದೀಪಿಕಾ ಪಡುಕೋಣೆ ಕೂಡ ಕನ್ನಡದ ಮೆಟ್ಟಿಲು ಹತ್ತಿ, ಹಿಂದಿ ಚಿತ್ರರಂಗಕ್ಕೆ ಜಿಗಿದವರು. ಹೀಗೆ ಸಾಲುಸಾಲಾಗಿ ಕನ್ನಡದಿಂದ ವಲಸೆ ಹೋದ ಪ್ರತಿಭೆಗಳು ಬೇರೆ ಭಾಷೆಗಳಲ್ಲಿ ಮಿಂಚುತ್ತಿದ್ದಾರೆ. ದಕ್ಷಿಣ ಭಾರತದ ನಟಿಯರೆಂದರೆ ಹಿಂದಿ ಚಿತ್ರರಂಗದವರಿಗೆ ಬಲು ಪ್ರೀತಿ.

ಯಾರೇ ಶೋಮ್ಯಾನ್ ನಿರ್ದೇಶಕರಿದ್ದರೂ ಅವರು ತಮ್ಮ ಹೊಸ ಚಿತ್ರದ ನಾಯಕಿಯರಿಗಾಗಿ ತಲಾಷ್ ನಡೆಸುವುದು ಚೆನ್ನೈ, ಬೆಂಗಳೂರು, ಹೈದರಾಬಾದ್‌ಗಳಲ್ಲಿ. ವೈಜಯಂತಿಮಾಲಾ ಅವರು ರಾಜ್‌ಕಪೂರ್ ಅವರ ಶೋಧವಾಗಿ, ಹಿಂದಿಯಲ್ಲಿ ಸಾಮ್ರಾಜ್ಯವನ್ನು ಕಟ್ಟಿದರು. ಹೇಮಾಮಾಲಿನಿ 'ಡ್ರೀಮ್ ಗರ್ಲ್' ಎಂದೇ ಹೆಸರಾದರು. ನಲವತ್ತರ ದಶಕದಲ್ಲೇ ದೇವಿಕಾರಾಣಿ ಅವರನ್ನು ಭಾರತದ ನಂಬರ್ ವನ್ ಡ್ರೀಮ್ ಗರ್ಲ್ ಎಂದು ಕರೆಯುತ್ತಿದ್ದರು. ನಲವತ್ತರ ದಶಕದಲ್ಲಿ ದೇವಿಕಾ ಅತ್ಯಂತ ಜನಪ್ರಿಯರಾಗಿದ್ದರು.

ತಮಿಳಿನಲ್ಲಿ ಮಿಂಚಿದವರು

ತಮಿಳುನಾಡಿಗೆ ಬಿ.ಸರೋಜಾದೇವಿ ಅವರು ಹೋಗಿ ನೆಲೆ ಊರುವ ಮುನ್ನವೇ ಅಲ್ಲಿ ಹೆಸರು ಮಾಡಿದ್ದ ಕನ್ನಡದ ಜನಪ್ರಿಯ ತಾರೆಯರಿದ್ದರು ಎನ್ನುವುದನ್ನೂ ಇತಿಹಾಸದ ಪುಟಗಳು ಹೇಳುತ್ತವೆ. ಕನ್ನಡದ ರಂಗಭೂಮಿಯ ಮೂಲಕ ಚಲನಚಿತ್ರರಂಗ ಪ್ರವೇಶಿಸಿದ್ದ ಎಂ.ವಿ.ರಾಜಮ್ಮ 1940 ರಲ್ಲೇ 'ಗುಮಾಸ್ತವಿನ್‌ಪೆಣ್' ಚಲನಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದ್ದರು. ತೆಲುಗು, ತಮಿಳು ಹಾಗೂ ಕನ್ನಡ ಚಿತ್ರರಂಗದಲ್ಲಿ ಆ ಕಾಲಕ್ಕೇ ಅತ್ಯಂತ ಹೆಸರುವಾಸಿಯಾಗಿದ್ದರು. ನಟಿಯಾಗಿ, ನಿರ್ಮಾಪಕಿಯಾಗಿ ಅವರು ಖ್ಯಾತಿ ಗಳಿಸಿದ್ದರು. ಅವರು ಕನ್ನಡದ ಮೊದಲ ನಿರ್ಮಾಪಕಿ. ಸಂಸಾರ ನೌಕೆ (ಕನ್ನಡ), ಯೋಗಿ ವೇಮನ (ತೆಲುಗು), ಜ್ಞಾನ ಸುಂದರಿ (ತಮಿಳು) ಅವರ ಯಶಸ್ವಿ ಚಿತ್ರಗಳು. ತಮಿಳುನಾಡಿನಲ್ಲೇ ನೆಲೆಸಿ, ಎಂಜಿಆರ್, ಶಿವಾಜಿ ಗಣೇಶನ್ ಅವರ ತಾಯಿಯಾಗಿ ಅಭಿನಯಿಸಿದರು. ಕನ್ನಡದಲ್ಲೂ ರಾಜಕುಮಾರ್ ಅವರ ತಾಯಿಯಾಗಿ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದರು.

ಬಿ.ಜಯಮ್ಮನವರು ಕೂಡ ಆ ಕಾಲದಲ್ಲಿ ಅತ್ಯಂತ ಜನಪ್ರಿಯ ಬಹುಭಾಷಾ ನಟಿಯಾಗಿದ್ದರು. ಟಿ.ಆರ್.ರಾಜಕುಮಾರಿ ಅವರನ್ನು ದಕ್ಷಿಣ ಭಾರತದ ಡ್ರೀಮ್‌ಗರ್ಲ್ ಎಂದೇ ಕರೆಯುತ್ತಿದ್ದರು. ತ್ಯಾಗರಾಜ ಭಾಗವತ ಅವರೊಂದಿಗೆ ನಾಯಕಿಯಾಗಿ ರಾಜಕುಮಾರಿ ಅಭಿನಯಿಸಿದ 'ಹರಿದಾಸ' ಚಲನಚಿತ್ರ ಸತತವಾಗಿ 114 ವಾರಗಳ ಕಾಲ ಪ್ರದರ್ಶನಗೊಂಡು ದಾಖಲೆ ಸೃಷ್ಟಿಸಿದೆ. ರಾಜಕುಮಾರಿ ಎಂಜಿಆರ್ ಜೋಡಿಯಾಗಿ ಅಭಿನಯಿಸಿದ 'ಗುಲೇಬಕಾವಲಿ' (1955) ಅತ್ಯಂತ ಜನಪ್ರಿಯವಾಯಿತು. ಬಿ.ಸರೋಜಾದೇವಿ ಅವರು ಅದೇ ವರ್ಷ ಕಚದೇವಯಾನಿಯಲ್ಲಿ ಸಣ್ಣ ಪಾತ್ರವಹಿಸುವ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದರು. ಕನ್ನಡದಲ್ಲಿ ಮಹಾಕವಿ ಕಾಳಿದಾಸ ಚಲನಚಿತ್ರ ನಿರ್ಮಿಸಲು ಹೊನ್ನಪ್ಪ ಭಾಗವತರ್ ಅವರು ನಟಿಯ ಶೋಧದಲ್ಲಿದ್ದರು. ಆಗ ಬಿ.ಸರೋಜಾದೇವಿ ಅವರ ಕಣ್ಣಿಗೆ ಬಿದ್ದರು. ಸಾಮಾನ್ಯವಾಗಿ ನಾಯಕಿಯರ ಶೋಧದಲ್ಲಿರುವ ನಿರ್ದೇಶಕರು, ನಟರು ಸ್ಟುಡಿಯೊಗಳಿಗೆ ಹೋಗಿ ನಟಿಯರನ್ನು ಭೇಟಿಯಾಗುವುದು ಪ್ರತೀತಿ. ಮೈಸೂರಿನ ನವಜ್ಯೋತಿ ಸ್ಟುಡಿಯೊದಲ್ಲಿ 'ಶ್ರೀರಾಮ ಪೂಜಾ' ಸೆಟ್‌ನಲ್ಲಿ ಬಿ.ಸರೋಜಾದೇವಿ ಅವರು ಹೊನ್ನಪ್ಪ ಭಾಗವತರ್ ಅವರ ಕಣ್ಣಿಗೆ ಬಿದ್ದರು. ಅಲ್ಲೇ ಕಾಳಿದಾಸ ಚಿತ್ರದ ನಾಯಕಿಯಾಗಿ ಆಯ್ಕೆಯಾದರು.


ಎಂಜಿಆರ್ ಜೊತೆ 26 ಚಿತ್ರಗಳಲ್ಲಿ ನಾಯಕಿ!

ಎಂಜಿಆರ್ ಅವರಿಗೆ ಸರೋಜಾದೇವಿ ಕಂಡದ್ದು ಎಲ್ಲಿ ಎಂದು ವಿವರಿಸಿದರೆ, ಅದು ಹೊನ್ನಪ್ಪ ಭಾಗವತರ್ ಅವರ ಕತೆಯನ್ನೇ ಪುನರಾವರ್ತಿಸಿದಂತಾಗಬಹುದು. ನ್ಯೂಟೋನ್ ಸ್ಟುಡಿಯೊದಲ್ಲಿ ಕಚದೇವಯಾನಿ ಶೂಟಿಂಗ್ ನಡೆಯುತ್ತಿತ್ತು. ಸರೋಜಾದೇವಿ- ಕೆ.ಎಸ್.ಅಶ್ವತ್ಥ್ ಅಭಿನಯಿಸುತ್ತಿದ್ದರು. ಅಕಸ್ಮಾತ್ ಎಂಜಿಆರ್ ಅಲ್ಲಿಗೆ ಬಂದರು. ನಾಯಕಿಯ ಹುಡುಕಾಟದಲ್ಲಿದ್ದವರಿಗೆ ನಾಯಕಿಯೇ ಸಿಕ್ಕಂತಾಯಿತು. ಅದರ ಫಲವೇ ಎಂಜಿಆರ್ ಅವರೇ ನಿರ್ದೇಶಿಸಿ, ನಾಯಕರಾಗಿದ್ದ 'ನಾಡೋಡಿ ಮನ್ನನ್' ಚಿತ್ರಕ್ಕೆ ನಾಯಕಿಯಾಗಿ ಸರೋಜಾದೇವಿ ಆಯ್ಕೆಯಾದರು. ನಾಡೋಡಿ ಮನ್ನನ್ ಯಶಸ್ಸು, ಎಂಜಿಆರ್ ಅವರ ಚಿತ್ರರಂಗದ ದಿಕ್ಕನ್ನೇ ಬದಲಿಸಿತು. ಎಂಜಿಆರ್ ಜೊತೆಯಾಗಿ 26 ಚಿತ್ರಗಳಲ್ಲಿ ನಾಯಕಿಯಾಗಿ ಮೆರೆಯುವುದಕ್ಕೆ ಇದೊಂದು ದಿಕ್ಸೂಚಿಯಾಯಿತು. 1965 ರ ನಂತರ ತಮಿಳಿನಲ್ಲಿ ನಿರಂತರ ಹಿಟ್ ಚಿತ್ರಗಳಲ್ಲಿ ಅಭಿನಯಿಸುವ ಮುನ್ನವೆ ಕನ್ನಡದಲ್ಲಿ ಸರೋಜಾದೇವಿ ಮಹಾಕವಿ ಕಾಳಿದಾಸ, ಕಚದೇವಯಾನಿ, ಕೋಕಿಲವಾಣಿ, ಪಂಚರತ್ನ, ಚಿಂತಾಮಣಿ, ರತ್ನಗಿರಿ ರಹಸ್ಯ, ಸ್ಕೂಲ್ ಮಾಸ್ಟರ್, ಭೂಕೈಲಾಸ, ಅಣ್ಣ ತಂಗಿ, ಜಗಜ್ಯೋತಿ ಬಸವೇಶ್ವರ, ಕಿತ್ತೂರು ಚೆನ್ನಮ್ಮ ಮೊದಲಾದ ಚಿತ್ರಗಳ ಮೂಲಕ ಜನಪ್ರಿಯರಾಗಿದ್ದರು. ಕನ್ನಡದ ಮೊದಲ ಬಣ್ಣದ ಸಿನಿಮಾ 'ಅಮರಶಿಲ್ಪಿ ಜಕಣಾಚಾರಿ'ಯ ನಾಯಕಿಯಾಗಿ 1964ರಲ್ಲಿ ಕಾಣಿಸಿಕೊಂಡರು.

ಕುರಾಶಿ ಮನೆಪಾಠ...

ಐವತ್ತು, ಅರವತ್ತರ ದಶಕದ ತಾರೆಯರ ದೊಡ್ಡ ಸಮಸ್ಯೆಯೆಂದರೆ ಸಹಜಾಭಿನಯದ ಕೊರತೆ. ಸರೋಜಾದೇವಿ ಅವರ ಕತೆ ಬೇರೆ ಅಲ್ಲ, ಅವರದೂ ನಾಟಕೀಯ ಅಭಿನಯ. ಸಂಭಾಷಣೆಯದು ಕೃತಕ ಶೈಲಿ. ಚನ್ನಪಟ್ಟಣದ ಬಳಿಯ ದಶಾವರ ಗ್ರಾಮದವರಾದ ಸರೋಜಾದೇವಿ ಹಳ್ಳಿಯ ಶೈಲಿಯಲ್ಲಿ ಮಾತನಾಡುತ್ತಿದ್ದರು. ಹೀಗಾಗಿ 'ಅಣ್ಣ ತಂಗಿ' ಇಂದಿಗೂ ಅದ್ಭುತವಾಗಿದೆ.

10ನೇ ಪುಟಕ್ಕೆ...



'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ಬಿ.ಸರೋಜಾದೇವಿ



ಚಲನಚಿತ್ರ ಅಕಾಡೆಮಿ ಆಯೋಜಿಸಿದ್ದ 'ಬೆಳ್ಳಿಹೆಜ್ಜೆ' ಕಾರ್ಯಕ್ರಮದಲ್ಲಿ ತಾವು ನಟಿಸಿದ ಚಿತ್ರಗಳ ಛಾಯಾಚಿತ್ರಗಳನ್ನು ವೀಕ್ಷಿಸುತ್ತಿರುವ ಸರೋಜಾದೇವಿ. ನಟಿ ಜಯಮಾಲ ಜೊತೆಗಿದ್ದರು.

'ಪಾತ್ರಗಳ ಮೂಲಕ ಸದಾ ಜೀವಂತ'

• ಅಭಿಲಾಷ್ ಪಿ.ಎಸ್.

ನಟಿ ದಿವಂಗತ ಬಿ.ಸರೋಜಾದೇವಿ ಅವರೊಂದಿಗೆ ಸಿನಿಮಾಗಳಲ್ಲಿ ನಟಿಸದೇ ಇದ್ದರೂ ಅವರೊಂದಿಗೆ ಒಡನಾಟ ಹೊಂದಿದ್ದವರು ಹಿರಿಯ ನಟಿ ಗಿರಿಜಾ ಲೋಕೇಶ್. ಇವರು ತಮ್ಮ ಗತಕಾಲದ ಬುತ್ತಿಯನ್ನು ಬಿಚ್ಚಿದಾಗ ಹತ್ತಾರು ನೆನಪುಗಳು ನುಗ್ಗಿಬಂದವು. ಅವುಗಳಲ್ಲಿ ಆಯ್ದ ಕೆಲವು ನಿಮ್ಮ ಓದಿಗಾಗಿ.



• ಬಿ.ಸರೋಜಾದೇವಿಯವರೊಂದಿಗಿನ ಒಡನಾಟವನ್ನು ನೆನಪಿಸಿಕೊಂಡರೆ...

ನಾನು ಅವರನ್ನು ಮೊದಲ ಬಾರಿ ನೋಡಿದಾಗ ನನಗಿನ್ನೂ ಹತ್ತೋ ಹನ್ನೆರಡು ವರ್ಷ. ಅವರು ಸಿನಿಮಾವೊಂದರ ಚಿತ್ರೀಕರಣದಲ್ಲಿದ್ದರು. ಆ ಜಾಗಕ್ಕೆ ನಾನು ಹೋಗಿದ್ದೆ. ಅವರನ್ನು ನೋಡಿದಾಕ್ಷಣ ನನಗೆ ದೇವತೆಯನ್ನು ನೋಡಿದಂತೆ ಅನಿಸಿತು. ಇವರು ಎಲ್ಲಿಂದ ಬರುತ್ತಾರೆ, ಇವರ ದಿನಚರಿ ಏನಿರುತ್ತದೆ? ಎನ್ನುವುದರ ಬಗ್ಗೆ ತಿಳಿದುಕೊಳ್ಳುವ ಕುತೂಹಲ ನನಗೆ. ನನಗವರು ಕನಸಿನಲ್ಲಿ ಬರುವ ದೇವತೆಯಂತೆ ಕಂಡರು. ಯೌವನದಲ್ಲಿ ಅವರ ಸಿನಿಮಾಗಳನ್ನು ನೋಡುವಾಗ ಬಹಳ ಭಾವುಕನಾಗುತ್ತಿದ್ದೆ. ನಾನೂ ಅವರ ರೀತಿ ಕಲಾವಿದೆಯಾಗಬೇಕು, ಖ್ಯಾತಿ ಪಡೆಯಬೇಕು ಎನ್ನುವ ಆಸೆ ಆಗಲೇ ಹುಟ್ಟಿಕೊಂಡಿತ್ತು. ನಾನು ಅವರ ಜೊತೆ ಸಿನಿಮಾಗಳನ್ನು ಮಾಡಿಲ್ಲ. ನಾನು ಚಿತ್ರರಂಗದಲ್ಲಿ ಸಕ್ರಿಯವಾಗುವ ಸಂದರ್ಭದಲ್ಲಿ ಅವರು ನಟನೆಯಿಂದ ನೇಪಥ್ಯಕ್ಕೆ ಸರಿದಿದ್ದರು.

ಒಮ್ಮೆ ಜಯಂತಿಯವರ ಜೊತೆ ಮಲ್ಲೇಶ್ವರದಲ್ಲಿರುವ ಇವರ ಮನೆಗೆ ಹೋಗಿದ್ದ ಘಟನೆಯನ್ನು ಹೇಳುತ್ತೇನೆ. ಮನೆಯ ತುಂಬಾ ಪ್ರಶಸ್ತಿಗಳ ಸಾಲು, ಅವರ ಛಾಯಾಚಿತ್ರಗಳ ತೋರಣ. ಸಿನಿಮಾಗಳ ನೆನಪಿನ ಕಾಣಿಕೆಗಳು, ಪ್ರಶಸ್ತಿಗಳನ್ನು ಕಲಾತ್ಮಕವಾಗಿ ಜೋಡಿಸಿಟ್ಟ ರೀತಿಯೇ ಕಣ್ಣಿಗೆ ಹಬ್ಬದಂತಿತ್ತು. ಅವರಿಗೆ ದೊರೆತ ಚಿನ್ನ, ಬೆಳ್ಳಿಯ ಉಡುಗೊರೆಗಳನ್ನು ಹೆಮ್ಮೆಯಿಂದ ಪ್ರದರ್ಶಿಸುತ್ತಿದ್ದರು. ಕಲಾವಿದೆಯಾದವಳು ಈ ರೀತಿ ಸಾಧನೆ ಮಾಡಬೇಕು ಎಂದು ಸ್ಫೂರ್ತಿ ನೀಡುವ ಜಾಗವದು. ಚಿಕ್ಕಮಗುವಿನ ರೀತಿಯ ಕುತೂಹಲ ಅವರಿಗಿತ್ತು.

• ಲೋಕೇಶ್ ಅವರ ಜೊತೆಗಿನ ಒಡನಾಟ...

ರಾಜ್‌ಕುಮಾರ್ ಅವರ ಜೊತೆಗೆ ನಟಿಸಿದ 'ಅಣ್ಣತಂಗಿ' ಸಿನಿಮಾ ಮೊದಲ ಬಾರಿ ದೂರದರ್ಶನದಲ್ಲಿ ಪ್ರಸಾರವಾಗಿತ್ತು. ಅದನ್ನು ನೋಡಿ ಲೋಕೇಶ್ ಸರೋಜಾದೇವಿಯವರಿಗೆ ಫೋನ್ ಮಾಡಿದ್ದರು. ಸಿನಿಮಾದಲ್ಲಿನ ಅವರ ಪಾತ್ರದ ಕುರಿತು ಸುಮಾರು ಅರ್ಧಗಂಟೆ ಮಾತುಕತೆ ನಡೆಸಿದ್ದು ನನಗಿನ್ನೂ ನೆನಪಿದೆ.

ಆ ಸಿನಿಮಾದಲ್ಲಿ ಅವರದು ಎಂಥಾ ಮುಗ್ಧತೆ, ಎಂಥಾ ಸೌಂದರ್ಯ! ಆ ಪಾತ್ರವನ್ನು ಮರೆಯಲು ಸಾಧ್ಯವೇ ಇಲ್ಲ. ಇಂದಿನ ಸಿನಿಮಾಗಳಲ್ಲಿನ ಪಾತ್ರಗಳು ಮತ್ತು ಆ ಪಾತ್ರಗಳ ವೇಷಭೂಷಣಗಳು ಮನಸ್ಸಿಗೆ ತಟ್ಟುವುದೇ ಇಲ್ಲ. ಆದರೆ ಸರೋಜಾದೇವಿ ಅವರು ನಿಭಾಯಿಸಿದ ಪಾತ್ರಗಳು ಮತ್ತು ಅವರ ನಟನೆ ಮನಸ್ಸನ್ನು ಆವರಿಸಿಕೊಂಡು ಬಿಡುತ್ತಿತ್ತು. ಆ ಕಾಲದ ಸಿನಿಮಾಗಳಲ್ಲಿನ ಪಾತ್ರಗಳೇ ಹಾಗಿದ್ದವು. ಅವರ ಸಿನಿಮಾಗಳನ್ನು ನೋಡಿ ಅದೆಷ್ಟೋ ವರ್ಷಗಳಾಗಿವೆ. ಆದರೆ ಸರೋಜಾದೇವಿಯವರು ಬಣ್ಣಹಚ್ಚಿದ್ದ ಪಾತ್ರಗಳು ನನ್ನ ಮನಸ್ಸಿನಲ್ಲಿ ಇಂದಿಗೂ ಹಾಗೆಯೇ ಉಳಿದಿವೆ.





• ಸರೋಜಾದೇವಿಯವರಿಗೆ ಅವರದ್ದೇ ಆದ ಸ್ಟೈಲ್ ಇತ್ತಲ್ಲವೇ?

ಹೌದು. ಅವರ ಕಾಲಿನಲ್ಲಿ ಸಣ್ಣ ತೊಂದರೆ ಇತ್ತು. ಆದರೆ ಅದನ್ನೇ ಅವರ ಒಂದು ಸ್ಟೈಲ್ ಮಾಡಿಕೊಂಡರು! ತಮಿಳು ನಾಡಿನಲ್ಲಿ ಅವರ ನಡಿಗೆಯನ್ನು ಹಂಸನಡಿಗೆಗೆ ಹೋಲಿಸುತ್ತಿದ್ದರು. ಈ ನಡಿಗೆಯನ್ನೇ ಪ್ರತೀ ಸಿನಿಮಾದಲ್ಲೂ ಒಂದು ದೃಶ್ಯವನ್ನಾಗಿ ಇಡುತ್ತಿದ್ದರು. ಇದಕ್ಕೂ ಚಪ್ಪಾಳೆಗಳು ಬೀಳುತ್ತಿದ್ದವು. ಅವರ ಮಾತು ಗಿಣಿದನಿಯಂತೆ ಇಂಪು. ಅದಕ್ಕಾಗಿಯೆ ತಮಿಳುನಾಡಿನಲ್ಲಿ ಅವರನ್ನ 'ಕನ್ನಡದ ಪೈಂಗಿಳಿ' ಎಂದು ಕರೆಯುತ್ತಿದ್ದರು. ಅವರ ಕಣ್ಣು, ಮೂಗು, ಗಲ್ಲ, ನಗು, ದಂತಪಂಕ್ತಿಯನ್ನು ನೋಡುತ್ತಿದ್ದರೆ ದೇವರು ಸಾವಕಾಶದಲ್ಲಿ ನಾಜೂಕಾಗಿ ಅವರನ್ನು ಸೃಷ್ಟಿಸಿದ್ದಾನೆ ಎನಿಸುತ್ತದೆ. ಅವರನ್ನೇ ನೋಡುತ್ತಾ ಕೂರಬೇಕು ಎಂದನಿಸುತ್ತದೆ. ಇವರಂತೆಯೇ ವೈಜಯಂತಿ ಮಾಲಾ ಅವರೂ ಸುರಸುಂದರಿ. ಉತ್ತರಕ್ಕೆ ಅವರು ಸೂಪರ್‌ಸ್ಟಾರ್ ಆಗಿದ್ದರೆ ನಮ್ಮ ದಕ್ಷಿಣಕ್ಕೆ ಸರೋಜಾದೇವಿಯವರೇ ಸೂಪರ್ ಸ್ಟಾರ್.

ಮೇಕಪ್‌ಗೆ ಹೆಚ್ಚಿನ ಒತ್ತು ಕೊಡುತ್ತಿದ್ದರಿಂದ ಅವರು ಒಂದೇ ರೀತಿ ಕಾಣಿಸುತ್ತಿದ್ದಾರೆ ಎಂದೆನಿಸುತ್ತದೆ. ಅಂದಿಗೂ ಇಂದಿಗೂ ಅದೇ ರೀತಿ ಅವರು ಇದ್ದರು. ಜನರು ನಮ್ಮನ್ನು ನೋಡಲೆಂದೇ ಬರುವುದು, ಹಾಗಾಗಿ ಚೆನ್ನಾಗಿ ಕಾಣಿಸಿಕೊಳ್ಳಬೇಕು. ಸಹಜವಾಗಿ ಇರಬಾರದು ಎಂದು ಅವರು ಹೇಳುತ್ತಿದ್ದರು. ಮೇಕಪ್‌ಇಲ್ಲದೆಅವರನ್ನುನಾವುನೋಡಿಯೇಇಲ್ಲ.

• ಸರೋಜಾದೇವಿಯವರಲ್ಲಿ ನೀವು ಮೆಚ್ಚಿದ ಗುಣ...

ಅವರು ಹೊರಗಡೆ ಬಂದಾಗ ಬಹಳ ಗಂಭೀರವಾಗಿರುತ್ತಿದ್ದರು. ನಡವಳಿಕೆಯನ್ನು ಅವರಿಂದ ಕಲಿಯಬೇಕು. ಓರ್ವ ಪ್ರಬುದ್ಧ ಕಲಾವಿದೆ ಹೇಗಿರಬೇಕು ಎನ್ನುವುದನ್ನು ಅವರು ಪಾಠ ಮಾಡಿದಂತಿತ್ತು.

90ರ ದಶಕದಲ್ಲಿ ನಾವು ಪ್ರತಿ ನವೆಂಬರ್ 1ರಂದು ಕಲಾವಿದರ ಸಂಘದಿಂದ ಹಿರಿಯ ಕಲಾವಿದರಿಗೆ ಸನ್ಮಾನ ಮಾಡುತ್ತಿದ್ದೆವು. ಸರೋಜಾದೇವಿಯವರು ಸನ್ಮಾನಿತರಿಗೆ ವೈಯಕ್ತಿಕವಾಗಿ ಚಿನ್ನದ ಉಂಗುರ, ಸೀರೆ–ರೇಷ್ಮೆ ಪಂಚೆ ನೀಡುತ್ತಿದ್ದರು. ಅವರ ಟ್ರಸ್ಟ್ ಮುಖಾಂತರ ಎಲ್ಲಾ ಭಾಷೆಗಳಲ್ಲಿ ಕಲಾವಿದರನ್ನು ಗುರುತಿಸಿ ₹1 ಲಕ್ಷ ಬಹುಮಾನ ನೀಡುತ್ತಿದ್ದರು. ಇದರ ಬಗ್ಗೆ ಯಾರಿಗೂ ಹೇಳುತ್ತಿರಲಿಲ್ಲ.

• ಅವರನ್ನು ಚಿತ್ರರಂಗ ಹೇಗೆ ಜೀವಂತವಾಗಿರಿಸಬಹುದು?

ಇದ್ದಾಗ ಮರೆತು ಇಲ್ಲದೇ ಇದ್ದಾಗ ಸ್ಮಾರಕ ಕಟ್ಟುವುದು ಈಗಿನ ಸ್ಥಿತಿ. ನಮ್ಮ ಕಲ್ಪನೆಯಲ್ಲಿ ಹೇಗೆ ಅವರನ್ನು ಜೀವಂತವಾಗಿರಸಲು ಸಾಧ್ಯವೋ ಎಂದು ಯೋಚಿಸಬೇಕು. ಅವರ ಹೆಸರಿನಲ್ಲಿ ಪ್ರಶಸ್ತಿ, ಅವರ ಚಲನಚಿತ್ರಗಳ ಸಪ್ತಾಹ, ಪಡೆದ ಪ್ರಶಸ್ತಿಗಳ ಪ್ರದರ್ಶನಗಳನ್ನು ಆಯೋಜಿಸಿ ಅವರನ್ನು ಸದಾ ನೆನಪಿನಲ್ಲಿ ಇರಿಸಿಕೊಳ್ಳಬಹುದು. ಮುಂದಿನ ಪೀಳಿಗೆಯು ಅವರ ಚಿತ್ರಗಳನ್ನು ನೋಡಿ ಕಲಿಯುವಂಥದ್ದು ಬಹಳಷ್ಟಿದೆ. ಅವರ ಪಾತ್ರಗಳ ಮೂಲಕವೇ ಅವರು ನಮ್ಮೊಂದಿಗೆ ಸದಾ ಜೀವಂತವಾಗಿ ಇರುತ್ತಾರೆ. ಇಂದಿಗೂ ಶಾಲೆಗಳಲ್ಲಿ ಏಕಪಾತ್ರಾಭಿನಯಕ್ಕೆ ಹೆಚ್ಚಿನವರ ಆಯ್ಕೆ ಕಿತ್ತೂರು ಚೆನ್ನಮ್ಮನ ಪಾತ್ರವೇ ಆಗಿರುತ್ತದೆ. ಐದು ವರ್ಷದ ಮಗುವೂ ಆ ಪಾತ್ರದ ವೇಷ ಹಾಕುತ್ತದೆ. ಈ ಒಂದು ಪಾತ್ರದಿಂದಾಗಿಯೇ ಅವರು ಎಲ್ಲಾ ಕಾಲಕ್ಕೂ ಜೀವಂತವಾಗಿರುತ್ತಾರೆ. ಇಂಥ ಕಲಾವಿದೆಗೆ ಪ್ರಜಾವಾಣಿಯು 2024ರಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಒಂದೊಳ್ಳೆಯ ಕೆಲಸ ಮಾಡಿತು.


ಕನ್ನಡ ಸೇರಿದಂತೆ ತಮಿಳು, ತೆಲುಗು, ಹಿಂದಿಯಲ್ಲಿ ಅವರು ಮಾಡಿದ ಸಿನಿಮಾಗಳು ಸೋತವು ಎನ್ನುವುದನ್ನು ಎಲ್ಲಿಯೂ ಕೇಳಿಲ್ಲ. ಈ ರೀತಿ ಒಬ್ಬ ಅದೃಷ್ಟವಂತ ಕಲಾವಿದೆ ಅವರು. ಆ ಅವಧಿಯಲ್ಲಿ ಅವರದ್ದೇ ಅಧಿಪತ್ಯ.

ಅವರಿಂದ ನಟಿಯರು ಏನನ್ನು ಕಲಿಯಬೇಕು?

ಪಾತ್ರದ ಬಗ್ಗೆ ಅವರು ವಹಿಸುತ್ತಿದ್ದ ಕಾಳಜಿಯನ್ನು ಮೊದಲು ಕಲಿಯಬೇಕು. ಅವರ ಮೇಕಪ್, ಹೇರ್‌ಸ್ಟೈಲ್ ಪಾತ್ರಕ್ಕೆ ತಕ್ಕ ಹಾಗೆ ಇರುತ್ತಿದ್ದವು. ಇಂದಿನ ಪಾತ್ರಗಳಲ್ಲಿ ಮನೆಗೂ, ಕಾಲೇಜಿಗೂ ಒಂದೇ ಮೇಕಪ್. ಇದು ಬಹಳ ಕೃತಕವಾಗಿ ಕಾಣುತ್ತದೆ. ನಮ್ಮ ಕಾಲದಲ್ಲಿ ಪಾತ್ರಗಳು ಬಹಳ ಸಹಜವಾಗಿದ್ದವು. ಅವರ ಕಾಲದಲ್ಲಿ ಪಾತ್ರಗಳಿಗೆ ಬೇರೆ ಬೇರೆ ಆಯಾಮಗಳಿದ್ದವು.

ಸರೋಜಾದೇವಿ ಮುಖದಲ್ಲಿ ಚೆನ್ನಮ್ಮನ ಕಂಡವರು...

• ಸಂತೋಷ ಈ. ಚಿನಗುಡಿ



ಮಹಾದೇವಪ್ಪ ರಾವಳ

'**ಕಪ್ಪ ಕೊಡಬೇಕೆ ಕಪ್ಪ**. ನಿಮಗೇಕೆ ಕೊಡಬೇಕು ಕಪ್ಪ? ನಮ್ಮವರೊಂದಿಗೆ ಉತ್ತೀರಾ? ಬಿತ್ತೀರಾ? ನೀರು ಹಾಯಿಸಿ ನಾಟಿ ನೆಟ್ಟೀರಾ? ಹೊರೆ ಹೊತ್ತೀರಾ? ದಣಿದವರಿಗೆ ಅಂಬಲಿ ಕಾಯಿಸಿ ಕೊಟ್ಟೀರಾ? ನಿಮಗೇಕೆ ಕೊಡಬೇಕು ಕಪ್ಪ? ನೀವೇನು ಅಣ್ಣತಮ್ಮಂದಿರೇ? ನೆಂಟರೇ? ನಿಷ್ಠರೇ? ದಾಯಾದಿಗಳೇ? ಎಚ್ಚರಿಕೆ. ಕಿತ್ತೂರು ರಾಣಿಯಿಂದ ಕಪ್ಪ ಕೇಳುವವರ ನಾಲಿಗೆಯನ್ನು ಸೀಳಿಬಿಟ್ಟೇನು...' ಈ ಸಂಭಾಷಣೆ 65 ವರ್ಷಗಳಿಂದಲೂ ಜನಜನಿತವಾಗಿದೆ!

ಹೌದು, 'ಕಿತ್ತೂರು ಚೆನ್ನಮ್ಮ' ಚಲನಚಿತ್ರದಲ್ಲಿ ಮಹಾನ್ ನಟಿ ಬಿ.ಸರೋಜಾದೇವಿ ಅವರ ಮನೋಜ್ಞ ಅಭಿನಯದ ಪ್ರತಿಫಲವಿದು. ಕನ್ನಡನಾಡಿನಲ್ಲಿ ಈ ಸಂಭಾಷಣೆಯನ್ನು ಕೇಳದ ಕಿವಿಗಳಿಲ್ಲ, ಉಚ್ಚರಿಸದ ನಾಲಿಗೆಯಿಲ್ಲ ಎನ್ನುವಷ್ಟು ಜನಪ್ರಿಯವಾಗಿದೆ. ಈಗಲೂ ಎಲ್‌ಕೆಜಿ ಮಕ್ಕಳಿಂದ ಕಾಲೇಜು ವಿದ್ಯಾರ್ಥಿಗಳ ತನಕ ಏಕಾಭಿನಯಪಾತ್ರದಲ್ಲಿ ಥೇಟ್ ಬಿ.ಸರೋಜಾದೇವಿ ಅವರಂತೆಯೇ ವೇಷ ಹಾಕಿ, ಅವರದೇ ಶೈಲಿಯಲ್ಲಿ 'ಕಪ್ಪ ಕೊಡಬೇಕೆ ಕಪ್ಪ' ಎಂದು ಸಂಭಾಷಣೆ ಹೇಳಿ ಬಹುಮಾನ ಗಿಟ್ಟಿಸುತ್ತಿರುವುದೂ ಸತ್ಯ.

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನ 81ರ ಪ್ರಾಯದ ಮಹಾದೇವಪ್ಪ ರಾವಳ ಅವರು ಬಿ.ಸರೋಜಾದೇವಿ ಅವರ ಅಪ್ಪಟ ಅಭಿಮಾನಿ. 1961ರಲ್ಲಿ ಮೊಟ್ಟಮೊದಲ ಬಾರಿಗೆ ರಾಣಿ ಚೆನ್ನಮ್ಮನ ಇತಿಹಾಸ ಬೆಳ್ಳಿತೆರೆ ಮೇಲೆ ರಾರಾಜಿಸಿತು. ಮಹಾದೇವಪ್ಪ ಆಗ ರಾಣಿ ಚೆನ್ನಮ್ಮ ವಿಜಯೋತ್ಸವ ಸಮಿತಿ ಕಾರ್ಯದರ್ಶಿಯಾಗಿದ್ದರು.

'ಚೆನ್ನಮ್ಮಾಜಿ ಕುರಿತಾದ ನಾಟಕಗಳು ಶತಮಾನಗಳಿಂದಲೂ ಪ್ರದರ್ಶನಗೊಳ್ಳುತ್ತಿವೆ. ಆದರೆ, ಬಿ.ಸರೋಜಮ್ಮ ಅವರ ನಟನೆಯ ಬಳಿಕವೇ ಚೆನ್ನಮ್ಮ ಹೀಗೆ ಇದ್ದಿರಬಹುದು ಎಂಬ 'ರೂಪ' ಅಚ್ಚೊತ್ತಿತು. ವೀರಾವೇಷವೇ ಮೈವೆತ್ತಂತೆ ನಟಿಸಿದ ಪರಿ, ಹಣೆಯ ಮೇಲಿನ ದಪ್ಪ ವಿಭೂತಿ, ಅಗಲವಾದ ಕಣ್ಣುಗಳು, ದೃಢವಾದ ನಿಲುವು, ತಲೆ ಮೇಲಿನ ಸೆರಗು, ಧ್ವನಿಯಲ್ಲಿನ ಆರ್ಭಟ, ಕುದುರೆ ಏರಿ ಬರುವಲ್ಲಿನ ಶೈಲಿ ಎಲ್ಲವೂ ಜನಮಾನಸದ ಭಾಗವಾಗಿ ಹೋಗಿವೆ. ಮಣ್ಣಲ್ಲಿ ಹುದಗಿಹೋಗಿದ್ದ ಇತಿಹಾಸವನ್ನು ಜಗತ್ತಿನ ಮುಂದೆ ನಿಲ್ಲಿಸಿದರು ಸರೋಜಮ್ಮ. ಆ ಕಾಲದಲ್ಲಿ ಶಿಲ್ಪಿಗಳು ಚೆನ್ನಮ್ಮ ಪ್ರತಿಮೆ ಕೆತ್ತಬೇಕೆಂದರೆ ಸರೋಜಮ್ಮ ಅವರೇ ಕಣ್ಣಮುಂದೆ ಬಂದು ನಿಲ್ಲುತ್ತಿದ್ದರಂತೆ' ಎಂದು ಮಹಾದೇವಪ್ಪ ನೆನೆದು ಭಾವುಕರಾದರು.

ಕಿತ್ತೂರು ಚೆನ್ನಮ್ಮ ಸಿನಿಮಾ ನಿರ್ದೇಶಕ ಬಿ.ಆರ್.ಪಂತುಲು ಹಾಗೂ ನಟಿ ಸರೋಜಾದೇವಿ ಅವರು ಚಿತ್ರೀಕರಣಕ್ಕೆ ಕಿತ್ತೂರಿಗೆ ಬಂದಿದ್ದರು ಎನ್ನುವುದನ್ನು ಈ ಹಿರಿಯ ಜೀವ ಮೆಲುಕು ಹಾಕಿತು.

ಕಿತ್ತೂರು ಚೆನ್ನಮ್ಮ ಸಿನಿಮಾ ಬಿಡುಗಡೆಯಾದಾಗ ಹಳ್ಳಿಯ ಜನರು ಚಕ್ಕಡಿ ಕಟ್ಟಿಕೊಂಡು ಧಾರವಾಡಕ್ಕೆ ಹೋಗಿ, ವಸತಿ ಉಳಿದು ಸಿನಿಮಾ ನೋಡಿ ಬರುತ್ತಿದ್ದರು. ಸಿನಿಮಾ ಅಷ್ಟೊಂದು ಪ್ರಸಿದ್ಧವಾದ ಬಳಿಕ ಸರೋಜಮ್ಮ ಅವರನ್ನು ಕಣ್ಣಾರೆ ನೋಡಬೇಕೆಂಬ ಹಂಬಲ ಜನರಲ್ಲಿ ಹೆಚ್ಚಾಯಿತು. ಆ ಬಯಕೆ ಕೈಗೂಡಿದ್ದು ಹದಿನೈದು ವರ್ಷಗಳ ಬಳಿಕ ಅಂದರೆ 1976ರಲ್ಲಿ. ಪ್ರೊ.ವಿ.ಜಿ.ಮಾರಿಹಾಳ ವಿರಚಿತ 'ಕಿತ್ತೂರು ಚೆನ್ನಮ್ಮಾಜಿ' ನಾಟಕ ಪ್ರದರ್ಶನವಿತ್ತು. ಸರೋಜಾದೇವಿ ಅವರನ್ನೇ ಅತಿಥಿಯಾಗಿ ಕರೆಸಿದ್ದೆವು. ಸೈಕಲ್‌ಗಳ ಮೇಲೆ ಈ ವಿಷಯವನ್ನು ಪ್ರಚಾರ ಮಾಡಿದ್ದೆವು. ಆಗ ಲೆಕ್ಕವಿಲ್ಲದಷ್ಟು ಜನ ಸೇರಿದ್ದರು ಎಂದು ಮಹಾದೇವಪ್ಪ ಸಂಭ್ರಮಿಸಿದರು.

'ನನ್ನ ವಾರಿಗೆಯವರು ಈಗ ಯಾರೂ ಉಳಿದಿಲ್ಲ. ನಮ್ಮ ತಲೆಮಾರನ್ನು ರಂಜಿಸಿದ ಸರೋಜಮ್ಮ ಅವರೂ ಇಲ್ಲವಾಗಿರುವುದು ಬೇಸರ ತರಿಸಿದೆ. ಚೆನ್ನಮ್ಮ ಎಂದರೆ ಸರೋಜಮ್ಮ, ಸರೋಜಮ್ಮ ಎಂದರೆ ಚೆನ್ನಮ್ಮ ಎನ್ನುವಷ್ಟರ ಮಟ್ಟಿಗೆ ಮನಸ್ಸಿನಲ್ಲಿ ಅವರು ಉಳಿದುಬಿಟ್ಟಿದ್ದಾರೆ' ಎಂದು ಮಾತು ಮುಗಿಸಿದರು.



ಚನ್ನಮ್ಮನ ಕಿತ್ತೂರು ನಾಡ ವಿದ್ಯಾವರ್ಧಕ ಸಂಘದ ಆವರಣದಲ್ಲಿ 1976ರಲ್ಲಿ ನಡೆದ ಬಯಲು ರಂಗ ಮಂದಿರ ಉದ್ಘಾಟನೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿದ್ದ ಬಿ.ಸರೋಜಾದೇವಿ ಮತ್ತು ಅವರ ಪತಿ ಶ್ರೀಹರ್ಷ (ಬಲಗಡೆ).

ಚಿತ್ರ ಕೃಪೆ: ಮೃತ್ಯುಂಜಯ ಮಾರಿಹಾಳ

ಭಾವ.. ಬಣ್ಣ.. ರೇಖೆ.. ಇತ್ಯಾದಿಗಳು


ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ ಏರ್ಪಡಿಸಿರುವ ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ ಜುಲೈ 28ರ ವರೆಗೂ ನಡೆಯಲಿದೆ. ಇಲ್ಲಿ 46 ಕಲಾವಿದರ 60ಕ್ಕೂ ಹೆಚ್ಚು ಕಲಾಕೃತಿಗಳನ್ನು ಪ್ರದರ್ಶಿಸಲಾಗುತ್ತಿದೆ.







ಹುಬ್ಬಳ್ಳಿಯ ಪ್ರತಾಪ ಬಹುರೂಪಿ ಅವರ ಹಂಪಿ ನಿಸರ್ಗ ಕೃತಿ



ಒಡಿಶಾದ ಮಾನಸ ರಂಜನ್ ಜೆನಾ ಅವರ ಕೃತಿ
ಚಿತ್ರಗಳು: ಗುರು ಹಬೀಬ

• ಸ್ಮಿತಾ ಶಿರೂರ

ಸಾಂಪ್ರದಾಯಿಕ ವಿನ್ಯಾಸಭರಿತ ಮರದ ಬಾಗಿಲಿಗೆ ಒರಗಿ ನಿಂತ ಯುವತಿ. ಯಾರೋ ಬರಲಿರುವ ನಿರೀಕ್ಷೆ ಸ್ಫುರಿಸುವ ಕಣ್ಣುಗಳು. ಕ್ಯಾನ್ವಾಸ್ ಮೇಲೆ ಅಕ್ರಿಲಿಕ್ ಬಣ್ಣದಲ್ಲಿ ಅರಳಿದ ಸೃಜನಾತ್ಮಕ ಸಂಯೋಜನೆಯ 'ವೇಟಿಂಗ್' ಕೃತಿ ಒಡಿಶಾದ ಖ್ಯಾತ ಕಲಾವಿದ ಮಾನಸ ರಂಜನ್ ಜೆನಾ ಅವರದ್ದು. ಈ ಕೃತಿಯು ಕಲಾ ಪ್ರದರ್ಶನಕ್ಕೆ ಪ್ರವೇಶಿಕೆಯಂತಿದೆ. ಸಾಂಪ್ರದಾಯಿಕತೆಯ ಸೊಬಗು ಈ ಚಿತ್ರದಲ್ಲಿ ಕೆಲವೇ ಬಣ್ಣಗಳಲ್ಲಿ ಮೂಡಿಬಂದಿರುವ ಪರಿಯನ್ನು ಕಣ್ತುಂಬಿಕೊಳ್ಳುವುದೇ ಖುಷಿ.

ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದಲ್ಲಿ ಕಲಾಪ್ರೇಮಿಗಳನ್ನು ಸೂಜಿಗಲ್ಲಿನಂತೆ ಸೆಳೆದ ಕೃತಿಯಿದು. ಇದರ ವರ್ಣ ಸಂಯೋಜನೆಯೂ ವಿಶಿಷ್ಟವಾಗಿದೆ. ಇದೇ ವರ್ಣ ಸಂಯೋಜನೆಯ ಮತ್ತೊಂದು ಚಿತ್ರವೂ ಇವರದ್ದೇ ಎಂದು ಹೇಳಬಹುದಾದ ಶೈಲಿಯನ್ನು ಇಲ್ಲಿ ಗುರುತಿಸಬಹುದು.

ಮೊದಲ ಬಾರಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕಲಾವಿದರ ಚಿತ್ರಕಲಾ ಕೃತಿಗಳನ್ನು ನೋಡುವ ಅವಕಾಶ ಸ್ಥಳೀಯ ಕಲಾ ಪ್ರೇಮಿಗಳು ಹಾಗೂ ಕಲಾ ವಿದ್ಯಾರ್ಥಿಗಳಿಗೆ ಲಭಿಸಿದೆ. ರೇಖೆ–ಬಣ್ಣಗಳಲ್ಲಿ ಜೀವನ ದರ್ಶನ, ಏನನ್ನೋ ಹೇಳಬಯಸುವ ತುಡಿತ, ನಿರೀಕ್ಷೆ, ವಿಡಂಬನೆ ಹಾಗೂ ವೈವಿಧ್ಯ ದೃಷ್ಟಿಕೋನಗಳು ಇಲ್ಲಿ ಕಾಣಸಿಕ್ಕವು.

ಹಲವು ಕಲಾವಿದರಿಗೆ ಮಹಿಳೆಯೇ ಪ್ರಮುಖ ವಸ್ತುವಾಗಿದ್ದಾಳೆ. ಮಹಿಳೆಯ ಆಧುನಿಕ, ಸಾಂಪ್ರದಾಯಿಕ, ಚಿಂತಾಕ್ರಾಂತ, ನಿಷ್ಕಲ್ಮಶ, ಗಂಭೀರ, ಗಹನ ಮನಸ್ಥಿತಿಗಳ ಪ್ರತಿಬಿಂಬಗಳು ಬಣ್ಣದ ಚೌಕಟ್ಟಿನಲ್ಲಿ ಮಿಳಿತವಾಗಿವೆ.

ಖ್ಯಾತ ಕಲಾವಿದ ಎಂ.ವಿ. ಮಿಣಜಗಿ ಅವರ ಜಲವರ್ಣದ ನಿಸರ್ಗ ಚಿತ್ರಣಗಳ ಸರಣಿ 'ರಾಗಮಾಲಾ'ದ ಎರಡು ಕೃತಿಗಳು ಪ್ರದರ್ಶನಕ್ಕೆ ಸುಂದರ ಮುನ್ನುಡಿ ಬರೆದಿವೆ. ಬಣ್ಣದಲ್ಲದ್ದಿದ ಕುಂಚದ ಸ್ಟ್ರೋಕ್‌ಗಳು ಮೂಡಿಸುವ ನೈಜ ಪರಿಣಾಮ ಹಸಿರು ವನಸಿರಿಯ ಚಂದವನ್ನು ಇವರ ಕೃತಿಗಳು ಕಟ್ಟಿಕೊಟ್ಟಿವೆ.

ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರದರ್ಶನಕ್ಕೆ ಆಯ್ಕೆಯಾದ ಸಿ.ಡಿ. ಜಟ್ಟೆಣ್ಣವರ್ ಅವರ ಚಾರ್‌ಕೋಲ್ ಪೇಂಟಿಂಗ್ 'ಗಾಂಧಿ ಭಾರತ' ಭಿನ್ನವಾಗಿದೆ. ಹಿಂಸೆ ತ್ಯಜಿಸಿ ಅಹಿಂಸೆಯನ್ನು ನಮ್ಮದಾಗಿಸಿಕೊಳ್ಳಬೇಕಾದ ಅಗತ್ಯವನ್ನು ಸಾರಿ ಹೇಳುವ ಗಹನ ವಿಷಯವನ್ನು ಕಪ್ಪು–ಬಿಳುಪು ಬಣ್ಣಗಳಲ್ಲಿ ಪರಿಣಾಮಕಾರಿಯಾಗಿ ಸಮಕಾಲೀನ ಶೈಲಿಯಲ್ಲಿ ಹೇಳುತ್ತ ಪ್ರದರ್ಶನದ ಮೌಲ್ಯವನ್ನು ಹೆಚ್ಚಿಸಿದೆ.

ತಮಿಳುನಾಡಿನ ಖ್ಯಾತ ಕಲಾವಿದ ಎಸ್. ಇಳಯರಾಜ ಅವರ ಕೃತಿ ಪ್ರದರ್ಶನದ ಪ್ರಮುಖ ಆಕರ್ಷಣೆ. ತೈಲವರ್ಣದಲ್ಲಿ ರಚಿಸಿರುವ ಹೂ ಮಾರುವ ಮಹಿಳೆ ನಮ್ಮ ಎದುರೇ ಕುಳಿತು ಸಂಭಾಷಿಸುತ್ತಿರುವಂತೆ ಭಾಸವಾಗುತ್ತದೆ. ಹಳ್ಳಿಗಾಡಿನವಳಾದರೂ ವ್ಯಕ್ತಿತ್ವದಲ್ಲಿ ಕಾಣುವ ಒಪ್ಪ–ಓರಣ ಗಮನ ಸೆಳೆಯುತ್ತದೆ. ಮುಖದಲ್ಲಿ ಅರಳಿದ ಹೌದೋ ಅಲ್ಲವೋ ಎನ್ನುವ ಮುಗುಳ್ನಗು, ಸೀರೆಯ ಅಂಚಿನ ಜರಿ, ಬುಟ್ಟಿಯಲ್ಲಿ ಮಾರಾಟಕ್ಕೆ ಉಳಿದ ಕೆಲವೇ ಹೂಗಳು ಚಿತ್ರದ ಸೌಂದರ್ಯ ಹೆಚ್ಚಿಸಿವೆ.

ದನ ಕಾಯುವ ಮಹಿಳೆಯೊಬ್ಬಳು ಒಂದೆಡೆ ಕುಳಿತು ಏನೋ ಚಿಂತಿಸುತ್ತಿರುವ ಚಿತ್ರಣ ಮಹಾರಾಷ್ಟ್ರದ ಸಿದ್ಧಾರ್ಥ ಶಿಂಗಾಡೆ ಅವರ ಸಮಕಾಲೀನ ಶೈಲಿಯ ಕೃತಿಯ ವಸ್ತು. ವಿಷ ಕುಡಿದು ನೀಲಕಂಠನಾದ ಶಿವನ ಚಿತ್ರವೂ ಇದೇ ಶೈಲಿಯಲ್ಲೇ ಆಕರ್ಷಕವಾಗಿ ಮೂಡಿ ಬಂದಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್ ಅವರು ಪೆನ್ ಆ್ಯಂಡ್ ಇಂಕ್ ಮಾಧ್ಯಮದ ಕೃತಿ ಮೂರೇ ಬಣ್ಣಗಳಲ್ಲಿ ಮೇಳೈಸಿದೆ. ಕಪ್ಪು ಬಣ್ಣದ ಗಾಢ ಹಿನ್ನೆಲೆಯಲ್ಲಿ ದಂತವರ್ಣದ ಶಿಲೆಗಳ ಕಲಾಕೃತಿಯಂತೆ ತೋರುತ್ತದೆ.

ಡಿ.ವಿ. ಹಾಲಭಾವಿ ಅವರ ಗಿರಿಜಾ ಕಲ್ಯಾಣ ಪ್ರಸಂಗದ ಸರಣಿ ಚಿತ್ರಗಳು ವಿಶಿಷ್ಟವಾಗಿದ್ದು, ಕಲಾ ವಿದ್ಯಾರ್ಥಿಗಳಿಗೆ ಮಹತ್ವಪೂರ್ಣ ಎನಿಸಿವೆ. ಅಂತರರಾಷ್ಟ್ರೀಯ ಕಲಾವಿದ ವಾಸುದೇವ್ ಕಾಮತ್ ತೈಲವರ್ಣದಲ್ಲಿ ರಚಿಸಿರುವ ವ್ಯಕ್ತಿಯ ಚಿತ್ರ ನೈಜ ಎನಿಸಿದರೆ, ಅವರ ಮತ್ತೊಂದು ಕೃತಿ 'ಫ್ಯಾಮಿಲಿ' ಸೃಜನಾತ್ಮಕ ದೃಷ್ಟಿಕೋನವನ್ನೂ ಪರಿಚಯಿಸುತ್ತದೆ. ಹುಬ್ಬಳ್ಳಿಯ ಪ್ರತಾಪ ಬಹುರೂಪಿ ಅವರ ಕಲಾಕೃತಿಗಳಲ್ಲಿ ಹಂಪಿಯ ಕ್ರಿಯೇಟಿವ್ ಲ್ಯಾಂಡ್‌ಸ್ಕೇಪ್ ಆಕರ್ಷಕವಾಗಿದೆ.

ಮಹಾರಾಷ್ಟ್ರದ ಭಾರ್ಗವ್ ಅವರ ಕ್ರಿಯೇಟಿವ್ ಲ್ಯಾಂಡ್‌ಸ್ಕೇಪ್ ಚಿತ್ರಣವು ನಮ್ಮ ಸುತ್ತಮುತ್ತಲಿನ ಹಲವು ದೃಶ್ಯಗಳೇ ಎಷ್ಟು ಕಲಾತ್ಮಕವಾಗಿರುತ್ತವೆ ಎಂದು ಕನ್ನಡಿ ಹಿಡಿದಂತೆ ಇದೆ. ಒತ್ತಡದ ಬದುಕಿನಲ್ಲಿ ನಾವು ದಿನವೂ ಸಾಗುವ ಹಾದಿ, ನೋಡುವ ನಗರಗಳ ಕಟ್ಟಡಗಳು ಕಲಾವಿದನೊಬ್ಬನ ದೃಷ್ಟಿಯಲ್ಲಿ ಎಷ್ಟು ಸುಂದರವಾಗಿ ಕಾಣಬಹುದು ಎಂದು ಇಲ್ಲಿ ನೋಡಬಹುದು.

ಸಂಜೀವ್ ಸಕ್ಪಾಲ್ ಅವರ ಸಮಕಾಲೀನ ಶೈಲಿಯ ರಾಧಾ–ಕೃಷ್ಣ ಕೃತಿಯೂ ವಿಶಿಷ್ಟ ಶೈಲಿಯಿಂದ ಗಮನ ಸೆಳೆಯುತ್ತದೆ. ಈ ಕೃತಿಯಲ್ಲಿ ರಾಧಾ–ಕೃಷ್ಣರಿಗೆ ಕಣ್ಣುಗಳು ಇಲ್ಲದಿದ್ದರೂ ಅವರ ಅನನ್ಯ ಪ್ರೀತಿ ಹೊರಹೊಮ್ಮುವಂತಿದೆ. ದಯಾನಂದ ಕಾಮಕರ್ ಅವರ ಸಮಕಾಲೀನ ಮಹಿಳೆ, ಕೊಳಲನೂದುವ ಮಹಿಳೆಯರ ಚಿತ್ರಣಗಳೂ ಸೃಜನಾತ್ಮಕ ಹಾಗೂ ಸಮಕಾಲೀನ ಶೈಲಿಗಳ ಶಕ್ತಿಯುತ ಅಭಿವ್ಯಕ್ತಿಯಾಗಿವೆ.

ಮಹಾರಾಷ್ಟ್ರದ ಆದಿತ್ಯ ಚಾರಿ ಅವರ ಪೌರಾಣಿಕ ಕಲಾಕೃತಿ ರಿಯಲಿಸ್ಟಿಕ್ ಕೃತಿಗಳ ಸುಂದರತೆಯತ್ತ ಗಮನ ಸೆಳೆಯುತ್ತದೆ. ಇವರು ಬಾಹುಬಲಿ ಚಿತ್ರಕ್ಕೆ ಪಾತ್ರಗಳನ್ನು ಚಿತ್ರಿಸಿಕೊಟ್ಟ ಕಲಾವಿದರಾದ್ದರಿಂದ ಕೃತಿಯಲ್ಲಿ ಅಂಥದ್ದೇ ಶೈಲಿಯ ಝಲಕ್ ಕಂಡು ಬಂತು.

ಕೃಷ್ಣನ ಲೀಲೆಗಳನ್ನು ಗ್ಲಾಸ್ ಪೇಂಟಿಂಗ್ ಸರಣಿ ಮಾಡಿರುವ ಗೋಪಾಲ್ ಸುಬೇದಾರ್ ಅವರ ಗ್ಲಾಸ್ ಪೇಂಟಿಂಗ್ ನೋಡಲೇಬೇಕಾದ ಕೃತಿ. ಹುಬ್ಬಳ್ಳಿಯ ಜಗನ್ನಾಥ ಸೋನಾವಣೆ ಅವರ ಮಿನಿಯೇಚರ್ ಕಲಾಕೃತಿ ಸೂಕ್ಷ್ಮ ರೇಖೆಗಳಲ್ಲಿ ಹಲವು ಕಥೆಗಳನ್ನು ಹೇಳುವ ಸಾಹಸ. ಇಂಥ ಶ್ರಮಪೂರ್ಣ ಕಲಾಕೃತಿಗಳನ್ನು ಮಾಡುವವರೂ ಈಚೆಗೆ ಅಪರೂಪ ಎನಿಸಿದ್ದಾರೆ.

ಕರಿಯಪ್ಪ ಹಂಚಿನಮನಿ ಅವರ ಸಮಕಾಲೀನ ಚಿತ್ರ ಮೀನು ಮಾರುವವಳು ಗಾಢ ವರ್ಣ ಹಾಗೂ ಚಲನಶೀಲತೆಯ ಭಾಸ ಮೂಡಿಸುವಲ್ಲಿ ಯಶಸ್ವಿಯಾಗಿದೆ.



ಮಹಾರಾಷ್ಟ್ರದ ಭಾರ್ಗವ್ ಅವರ ಕಲಾಕೃತಿ

ರಂಗದ ಮೇಲೆ ಬುಕರ್ ಪ್ರಶಸ್ತಿಯ ಎದೆಯ ಹಣತೆ

ಜನಮನದಾಟ...

2005 ರಲ್ಲಿ ಶ್ರೀನಿವಾಸ ವೈದ್ಯ ಅವರ ಕಥೆಗಳ ಓದಿನೊಂದಿಗೆ 'ಜನಮನದಾಟ' ಪ್ರಾರಂಭವಾಯಿತು. ಇದುವರೆಗೂ 'ಉಚಲ್ಯಾ', 'ರಹಸ್ಯ ವಿಶ್ವ', 'ಬಾಬಾ ಸಾಹೇಬ್ ಅಂಬೇಡ್ಕರ್', 'ಕುರುಕ್ಷೇತ್ರ' ಮೊದಲಾದ ಇಪ್ಪತ್ತಕ್ಕೂ ಹೆಚ್ಚು ನಾಟಕಗಳನ್ನು ಎಂಟುನೂರಕ್ಕೂ ಅಧಿಕ ಪ್ರದರ್ಶನಗಳನ್ನು ರಾಜ್ಯ, ಹೊರ ರಾಜ್ಯಗಳಲ್ಲಿ ನೀಡಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಪ್ರಸ್ತುತ ಬಾನು ಮುಷ್ತಾಕರ 'ಎದೆಯ ಹಣತೆ' ಹಾಗೂ ಪೂರ್ಣಚಂದ್ರ ತೇಜಸ್ವಿಯವರ 'ಮಾಯಾಮೃಗ' ನಾಟಕಗಳ ಪ್ರದರ್ಶನಕ್ಕಾಗಿ ರಾಜ್ಯದ ವಿವಿಧೆಡೆ ಸಂಚಾರ ಕೈಗೊಂಡಿದೆ.





'ಎದೆಯ ಹಣತೆ' ನಾಟಕದ ದೃಶ್ಯ

• ರುದ್ರೇಶ್ ಅದರಂಗಿ

ಹಸುಗೂಸನ್ನು ಎದೆಗೆ ಅವುಚಿಕೊಂಡ ಮಹರುನ್ ಗಂಡನ ಮನೆಯನ್ನು ತೊರೆದು ತವರಮನೆಗೆ ಬಂದಾಗ-ಹಜಾರದ ದಿವಾನ್ ಮೇಲೆ ತಂದೆ ಅಡ್ಡಾಗಿದ್ದ, ದೊಡ್ಡಣ್ಣ ಫಾರೂಕ್ ಗಪ್ಪೆಂದು ಉಪೇಕ್ಷೆಯಿಂದ ನೋಡುತ್ತಿದ್ದ, ಶೇವ್ ಮಾಡುತ್ತಿದ್ದ ಅಮಾನ್ ಬ್ರಷ್ ಹಿಡಿದಂತೆಯೇ ಹಜಾರಕ್ಕೆ ದೌಡಾಯಿಸಿದ್ದ, ಕುರ್‌ಆನ್ ಓದುತ್ತಿದ್ದ ಅತ್ತಿಗೆ ದಿಟ್ಟಿಸುತ್ತಿದ್ದಳು, ತಾಯಿ ತಸ್‌ಬೀಹ್ ಗರ ಬಡಿದವಳಂತೆ ನಿಂತಿದ್ದಳು, ಅತ್ತಿಗೆಯರು ವಿಲಕ್ಷಣವಾಗಿ ದಿಟ್ಟಿಸುತ್ತಿದ್ದರು... ಹೀಗೆ ಮೊದಲ ದೃಶ್ಯವೇ ವಿಶಾಲವಾದ ಕ್ಯಾನ್ವಾಸಿನ ಚಿತ್ರದಂತೆ ಮೂಡುವುದರೊಂದಿಗೆ ಬುಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರ ಕಥೆಯಾಧಾರಿತ 'ಎದೆಯ ಹಣತೆ' ನಾಟಕ ರಂಗದ ಮೇಲೆ ತೆರೆದುಕೊಳ್ಳುತ್ತದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ಹೆಗ್ಗೋಡಿನ ಸತ್ಯಶೋಧನಾ ರಂಗ ಸಮುದಾಯದ 'ಜನಮನದಾಟ' ಅಭಿನಯಿಸಿದ 'ಎದೆಯ ಹಣತೆ' ನಾಟಕದ ಪ್ರತಿ ದೃಶ್ಯದಲ್ಲಿಯೂ ಭಾವಗಳ ಅಭಿವ್ಯಕ್ತಿಯ ಸರಮಾಲೆಯೇ ಇದೆ.

ಸಂಭಾಷಣೆಗಳು ಭಾವಾಭಿವ್ಯಕ್ತಿಗೆ ಪ್ರೇರಕವಾಗಿದ್ದು, ಕಲಾವಿದರ ಅಭಿನಯವೇ ಪ್ರಧಾನವಾಗಿದೆ. ಕಥೆಯನ್ನು ಸರಳವಾಗಿ ಎರಡು ಸಾಲಿನಲ್ಲಿ ಹೇಳಬಹುದಾದರೂ, ಅದನ್ನು ಅಭಿವ್ಯಕ್ತಪಡಿಸಿರುವ ಕಲಾತ್ಮಕತೆ ಪ್ರೇಕ್ಷಕರನ್ನು ಸೆಳೆಯುತ್ತದೆ. ಮೆಹರುನ್ ತವರುಮನೆಗೆ ಬರುವುದರೊಂದಿಗೆ ಪ್ರಾರಂಭವಾಗಿ ಪ್ರತಿ ದೃಶ್ಯವೂ ಕುತೂಹಲದಿಂದ ಸೂಜಿಮೊನೆಯ ಮೇಲೆ ನಿಲ್ಲಿಸುತ್ತದೆ. ಸಾಂಪ್ರದಾಯಿಕ ಕುಟುಂಬದಲ್ಲಿ ಬೆಳೆದ ಮೆಹರುನ್ ಇನಾಯತ್‌ನೊಂದಿಗೆ ವಿವಾಹವಾಗಿ ಬದುಕಿನ ನೊಗವನ್ನು ಹೊತ್ತವಳು. ಆರು ಮಕ್ಕಳ ತಾಯಿಯಾಗಿ ಬಸವಳಿದು, ಅವಳ ಅಸ್ತಿತ್ವವನ್ನು ಗುರುತಿಸುವ ಹಂತದಲ್ಲಿ ಚರ್ಮ ಸುಕ್ಕಾಗಿದ್ದಳು. ಇತ್ತ ಗಂಡ ಪಾತರಗಿತ್ತಿ ನರ್ಸ್‌ಳ ದಾಸನಾಗಿ, ಮೆಹರುನ್‌ಳ ಆತ್ಮವನ್ನು ನಗ್ನಗೊಳಿಸುವಂತೆ 'ನೀನು ನನ್ನ ತಾಯಿ ಸಮಾನ' ಎಂದಾಗ ನಿಂತ ನೆಲ ಕುಸಿದಂತಾಗುತ್ತದೆ. ಪರಕೀಯ ಭಾವನೆ ಹೆಚ್ಚಾದಾಗ ಆಸರೆಗಾಗಿ ತವರಿನತ್ತ ಮುಖ ಮಾಡುತ್ತಾಳೆ. ಅಣ್ಣಂದಿರು ಮುಖಕ್ಕೆ ಹೊಡೆದಂತೆ ಟ್ಯಾಕ್ಸಿಯಲ್ಲಿ ಗಂಡನ ಮನೆಗೆ ಸಾಗಹಾಕಿ 'ನೀನೇ ಸರಿ ತೂಗಿಸ್ಕೊಂಡು ಹೋಗ್ಬೇಕು' ಎನ್ನುವ ಉಪದೇಶ ಹೇಳಿ ಜಾರಿಕೊಳ್ಳುತ್ತಾರೆ. ಹಿರಿ ಮಗಳು ಸಲ್ಮಾ ತಮ್ಮ-ತಂಗಿಯರ ಆರೈಕೆಯಲ್ಲಿ ಅಮ್ಮನಿಗೆ ಆಸರೆಯಾಗಿರುತ್ತಾಳೆ. ಗಂಡನಮನೆ ಬಾಣಲೆಯಾದರೆ, ತವರಮನೆ ಬೆಂಕಿಯಂತಾದಾಗ ನಿರಾಶಳಾಗುತ್ತಾಳೆ. ಚೌಕಟ್ಟು ಒಡೆದಿತ್ತು, ಚಿತ್ರ ಬೇರೆಯಾಗಿತ್ತು. ಅವಳಲ್ಲಿ ಯಾವುದೋ ಆವೇಶ ಮನೆ ಮಾಡಿತ್ತು. ಅವಳು ನಿಧಾನವಾಗಿ ಮಂಚದಿಂದ ಇಳಿಯುತ್ತಾಳೆ. ತನ್ನ ಹಸುಗೂಸನ್ನು ನೋಡಿ ಹೊರಬಂದವಳು ಹಿರಿಮಗಳು ಸಲ್ಮಾಳನ್ನು ನೋಡಲು ಧೈರ್ಯ ಸಾಲದೇ ಅಂಗಳದಲ್ಲಿ ನಿಂತು ಕತ್ತಲನ್ನು ದಿಟ್ಟಿಸುತ್ತಾ ಸೀಮೆಎಣ್ಣೆಯನ್ನು ಮೈಮೇಲೆ ಸುರಿದುಕೊಳ್ಳುತ್ತಾಳೆ. ಹಸುಗೂಸಿನ ಅಳುವಿನಿಂದ ಎಚ್ಚೆತ್ತ ಸಲ್ಮಾ ಮಗುವನ್ನು ಎದೆಗವಚಿಕೊಂಡು ಅಂಗಳಕ್ಕೆ ಬಂದಾಗ ಅಮ್ಮನನ್ನು ನೋಡಿ ತತ್ತರಿಸಿ ಹೋಗುತ್ತಾಳೆ. 'ಅಬ್ಬಾಗೋಸ್ಕರ ಸಾಯಲು ಸಿದ್ಧಳಾಗಿರುವ ನೀನು ನಮಗಾಗಿ ಬದುಕಲು ಸಾಧ್ಯವಿಲ್ಲವೆ?' ಎನ್ನುವ ಮಾತು ಆರುತ್ತಿದ್ದ ಮೆಹರುನ್‌ಳ ಎದೆಯ ಹಣತೆಯನ್ನು ಉದ್ದೀಪನಗೊಳಿಸುತ್ತದೆ. ಯಾವುದೇ ಕಥೆಗಾರರಿಗೂ ಸವಾಲೆಂದರೆ ಕಥೆಯನ್ನು ಕೊನೆಗಾಣಿಸುವುದು. ಕಥೆ ಹೇಗಾದರೂ ಕೊನೆಯಾಗಬಹುದು, ಆದರೆ ಸಂದೇಶ? ಬಾನು ಮುಷ್ತಾಕ್‌ರವರ ಕಥೆಗಳ ಪ್ರಧಾನ ಲಕ್ಷಣವೇ ಭರವಸೆಯಾಗಿದೆ.

ನಾಟಕದ ವಸ್ತು ಗಂಭೀರವಾಗಿದ್ದು, ನಿರ್ದೇಶಕ ಗಣೇಶ ಎಂ. ಹೆಗ್ಗೋಡು ಅವರು ಸಾಲು ಸಾಲು ದೃಶ್ಯ ದೃಶ್ಯಗಳ ಮೂಲಕ ಬಂಧಗೊಳಿಸಿದ್ದಾರೆ. ಆಂಗಿಕ ಮತ್ತು ವಾಚಿಕ ಎರಡನ್ನೂ ಏಕಕಾಲದಲ್ಲಿ ನಿರ್ವಹಿಸಿರುವ ಕಲಾತ್ಮಕತೆ ಗಮನ ಸೆಳೆಯುತ್ತದೆ. ಏಕಕಾಲಕ್ಕೆ ಪಾತ್ರಗಳೇ ಸನ್ನಿವೇಶವನ್ನು ಕಟ್ಟಿಕೊಡುತ್ತ ಭಾವವನ್ನು ಪ್ರೇಕ್ಷಕರಿಗೆ ದಾಟಿಸುತ್ತವೆ. ಭಾವಾಭಿವ್ಯಕ್ತಿಯು ಎಲ್ಲಿಯೂ ವಾಚ್ಯವಾಗದೆ ಕಲಾವಿದರ ಭಾವವು ಪ್ರೇಕ್ಷಕರಲ್ಲಿ ಧ್ವನಿಯಾಗಿರುವುದು ನಾಟಕದ ಯಶಸ್ಸನ್ನು ಸೂಚಿಸುತ್ತದೆ. ಎನ್‌ಎಸ್‌ಡಿ ಪದವೀಧರೆ ಸಲ್ಮಾ ದಂಡಿನ್ ಅವರು ಮೆಹರುನ್ ಪ್ರಧಾನ ಪಾತ್ರ ಮಾಡಿರುವುದು ಅವರ ಅನುಭವಕ್ಕೆ ಸಾಕ್ಷಿಯಾಗಿದೆ.

ವಸ್ತುವಿನ ಗಂಭೀರತೆಯು ನಟನೆಯ ಮೂಲಕ ಮತ್ತಷ್ಟು ಚುರುಕನ್ನು ಪಡೆದುಕೊಂಡು ಸಂವಹನದಲ್ಲಿ ಸಾರ್ಥಕತೆಯನ್ನು ಪಡೆದಿದೆ. ಮೊದಲ ದೃಶ್ಯದಿಂದ ಕೊನೆಯ ದೃಶ್ಯದವರೆಗೂ ಆವರಿಸಿಕೊಂಡಿರುವ ಪಾತ್ರದ ಕಲಾವಂತಿಕೆ ಅಭಿನಯದ ಔನ್ನತ್ಯವನ್ನು ಸಾಕ್ಷೀಕರಿಸುತ್ತದೆ. ಕಾರಿನಲ್ಲಿ ಚಲಿಸುವಾಗಿನ ಸ್ಥಿರಚಿತ್ರದ ಕ್ಯಾನ್ವಾಸ್ ಮನೆಯಲ್ಲಿ ರಂಗನ್ನು ಪಡೆದು ಅಂತ್ಯದಲ್ಲಿ ಪ್ರಜ್ವಲಿಸುವಂತೆ ಮಾಡಿದ್ದಾರೆ. ಮಗಳಾಗಿ ಸ್ನೇಹ, ಅಮಾನ್‌ನಾಗಿ ಅಶೋಕ್ ಕುಮಾರ್, ಇನಾಯತ್ತಾಗಿ ಸತೀಶ ಪಿ.ಬಿ., ಚೇತನ್, ರಂಜಿತ್ ಶೆಟ್ಟಿ, ಯೋಗೀಶ್ ನಾಯ್ಕ ಕುಣಜಿ, ಸಂಗೀತದಲ್ಲಿ ಕೃಷ್ಣ ಬಡಿಗೇರ್, ಬೆಳಕಿನಲ್ಲಿ ಚೇತನ್ ಬೆಳಗಾವಿ ಮೊದಲಾದ ಅನುಭವೀ ಕಲಾವಿದರು ಮತ್ತು ತಂತ್ರಜ್ಞರು ನಾಟಕವನ್ನು ಯಶಸ್ವಿಗೊಳಿಸಿದ್ದಾರೆ.

ಮುನ್ನೋಟ 20-07-2025 ರಿಂದ 26-07-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ದೇಹದಲ್ಲಿ ಶಕ್ತಿ ಕುಂದಿದಂತೆ ಭಾಸವಾಗುವುದು. ಆದಾಯವು ನಿರೀಕ್ಷೆಯಷ್ಟಿದ್ದರೂ, ಖರ್ಚಿನ ಪಟ್ಟಿಯೂ ಬೆಳೆಯುತ್ತದೆ. ಹಿರಿಯರ ಜತೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಮಕ್ಕಳ ನಡವಳಿಕೆಯ ಬಗ್ಗೆ ಸರಿಯಾಗಿ ಗಮನ ಇಡುವುದು ಒಳ್ಳೆಯದು. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಅಲಂಕಾರದ ಬಗ್ಗೆ ಹೆಚ್ಚಿನ ಗಮನ ಕೊಡುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಮಕ್ಕಳಿಂದ ನಿಮಗೆ ಉತ್ತಮ ಸಹಕಾರ ಸಿಗುತ್ತದೆ. ಮಕ್ಕಳಿಗಾಗಿ ಸ್ವಲ್ಪ ಹಣ ಖರ್ಚಾಗುತ್ತದೆ. ಸಂಗೀತಗಾರರಿಗೆ ಬೇಡಿಕೆ ಕಡಿಮೆಯಾಗಬಹುದು. ಸಂಗಾತಿಯಿಂದ ಕುಟುಂಬದಲ್ಲಿ ಸಂತೋಷದ ವಾತಾವರಣ ಮೂಡುತ್ತದೆ. ಅನಿರೀಕ್ಷಿತ ಆದಾಯ ಲಭಿಸಬಹುದು. ತಂದೆಯಿಂದ ಕೃಷಿ ಭೂಮಿ ದೊರೆಯುವ ಸಾಧ್ಯತೆಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ನಿರೀಕ್ಷೆಗೆ ಮೀರಿದ ಗೌರವ ನಿಮಗೆ ದೊರೆಯುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಬಂಧುಗಳ ಅಸಹಕಾರ ನಿಮ್ಮನ್ನು ಕಾಡುತ್ತದೆ. ಹಣದಿಂದ ಸಂಸಾರದಲ್ಲಿ ಸಂತೋಷವನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಕೃಷಿ ಸಲಕರಣೆಗಳನ್ನು ಬಳಸುವಾಗ ಎಚ್ಚರ. ಸಂಗಾತಿಯು ಎಲ್ಲ ಸಂದರ್ಭಗಳಲ್ಲೂ ನಿಮಗೆ ಪೂರಕವಾಗಿರುವರು. ರಾಜಕಾರಣಿಗಳ ಸಹಾಯದಿಂದ ವೃತ್ತಿಯಲ್ಲಿ ಮೇಲೆ ಬರಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಬುದ್ಧಿವಂತಿಕೆಯಿಂದ ಸಾಕಷ್ಟು ಗೌರವವನ್ನು ಪಡೆದುಕೊಳ್ಳುವಿರಿ. ಆತ್ಮವಿಶ್ವಾಸವು ಹೆಚ್ಚಾಗಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಒರಟು ಮಾತುಗಳು ಖಂಡಿತ ಬೇಡ. ಕಟ್ಟಡಗಳಿಗೆ ಅಲಂಕಾರ ಮಾಡುವ ನುರಿತ ಕೆಲಸಗಾರರಿಗೆ ಬೇಡಿಕೆ ಹೆಚ್ಚಾಗಿ, ಆದಾಯವು ಹೆಚ್ಚುತ್ತದೆ. ಮಕ್ಕಳಿಂದ ಕಠಿಣ ನುಡಿಗಳನ್ನು ಕೇಳಬೇಕಾಗಬಹುದು. ಪಿತ್ತ ಸಂಬಂಧಿ ದೋಷಗಳು ಕಾಡಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕ್ರೀಡಾಪಟುಗಳಿಗೆ ಈಗ ಉತ್ತಮ ಅವಕಾಶ ಮತ್ತು ಸೌಲಭ್ಯ ದೊರೆಯುತ್ತವೆ. ಆದಾಯವು ಕಡಿಮೆಯಿದ್ದು, ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ನಿಮ್ಮ ವೈಯಕ್ತಿಕ ಮನೋಬಲ ಕುಗ್ಗಿದಂತಾಗುತ್ತದೆ. ಸಂಗಾತಿಯಿಂದ ಸಂಸಾರದಲ್ಲಿ ಸಂತೋಷ ಹೆಚ್ಚುತ್ತದೆ. ಹಳೆಯ ಕಾಯಿಲೆಗಳು ಮರುಕಳಿಸುವ ಸಾಧ್ಯತೆಗಳಿವೆ. ಸಂಗಾತಿಯ ಕಠಿಣ ಪ್ರಶ್ನೆಗಳನ್ನು ಎದುರಿಸಲಾಗದೆ ಒದ್ದಾಡುವಿರಿ. ವ್ಯಾಪಾರದಲ್ಲಿ ಅನೀರಿಕ್ಷಿತ ಹಿನ್ನಡೆ ಕಾಣಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ಕಡಿಮೆಯಿದ್ದು, ಹಿರಿಯರ ಸಹಕಾರದಿಂದ ಆರ್ಥಿಕ ಸ್ಥಿರತೆಯನ್ನು ಕಾಣಬಹುದು. ಕೃಷಿಯಿಂದ ನಿಮ್ಮ ನಿರೀಕ್ಷೆಯಷ್ಟು ಆದಾಯ ಬರುವುದಿಲ್ಲ. ಮನೆಪಾಠ ಹೇಳಿಕೊಡುವವರ ಆದಾಯ ಹೆಚ್ಚುತ್ತದೆ. ಮಕ್ಕಳ ಏಳಿಗೆ ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ವಿದೇಶಿ ಸಂಸ್ಥೆಗಳಲ್ಲಿ ಹೂಡಿದ ಹಣ ಈಗ ಮುಳುಗಡೆಯಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಆದಾಯವು ಕಡಿಮೆ ಇರುತ್ತದೆ. ನಿಮ್ಮ ನಡವಳಿಕೆಗಳಲ್ಲಿ ಈಗ ಯಾವುದೋ ಗುರಿಸಾಧನೆ ಮಾಡುವ ಆಲೋಚನೆ ಇರುತ್ತದೆ. ಕೃಷಿ ಭೂಮಿಗೆ ಹಣ ಹಾಕುವ ಮುಂಚೆ ಎಚ್ಚರವಹಿಸಿ. ಮಕ್ಕಳು ಸ್ವಲ್ಪ ಕಠಿಣವಾಗಿ ಮಾತನಾಡುವ ಸಾಧ್ಯತೆಗಳಿವೆ. ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ಹಳೆಯ ಮೂಳೆನೋವುಗಳು ಕೆಲವರನ್ನು ಕಾಡಬಹುದು. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರಿಂದ ಸಾಲ ಸಿಗುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮ ಸಂಗಾತಿಯ ಒಲವು ಜಾಸ್ತಿ ಆಗುತ್ತದೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಶತ್ರುಗಳೇ ಈಗ ನಿಮ್ಮ ಮಿತ್ರರಾಗುವರು. ವಿದೇಶಿ ಕಂಪನಿಗಾಗಿ ಭೂಮಿಯನ್ನು ಒದಗಿಸಿ ಕೊಡುವವರಿಗೆ ಆದಾಯ ಹೆಚ್ಚುತ್ತದೆ. ಉಷ್ಣ ಸ್ಥಾವರಗಳಲ್ಲಿ ಕೆಲಸ ಮಾಡುವವರು ಹೆಚ್ಚು ಎಚ್ಚರವಹಿಸಿ. ಸಂಗಾತಿಯಿಂದ ಆರ್ಥಿಕ ಸಹಾಯ ಹರಿದುಬರುತ್ತದೆ. ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಕಾನೂನಿನ ತೊಡಕುಗಳು ಎದುರಾಗಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆಲಸಿತನದಿಂದ ಯಾವುದೇ ಕೆಲಸ ಮಾಡಲು ಮನಸ್ಸಿರುವುದಿಲ್ಲ. ಆದಾಯವು ತಕ್ಕ ಮಟ್ಟಿಗೆ ಇರುತ್ತದೆ. ವಿದೇಶದಲ್ಲಿರುವ ಸ್ನೇಹಿತರ ಸಹಾಯದಿಂದ ನೀವು ವಿದೇಶಕ್ಕೆ ಹೋಗಲು ಪ್ರಯತ್ನಪಡಬಹುದು. ಸಾಂಪ್ರದಾಯಿಕ ಕೃಷಿ ಮಾಡಲು ತಯಾರಿ ನಡೆಸುವಿರಿ. ಹಿರಿಯರ ಧಾರ್ಮಿಕ ಕಾರ್ಯಗಳಲ್ಲಿ ನೆರವಾಗುವಿರಿ. ಸಂಗಾತಿಯಿಂದ ಆರ್ಥಿಕ ಸಹಾಯ ಸಿಗುತ್ತದೆ. ಸರ್ಕಾರಿ ವ್ಯವಹಾರಗಳಲ್ಲಿ ನಿರೀಕ್ಷಿತ ಪ್ರಗತಿ ಇರುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವಿದೇಶಿ ವ್ಯಾಪಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದೇಶಿ ಭಾಷಾ ಬೋಧಕರಿಗೆ ಬೇಡಿಕೆ ಹೆಚ್ಚುತ್ತದೆ. ಶತ್ರುಗಳನ್ನು ಹುಡುಕಿ ಮಣಿಸುವಿರಿ. ಕೃಷಿ ತಂತ್ರಜ್ಞರಿಗೆ ನಿರೀಕ್ಷಿತ ಫಲಿತಾಂಶಗಳು ದೊರೆಯುವುದಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ದೊರೆಯುವ ಯೋಗವಿದೆ. ಯಾವುದೇ ರೀತಿಯ ಸಾಲದ ವ್ಯವಹಾರಗಳು ಖಂಡಿತ ಬೇಡ. ಸಂಗಾತಿ ಮಾಡುತ್ತಿರುವ ಸರ್ಕಾರಿ ವ್ಯವಹಾರಗಳಲ್ಲಿ ಲಾಭ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಯುವಕರಲ್ಲಿ ಕೋಪ ಹೆಚ್ಚಾಗಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಉನ್ನತ ವಿದ್ಯಾಭ್ಯಾಸ ಮಾಡುತ್ತಿರುವವರಿಗೆ ಉತ್ತಮ ಅನುಕೂಲಗಳಿರುತ್ತವೆ. ಉಷ್ಣ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ನಿಮ್ಮ ಸಂಗಾತಿ ಕಡೆಯವರಿಂದ ಒಳ್ಳೆಯ ಕೆಲಸಗಳಿಗೆ ಸಹಕಾರ ದೊರೆಯುತ್ತದೆ. ಸರ್ಕಾರಿ ಗುತ್ತಿಗೆ ಹಣ ಬರುವುದು ನಿಧಾನವಾಗಬಹುದು. ನಿಮ್ಮ ಹಿರಿಯರ ಜತೆ ಪುಣ್ಯ ಕ್ಷೇತ್ರ ದರ್ಶನ ಮಾಡುವ ಯೋಗವಿದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಶ್ರಮಪಟ್ಟು ಕೆಲಸ ಮಾಡಲು ಪ್ರಯತ್ನ ಪಡುವಿರಿ. ಆದಾಯವು ಮಂದಗತಿಯಲ್ಲಿರುತ್ತದೆ. ಆಸ್ತಿ ಕೊಳ್ಳಲು ಬೇಕಾದ ಹಣ ಹೊಂದಿಕೆಯಾಗಲಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಹರಿತವಾದ ಆಯುಧಗಳಿಂದ ಗಾಯವಾಗುವ ಸಂದರ್ಭವಿದೆ. ಸಂಗಾತಿಯಿಂದ ಧಾರ್ಮಿಕ ಸ್ಥಳಗಳಲ್ಲಿ ನಿಮ್ಮ ಗೌರವ ಹೆಚ್ಚಾಗುತ್ತದೆ.


ಪದಬಂಧ 2901

ಮೇಲಿನಿಂದ ಕೆಳಕ್ಕೆ

1. ದೇವಾಲಯದ ಗೋಪುರಕ್ಕೆ ಮೆರೆಗು ನೀಡುವ ಕುಂಭ 3
2. ಕೆಳಕ್ಕೆ ಬಿದ್ದವರನ್ನು ಮೇಲೆತ್ತಿ ಪುನೀತಗೊಳಿಸುವ ಸೀತಾರಾಮ 6
3. ಆನೆಯೊಡೆಯನಾಗಿ ಅರಸನ ಹೆಸರು 4
4. ಒಂದು ರೀತಿಯ ಕುಶಲತೆ, ವಿಷಯದ ಪಾಂಡಿತ್ಯ 4
6. ಗಂಡು ತತ್ವವನ್ನು ವಿವರಿಸುವ ವೇದೋಕ್ತ ಸಾರ 5
8. ಮಂಜಿನಿಂದ ಕವಿಯ ಮನ ಗೆದ್ದ ಕೊಡಗಿನ ಶುದ್ಧ ಬೀಡು 4
10. ಸಂಸ್ಕೃತದ ಮುತ್ತುಗ, ಕೆಂಪು ಹೂವಿಗೆ ಆಕರ್ಷಕ 3
11. ಒಟ್ಟಿಗೆ ಜೊತೆಯಾಗಿ ಬಾಳುವ ಬದುಕು 5
12. ಬೆಂಗಳೂರಿನ ಗಡಿಯಲ್ಲಿರುವ ಕೆಂಪೇಗೌಡರೂರು 3
13. ಹಾರುವ ವಾಹನಕ್ಕೆ ಒದಗಿದ ವಿಪತ್ತು 6
14. ಮೇಲಿನಿಂದ ಕೆಳಕ್ಕೆ ಆರರಲ್ಲಿರುವ ಪುರುಷನಿಗೆ ಸಾವಿರ ಕಣ್ಣು 4
15. ಬಲ್ಲವ, ಅರಿತು ಅನುಭವ ಪಡೆದವ 4
16. ಹುಡುಕಲು ಅನರ್ಹವಾದ ಹರಿವ ನೀರಿನ ಉಗಮ ಸ್ಥಾನ 4
18. ಮೊದಲ ಅವರ್ಗೀಯ ವ್ಯಂಜನಕ್ಕೆ ಹಚ್ಚಿದ ಅಲ್ಪ ಖಾರ 3

ಎಡದಿಂದ ಬಲಕ್ಕೆ

1. ಕುಶಲತೆ, ಲಾಲಿತ್ಯಗಳ ಪ್ರದರ್ಶನಕ್ಕೆ ಮೀಸಲಾದ ಗುಡಿ 5
3. ಕನ್ನಡದ ಈಶ ಪುತ್ರ 3
5. ಕುದುರೆಗೆ ಕಟ್ಟಿದ ಕಬ್ಬಿಣದ ಬಿಲ್ಲೆ ಸವಾರನಿಗೆ ಕಾಲ್ತಡೆ 3
7. ಕಾಲವನ್ನು ಮೀರಿದವ 5
9. ಹಿಮಗಿರಿ ತನಯೆಯ ಗಂಡ 5
11. ಬೆಸನಾಗದೆ, ಹೆಚ್ಚು ಕಡಿಮೆ ಎಂಬುದಿಲ್ಲದ ಒಂದೇ ಮಜಲು 5
13. ವಿಚಾರದಲ್ಲಿ ಮುಳುಗಿದ ಭೋಗಿ 5
15. ಮಾತಿನಲ್ಲಿ ಮಾಡುವ ಗೌರವದ ನಮಸ್ಕಾರ 5
17. ದುಃಖ, ಕಷ್ಟಗಳು ಕ್ರಮೇಣ ನಿಶ್ಶೇಷ 5
19. ಈತ ಎಂದೂ ನನ್ನವನೇ 3
20. ಶುರು ಮಾಡಿದ ಸ್ಥಳಕ್ಕೆ ಸುತ್ತಿಬರುವ ಆಕಾರ 3
21. ಸಂಸ್ಕೃತದ 'ತತ್' ಜೊತೆ ಸೇರಿದ ಕನ್ನಡದ ಆಮೇಲೆ 5



ಪದಬಂಧ ಉತ್ತರ -2900

ಮೇಲಿಂದ ಕೆಳಕ್ಕೆ

1.ಭರಣಿ 2.ಗಧಾಸಮರ 3.ಶತವಂದನ 4.ಶರ್ವಾಣಿ 7.ಕನಸು 8.ಮಾನಸ 12.ಲಗೋರಿ 14.ಸವಾಲು 17.ಹವಳ 19.ತಕ್ಷಕ 20. ನಯವಂಚನೆ 21.ಗುರುಚರಣ 22.ಎರಕ 26.ಲಗೂನ 28.ರಭಸ


ಎಡದಿಂದ ಬಲಕ್ಕೆ

1.ಭವರೋಗ 3.ಶತ್ರುನಾಶ 5.ಧಾವಂತ 6.ಕ್ಷಣಿಕ 8.ಮಾಣಿಕ್ಯ 9.ನವಮ 10.ದರ್ಶನ 11.ಹಲಸು 13.ರಸನ 15.ಸಹನೆ 18.ಪ್ರೇರಿತ 20.ನಲುಗು 22.ಎಳಸು 23.ಕ್ಷತ್ರಿಯ 24.ರುಧಿರ 25.ಚಾಲಕ 27.ಕರಮ 29.ಚತುರ 30.ನಮ್ಮಮನೆ 31.ಋರ್ಪಮಸ

ಸೌಂದರ್ಯತತ್ತ್ವಜ್ಞ ಕೆ.ಕೃಷ್ಣಮೂರ್ತಿ

• ಶತಾವಧಾನಿ ಆರ್.ಗಣೇಶ್

ಮಾನವ ಸಂಸ್ಕೃತಿಯ ಒಂದು ಪ್ರಮುಖ ಲಕ್ಷಣ ಸೌಂದರ್ಯ ಸಂವೇದನೆ. ಪ್ರಕೃತಿಯಲ್ಲಿ ಕಂಡ ಚೆಲುವನ್ನು ರುಚಿಗೊಪ್ಪುವಂತೆ ಪುನರ್ನಿರ್ಮಿಸಿಕೊಳ್ಳುವ ಹವಣು ಕಲೆಯೆಂದರೆ ತಪ್ಪಲ್ಲ. ಕಲೆಯ ಹುಟ್ಟಿನೊಡನೆ ಅದರ ಗುಟ್ಟನ್ನು ಭೇದಿಸುವ, ಸೊಗಸನ್ನು ಆಸ್ವಾದಿಸುವ, ಆಸ್ವಾದನೆಯ ನೆಲೆ-ಬೆಲೆಗಳನ್ನು ನಿರ್ಧರಿಸುವ ಕೃಷಿಯೂ ಸಾಗಿತು. ಇದೇ ಸೌಂದರ್ಯ ಮೀಮಾಂಸೆ. ಈ ವಿದ್ಯೆಯನ್ನು ಸಹಸ್ರಮಾನಗಳಿಂದ ಬೆಳೆಸಿಕೊಂಡು ಬಂದ ಬಲ್ಮೆ ಭಾರತೀಯರದು. ಸಹಜವಾಗಿಯೇ ಈ ಸೌಂದರ್ಯಚಿಂತನೆ ಸಂಸ್ಕೃತದಲ್ಲಿ ಬೆಳೆದುಬಂದಿದೆ. ಇದನ್ನು ಆಧುನಿಕ ಜಗತ್ತಿಗೆ ಇಂಗ್ಲಿಷ್ ಭಾಷೆಯ ಮೂಲಕ ಕೊಟ್ಟವರಲ್ಲಿ ನಮ್ಮ ನಾಡಿನವರೇ ಆದ ಎಂ.ಹಿರಿಯಣ್ಣವರೂ ಸೇರಿದಂತೆ ಅನೇಕರಿದ್ದಾರೆ. ಕನ್ನಡದಲ್ಲಿ ಇದನ್ನು ವ್ಯಾಪಕವಾಗಿ ತಂದುಕೊಟ್ಟವರ ಪೈಕಿ ಕೆ. ಕೃಷ್ಣಮೂರ್ತಿಯವರ ಸ್ಥಾನ ಅನನ್ಯ. ನೂರು ವರ್ಷಗಳಿಗೂ ಮುನ್ನ ಜನಿಸಿದ ಇವರು ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತರು; ಅಲಂಕಾರಶಾಸ್ತ್ರ ಎಂದು ಹೆಸರಾದ ಭಾರತೀಯ ಸೌಂದರ್ಯ ಮೀಮಾಂಸೆಯ ಒಳ-ಹೊರಗನ್ನು ಬಲ್ಲ ವಿದ್ವಾಂಸರು.



ಮೈಸೂರು ವಿಶ್ವವಿದ್ಯಾನಿಲಯದ ಅತ್ಯುತ್ತಮ ವಿದ್ಯಾರ್ಥಿಯಾಗಿ ಹೊಮ್ಮಿದ ಕೃಷ್ಣಮೂರ್ತಿ ನಮ್ಮ ರಾಜ್ಯದ ಮೊದಲ ಸಂಸ್ಕೃತ ಪಿಎಚ್.ಡಿ ಪದವೀಧರರೂ ಹೌದು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಇವರು ತಮ್ಮ ಪಾಂಡಿತ್ಯದ ಮೂಲಕ ದೇಶ-ವಿದೇಶಗಳ ವಿದ್ವಾಂಸರನ್ನು ಅಲ್ಲಿಗೆ ಆಕರ್ಷಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತು, ಕೇಂದ್ರ ಸಾಹಿತ್ಯ ಅಕಾಡೆಮಿ ಮೊದಲಾದ ಅನೇಕ ಸಾಹಿತ್ಯ ಸಂಸ್ಥೆಗಳ ಸಹಯೋಗದಲ್ಲಿ ಹತ್ತಾರು ಮೌಲಿಕ ಪ್ರಕಲ್ಪಗಳನ್ನು ಕೈಗೊಂಡು ಒಳ್ಳೆಯ ಕೃತಿಗಳು ಹೊರಬರುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು. ಸ್ಫೂರ್ತಿದಾಯಕ ಪ್ರಾಧ್ಯಾಪಕರಾಗಿ ಅನೇಕ ವಿದ್ಯಾರ್ಥಿಗಳನ್ನು ರೂಪಿಸಿದ್ದಲ್ಲದೆ ಹತ್ತಾರು ಮಂದಿಗೆ ಸಂಶೋಧನ ಮಾರ್ಗದರ್ಶಕರಾಗಿ ವಿದ್ವತ್ತೆಯ ಪರಂಪರೆಯನ್ನು ಬೆಳೆಸಿದರು. ಮೂರು ಭಾಷೆಗಳಲ್ಲಿ ಎಪ್ಪತ್ತಕ್ಕೂ ಹೆಚ್ಚು ಗ್ರಂಥಗಳನ್ನೂ ನೂರಾರು ಲೇಖನಗಳನ್ನೂ ರಚಿಸಿದ ಬಿಡುವಿಲ್ಲದ ದುಡಿಮೆ ಇವರದು.

ಕೃಷ್ಣಮೂರ್ತಿಯವರು ಸಾವಿರ ವರ್ಷಗಳಿಂದ ಕನ್ನಡದಲ್ಲಿ ಅವತರಿಸದಿದ್ದ ಅಲಂಕಾರಶಾಸ್ತ್ರದ ಹತ್ತಾರು ಮೌಲಿಕ ಗ್ರಂಥಗಳನ್ನು ಅತ್ಯಂತ ಸಮರ್ಥವಾಗಿ ಅನುವಾದಿಸಿ ನಮ್ಮ ನುಡಿಯನ್ನು ಸಮೃದ್ಧಗೊಳಿಸಿದರು. 'ಧ್ವನ್ಯಾಲೋಕ ಮತ್ತು ಲೋಚನಸಾರ', 'ಕನ್ನಡ ಕಾವ್ಯಪ್ರಕಾಶ', 'ಕನ್ನಡ ಕಾವ್ಯಾಲಂಕಾರ', 'ಕನ್ನಡ ಕಾವ್ಯಮೀಮಾಂಸೆ' ಮುಂತಾದ ಅನೇಕ ಅನುವಾದಗಳು ಇವರ ಯೋಗದಾನವನ್ನು ಸಾರಿವೆ. ಧ್ವನ್ಯಾಲೋಕ ಮತ್ತು ವಕ್ರೋಕ್ತಿಜೀವಿತಗಳ ಮೊತ್ತಮೊದಲ ಪರಿಷ್ಕೃತ ಆವೃತ್ತಿಗಳನ್ನು ಇಂಗ್ಲಿಷ್ ಅನುವಾದದೊಡನೆ ಜಗತ್ತಿಗೆ ನೀಡಿದ ಶ್ರೇಯಸ್ಸು ಇವರದು.

ಕೃಷ್ಣಮೂರ್ತಿಯವರು ಭಾಸ, ಕಾಳಿದಾಸ, ಶೂದ್ರಕ, ಭವಭೂತಿ, ಶಕ್ತಿಭದ್ರ ಮುಂತಾದವರ ಶ್ರೇಷ್ಠ ನಾಟಕಗಳನ್ನೂ ಅಭಿಜಾತ ಶೈಲಿಯಲ್ಲಿ ಕನ್ನಡಿಸಿದ್ದಾರೆ. 'ಕನ್ನಡದಲ್ಲಿ ಕಾವ್ಯತತ್ತ್ವ', 'ಭಾರತೀಯ ಕಾವ್ಯಮೀಮಾಂಸೆ: ತತ್ತ್ವ ಮತ್ತು ಪ್ರಯೋಗ', 'ಸೃಜನಶೀಲತೆ ಮತ್ತು ಪಾಂಡಿತ್ಯ', 'ಬಸವಣ್ಣನವರ ವಚನಗಳ ಮೀಮಾಂಸೆ' ಮೊದಲಾದ ಅಪೂರ್ವ ಒಳನೋಟಗಳುಳ್ಳ ಸ್ವೋಪಜ್ಞ ಗ್ರಂಥಗಳನ್ನು ನಿರ್ಮಿಸಿದ ಇವರು 'ಸಂಸ್ಕೃತಕಾವ್ಯ'ದ ಮೂಲಕ ದೇವವಾಣಿಯ ಸಾಹಿತ್ಯಕ್ಕೆ ಅನನ್ಯ ಪ್ರವೇಶಿಕೆಯನ್ನು ಒದಗಿಸಿದ್ದಾರೆ. ನೂರಾರು ಸಂಶೋಧನ ಪ್ರಬಂಧಗಳನ್ನು ಬರೆದಿರುವುದಲ್ಲದೆ ಕನ್ನಡ ವಿಶ್ವಕೋಶಕ್ಕೂ ತಮ್ಮ ಯೋಗದಾನ ನೀಡಿದ್ದಾರೆ.

'The Dhvanyaloka and its Critics,' 'Essays in Sanskrit Criticism,' 'Studies in Indian Aesthetics and Criticism,' 'Indian Literary Theories: A Reappraisal' ಮೊದಲಾದ ಅನೇಕ ಸ್ವೋಪಜ್ಞ ಗ್ರಂಥಗಳನ್ನು ಇಂಗ್ಲಿಷಿನಲ್ಲಿ ನಿರ್ಮಿಸಿ ನಮ್ಮ ನಾಡಿನ ವಿದ್ವತ್ತೆಗೆ ಅಂತರರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿದ್ದಾರೆ.

ಸಂಸ್ಕೃತ ಕಾವ್ಯಮೀಮಾಂಸೆಯ ತತ್ತ್ವಗಳು ಆ ಭಾಷೆಗಷ್ಟೇ ಸೀಮಿತವಲ್ಲ, ಅವು ವೈಶ್ವಿಕವೆಂಬುದನ್ನು ತಮಗಿದ್ದ ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯದ ಆಳವಾದ ಪಾಂಡಿತ್ಯದ ಮೂಲಕ ಪ್ರಾಯೋಗಿಕ ವಿಮರ್ಶೆಯೊಡನೆ ಕೃಷ್ಣಮೂರ್ತಿಯವರು ಸಾಬೀತು ಮಾಡಿದ್ದಾರೆ. ಇದನ್ನು ಅವರ ಶ್ರೇಷ್ಠ ಕಾಣಿಕೆಯೆನ್ನಬಹುದು. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳನ್ನು ಸಮರ್ಥವೂ ಸುಂದರವೂ ಆದ ರೀತಿಯಲ್ಲಿ ಬಳಸಬಲ್ಲ ಪ್ರೌಢಿಮೆಯನ್ನು ಹೊಂದಿದ್ದ ಇವರು ಈ ನುಡಿಗಳಲ್ಲಿ ಗದ್ಯದಂತೆಯೇ ಪದ್ಯವನ್ನೂ ಲೀಲೆಯಿಂದ ರಚಿಸುತ್ತಿದ್ದರು. ಹೀಗಾಗಿ ಇವರು ಮಾಡಿದ ಶಾಸ್ತ್ರ-ಕಾವ್ಯ ಅನುವಾದಗಳು ಆ ಜಾಡಿನ ಉತ್ಕೃಷ್ಟ ಮಾದರಿಗಳಾಗಿ ನಿಂತಿವೆ. 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳಿಗೆ ನಿಯತವಾಗಿ ಗ್ರಂಥ ವಿಮರ್ಶೆಯನ್ನು ಮಾಡುತ್ತಿದ್ದ ಕೃಷ್ಣಮೂರ್ತಿ ಕೇವಲ ಸಾಂಪ್ರದಾಯಿಕ ವಿದ್ವಾಂಸರಾಗಿ ಉಳಿಯದೆ ಆಧುನಿಕ ಮನಸ್ಸಿನ ಸಹೃದಯ ಸಮೀಕ್ಷಕರೂ ಆಗಿದ್ದರು.

ರಾಜ್ಯೋತ್ಸವ ಪ್ರಶಸ್ತಿ, ಅಖಿಲ ಭಾರತ ಪ್ರಾಚ್ಯ ವಿದ್ಯಾಸಮ್ಮೇಳನದ ಅಧ್ಯಕ್ಷತೆ, ರಾಷ್ಟ್ರಪತಿ ಪುರಸ್ಕಾರ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಉತ್ತರ ಪ್ರದೇಶ ಸಂಸ್ಕೃತ ಅಕಾಡೆಮಿ ಪ್ರಶಸ್ತಿ, ಪಿ. ವಿ. ಕಾಣೆ ಸ್ವರ್ಣಪದಕ ಮುಂತಾದ ಅನೇಕ ಗೌರವಗಳು ಕೃಷ್ಣಮೂರ್ತಿಯವರನ್ನು ಅರಸಿಬಂದವು. ಇವರ ಸಲಹೆ, ಮಾರ್ಗದರ್ಶನಗಳನ್ನು ಪಡೆಯಲು ದೇಶ-ವಿದೇಶಗಳ ಹೆಸರಾಂತ ವಿದ್ವಾಂಸರು ಬಂದು ಕೃತಾರ್ಥರಾಗುತ್ತಿದ್ದರು. "ಕೃಷ್ಣಮೂರ್ತಿಯವರು ಸಾಹಿತ್ಯ ಮೀಮಾಂಸೆಯನ್ನು ಕುರಿತು ಹೇಳುವುದು ಕೇವಲ ಅಭಿಪ್ರಾಯವಲ್ಲ, ಅದು ನಿರ್ಣಯ" ಎಂಬ ವಿದ್ವನ್ಮಾನ್ಯತೆಯನ್ನು ಗಳಿಸಿದ್ದ ಇವರು ನಮ್ಮನ್ನಗಲಿ ಮೂರು ದಶಕಗಳೇ ಉರುಳುತ್ತ ಬಂದಿವೆ. ಆದರೂ ಅವರ ವಿದ್ವತ್ಕಾರ್ಯ ಮಸಕಾಗಿಲ್ಲ. ಇದು ಮತ್ತೆಷ್ಟೋ ಕಾಲ ಬೆಳಗಲಿದೆ. ಈ ಸಾರಸ್ವತ ಕಾರ್ಯವನ್ನು ಹಸುರಾಗಿ ಉಳಿಸುವಲ್ಲಿ ಮೂರು ದಶಕಗಳಿಂದ ದುಡಿಯುತ್ತಿರುವ ಕೃಷ್ಣಮೂರ್ತಿಯವರ ಪುತ್ರಿ ಕೆ.ಲೀಲಾಪ್ರಕಾಶ್ ಅವರ ಕ್ರತುಶಕ್ತಿ ಸ್ತವನೀಯ.

ಇಂಥ ಮಹನೀಯರ ಜನ್ಮಶತಮಾನೋತ್ಸವದ ಸಮಾರೋಪ ಸಮಾರಂಭ ಜುಲೈ 26, 2025 ರ ಶನಿವಾರ ಮೈಸೂರಿನಲ್ಲಿ ನಡೆಯಲಿದೆ. ಇದರಲ್ಲಿ ನಾಡಿನ ಹೆಸರಾಂತ ವಿದ್ವಾಂಸರು ಪಾಲ್ಗೊಳ್ಳಲಿದ್ದಾರೆ. ಕೃಷ್ಣಮೂರ್ತಿಯವರ ಕನ್ನಡ ಲೇಖನಗಳ ಸಂಗ್ರಹ 'ಕಾವ್ಯತತ್ತ್ವೋಲ್ಲೇಖ' ಮತ್ತು ಶತಾಬ್ದಸಂಸ್ಮರಣಗ್ರಂಥ 'ಕೃಷ್ಣಾಲೋಕ' ಈ ವೇದಿಕೆಯಲ್ಲಿ ಲೋಕಾರ್ಪಣೆಗೊಳ್ಳಲಿವೆ.



ಓದಿಗಾಗಿ ಒಂದೆಡೆ ಸೇರಿದ ಬೆಳಗಾವಿ ಬುಕ್ ಕ್ಲಬ್ ಸದಸ್ಯರು

ವಿವಿಧ ಸ್ಪರ್ಧೆಗಳು

ಆರಂಭದಲ್ಲಿ ಕೆಲ ಸದಸ್ಯರಿಗೆ ಓದಿನ ಅಭಿರುಚಿಯೇ ಇರಲಿಲ್ಲ. ಈಗ ಅವರೂ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ ಎಂಬುದೇ ಖುಷಿಯ ವಿಷಯ. ಸತತ ಮಳೆ, ಪರೀಕ್ಷೆಗಳು, ಸಾಲು–ಸಾಲು ರಜೆಗಳಿದ್ದಾಗ ಹೊರತುಪಡಿಸಿ, ಉಳಿದೆಲ್ಲ ಭಾನುವಾರ ಸೇರುತ್ತಾರೆ. ಓದು, ಮಾತುಕತೆಗಷ್ಟೇ ಕ್ಲಬ್‌ನ ಚಟುವಟಿಕೆ ಸೀಮಿತವಾಗಿಲ್ಲ. ಪ್ರತಿವರ್ಷ ಚಿತ್ರಕಲಾ ಉತ್ಸವ, ಕನ್ನಡ ಕಾವ್ಯೋತ್ಸವ ಸ್ಪರ್ಧೆ ಆಯೋಜಿಸುತ್ತದೆ. ಬೆಳಗಾವಿಗೆ ಭೇಟಿ ನೀಡುವ ವಿಮರ್ಶಕರು, ಸಾಹಿತಿಗಳು ಮತ್ತು ಲೇಖಕರೊಂದಿಗೆ ಸಂವಾದ ಏರ್ಪಡಿಸುತ್ತದೆ.

ಬಹುಭಾಷಿಕರ ಬೆಳಗಾವಿ ಬುಕ್ ಕ್ಲಬ್

• ಇಮಾಮ್‌ಹುಸೇನ್ ಗೂಡುನವರ

ಬದಲಾದ ಕಾಲಘಟ್ಟದಲ್ಲಿ ಓದುವ ಸಂಸ್ಕೃತಿ ಕಡಿಮೆಯಾಗುತ್ತಿದೆ. ಮಕ್ಕಳು, ಯುವಜನರು ಮೊಬೈಲ್‌ನಲ್ಲೇ ಹೆಚ್ಚಿನ ಸಮಯ ಕಳೆಯುತ್ತಿದ್ದಾರೆ. ಎಲ್ಲಾ ವಯೋಮಾನದವರೂ ಇದರಿಂದ ಹೊರತಾಗಿಲ್ಲ ಎನ್ನುವ ಆರೋಪ ಮಾಮೂಲು. ಆದರೆ, 'ಬೆಳಗಾವಿ ಬುಕ್ ಕ್ಲಬ್' ಇದನ್ನು ತಕ್ಕ ಮಟ್ಟಿಗೆ ಸುಳ್ಳಾಗಿಸಿದೆ. ಪ್ರತಿ ಭಾನುವಾರ ಬುಕ್ ಕ್ಲಬ್ ಸದಸ್ಯರು ಒಂದೆಡೆ ಸೇರುತ್ತಾರೆ. ಇಲ್ಲಿ ಬೇರೆ ಬೇರೆ ಭಾಷಿಕರು ಸದಸ್ಯರಾಗಿದ್ದಾರೆ. ಹಿರೀಕರು, ಯುವಕರು ಮತ್ತು ಮಹಿಳೆಯರೂ ಇದ್ದಾರೆ. ಇವರೆಲ್ಲರನ್ನೂ ಒಂದಾಗಿಸಿದ್ದು, ಬಂಧ ಗಟ್ಟಿಗೊಳಿಸಿದ್ದು ಓದು ಮತ್ತು ಸಾಹಿತ್ಯ.

ವೈದ್ಯರು, ಎಂಜಿನಿಯರ್‌ಗಳು, ಲೆಕ್ಕ ಪರಿಶೋಧಕರು, ವಾಸ್ತುಶಿಲ್ಪಿಗಳು, ಉದ್ಯಮಿಗಳು, ಬೇರೆ ಬೇರೆ ಉದ್ಯೋಗದಲ್ಲಿ ಇರುವವರು, ಪಿಯುಸಿಯಿಂದ ಸ್ನಾತಕೋತ್ತರ ಕೋರ್ಸ್‌ವರೆಗೆ ಓದುತ್ತಿರುವ ವಿದ್ಯಾರ್ಥಿಗಳು ಮತ್ತು ಸೇವಾನಿವೃತ್ತಿ ಹೊಂದಿದವರು ಈ ಕ್ಲಬ್‌ನ ಸದಸ್ಯರು. ಇವರೆಲ್ಲರ ಮಧ್ಯೆ ಓದಿನ ನಂಟಿದೆ. ಭಾಷಾತೀತ ಸಾಹಿತ್ಯದ ಬೆಸುಗೆಯೂ ಇದೆ.

ವಾರಕ್ಕೊಮ್ಮೆ ಸೇರುವ ಇವರು, ಒಂದು ವಾರದ ಅವಧಿಯಲ್ಲಿ ಓದಿದ ಪುಸ್ತಕಗಳ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಾರೆ. ತಮ್ಮ ತಮ್ಮ ಬಳಿ ಇರುವ ಉತ್ತಮ ಪುಸ್ತಕಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಯಾರಾದರೂ ಕತೆ, ಕವನ, ಚುಟುಕು ರಚಿಸಿದ್ದರೆ ಇಲ್ಲಿ ಪ್ರಸ್ತುತಪಡಿಸುತ್ತಾರೆ. ಮಾರುಕಟ್ಟೆಗೆ ಬರುವ ಹೊಸ ಕೃತಿಗಳ ಕುರಿತಾಗಿ ವಿಮರ್ಶಿಸುತ್ತಾರೆ.

ಮೊಬೈಲ್ ದೂರ ಇರಿಸುವ ಷರತ್ತು

'ಓದುವ ಸಂಸ್ಕೃತಿ ಬೆಳೆಸುವ ಆಶಯದಿಂದ ಸಣ್ಣ ಪ್ರಯತ್ನವಾಗಿ 2022ರಲ್ಲಿ 'ಬೆಳಗಾವಿ ಬುಕ್ ಕ್ಲಬ್' ಸ್ಥಾಪಿಸಿದೆವು. ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಇದನ್ನು ಉದ್ಘಾಟಿಸಿ, ನಮ್ಮಲ್ಲಿ ಪ್ರೇರಣೆ ತುಂಬಿದ್ದರು. ಅಂದಿನಿಂದ ಪ್ರತಿವಾರ ಬುಕ್‌ಹೌಸ್, ಉದ್ಯಾನ ಅಥವಾ ಯಾವುದಾದರೂ ಕೆಫೆಯಲ್ಲಿ ಸೇರಿ ಪುಸ್ತಕ ಓದುತ್ತೇವೆ. ಓದು, ಚರ್ಚೆ ಅರ್ಥಪೂರ್ಣವಾಗಬೇಕು. ಹಾಗಾಗಿ ಈ ವೇಳೆ ಮೊಬೈಲ್ ದೂರವಿಡಬೇಕು ಎಂಬುದೇ ನಮ್ಮ ಮೊದಲ ಷರತ್ತು' ಎಂದು ಮಾತು ಆರಂಭಿಸಿದರು ಕ್ಲಬ್‌ನ ಕ್ಯೂರೇಟರ್ ಅಭಿಷೇಕ ಬೆಂಡಿಗೇರಿ.

'ನಮ್ಮದು ಭಾಷಾತೀತ ತತ್ವದಡಿ ಸ್ಥಾಪಿತ ಕ್ಲಬ್. ಇದೇ ಭಾಷೆ ಮತ್ತು ಇದೇ ಸಾಹಿತ್ಯ ಪ್ರಕಾರದ ಪುಸ್ತಕ ಓದಬೇಕೆಂಬ ನಿಯಮವಿಲ್ಲ. ಇಲ್ಲಿಗೆ ಬರುವವರು ಕನ್ನಡ, ಇಂಗ್ಲಿಷ್, ಮರಾಠಿ, ಕೊಂಕಣಿ, ಉರ್ದು, ಹಿಂದಿ ಮತ್ತಿತರ ಭಾಷೆಗಳ ಹಲವು ಪ್ರಕಾರಗಳ ಪುಸ್ತಕಗಳನ್ನು ಓದುತ್ತಾರೆ. ಪುಸ್ತಕದಲ್ಲಿನ ಸ್ವಾರಸ್ಯಕರ ಸಂಗತಿ ಕುರಿತಾಗಿ ಚರ್ಚಿಸುತ್ತಾರೆ. ಹೊಸದಾಗಿ ಸಾಹಿತ್ಯ ಕೃಷಿ ಮಾಡುವವರು ಸಲಹೆ ಪಡೆಯುತ್ತಾರೆ. ನಮ್ಮ ಭೇಟಿಯಿಂದಲೇ ಪ್ರೇರಣೆ ಪಡೆದು, ಈಗಾಗಲೇ ಮೂರ್ನಾಲ್ಕು ಜನರು ಉತ್ತಮ ಕೃತಿ ಹೊರತಂದಿದ್ದಾರೆ' ಎಂದು ಅವರು ಹೆಮ್ಮೆಯಿಂದ ಹೇಳುತ್ತಾರೆ.

ಆರಂಭದಲ್ಲಿ ಕೆಲವರು ಇಲ್ಲಿ ಮಾತನಾಡುವುದನ್ನು ಕೇಳಲಷ್ಟೇ ಬರುತ್ತಿದ್ದರು. ಅಂಥವರೂ ಈಗ ಪುಸ್ತಕ ಓದಲು ಆರಂಭಿಸಿದ್ದಾರೆ. ಪಠ್ಯಪುಸ್ತಕಗಳ ಓದಿಗೆ ಸೀಮಿತರಾಗಿದ್ದ ವಿದ್ಯಾರ್ಥಿಗಳು ವಿವಿಧ ಪ್ರಕಾರಗಳ ಸಾಹಿತ್ಯ ಓದುತ್ತಿದ್ದಾರೆ. ಕನ್ನಡ ಪುಸ್ತಕಗಳನ್ನಷ್ಟೇ ಓದುತ್ತಿದ್ದವರು ಇತರರೊಂದಿಗೆ ಬೆರೆತು, ಬೇರೆ ಭಾಷೆ ಸಾಹಿತ್ಯದತ್ತಲೂ ಆಕರ್ಷಿತರಾಗಿದ್ದಾರೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಪುಸ್ತಕ ಇಷ್ಟ. ಅವರ ಯಾವುದನ್ನಾದರೂ ಓದಲಿ. ಒಟ್ಟು ಓದುವ ರುಚಿ ಅವರಿಗೆ ಹತ್ತಲಿ ಎಂಬುದಷ್ಟೇ ನಮ್ಮ ಕಳಕಳಿ ಎನ್ನುತ್ತಾರೆ ಸಹಾಯಕಿ ಪ್ರಾಧ್ಯಾಪಕಿಯೂ ಆಗಿರುವ ಕ್ಲಬ್‌ನ ಸದಸ್ಯೆ ಶ್ರದ್ಧಾ ಹಿರೇಮಠ.

'ಬೆಳಗಾವಿ ಬುಕ್ ಕ್ಲಬ್' ತನ್ನ ಇನ್‌ಸ್ಟಾಗ್ರಾಂ ಪುಟ ತೆರೆದಿದ್ದು, ಒಂದು ಸಾವಿರಕ್ಕೂ ಅಧಿಕ ಸದಸ್ಯರಿದ್ದಾರೆ. ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಕಾಲೇಜ್ ಆಫ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್ ಲಿಂಗರಾಜ ಕಾಲೇಜ್ (ಸಿಬಾಲ್ಕ್) ಹಾಗೂ ಗೋಗಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಜಿಐಟಿ) ಜತೆಗೆ ಶೈಕ್ಷಣಿಕ ಒಪ್ಪಂದ ಮಾಡಿಕೊಂಡು, ವಿದ್ಯಾರ್ಥಿಗಳಲ್ಲೂ ಓದುವ ಹವ್ಯಾಸ ಬೆಳೆಸುತ್ತಿದೆ.

ಸಾಂಸ್ಕೃತಿಕ ಜೀವಂತಿಕೆ

'ಉತ್ತಮ ರಸ್ತೆ, ಪಾರ್ಕ್ ಅಥವಾ ಮಾಲ್‌ಗಳಿಂದ ಯಾವುದೇ ಊರು ಖ್ಯಾತಿ ಪಡೆಯಬಹುದು. ಆದರೆ, ಸಾಂಸ್ಕೃತಿಕ ಜೀವಂತಿಕೆ ಪಡೆಯುವುದು ಸಂಗೀತ, ಸಿನಿಮಾ, ನಾಟಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳಿಂದ. ಬೆಳಗಾವಿ ಬುಕ್ ಕ್ಲಬ್ ತನ್ನೂರಲ್ಲಿ ಇಂಥ ಸಾಂಸ್ಕೃತಿಕ ಜೀವಂತಿಕೆ ಕಾಪಾಡುತ್ತಿದೆ. ಈ ಗುಂಪಿನಲ್ಲಿ ತರುಣ–ತರುಣಿಯರಿದ್ದಾರೆ. ಅದರಲ್ಲೂ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದವರು ಹೆಚ್ಚಿದ್ದಾರೆ. ನನ್ನ 'ಕುಲುಮೆ' ಪುಸ್ತಕ ಪ್ರಕಟವಾದಾಗ ಈ ಗುಂಪು ಸಂವಾದ ಕಾರ್ಯಕ್ರಮ ಏರ್ಪಡಿಸಿತ್ತು. ನನ್ನ ಓದುಗರನ್ನು ಭೇಟಿಯಾಗಿ ಸಂತಸಪಟ್ಟಿದ್ದೆ. ಈ ಕ್ಲಬ್‌ನ ಸದಸ್ಯರು ಖರೇ ಖರೇ ಓದುಗರು' ಎಂದು ಸಾಹಿತಿ ರಹಮತ್ ತರೀಕೆರೆ ಹೇಳುತ್ತಾರೆ.

'ಆರಂಭದಲ್ಲಿ ಐದಾರು ಸ್ನೇಹಿತರಷ್ಟೇ ಸೇರಿ, ಒಂದೆರಡು ತಾಸು ಚರ್ಚಿಸುತ್ತಿದ್ದೆವು. ಈಗ 20ಕ್ಕೂ ಅಧಿಕ ಜನರು ಪ್ರತಿವಾರ ಸೇರುತ್ತೇವೆ. ಈಗ ಶಿಸ್ತುಬದ್ಧವಾಗಿ ಓದುತ್ತಿದ್ದೇವೆ. ಗುಂಪಿನ ಸದಸ್ಯರ ಸಂಖ್ಯೆ ಕಡಿಮೆಯೇ ಇರಬಹುದು. ಆದರೆ, ಓದುವ ಸಂಸ್ಕೃತಿ ಉಳಿಸಲು ಪ್ರಯತ್ನಿಸುತ್ತಿದ್ದೇವೆ' ಎನ್ನುತ್ತಾರೆ ನಿಹಾರಿಕಾ ಮಿಶ್ರಾ.

ಕಲೆ, ಸಾಹಿತ್ಯ, ಸಂಗೀತ, ಸಿನಿಮಾ ಸಾಂಸ್ಕೃತಿಕ ಜೀವಂತಿಕೆಯ ಸಂಕೇತ. ಇವುಗಳಲ್ಲಿ ಒಂದು ಪುಟ್ಟ ತೊರೆಯಂತೆ ಬೆಳಗಾವಿ ಬುಕ್ ಕ್ಲಬ್ ಹರಿಯುತ್ತಿದೆ. ಮುಂದೆ ದೊಡ್ಡ ನದಿಯಾಗಲಿ.



ಸರೋಜಾದೇವಿ, ಜಯಂತಿ

ತಾರೆಗಳ ತೋಟದ ಧ್ರುವತಾರೆ

8ನೇ ಪುಟದಿಂದ...

'ಮಹಾಕವಿ ಕಾಳಿದಾಸ' ಚಿತ್ರಕ್ಕೆ ಆಯ್ಕೆ ಮಾಡಿದ ಹೊನ್ನಪ್ಪ ಭಾಗವತರ್ ಅವರು, ಚಿತ್ರ ಸಾಹಿತಿ ಕು.ರಾ.ಸೀತಾರಾಮಶಾಸ್ತ್ರೀ ಅವರನ್ನು ಸರೋಜಾದೇವಿಗೆ ಕನ್ನಡ ಕಲಿಸಲು ನೇಮಿಸಿದರು. ಅಭಿನಯ, ಸಂಭಾಷಣೆಯಲ್ಲಿನ ಉಚ್ಚಾರ, ಶಬ್ದದ ಏರಿಳಿತಗಳು ಹೀಗೆ ಅಭಿನಯದ ಎಲ್ಲ ಸೂಕ್ಷ್ಮಗಳನ್ನು ಕುರಾಸೀ ಅವರ ಮನೆಪಾಠದ ಮೂಲಕ ಸರೋಜಾದೇವಿ ಅವರಿಗೆ ಕಲಿಸಿದರು. ಆದರೂ ಸರೋಜಾದೇವಿ ಅವರ ಬಹಳಷ್ಟು ಸಿನಿಮಾಗಳು ಅವರ ಕೃತಕ, ನಾಟಕೀಯ ಸಂಭಾಷಣೆಯನ್ನು ಒಪ್ಪಿಸುವ ಭಾರದಿಂದ ನಲುಗಿವೆ. ಈ ಸಹಜತೆ ಇಲ್ಲದ ಕಾರಣದಿಂದಲೇ ಸರೋಜಾದೇವಿ ಅವರು ಹಿಂದಿ ಚಿತ್ರರಂಗದಲ್ಲಿ ಯಶಸ್ಸು ಕಾಣಲು ಸಾಧ್ಯವಾಗಲಿಲ್ಲ. ಮಲಯಾಳಂ ಚಿತ್ರರಂಗ ಪ್ರವೇಶಿಸಲೂ ಸಾಧ್ಯವಾಗಲಿಲ್ಲ.

ತಮಿಳಿನಲ್ಲಿ ಪ್ರೇಕ್ಷಕರು ಸದಾ ಬಿ.ಸರೋಜಾದೇವಿ ಅವರನ್ನು ನೆನಪಿಸಿಕೊಳ್ಳಲು ಅಲ್ಲಿನ ನಾಯಕರ ಪ್ರಭಾವವೂ ಇದೆ. ತಮಿಳುನಾಡಿನಲ್ಲಿ ಎಂಜಿಆರ್ ಎಂದರೆ ಇಂದಿಗೂ ಪ್ರೇಕ್ಷಕರಿಗೆ ಏನೋ ಪುಳಕ. ಎಂಗವೀಟ್ಟು ಪಿಳ್ಳೈ, ಅನ್ಬೇ-ವಾ,ತಿರುಡಾದೆ, ಪಡಕೋಟಿ ಮೊದಲಾದ ಚಿತ್ರಗಳನ್ನು ಪದೇ ಪದೇ ವೀಕ್ಷಿಸಲು ಇಷ್ಟಪಡುವ ಅಭಿಮಾನಿಗಳು ಸದಾ ಸರೋಜಾದೇವಿ ಅವರನ್ನು ಸ್ಮರಿಸುತ್ತಲೇ ಇರುತ್ತಾರೆ. ಕನ್ನಡ ಪ್ರೇಕ್ಷಕರೂ ಚಾರಿತ್ರಿಕ ಚಿತ್ರ ಎನ್ನುವ ಕಾರಣದಿಂದ ಕಿತ್ತೂರು ಚೆನ್ನಮ್ಮ, ರಾಜ್‌ಕುಮಾರ್ ಅವರೊಂದಿಗೆ ಅಭಿನಯಿಸಿರುವ ಭಾಗ್ಯವಂತರು, ಮಲ್ಲಮ್ಮನ ಪವಾಡ ಚಿತ್ರಗಳಲ್ಲಿ ಸರೋಜಾದೇವಿ ಅವರ ಅಭಿನಯವನ್ನು ನೆನಪಿಸಿಕೊಳ್ಳುತ್ತಾರೆ. ಪುಟ್ಟಣ್ಣ ಕಣಗಾಲ್ ಅವರ 'ಕಥಾಸಂಗಮ' ಚಿತ್ರದಲ್ಲಿನ 'ಅತಿಥಿ' ಚಿತ್ರದ ಹಾಸ್ಟೆಲ್ ವಾರ್ಡನ್ ಯಾರಿಗೆ ನೆನಪಿಲ್ಲ. ಜಕಣಾಚಾರಿ ಚಿತ್ರದ ಪಾತ್ರ ಕೂಡ ಬಣ್ಣದಲ್ಲಿ ಅತ್ಯಾಕರ್ಷಕ. ಎಂಜಿಆರ್‌ಗೂ ಶಿವಾಜಿ ಗಣೇಶನ್ ಅವರ ಜೊತೆ ಸರೋಜಾದೇವಿ ಅವರು ಅಭಿನಯಿಸಿರುವ ಚಿತ್ರಗಳು ಗಮನಸೆಳೆಯುವಂತಿವೆ. 'ಪಾಲುಂ ಪಳಮುಂ' ಚಿತ್ರದಲ್ಲಿ ಸರೋಜಾದೇವಿ ನನಗಿಂತಲೂ ಚೆನ್ನಾಗಿ ಅಭಿನಯಿಸಿದ್ದಾರೆ ಎಂದು ಶಿವಾಜಿ ಗಣೇಶನ್ ಮೆಚ್ಚುಗೆ ವ್ಯಕ್ತಪಡಿಸಿದ್ದರಂತೆ. ನಟನೆಯಲ್ಲಿ ಎತ್ತರದಲ್ಲಿದ್ದವರ ಮುಂದೆ ಅಭಿನಯಿಸುವುದೇ ಸರೋಜಾದೇವಿ ಅವರಿಗೆ ಒಂದು ಸವಾಲಾಗಿತ್ತು. ಸಾಮಾನ್ಯವಾಗಿ ಜನಪ್ರಿಯ ನಟನಟಿಯರ ಅಭಿನಯವನ್ನು ಹೊಸಬರು ಅನುಕರಿಸುವುದನ್ನು ಕಂಡಿದ್ದೇವೆ. ಕಲ್ಪನಾ, ಮಂಜುಳಾ, ಮಾಲಾಶ್ರೀ, ಸಾಧನಾ, ಮಾಧುರಿ, ಶ್ರೀದೇವಿ ಅವರ ಅಭಿನಯವನ್ನು ಕಾಪಿ ಮಾಡುವ ನಟಿಯರೂ ಇದ್ದಾರೆ. ಆದರೆ ಇದುವರೆಗೆ ಸರೋಜಾದೇವಿಯವರ ಅಭಿನಯವನ್ನು ಅನುಕರಿಸಿದವರನ್ನು ನಾವು ನೋಡಿಲ್ಲ.

69 ವರ್ಷ ಚಿತ್ರರಂಗದಲ್ಲಿದ್ದರೂ ಸರೋಜಾದೇವಿ ಅವರಿಗೆ ಸ್ಟುಡಿಯೊ ಸ್ಥಾಪಿಸಬೇಕೆಂಬ, ಚಿತ್ರರಂಗಕ್ಕೆ ನೆರವಾಗುವ ಏನಾದರೂ ಯೋಜನೆಗಳನ್ನು ಮಾಡಬೇಕೆಂಬ ಹಂಬಲ ಬರಲೇ ಇಲ್ಲ. ಉದ್ಯಮಶೀಲರಾಗುವ ಎಲ್ಲ ಅವಕಾಶಗಳು ಅವರಿಗಿತ್ತು. ಸರೋಜಾದೇವಿಯವರು ದಂತ ಗೋಪುರದಲ್ಲೇ ಜೀವಿತಾವಧಿಯನ್ನು ಕಳೆದರು. ಸಭೆ ಸಮಾರಂಭಗಳಿಂದ ದೂರು ಉಳಿಯುತ್ತಿದ್ದರು. ಅದು ಅವರ ಜನಪ್ರಿಯತೆಯ ಅತ್ಯಂತ ಎತ್ತರದಲ್ಲಿದ್ದ ಕಾಲದ ಮನೋಭಾವ. ಅವರು ಆಗ ದಿನಕ್ಕೆ 20 ಗಂಟೆಗಳ ಕಾಲ ಶೂಟಿಂಗ್‌ನಲ್ಲಿ ಬಿಜಿಯಾಗಿರುತ್ತಿದ್ದರಂತೆ. ಆ ಎತ್ತರಕ್ಕೆ ಏರಿ ಇಳಿದವರು ಕೊನೆಗಾಲದಲ್ಲಿ ಸಾವಿತ್ರಿ ಅವರಂತೆ, ಮೀನಾಕುಮಾರಿ ಅವರಂತೆ ದುರಂತದ ಜೀವನ ಕಂಡಿರುವುದನ್ನು ನೋಡಿದ್ದೇವೆ. ಆದರೆ ಬಿ.ಸರೋಜಾದೇವಿ ಅವರದು ಸಂತೃಪ್ತ ಬದುಕು. ಕೊನೆ ದಿನಗಳವರೆಗೂ ಅವರು ಸಂತೋಷವಾಗಿಯೇ ದಿನಗಳನ್ನು ಕಳೆದರು. 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿದ ಸಂದರ್ಭದಲ್ಲಿ 'ಇನ್ನು ಸಾಕು, ಅಭಿನಯ ಮಾಡುವುದಿಲ್ಲ' ಎಂದು ಹೇಳಿಯೇ ತೆರೆಮರೆಗೆ ಸಾಗಿದ್ದಾರೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ದಿಟ್ಟಿಸಿಡಿಲು

ದಿಟ್ಟಿಸಿಡಿಲು (ನಾ). ಸಿಡಿಲಿನಂತಹ ನೋಟ

ರಾವಣನು ಸೀತೆಯನ್ನು ಹೊತ್ತುತಂದು ಅಶೋಕವನದಲ್ಲಿರಿಸುವನು. ಅನಂತರ ಮಂಡೋದರಿಯನ್ನು ಕಾಣಲು ಶಿವಾಲಯಕ್ಕೆ ಹೋಗುವನು. ಅವಳು 'ಹದಿಬದೆಯ ಉರಿ ಲಂಕೆಯನ್ನು ದಹಿಸುವುದಿಲ್ಲವೆ?' ಎಂದು ಪ್ರಶ್ನಿಸುತ್ತ ಅವನತ್ತ ದಿಟ್ಟ ನೋಟವನ್ನು ಹರಿಸುವಳು. ಆ ಸಂದರ್ಭದಲ್ಲಿ ಕುವೆಂಪು ಅವರು ಆ ದೃಷ್ಟಿಯನ್ನು ಚಿತ್ರಿಸಲು 'ದಿಟ್ಟಿಸಿಡಿಲು' ಪದ ಪ್ರಯೋಗಿಸಿ, ರಾವಣನಿಂದ ಹೀಗೆ ನುಡಿಸಿದ್ದಾರೆ:

'ದೇವಿ,
ಕರುಣಿಸುಪಸಂಹರಿಸು ದಿಟ್ಟಿಸಿಡಿಲಂ.'

ಪೆಣ್‌ಗಾಪು

ಪೆಣ್‌ಗಾಪು (ನಾ). ಹೆಂಗಸರ ಕಾವಲುಪಡೆ

ಅಶೋಕವನದಲ್ಲಿ ಸೀತೆಯನ್ನು ಕಾಣಲು ಬಂದ ರಾವಣನ ಕಣ್ಣ ಸೂಚನೆಯನ್ನು ತಿಳಿದು, ಅವಳ ಬಳಿಯಿದ್ದ ಹೆಂಗಸರ ಕಾವಲು ಪಡೆಯವರು ಅಲ್ಲಿಂದ ಮರಳುವರು. ಆ ಸಂದರ್ಭದಲ್ಲಿ ಕುವೆಂಪು ರೂಪಿಸಿರುವ ನುಡಿ 'ಪೆಣ್‌ಗಾಪು'ವಿನ ಪ್ರಯೋಗ ಹೀಗಿದೆ:

'ದೊರೆಯ ಕಣ್‌ತಿಳಿದು ತೊಲಗಿದುದೊಡನೆ
ಪೆಣ್‌ಗಾಪು
ಸೀತೆಯೆಡೆಯಿಂ.'


ತಿರೆಮಗಳು

ತಿರೆಮಗಳು (ನಾ). ಭೂಮಿಯ ಮಗಳು; ಸೀತೆ

ಕುವೆಂಪು ಅವರು ಭೂಮಿಯ ಮಗಳಾದ ಸೀತೆಯನ್ನು 'ತಿರೆಮಗಳು' ಎಂದು ಕರೆದಿದ್ದಾರೆ. ಅವಳ ಚೆಲುವನ್ನು ರಾಮಚಂದ್ರ ಸವಿದ ಬಗೆಯನ್ನು ಹೀಗೆ ವರ್ಣಿಸಿದ್ದಾರೆ:

'ತಿರೆಮಗಳ ಚೆಲುವಲರ
ಬಂಡಿಡಿದ ಬಟ್ಟಲಂ ಪೀರ್ದನೆರ್ದೆತುಟಿಯಿಂದೆ
ತಣಿವಿನಂ ತನ್ನಾತ್ಮತೃಷೆ'

ಮೊದಲ ಓದು



ಹಾಸಾಕೃ
ಸಂ: ಎನ್.ಕೆ. ಮೋಹನ್‌ರಾಂ, ಎಂ.ಕೆ. ಶಂಕರ್
ಪ್ರ: ಚಾರುಮತಿ ಪ್ರಕಾಶನ
ಸಂ: 94482 35553


ನಿರ್ಭೀತ, ವಿಶಿಷ್ಟ ವ್ಯಕ್ತಿತ್ವದ ಅನಾವರಣ

ಸಾಹಿತ್ಯ, ಪತ್ರಿಕೋದ್ಯಮ, ರಂಗಭೂಮಿ, ಸಿನಿಮಾ... ಹೀಗೆ ವಿವಿಧ ಕ್ಷೇತ್ರಗಳಲ್ಲಿ ಹಾಸ್ಯ ಮತ್ತು ಮೊನಚು ಭಾಷೆಯಿಂದ ತಮ್ಮತನವನ್ನು ಮೂಡಿಸಿದವರು ಹಾಸಾಕೃ. ಎಚ್.ಎಸ್. ಕೃಷ್ಣಮೂರ್ತಿ ಎಂಬ ತಮ್ಮ ಜನ್ಮನಾಮವನ್ನೇ ಮೀರಿ 'ಹಾಸ್ಯವಿಲ್ಲದ ಸಾರವಿಲ್ಲದ ಕೃತಿಗಳನ್ನು ರಚಿಸುವವನು' (ಹಾಸಾಕೃ) ಎಂದು ತಮ್ಮನ್ನು ತಾವೇ ಗೇಲಿಮಾಡಿಕೊಳ್ಳುತ್ತಾ, ಸಮಾಜದ ಓರೆಕೋರೆಗಳನ್ನು ತಮ್ಮ ತೀಕ್ಷ್ಣ ಹಾಗೂ ನಿರ್ಭಿಡೆಯ ಮಾತು, ಬರಹಗಳಿಂದ ವಿಮರ್ಶೆ ಮಾಡಿದವರು. ಇಂಥ ಅಪರೂಪದ ವ್ಯಕ್ತಿತ್ವವನ್ನು ಅವರದೇ ಹೆಸರಿನ 'ಹಾಸಾಕೃ' ಕೃತಿಯಲ್ಲಿ ಸೊಗಸಾಗಿ ಕಟ್ಟಿಕೊಡಲಾಗಿದೆ.

83 ವರ್ಷಕ್ಕೆ ಕಾಲಿಟ್ಟಿರುವ ಹಾಸಾಕೃ ಕುರಿತು ಅವರ ಆಪ್ತರು, ಒಡನಾಡಿಗಳು ಕಟ್ಟಿಕೊಟ್ಟ ನೆನಪುಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಕನ್ನಡ ಮತ್ತು ಇಂಗ್ಲಿಷ್ ಸೇರಿ ಒಟ್ಟು 15 ಬರಹಗಳಿರುವ ಈ ಕೃತಿಯಲ್ಲಿ ಗುಜ್ಜಾರ್ ಅವರ ಸೊಗಸಾದ ಚಿತ್ರಗಳಿವೆ. ಬಹುತೇಕ ಅಭಿನಂದನಾ ಗ್ರಂಥಗಳಲ್ಲಿ ವ್ಯಕ್ತಿಯ ಹೊಗಳಿಕೆಯೇ ಮೇಲುಗೈ ಸಾಧಿಸುತ್ತಿರುವ ನಡುವೆ ಈ ಕೃತಿ ಭಿನ್ನವಾಗಿ ನಿಲ್ಲುತ್ತದೆ. ಹಾಸಾಕೃ ವ್ಯಕ್ತಿತ್ವವಷ್ಟೇ ಅಲ್ಲ, 50ರ ದಶಕದಿಂದ ಇತ್ತೀಚಿನ ವರ್ಷಗಳ ತನಕದ ರಾಜಕೀಯ, ಸಾಂಸ್ಕೃತಿಕ ಪಲ್ಲಟಗಳನ್ನೂ ಇಲ್ಲಿನ ಬರಹಗಳು ಸೂಕ್ಷ್ಮವಾಗಿ ದಾಖಲಿಸಿವೆ. ವಿಶ್ವ ವಿಖ್ಯಾತ ಸಿನಿಮಾ ನಿರ್ದೇಶಕ ಡೇವಿಡ್ ಲೀನ್ ಅವರ 'ಎ ಪ್ಯಾಸೇಜ್ ಟು ಇಂಡಿಯಾ' ಸಿನಿಮಾದಲ್ಲಿನ ಹಾಸಾಕೃ ನಟನೆಯ ಅನುಭವ ಕಥನ ಓದುಗರನ್ನು ಹಿಡಿದಿಡುತ್ತದೆ.

ತಮ್ಮ ಆಳವಾದ ಅರಿವಿನಿಂದ ಪುಟ್ಟ ಪಾತ್ರಕ್ಕೂ ವಿಶೇಷ ಕಳೆ ತರಬಲ್ಲ ಹಾಸಾಕೃ ಮನಸು ಮಾಡಿದ್ದರೆ ಏನೆಲ್ಲ ಆಗಬಹುದಿತ್ತು ಅನ್ನುವುದನ್ನು ಅವರ ಆಪ್ತ ಒಡನಾಡಿಗಳು ತಮ್ಮ ನೆನಪಿನ ಬುತ್ತಿಗಂಟನಲ್ಲಿ ಬಿಚ್ಚಿಟ್ಟಿದ್ದಾರೆ. ಹಾಸಾಕೃ ಕಳೆದುಹೋಗಿರುವ ಕಾಲವೊಂದರ ಸಾಕ್ಷಿಕಲ್ಲಿನಂತಿದ್ದಾರೆ ಎನ್ನುವ ಬರಹವೊಂದರ ಸಾಲು ಇಡೀ ಕೃತಿಗೆ ಹಿಡಿದ ಕೈಗನ್ನಡಿಯಂತಿದೆ.

ಪುಟ: 120 ₹150



ಕಾಡು ಕಾಯುವ ಮರ
ಲೇ: ಜಡೇಕುಂಟೆ ಮಂಜುನಾಥ್
ಪ್ರ: ಮೈತ್ರಿ ಪುಸ್ತಕ ಮನೆ
ಸಂ: 9380593488

ಬಯಲು ಸೀಮೆಯ ಶೋಷಿತರ ಕತೆ ಹೇಳುವ ಕೃತಿ

ಚಿತ್ರದುರ್ಗ ಜಿಲ್ಲೆಯ ಜಡೇಕುಂಟೆ ಮೂಲದ ಮಂಜುನಾಥ್ ಅವರ ಎರಡನೇ ಕಥಾ ಸಂಕಲನ 'ಕಾಡು ಕಾಯುವ ಮರ'. ಬಯಲುಸೀಮೆಯ ಜನರ ಬದುಕು, ಬವಣೆ, ಕಷ್ಟ-ಸುಖ, ಜನಜೀವನವು ಇಲ್ಲಿ ಕತೆಯ ಸ್ವರೂಪ ಪಡೆದಿವೆ. ಕತೆಗಾರರೇ ಮುನ್ನುಡಿಯಲ್ಲಿ ಹೇಳಿಕೊಂಡಿರುವಂತೆ ಗ್ರಾಮೀಣ ಬದುಕಿನ ಸಂಬಂಧಗಳು, ಅಲ್ಲಿನ ಜಾತಿ ವ್ಯವಸ್ಥೆ, ಜಿದ್ದು, ವೈಷಮ್ಯಗಳು ಈ ಕಥಾ ಸಂಕಲನದ ಎಲ್ಲಾ ಕತೆಗಳಲ್ಲೂ ಕಾಣಸಿಗುತ್ತದೆ.

ಅಪ್ಪನ ತಪ್ಪಡಿ, ದೇಗುಲದ ಗಂಟೆ ಮೊಳಗಲಿಲ್ಲ ಕತೆಗಳು ಗ್ರಾಮೀಣ ಭಾಗದ ದಲಿತರು ಹಾಗೂ ಮೇಲ್ಜಾತಿಯ ನಡುವಿನ ದೇವರ ಸಂಬಂಧವನ್ನು ಅನಾವರಣ ಮಾಡುತ್ತವೆ. ಈ ಕತೆಗಳು ದೇವರನ್ನು ಕೂಡ ಜಾತಿಯ ಹಿಡಿತದಲ್ಲಿಟ್ಟಿರುವುದನ್ನು ಕಟ್ಟಿಕೊಡುತ್ತವೆ. ಕಾಡು ಕಾಯುವ ಮರ, ಉಯ್ಯಾಲೆ ಕತೆಗಳು ಗ್ರಾಮೀಣ ಭಾಗದ ವಿಭಿನ್ನ ರೀತಿಯ ಪ್ರೇಮ ಕತೆಗಳಿಂದ ಗಮನ ಸೆಳೆಯುತ್ತವೆ.

ಮೊಳಕೆಯೊಡೆಯಿತು ಬೀಜ, ಗಂಗಣ್ಣನ ಸೈಕಲ್ ಶಾಪ್, ಕವಲು ದಾರಿಯ ತಿರುವು ಕತೆಗಳು ಗ್ರಾಮೀಣ ಭಾಗದಿಂದ ಜೀವನ ಸಾಗಿಸಲು ನಗರ ಬದುಕಿಗೆ ತಿರುಗಿಕೊಂಡವರ ಬದುಕಿನ ಬವಣೆಗಳ ಸುತ್ತಾ ಸುತ್ತುತ್ತವೆ.

ಅಪ್ಪನ ತಪ್ಪಡಿ, ಕಳೆದು ಹೋದವಳ ಗುರುತು, ದೇಗುಲದ ಗಂಟೆ ಮೊಳಗಲಿಲ್ಲ, ಕಾಡು ಕಾಯುವ ಮರ, ಗಂಗಣ್ಣನ ಸೈಕಲ್ ಶಾಪ್ ಕತೆಗಳು ಈ ಸಂಕಲನದ ಉತ್ತಮ ಕತೆಗಳಾಗಿವೆ.

ಸಂಕಲನದ ಒಂದೆರಡು ಕತೆಗಳ ನಿರೂಪಣಾ ಶೈಲಿಯನ್ನು ಬದಲಾವಣೆ ಮಾಡಿದ್ದರೆ, ಇನ್ನೂ ಉತ್ತಮ ಕತೆಗಳಾಗುವ ಸಾಧ್ಯತೆಯಿತ್ತು. ಬಯಲುಸೀಮೆಯ ಗ್ರಾಮೀಣ ಭಾಷೆ ಮತ್ತು ಕಥಾ ವಸ್ತುಗಳನ್ನು ಈ ಸಂಕಲನದ ಕತೆಗಳು ಹೊಂದಿವೆ. ದಲಿತ ಬಂಡಾಯ ಸಾಹಿತ್ಯದ ನೆಲೆಗಟ್ಟಿನಲ್ಲಿ ಈ ಕಥನಗಳು ರೂಪುಗೊಂಡಿವೆ.

ಪುಟ: 112 ₹150



ಮಿನುಗು ತಾರೆ
ಲೇ: ದೊಡ್ಡಮನೆ ಆನಂದ್
ಪ್ರ: ಸಪ್ನ ಬುಕ್ ಹೌಸ್
ಸಂ: 080–40114455

ಗಾಂಧಿನಗರದ ಸಿನಿಮಾ ಲೋಕ

ಧಾರಾವಾಹಿ ರೂಪದಲ್ಲಿ ಪ್ರಕಟಿಸುವ ಆಶಯದಿಂದ ರೂಪಿತವಾದ ಕಾದಂಬರಿ 'ಮಿನುಗು ತಾರೆ'. ಸಿನಿಮಾ ಚಿತ್ರೀಕರಣದ ಸೆಟ್‌ನಿಂದಲೇ ಕಥೆ ಆರಂಭವಾಗುತ್ತದೆ. ಬೆಳ್ಳಿತೆರೆಯ ರಮ್ಯ ದೃಶ್ಯಕ್ಕೆ ಕ್ಯಾಮರಾ ಹಿಡಿದು ಅದರ ಒಳನೋಟವನ್ನು ಅನಾವರಣ ಮಾಡುತ್ತದೆ. ಜನಪ್ರಿಯ ಮತ್ತು ಪ್ರಭಾವಿ ಮಾಧ್ಯಮವಾದ ಸಿನಿಮಾದ ಶಕ್ತಿ ಮತ್ತು ನ್ಯೂನತೆಗಳನ್ನೂ ಅನಾವರಣ ಮಾಡುತ್ತದೆ.

ಸಾಹಿತ್ಯ ವಿದ್ಯಾರ್ಥಿಗಳಿಬ್ಬರ ಸಿನಿಮಾ ಪ್ರೀತಿ ಮತ್ತು ಆಕರ್ಷಣೆ ಅದೇ ಗೀಳಿನಲ್ಲಿ ಮುಳುಗಿಸುತ್ತದೆ. ಸಿನಿಮಾ ನಿರ್ಮಿಸಬೇಕೆಂಬ ಅಮಿತ್ ಮತ್ತು ಗೋಪಿ ಬಹುತೇಕ ಯುವ ಮನಸ್ಸುಗಳ ತವಕ ತಲ್ಲಣವನ್ನು ಪ್ರತಿನಿಧಿಸುತ್ತಾರೆ. ಮಾತ್ರವಲ್ಲದೆ ಸಿನಿಮಾ ನಿರ್ಮಾಣದ ಭಿನ್ನ ಮಾರ್ಗಗಳಿಗೂ ಅವರು ನಿದರ್ಶನವಾಗುತ್ತಾರೆ. ಗೋಪಿ ಮಾರುಕಟ್ಟೆಗೆ ಏನು ಬೇಕೋ ಅದನ್ನು ಕೊಡುತ್ತಾ ಯಶಸ್ವಿ ನಿರ್ದೇಶಕನಾಗುತ್ತಾನೆ. ಅಮಿತ ಹಾಗಲ್ಲ. ಅವನಿಗೆ ವಾಸ್ತವ ನೆಲೆಯಲ್ಲೇ ಚಿತ್ರಕಥೆಯನ್ನು ಕಟ್ಟಬೇಕು ಎನ್ನುವ ಹಂಬಲ. ಅವನಿಗೆ ಸತ್ಯಜಿತ್ ರೇ, ಮೃಣಾಲ್ ಸೇನ್ ಅವರ ಸಿನಿಮಾಗಳು ಮಾದರಿ ಆಗುತ್ತವೆ. ಆತನಿಗೆ ಯಶಸ್ವಿ ನಾಯಕ ನಟಿಯೊಬ್ಬಳ ಜೀವನವನ್ನೇ ಸಿನಿಮಾ ಮಾಡುವ ಕನಸಿದೆ. ನಟ–ನಟಿಯರು ಎದುರಿಸುವ ಸಮಸ್ಯೆಗಳು, ವಂಚನೆಯ ಜಾಲ ಉತ್ಸಾಹಿಗಳನ್ನು ಹೇಗೆ ದುರುಪಯೋಗ ಮಾಡುತ್ತದೆ ಎನ್ನುವ ಸಂಗತಿಯನ್ನೆಲ್ಲ ದೊಡ್ಡಮನೆ ಆನಂದ್ ಕಾದಂಬರಿಯಲ್ಲಿ ನಿರೂಪಿಸಿದ್ದಾರೆ.

ಚಂದನವನದ ಕಲಾ ಜಗತ್ತನ್ನು ಸ್ವತಃ ಬಲ್ಲ ಲೇಖಕ ಸಿನಿಮಾ ನಿರ್ಮಾಣ ಎಂಬುದು ಎಂತಹ ದುಸ್ಸಾಹಸದ ಕೆಲಸ ಎನ್ನುವುದಕ್ಕೆ ಕನ್ನಡಿ ಹಿಡಿದಿದ್ದಾರೆ. 'ಎಂಬ್ರೇಸಿಂಗ್ ಶಾಟ್ ಇದೂಂತ ಹೇಳ್ಬಿಟ್ಟು, ಕಿಸ್ಸಿಂಗ್ ಎಲ್ಲಾ ಮಾಡಿಸ್ತಾ ಇದೀರಲ್ಲ, ಇದು ಸರೀನಾ? ಇಟ್ಸ್ ಆಲ್ ಚೀಟಿಂಗ್' ಎಂದು ಕ್ಯಾಮರಾ ಎದುರಿಗೆ ನಿಂತ ಒಬ್ಬ ನಟಿ ಹೇಳುತ್ತಾಳೆ. ಆರಂಭದಲ್ಲಿಯೇ ಬರುವ ಈ ಸಂಭಾಷಣೆ ಕಾದಂಬರಿಕಾರರ ಸೂಕ್ಷ್ಮತೆಯನ್ನು ಹೇಳುವ ಜತೆಗೆ ಓದುಗನ ಕುತೂಹಲದ ಕೇಂದ್ರವನ್ನೂ ಗರ್ಭೀಕರಿಸುತ್ತದೆ ಎಂದೆನಿಸುತ್ತದೆ.

ಪುಟ: 471 ₹450

ಹಳ್ಳಿಗರ 'ತ್ರಿಪುರ ಸಂಹಾರ'ಕ್ಕೆ 2000 ವರ್ಷ!



ನಮ್ಮ ಬಯಲಾಟ ಪಠ್ಯಗಳ ಅಧ್ಯಯನದ ಸಂದರ್ಭದಲ್ಲಿ 'ತ್ರಿಪುರ ಸಂಹಾರ'ಕ್ಕೆ ಎರಡು ಸಾವಿರ ವರ್ಷ ಎನ್ನುವ ಹೊಸ ವಿಚಾರ ಲೇಖಕರ ಗಮನಕ್ಕೆ ಬಂದಿದೆ. ಅದು ಹೇಗೆ ಮತ್ತು ಏಕೆ ಮುಖ್ಯ ಎನ್ನುವುದನ್ನು ಉಲ್ಲೇಖಗಳ ಮೂಲಕ ಪ್ರಸ್ತುತಪಡಿಸಿದ್ದಾರೆ.

• ಟಿ.ಗೋವಿಂದರಾಜು





'ಭಲಲೈ ಸೇವಕ, ನಾವು ದಾರೆಂದರೆ
ಈ ಧರಾಮಂಡಲದೊಳ್..
ಮಹೇಂದ್ರ ನಗರಕ್ಕೆ ಚಕ್ರವರ್ತಿ ಪಾಲಕ..
ಯನ್ನ ಕರದೊಳ್ ಪಿಡಿದಿರುವ
ಕರವಾಳವಂ ಧಡಲ್ ಧಡಲ್ ಯೆಂದು ಚಪ್ಪರಿಸಿ
ಥಳಥಳಿಸಿ ಹೊಳೆಯುವ ಬೆಳಕಿನೊಳ್,
ಧಡಧಡನೆ ಅಂಬರಕ್ಕೆ ಇಂಬುಕೊಡದೆ
ನೆಲಕ್ಕಪ್ಪಳಿಸಿ..'

-ಅಟ್ಟದ ಮೇಲೆ ದಡದಡನೇ ಹಾರಿ ಕುಣಿದು, ತುತ್ತತುದಿಯಲ್ಲಿ ಕಡಲೆಕಾಯಿ ತಿನ್ನುತ್ತಾ ಕೂತವರೂ ಬೆಚ್ಚಿ ತಿರುಗಿ ನೋಡುವಂತೆ ತನ್ನ ಪರಿಚಯವನ್ನು ಉಗ್ಗಡಿಸುವವರು ದಾರು ದಾರೆಂದರೆ...

ನಮ್ಮ ಪ್ಯಾಟೆ ಮಂದಿಗೆ ಇವರು ಯಾರೆಂದು ಖಂಡಿತಾ ಅರ್ಥವಾಗಲಾರದು. ಹಳೇ ಹಳ್ಳಿ ಮಂದಿಗೆ ತಕ್ಷಣ, ಎಲಾ, ಇದು ನಮ್ಮ ಅಪ್ಪಂದಿರು ಆಡುತ್ತಿದ್ದ, ನಾವೂ ಅಬ್ಬರಿಸಿ ಕುಣಿದಿದ್ದ ತಾರಕಾಕ್ಷನ ನಾಮಾಂಕಿತ ಮಾತುಗಳಲ್ಲವೇ! ಎಂದು ತಕ್ಷಣ ಮೈ ನವಿರೇಳುತ್ತದೆ; ಕಣ್ಣಲಿ 'ತ್ರಿಪುರ ಸಂಹಾರ' ಯಕ್ಷಗಾನ ಬಯಲಾಟದ ಸಂಗತಿಗಳು ಚಿತ್ರಪಟವಾಗುತ್ತವೆ.

ಊರೆಲ್ಲಾ ಒಗ್ಗೂಡಿ ಮೇಷ್ಟರನ್ನೂ ಹುಡುಕಿ, ಸಂಜೆಗೇ ಉಂಡು, ಹೊತ್ತಿಗೆ ಮನೇಲಿ, ಮೇಷ್ಟರಿಂದ ಪದೇ ಪದೇ ಬಯ್ಯಿಸಿಕೊಂಡು, ಹೊಲ ಉಳುವಾಗಲೂ ಡೈಲಾಗುಗಳನ್ನು ಉರು ಹೊಡೆದುಕೊಂಡು, ಊರ ಹಬ್ಬಕ್ಕೆ ನೆಂಟರನ್ನೆಲ್ಲಾ ಆಹ್ವಾನಿಸಿ, ಅವರ ಮುಂದೆ ತನ್ನ ಅಭಿನಯದ ತಾಕತ್ತು ತೋರುವುದೆಂದರೆ, ಆತನಿಗಷ್ಟೇ ಅಲ್ಲ, ಅವನ ಅರ್ಧಾಂಗಿಗೂ ದೊಡ್ಡ ಸಂಭ್ರಮದ ಕ್ಷಣಗಳು.. ಕೆಲವೇ ದಶಕಗಳ ಹಿಂದೆ ಬಯಲಾಟಗಳಿಗೆ ಇದ್ದದ್ದು ಕೇವಲ ಆಕರ್ಷಣೆ ಅಲ್ಲ; ಅದೊಂದು ದೇವರಕಾರ್ಯ, ರಿಚುವಲ್! ಆದ್ದರಿಂದಲೇ ಆ ಪಾತ್ರಧಾರಿಗಳು ಅನೇಕರು ಆ ಹೊತ್ತಿನಲ್ಲಿ ಮಡಿ ಮೈಲಿಗೆಯನ್ನೂ ಪಾಲಿಸುವವರಿದ್ದರು.

ಈಗಿನ ಪಡ್ಡೆಗಳಿಗೆ ತೊಡೆಯಲ್ಲಿ ತ್ರಾಣ ಕಡಿಮೆ ಆಗಿ, ಎದೆ ಏದುಸುರು ಬಿಟ್ಟಂತಾಗಿ..ಅಬ್ಬಬ್ಬಾ, ಆ ಕುಣಿತದ ಆಟಗಳು ಈ ಬಯಲುಸೀಮೆಯಲ್ಲಿ ಮರೆಯಾಗುತ್ತಿವೆ; ಲಕ್ಷಾಂತರ ಖರ್ಚುಮಾಡುವ ಝುಗಮಗಿಸುವ ಸೀನರಿಗಳ ಪೌರಾಣಿಕ ನಾಟಕಗಳು ಹೆಚ್ಚಿವೆ. ಅಂಥ, ಸಂಗೀತ ಪ್ರಧಾನ ಪೌರಾಣಿಕ ನಾಟಕವಾಗಿಯೂ 'ತ್ರಿಪುರ ಸಂಹಾರ' ಆಡುವ ಆಕರ್ಷಣೆ ಹಲವೆಡೆ ಉಳಿದಿದೆ.

ದೇವೀ ಮಹಾತ್ಮೆ, ಕುರುಕ್ಷೇತ್ರ, ಸುಂದರಕಾಂಡ, ಅಭಿಮನ್ಯು ವಧೆ, ನಳ ದಮಯಂತಿ.. ಇಂತಹವೆಲ್ಲಾ ಒಂದೊಂದು ಊರಲ್ಲಿ ಒಂದೊಂದು ಜನಪ್ರಿಯ. ಅಂತಹವುಗಳ ನಡುವೆ 'ತ್ರಿಪುರ ಸಂಹಾರ'ವೂ ಏಕೆ ಜನಾಕರ್ಷಕ ಎಂದರೆ ನನಗೆ ತಿಳಿದಂತೆ, ಅದರಲ್ಲಿ ಮೂರು ರಾಕ್ಷಸ ಪಾತ್ರಗಳು ಬರುತ್ತವೆ. ಒಂದೊಂದೂ ಸಮಬಲವೆಂಬಂತೆ ಆಡುವಂತಹವು. ಖರ್ಚು ಎಷ್ಟೇ ಬಿದ್ದರೂ ತಾನೂ ಜೋರೇ ಆಡಬೇಕೆಂಬ ಉತ್ಸಾಹಿಗಳಿಗೆ ಹಂಚಬಹುದಾದುವು. ಮಿಗಿಲಾಗಿ, ಅದರಲ್ಲಿ ರಂಬೆ, ಊರ್ವಶಿಯರೂ ಇದ್ದು, ಮೇಷ್ಟರಿಗೆ ಹೇಳಿ ಜನಪ್ರಿಯ ಸಿನಿಮಾ ಗೀತೆಗಳನ್ನೇ ಹಾಕಿಸಿಕೊಂಡು ಇಂದ್ರನ ಸಭೆಯಲ್ಲಿ ಕುಣಿತ ಮಾಡಿ ಸೈ ಎನ್ನಿಸಿಕೊಳ್ಳಬಹುದು; ಅಥವಾ ಆ ಪ್ಯಾಟೆ ನಟಿಯರ ಡಾನ್ಸ್ ನೋಡಲಾದರೂ ಜನ ಸುತ್ತಲ ಹತ್ತೂ ಹಳ್ಳಿಗಳಿಂದ ಬರುತ್ತಾರೆ; ಇನ್ನೂ ಮಿಗಿಲಾಗಿ, ಅದರಲ್ಲಿ ಬುಡುಬುಡುಕೆ ವೇಷದವನಿಗೂ ಅವಕಾಶವಿದ್ದು, ಅವನು, 'ಜಯತು ಜಯತು ಜಯವಾಗಲಿ ಬುದ್ಧಿ..' ಎಂದು ಪ್ರೇಕ್ಷಕರನ್ನು ಮಣಿಸಬಹುದು. ಮತ್ತೂ ಮಿಗಿಲಾಗಿ, ಆ ಮಹಾಪತಿವ್ರತೆಯರಾದ ಅಸುರ ಪತ್ನಿಯರನ್ನು ಕೃಷ್ಣ ಪರಮಾತುಮನೇ ಬಂದು ಪಾತಿವ್ರತ್ಯಭಂಗ ಮಾಡುತ್ತಾನೆ. ಈ ಎಲ್ಲವನ್ನೂ ಮರೆಸುವಂತೆ ಅದು ಶಿವ ಸ್ಮರಣೆಯ ಪುಣ್ಯ ಕತೆ..



ಹೌದು, 'ಸುರಾಸುರ ಯುದ್ಧ' ನಾಟಕ ನೋಡಿ ತಮಗೆ ಅವಮಾನವಾಯಿತೆಂದು ಅಬ್ಬರ ಎಬ್ಬಿಸಿದ್ದ ರಾಕ್ಷಸ ಸಮೂಹ ಈ 'ತ್ರಿಪುರ ಸಂಹಾರ' ನೋಡಿ ಭೇಷ್ ಎಂದಿತಂತೆ. ಏಕೆಂದರೆ, ಅದು ಶಿವ ಕತೆ; ಶಿವ ಅಸುರರಿಗೆ ಪರಮದೈವ! ಇಂಥ ಈ 'ತ್ರಿಪುರ ಸಂಹಾರ' ನಾಟಕವನ್ನು ಅಥವಾ ಬಯಲಾಟವನ್ನು ಮೊದಲು ಯಾರು ಆಡಿದರು? ಎಲ್ಲಿ? ಬರೆದವರು ಯಾರು..?-ಇವೆಲ್ಲಾ ಪ್ರಶ್ನೆ ನನಗೆ ಸಕಾರಣವಾಗಿ ಬಂದುಬಿಟ್ಟವು.

ಹಳ್ಳಿಗಳಲ್ಲಿ ಮೂಲೆಗುಂಪಾಗುತ್ತಿರುವ ಈ 'ಯಕ್ಷಗಾನ'ಗಳ ಪ್ರತಿಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಪುಸ್ತಕರೂಪದಲ್ಲಿ ಮುಂದಿನವರಿಗೆ ಉಳಿಸಬೇಕೆಂಬ ಇರಾದೆಯಿಂದ ಕಾರ್ಯಪ್ರವೃತನಾದೆ. ಮೂರು ವರ್ಷಗಳ ಹಿಂದೆ ಮಿತ್ರರೊಬ್ಬರು 'ಬೌದ್ಧಾವತಾರ ಕಥಾ' ಎಂದರು. ಕಿವಿ ನೆಟ್ಟಗಾಯಿತು. ಅದು ಆಂಧ್ರಗಡಿ ಭಾಗದ್ದು. ತೆಲುಗು ಲಿಪಿ, ಕನ್ನಡ ಪಠ್ಯ! ಕುಂಬಾರ ಭೀಮಣ್ಣವ್ರಾಲು ಪ್ರತಿ. ಇದು ನಮ್ಮ ಜನಪ್ರಿಯ 'ತ್ರಿಪುರ ಸಂಹಾರ'ವೇ. ಪ್ರಸ್ತಾವನೆ ಬರೆವಾಗ, ಈ ಕತೆ ಮೂಲದಲ್ಲಿ ಯಾರು ಬರೆದಿರಬಹುದು ಎಂದು ಹುಡುಕಾಟಕ್ಕೆ ಬಿದ್ದೆ. ಬಿದ್ದದ್ದೇನು, ಶಿವಪುರಾಣದಿಂದ ಆರಂಭಿಸಿ ಅನೇಕ ಪುರಾಣ, ಕಾವ್ಯ, ಕರಾವಳಿಯ ಯಕ್ಷಗಾನ ಪಠ್ಯಗಳನ್ನೂ ಜಾಲಾಡಿ, ಮೇಲೆದ್ದೆ. ತಟ್ಟಿ ಮೇಲೆಬ್ಬಿಸಿದ್ದು ನಮ್ಮ ಪ್ರಸಿದ್ಧ 'ನಾಟ್ಯಶಾಸ್ತ್ರ' ಕೃತಿ!

ಮೂರೂವರೆ ವರ್ಷದ ಮೊಮ್ಮಗ ಆಡುತ್ತಾ, ಪುಸ್ತಕ ರಾಶಿಯಿಂದ ಒಂದನ್ನು ತಂದು ನೋಡುತ್ತಿದ್ದ. ಹಾಳು ಮಾಡಿಯಾನೆಂದು ತೆಗೆದು, ಕಣ್ಣಾಡಿಸಿದೆ. ಅಲ್ಲಿತ್ತು ವಸಂತ ಕವಲಿಯವರ ಒಂದು ಉಪನ್ಯಾಸ ಬರಹ. ಜಾನಪದ ಸಂಗೀತಕ್ಕೆ ಸಂಬಂಧಿಸಿದ ಅದನ್ನು ಸುಮ್ಮನೇ ತಿರುವಿದೆ. ಅಗೋ ಅಲ್ಲಿ ಸಾಲುಗಳ ನಡುವೆ ಅಡಗಿತ್ತು 'ತ್ರಿಪುರ ಸಂಹಾರ'! ಆರ್ಕಿಮಿಡೀಸನಂತೆ 'ಹುರ್ರೇ' ಎಂದೆ. ನಮ್ಮ ಅಧ್ಯಯನ ಕ್ಷೇತ್ರಕ್ಕೆ ಹೊಸ ಸಂಗತಿಯೊಂದನ್ನು ಶೋಧಿಸಿಕೊಟ್ಟ ಧನ್ಯತೆ ನನ್ನದಾಗಿತ್ತು.

ಭರತಮುನಿ 'ನಾಟ್ಯಶಾಸ್ತ್ರ'ದಲ್ಲಿ ಇದರ 'ಚರಿತ್ರೆ' ದಾಖಲಿಸಿದ್ದಾನೆ. ನಮ್ಮ ರಂಗಭೂಮಿ ಹೇಗೆ ಹುಟ್ಟಿತು ಎಂದು ಹೇಳುತ್ತಾ, 'ನಾಲ್ಕು ವೇದಗಳಿಂದ ಪಂಚಮ ವೇದ ಎಂದರೆ, ನಾಟ್ಯವೇದ ಹುಟ್ಟಿತು. ಅದನ್ನು ಎಲ್ಲರೂ ನೋಡಲು ಅನುಕೂಲವಾಗುವಂತೆ ಬ್ರಹ್ಮನೇ ಹತ್ತು ಬಗೆಯ ರೂಪಕಗಳನ್ನು ರಚಿಸಿದ. ಅವುಗಳಲ್ಲಿ 'ಸುರಾಸುರ ಯುದ್ಧ' ಎಂಬ ವ್ಯಾಯೋಗ (ನಾಟಕ) ವನ್ನು ದೇವತೆಗಳ ಆಹ್ವಾನದಂತೆ ಭರತಮುನಿಯೂ, ಅವನ ಶಿಷ್ಯರೂ ಅಮರಾವತಿಗೆ ಹೋಗಿ ಯಶಸ್ವಿಯಾಗಿ ಪ್ರದರ್ಶಿಸಿದರು (ಎಂದರೆ, ಭಾರತೀಯ ರಂಗಭೂಮಿಯ ಮೊದಲ ಪ್ರದರ್ಶಿತ ನಾಟಕ: ಸುರಾಸುರ ಯುದ್ಧ).

ತ್ರಿಪುರ ಸಂಹಾರದ ಮೂಲ ಕರ್ತೃ ಬ್ರಹ್ಮ!

ಅಮೃತ ಮಥನದ ಹಿನ್ನೆಲೆಯ ಸುರಾಸುರ ಯುದ್ಧ ನೋಡಿದ ರಾಕ್ಷಸರು ತಮಗೆ ಅವಮಾನವಾಗಿದೆ ಎಂದು ಸಿಟ್ಟಾಗಿ, ಗಲಾಟೆ ಎಬ್ಬಿಸಿದರು. ಅವರ ಖುಷಿಗಾಗಿ ಬ್ರಹ್ಮ, ಇನ್ನೊಂದು ನಾಟಕ ರಚಿಸಿದ. ತ್ರಿಪುರ ದಹನವೆಂಬ ಶಿವನ ಲೀಲೆ ವಸ್ತುವಾಗುಳ್ಳ 'ಡಿಮ' ಎಂಬ ರೂಪಕವದು. ಅದನ್ನು ಕೈಲಾಸದಲ್ಲಿ ಪ್ರಯೋಗಿಸಲಾಯಿತು. ನೋಡಿ ಶಿವ ಪ್ರಸನ್ನನಾದ (ಶಿವನ ಪರಮಭಕ್ತರಾದ ರಾಕ್ಷಸರಿಗೂ ಆ ಶಿವ ಕತೆ ಇಷ್ಟವಾಯಿತು!). ಆದರೆ, ನಾಟಕದಲ್ಲಿ ಸಂಗೀತ ಹಾಗೂ ನೃತ್ಯಗಳಿದ್ದರೆ ಇನ್ನೂ ಚೆನ್ನ ಎಂದಿದ್ದರಿಂದ ಭರತಮುನಿ ಅವನ್ನೂ ಹೊಸದಾಗಿ ಸೇರಿಸಿದ' (ಇತರ ಆಕರಗಳನ್ನೂ ಹುಡುಕಿ, ಕವಲಿಯವರ ಉಲ್ಲೇಖ ಸರಿ ಎಂಬುದನ್ನು ಖಚಿತಪಡಿಸಿಕೊಂಡಿದ್ದೇನೆ).

ಎಂದರೆ, 'ತ್ರಿಪುರ ಸಂಹಾರ' ಬರೆದದ್ದು ಬ್ರಹ್ಮ; ಆಡಿಸಿದ್ದು ಭರತಮುನಿ; ನಟರು ಆತನ ಶಿಷ್ಯರು; ಮೊದಲ ಪ್ರದರ್ಶನ ಕೈಲಾಸದಲ್ಲಿ!

ನಿಜ; ಇದು ಐತಿಹ್ಯವೇ ಆಗಿದ್ದರೂ, ಕತೆ ಆ ಕಾಲಕ್ಕೇ ಸೃಷ್ಟಿಯಾಗಿದ್ದನ್ನೇ ಭರತ ಮುನಿ ದಾಖಲಿಸಿ ನಮಗೆ ಮಹದುಪಕಾರ ಮಾಡಿದ್ದಾನೆ. ದೇವಲೋಕವೂ ಸುಳ್ಳು, ಭೂ ಲೋಕದವರು ಹೋಗಿ ಅಲ್ಲಿ 'ಆಟ' ಮಾಡಿದ್ದೂ ಸುಳ್ಳು ಎಂದರೂ, 'ನಾಟ್ಯಶಾಸ್ತ್ರ' ಕೃತಿ ಇರುವುದು ನಿಜ. ವಿದ್ವಾಂಸರ ಪ್ರಕಾರ ಅದರ ಕಾಲ ಕ್ರಿ.ಶ. ಸುಮಾರು 1-2ನೆಯ ಶತಮಾನ. ಎಂದರೆ, ಇಲ್ಲಿಗೆ 2000 ವರ್ಷಗಳಾದವು. ಮತ್ತೂ ನಿಜವಾದುದೇನೆಂದರೆ, ನಮ್ಮ ಈಗಿನ ಯಕ್ಷಗಾನ ಬಯಲಾಟ ರೂಪಗಳಿಗೆ ಸಾವಿರಾರು ವರ್ಷಗಳ ಚರಿತ್ರೆಯ ಅನ್ಯ ದಾಖಲೆಗಳೇನೂ ದೊರೆತಿಲ್ಲ. ಭರತಮುನಿಯೇ ಈಗಿರುವ ಯಕ್ಷಗಾನ ಬಯಲಾಟಗಳ ಮೂಲ ಪರಿಕಲ್ಪನೆಗಾರನೇ ಎಂಬ ಸಂದೇಹಕ್ಕೊಂದು ಸಾಕ್ಷಿಯಾದರೂ ಸಿಕ್ಕಿತಲ್ಲಾ! ಭರತನ ಆ ತ್ರಿಪುರ ಸಂಹಾರ ಹೇಗಿತ್ತೋ, ಅದರ ಪಠ್ಯ ಸಿಗಲಾರದು; ಬಹುಶಃ ಅವನು ನೀಡಿದ ಲಕ್ಷಣಗಳನ್ನು ಆಧರಿಸಿಯೇ ಕಾಲಾಂತರದಲ್ಲಿ ನಮ್ಮ ಯಕ್ಷಗಾನ ಬಯಲಾಟಗಳೂ ರೂಪುಗೊಂಡಿರಬಹುದು. ಅಸುರ ರಾಣಿಯರ ಪಾತಿವ್ರತ್ಯ ಕೆಡಿಸಲು ಕೃಷ್ಣನು ಸುಂದರ ಬುದ್ಧನರೂಪಿನಲ್ಲಿ ಬಂದ ಎಂಬುದೂ ಬುದ್ಧನ ಬಗ್ಗೆ ಅಸಹನೆ ಇದ್ದ ಪುರಾಣಕಾರರ ಕೈವಾಡವಿರಬಹುದು.

ಇದೇನೇ ಆದರೂ, ನಮ್ಮ ಹಳ್ಳಿಗರು ಬಹು ಉತ್ಸುಕತೆಯಿಂದ ಪ್ರದರ್ಶಿಸುವ 'ತ್ರಿಪುರ ಸಂಹಾರ' ಕಥನಕ್ಕೆ ಸರಿಸುಮಾರು ಎರಡುಸಾವಿರ ವರ್ಷಗಳು ಎಂದಾಯಿತು; ಭಲಿರೇ ಶಹಬ್ಬಾಸ್! ❖



ಭೂತಾನ್‌ನ ದೋಚು ಲಾ ಪಾಸ್

• ಸಿಹಿಜೀವಿ ವೆಂಕಟೇಶ್ವರ

ಪ್ರವಾಸ

ದೋಚು ಲಾ ಪಾಸ್ -ಇದು ಸಮುದ್ರ ಮಟ್ಟದಿಂದ 3,100 ಮೀಟರ್ ಎತ್ತರದಲ್ಲಿದ್ದು, ಹಿಮಾಲಯ ಪರ್ವತ ಶ್ರೇಣಿಗಳ ಅದ್ಭುತ ವಿಹಂಗಮ ನೋಟಗಳಿಗೆ ಹೆಸರುವಾಸಿ. ಈ ಪಾಸ್ ಭೂತಾನ್‌ನಲ್ಲಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ.

ಹಿಮಾಲಯದ ಹೃದಯಭಾಗದಲ್ಲಿರುವ ಈ ಪರ್ವತ ಮಾರ್ಗವಿದೆ. ಇದು ಭೂತಾನ್‌ನ ಒಂದು ಮಹತ್ವದ ರಸ್ತೆಯಾಗಿದೆ. ರಾಜಧಾನಿ ಥಿಂಪುವನ್ನು ಪ್ರಾಚೀನ ಪಟ್ಟಣವಾದ ಪುನಾಖಾದೊಂದಿಗೆ ಇದು ಸಂಪರ್ಕಿಸುತ್ತದೆ. ದೇಶದ ಅತಿ ಎತ್ತರದ ಪರ್ವತ ಮಾರ್ಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ದೋಚು ಲಾ ಪಾಸ್, ಪೂರ್ವ ಹಿಮಾಲಯದ ಹಿಮದಿಂದ ಆವೃತವಾದ ಶಿಖರಗಳ ಮೋಡಿ ಮಾಡುವ ದೃಶ್ಯಾವಳಿಗಳಿಂದ ಗಮನಸೆಳೆಯುತ್ತದೆ.

2003 ರ ಮಿಲಿಟರಿ ಕಾರ್ಯಾಚರಣೆಯಲ್ಲಿ ಹೋರಾಡಿದ ಭೂತಾನಿನ ಸೈನಿಕರ ಗೌರವಾರ್ಥವಾಗಿ ನಿರ್ಮಿಸಲಾದ ಐತಿಹಾಸಿಕ 108 ಸ್ಮಾರಕ ಚೋರ್ಟೆನ್‌ಗಳೊಂದಿಗೆ ಈ ಪಾಸ್ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಐತಿಹಾಸಿಕ ಶೌರ್ಯದ ಹೃದಯಸ್ಪರ್ಶಿ ಸಂಕೇತವಾಗಿದೆ. ಭೂತಾನಿನ ಈ ಸ್ಥಳವು ಬೆರಗುಗೊಳಿಸುವ ಹೆಗ್ಗುರುತಿನ ಐತಿಹಾಸಿಕ ಸಾಂಸ್ಕೃತಿಕ ಮತ್ತು ನೈಸರ್ಗಿಕ ಮಹತ್ವವನ್ನು ಹೊಂದಿದೆ.

ದೋಚು ಲಾ ಪಾಸ್‌ನ ಡ್ರುಕ್ ವಾಂಗ್ಯಾಲ್ ಚೋರ್ಟೆನ್ಸ್ ಎಂದು ಕರೆಯಲ್ಪಡುವ 108 ಸ್ಮಾರಕ ಸ್ತೂಪಗಳ ನಿರ್ಮಾಣವು ಭೂತಾನ್‌ನಲ್ಲಿನ ಮಿಲಿಟರಿ ಸಂಘರ್ಷಗಳಿಗೆ ನಿಕಟ ಸಂಬಂಧ ಹೊಂದಿದೆ. 2003 ರಲ್ಲಿ ಭಾರತೀಯ ದಂಗೆಕೋರರ ವಿರುದ್ಧದ ಮಿಲಿಟರಿ ಕಾರ್ಯಾಚರಣೆಯ ಸಮಯದಲ್ಲಿ ಪ್ರಾಣ ಕಳೆದುಕೊಂಡ ಭೂತಾನ್ ಸೈನಿಕರ ಗೌರವಾರ್ಥವಾಗಿ ಡ್ರುಕ್ ವಾಂಗ್ಯಾಲ್ ಚೋರ್ಟೆನ್‌ಗಳನ್ನು ನಿರ್ಮಿಸಲಾಯಿತು. ಈ ಮಿಲಿಟರಿ ಕಾರ್ಯಾಚರಣೆಯು ದಕ್ಷಿಣ ಭೂತಾನ್‌ನಲ್ಲಿ ಯುನೈಟೆಡ್ ಲಿಬರೇಶನ್ ಫ್ರಂಟ್ ಆಫ್ ಅಸ್ಸಾಂ ಮತ್ತು ಇತರ ಭಾರತೀಯ ದಂಗೆಕೋರ ಗುಂಪುಗಳಿಂದ ನಡೆದ ದಂಗೆಯಲ್ಲಿ ಮಡಿದವರ ಗೌರವಾರ್ಥವಾಗಿ ಕಟ್ಟಲಾಗಿದೆ.

108 ಚೋರ್ಟೆನ್‌ಗಳನ್ನು ಭೂತಾನ್‌ನ ಹಿರಿಯ ರಾಣಿ ಆಶಿ ದೋರ್ಜಿ ವಾಂಗ್ಮೋ ವಾಂಗ್‌ಚುಕ್ ಅವರು ಕಟ್ಟಿಸಿದ್ದಾರೆ. 108 ಸಂಖ್ಯೆ ಟಿಬೆಟಿಯನ್ ಬೌದ್ಧ ಧರ್ಮದಲ್ಲಿ ಪವಿತ್ರ ಸಂಖ್ಯೆಯಾಗಿದ್ದು, ಈ ಚೋರ್ಟೆನ್‌ಗಳನ್ನು ಮೂರು ವಿಭಿನ್ನ ಗಾತ್ರಗಳಲ್ಲಿ ನಿರ್ಮಿಸಲಾಗಿದ್ದು ಸೈನಿಕರ ವಿವಿಧ ಶ್ರೇಣಿಗಳನ್ನು ಪ್ರತಿನಿಧಿಸುತ್ತದೆ. ಪ್ರತಿಯೊಂದು ಚೋರ್ಟೆನ್ ಅನ್ನು ಸುಂದರವಾಗಿ ಅಲಂಕರಿಸಿರುವುದು ಈ ದೋಚು ಲಾ ಪಾಸ್‌ನ ರಮಣೀಯ ಸೌಂದರ್ಯವನ್ನು ಹೆಚ್ಚಿಸಿದೆ.

ಐತಿಹಾಸಿಕ ಮಹತ್ವದ ಜೊತೆಗೆ ದೋಚು ಲಾ ಪಾಸ್‌ನಲ್ಲಿ 2008 ರಲ್ಲಿ ಮಹಾರಾಣಿ ಆಶಿ ದೋರ್ಜಿ ವಾಂಗ್ಮೋ ವಾಂಗ್‌ಚುಕ್ ನಿರ್ಮಿಸಿದ ಡ್ರುಕ್ ವಾಂಗ್ಯಾಲ್ ದೇವಾಲಯ ಇರುವುದರಿಂದ ಇದು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ಈ ದೇವಾಲಯವು ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್‌ಗೆ ಮತ್ತು ದೇಶ ಹಾಗೂ ಅದರ ಜನರ ಯೋಗಕ್ಷೇಮಕ್ಕಾಗಿ ಸಮರ್ಪಿತವಾಗಿದೆ.

ದೋಚು ಲಾ ಪಾಸ್‌ಗೆ ಕಾಲಿಡುತ್ತಿದ್ದಂತೆ ಉಷ್ಣಾಂಶದ ಇಳಿಕೆ ಪರಿಣಾಮವಾಗಿ ನಾವು ಚಳಿಯಿಂದ ನಡುಗುವಂತಾಯಿತು. ಆಗಾಗ್ಗೆ ಬೀಸುವ ತಂಗಾಳಿಯು ನಮಗೆ ಚಳಿಯ ತೀವ್ರತೆಯನ್ನು ಹೆಚ್ಚಿಸಿತು. ಆದರೂ ಆ 108 ಸ್ತೂಪಗಳ ಭವ್ಯ ನೋಟ ಮತ್ತು ಪ್ರಾಕೃತಿಕ ಸೌಂದರ್ಯವು ನಮ್ಮ ಚಳಿಯನ್ನು ದೂರ ಮಾಡಿ ಮನಕ್ಕೆ ಮುದ ನೀಡಿತು. ನೀವು ಭೂತಾನ್‌ಗೆ ಪ್ರವಾಸ ಕೈಗೊಂಡರೆ ಬೇಸಿಗೆ ಕಾಲದಲ್ಲಿ ಥಿಂಪು ಬಳಿಯ ದೋಚು ಲಾ ಪಾಸ್ ನಿಮಗೆ ಖಂಡಿತವಾಗಿ ಇಷ್ಟವಾಗುತ್ತದೆ. ❖



ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಗಣಿತದಲ್ಲಿ ಗರ್ದಿ ಗಮ್ಮತ್ತು

ಎರಡು ಗುಣಾಕಾರ ಉತ್ತರ ಒಂದೇ

18X297 = 5,346
27X198 = 5,346

12X483 = 5,796
42X138 = 5,796

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಒಂದೇ ತೆರನಾದ ಮೂರು ಅಕ್ಷರಗಳಿಗೆ ಅಕ್ಷರ ಪಟ್ಟಿಯಿಂದ ಆಯ್ದ ಮೂರು ಬೇರೆ ಬೇರೆ ಅಕ್ಷರ ತುಂಬಿ ಪ್ರಾಸಪದ ಮಾಡಿ.

	I	C	E
	I	C	E
	I	C	E

	O	O	D
	O	O	D
	O	O	D

	E	A	T
	E	A	T
	E	A	T

	I	N	D
	I	N	D
	I	N	D

	I	N	G
	I	N	G
	I	N	G

ಅಕ್ಷರಪಟ್ಟಿ

N	W	M
H	R	S
M	K	F
S	G	W
K	M	W

ಚಿಕ್ಕ ಲೆಕ್ಕ

$$12^2 + 33^2 = 144 + 1089 = 1233$$

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಅರಿ	+	ಕಾಯ	+	ಪಾ	=	
2	ರಾಸು	+	ಕರಿ	+	ನಿ	=	
3	ತೂತು	+	ಸೇವೆ	+	ಗು	=	
4	ಸಖಿ	+	ಜಮಾ	+	ಮು	=	
5	ಹದಿ	+	ಬನ	+	ಳ	=	



ಜಾಣಪದ ಆಟ

ಇಲ್ಲಿ ಕೊಟ್ಟಿರುವ ಒಂದೇ ತೆರನಾದ ಎರಡು ಅಕ್ಷರಗಳಿಗೆ ಅಕ್ಷರ ಪಟ್ಟಿಯಿಂದ ಆಯ್ದು ಮೂರು ಬೇರೆ ಬೇರೆ ಅಕ್ಷರ ತುಂಬಿ ಪ್ರಾಸಪದ ಮಾಡಿ.

	ರ	ಡಿ
	ರ	ಡಿ
	ರ	ಡಿ

	ಗ	ಡಿ
	ಗ	ಡಿ
	ಗ	ಡಿ

	ರ	ಳು
	ರ	ಳು
	ರ	ಳು

	ಸ	ರು
	ಸ	ರು
	ಸ	ರು

	ಕ್ಷ	ಣ
	ಕ್ಷ	ಣ
	ಕ್ಷ	ಣ


	ಸ	ರ
	ಸ	ರ
	ಸ	ರ

ಅಕ್ಷರ ಪಟ್ಟಿ

ಬೆ	ಕ	ನೆ	ಗ	ಪ	ಕೊ
ಕೆ	ಬೇ	ಕೇ	ಮೊ	ಹೆ	ನೇ
ಗೊಂ	ಮಾ	ತ	ಅಂ	ಶಿ	ಲ

ಕೋತಿ ಚೇಷ್ಟೆ

ತೋಟವೊಂದರಲ್ಲಿ ಮಂಗಗಳ ಹಾವಳಿ ಹೆಚ್ಚಿತ್ತು. ಆ ತೋಟದ ಮಾಲೀಕ ಅವುಗಳನ್ನು ಬೆದರಿಸಲೆಂದು ಬೆದರುಗೊಂಬೆಯೊಂದನ್ನು ತೋಟದಲ್ಲಿ ನಿಲ್ಲಿಸಿದ. ಇದನ್ನು ನೋಡಿ ಹೆದರಿದ್ದ ಮಂಗಗಳು ಒಂದೆರಡು ದಿನ ತೋಟದತ್ತ ಸುಳಿಯಲಿಲ್ಲ. ವಾರ ಕಳೆದ ಬಳಿಕ ಅವುಗಳಿಗೆ ಇದು ಕೇವಲ ಗೊಂಬೆ ಎಂದು ತಿಳಿಯಿತು. ಮತ್ತೆ ತೋಟಕ್ಕೆ ಬಂದ ಅವುಗಳು ಅಲ್ಲೇ ಇದ್ದ ಹುಲ್ಲಿನಿಂದ ಬಾಲ ಮಾಡಿ ಅದನ್ನು ಆ ಗೊಂಬೆಗೇ ಸಿಕ್ಕಿಸಿ, ಅದಕ್ಕೆ ಮಂಗನ ಮುಖದ ಚಿತ್ರ ಬಿಡಿಸಿದವು. ಇದನ್ನು ಕಂಡ ಮಾಲೀಕ ಅವಾಕ್ಕಾದ.



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಾಟ

ಇಲ್ಲಿರುವ ಮೂರು ಪದ ಸೇರಿಸಿ ಒಂದೇ ಪದ ಮಾಡಿ.

ಕನ್ನಡ + ಕದ + ಬಂಗಾರ

ಉತ್ತರ:

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಸರಿಸುಮಾರು 2.ಕರಿಮೆಣಸು 3.ಗುರುನಾನಕ 4.ಕಡಲೆಬೇಳೆ 5.ಹುರುಳಿಕಾಳು


ಚಾಕಲೇಟ್ ಲೆಕ್ಕ: ಅಭಿನವನಿಗೆ 2 ಹಾಗೂ ಚಿನ್ಮಯ್‌ಗೆ 3.

ಹೊಂದಿಸು ಆನಂದಿಸು: 1. ಕತ್ತೆ ಭಾರ 2.ಕರಡಿ ಕುಣಿತ 3.ಆಮೆ ನಡಿಗೆ 4.ಆಕಳು ಸ್ವಭಾವ 5.ಹಾವು ದ್ವೇಷ 6.ಎಮ್ಮೆ ಚರ್ಮ 7.ನಾಯಿ ನಿಷ್ಠೆ 8.ನರಿ ಬುದ್ಧಿ 9.ಕೋತಿ ಚೇಷ್ಟೆ 10.ಆನೆ ಬಲ

ಮೋಜಿನ ಇಂಗ್ಲಿಷ್: 1.BOX 2.FIX 3.FOX 4.FLEX 5.MIX 6.OX 7.SIX 8.TAX 9.WAX 10.XEROX



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು




ವಿಶಾಲ್ ಯಲಿವಾಳ
ರಾಣೆಬೆನ್ನೂರು




ಪ್ರತೀಕ ಬಂಡಗರ
ವಿಜಯಪುರ



ಪ್ರಾಪ್ತಿ ಪಿ.ಕರ್ಕೇರ
ಮಲ್ಪೆ



ಸಯಿದಾ ಸಫಾ ಹುರೈನ್
ತುಮಕೂರು



ಧನ್ಯತಾ ವಿ.ಬಡಿಗೇರ
ವಿಜಯನಗರ



ಸಾನ್ವಿ ಟಿ.
ಹಾಸನ

ಇಂಗ್ಲೆಂಡ್‌ಗೆ ಮಣಿದ ಭಾರತ

ಮಹಿಳಾ ಏಕದಿನ ಕ್ರಿಕೆಟ್ • ಪಂದ್ಯಕ್ಕೆ ಮಳೆ ಅಡಚಣೆ • ಸೋಫಿಗೆ ಮೂರು ವಿಕೆಟ್ • ಸರಣಿ 1–1 ಸಮಬಲ



ವಿಕೆಟ್ ಪಡೆದ ಸಂಭ್ರಮದಲ್ಲಿ ಇಂಗ್ಲೆಂಡ್ ತಂಡದ ಆಟಗಾರ್ತಿಯರು ಚಿತ್ರ: ಎಪಿ/ಪಿಟಿಐ

ಲಂಡನ್ (ಪಿಟಿಐ): ಇಂಗ್ಲೆಂಡ್ ಮಹಿಳೆಯರ ಕ್ರಿಕೆಟ್ ತಂಡವು ಶನಿವಾರ ಮಳೆಯಿಂದ ಅಚರಣೆಯಾದ ಎರಡನೇ ಏಕದಿನ ಪಂದ್ಯವನ್ನು ಡಕ್ವರ್ಥ್ ಲೂಯಿಸ್ ನಿಯಮದ (ಡಿಎಲ್‌ಎಸ್) ಆಧಾರದಲ್ಲಿ ಎಂಟು ವಿಕೆಟ್‌ಗಳಿಂದ ಭಾರತ ತಂಡವನ್ನು ಮಣಿಸಿತು.

ಮೂರು ಪಂದ್ಯಗಳ ಸರಣಿಯಲ್ಲಿ ಉಭಯ ತಂಡಗಳು 1–1 ಸಮಬಲ ಸಾಧಿಸಿದಂತಾಗಿದೆ. ಸೌತಾಂಪ್ಟನ್‌ನಲ್ಲಿ ನಡೆದ ಮೊದಲ ಪಂದ್ಯವನ್ನು ಭಾರತ ನಾಲ್ಕು ವಿಕೆಟ್‌ಗಳಿಂದ ಗೆದ್ದಿತ್ತು. ಹೀಗಾಗಿ, ಇದೇ 22ರಂದು ನಡೆಯುವ ಕೊನೆಯ ಪಂದ್ಯ ನಿರ್ಣಾಯಕವಾಗಿದೆ.

ಲಾರ್ಡ್ಸ್‌ನಲ್ಲಿ ನಡೆದ ಪಂದ್ಯವು ಮಳೆಯಿಂದಾಗಿ ವಿಳಂಬವಾಗಿ ಆರಂಭವಾಯಿತು. ಪ್ರತಿ ಇನಿಂಗ್ಸ್‌ಗೆ 29 ಓವರ್‌ಗಳನ್ನು ನಿಗದಿ ಮಾಡಲಾಯಿತು. ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಉಪ ನಾಯಕಿ ಸ್ಮೃತಿ ಮಂದಾನ (42; 51ಎ, 4X5) ಮತ್ತು ದೀಪ್ತಿ ಶರ್ಮಾ (ಔಟಾಗದೇ 30; 34ಎ, 4X2) ಅವರಿಬ್ಬರ ಆಟದ ಬಲದಿಂದ ಭಾರತ ತಂಡವು ನಿಗದಿಯ ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 143 ರನ್ ಪೇರಿಸಿತು.

ಈ ಗುರಿಯನ್ನು ಬೆನ್ನಟ್ಟಿದ ಆತಿಥೇಯ ತಂಡವು 18.4 ಓವರ್‌ಗಳಲ್ಲಿ ಒಂದು ವಿಕೆಟ್‌ಗೆ 102 ರನ್ ಗಳಿಸಿದ್ದಾಗ ಮತ್ತೆ ಮಳೆ ಅಡಚಣೆ ಉಂಟುಮಾಡಿತು. ಹೀಗಾಗಿ, ಗೆಲುವಿನ ಗುರಿಯನ್ನು 115 ರನ್‌ಗಳಿಗೆ (24 ಓವರ್) ಪರಿಷ್ಕರಿಸಲಾಯಿತು. ಇಂಗ್ಲೆಂಡ್ ಇನ್ನೂ 18 ಎಸೆತಗಳು ಬಾಕಿ ಇರುವಂತೆ ಎರಡು ವಿಕೆಟ್‌ಗೆ 116 ರನ್ ಗಳಿಸಿ ಸರಣಿಯನ್ನು ಜೀವಂತವಾಗಿ ಉಳಿಸಿಕೊಂಡಿತು.

ಎಮಿ ಜೋನ್ಸ್ (ಔಟಾಗದೇ 46; 57ಎ, 4x5) ಮತ್ತು ಟ್ಯಾಮಿ ಬ್ಯೂಮಾಂಟ್ (34;35ಎ, 4x5) ಮೊದಲ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಟ್ಯಾಮಿ ಅವರನ್ನು ಸ್ನೇಹಾ ರಾಣಾ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ನಂತರ ಬಂದ ನಾಯಕಿ ನ್ಯಾಟ್ ಸ್ಕಿವರ್ ಬ್ರಂಟ್ (21;25ಎ) ಅವರು ಎಮಿ ಅವರೊಂದಿಗೆ ಎರಡನೇ ವಿಕೆಟ್‌ಗೆ 48 ರನ್ ಸೇರಿಸಿದರು. ಬ್ರಂಟ್ ನಿರ್ಗಮನದ ಬಳಿಕ ಸೋಫಿಯಾ ಡಂಕ್ಲಿ (ಔಟಾಗದೇ 9) ಗೆಲುವಿನ ಔಪಚಾರ ಪೂರೈಸಿದರು.

ಮಂದಾನ ಆಸರೆ: ಇದಕ್ಕೂ ಮುನ್ನ ಭಾರತದ ಆರಂಭ ಉತ್ತಮವಾಗಿ ಇರಲಿಲ್ಲ. ಇಂಗ್ಲೆಂಡ್ ವೇಗಿ ಎಮ್ ಆರ್ಲೋಟ್ ಅವರು ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಪ್ರತೀಕಾ ರಾವಲ್ (3 ರನ್) ವಿಕೆಟ್ ಉರುಳಿಸಿದರು. ಸ್ಮೃತಿ ಅವರೊಂದಿಗೆ ಸೇರಿಕೊಂಡ ಹರ್ಲೀನ್ ಡಿಯೊಲ್ (16; 24ಎ) ಇನಿಂಗ್ಸ್‌ಗೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 40 ರನ್ ಸೇರಿದ್ದಾಗ, ಹರ್ಲೀನ್ ಅವರ ವಿಕೆಟ್ ಪಡೆಯುವಲ್ಲಿ ಸೋಫಿ ಎಕ್ಲೆಸ್ಟೋನ್ ಯಶಸ್ವಿಯಾದರು.

ಸೋಫಿ ತಮ್ಮ ಇನ್ನೊಂದು ಓವರ್‌ನಲ್ಲಿ ನಾಯಕಿ ಹರ್ಮನ್‌ಪ್ರೀತ್ ಕೌರ್ (7 ರನ್) ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಇನ್ನೊಂದು ಬದಿಯಿಂದ ಚಾರ್ಲಿ ಡೀನ್ ಅವರು ಜೆಮಿಮಾ ರಾಡ್ರಿಗಸ್ (3 ರನ್) ಅವರಿಗೆ ಪೆವಿಲಿಯನ್ ದಾರಿ ತೋರಿಸಿದರು. ರಿಚಾ ಘೋಷ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಸೋಫಿ ವಿಜೃಂಭಿಸಿದರು.

72 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡ ಪ್ರವಾಸಿ ತಂಡವು ಆತಂಕಕ್ಕೊಳಗಾಯಿತು. ಏಕಾಂಗಿಯಾಗಿ ಹೋರಾಡುತ್ತಿದ್ದ ಸ್ಮೃತಿ ಅವರೊಂದಿಗೆ ಸೇರಿಕೊಂಡ ದೀಪ್ತಿ ಚೇತರಿಕೆ ನೀಡಿದರು. ಸರಣಿಯ ಮೊದಲ ಪಂದ್ಯದಲ್ಲಿಯೂ ಗೆಲುವಿನ ರೂವಾರಿಯಾಗಿದ್ದ ದೀಪ್ತಿ ಉಪಯುಕ್ತ ಕಾಣಿಕೆ ನೀಡಿದರು. ಅವರು 6ನೇ ವಿಕೆಟ್ ಜೊತೆಯಾಟದಲ್ಲಿ 26 ರನ್ ಸೇರಿಸಿದರು. ಸ್ಮೃತಿ ನಿರ್ಗಮಿಸಿದ ನಂತರ ಅರುಂಧತಿ ರೆಡ್ಡಿ (14; 18ಎ) ಅವರೊಂದಿಗೆ ಕೂಡ 26 ರನ್ ಪೇರಿಸಿದರು. ಇದರಿಂದಾಗಿ ತಂಡವು ಸವಾಲಿನ ಮೊತ್ತ ಗಳಿಸಿತ್ತು.

ಸಂಕ್ಷಿಪ್ತ ಸ್ಕೋರು: ಭಾರತ: 29 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 143 (ಸ್ಮೃತಿ ಮಂದಾನ 42, ದೀಪ್ತಿ ಶರ್ಮಾ ಔಟಾಗದೇ 30, ಎಮ್ ಅರ್ಲಾಟ್ 26ಕ್ಕೆ2, ಸೋಫಿ ಎಕ್ಲೆಸ್ಟೋನ್ 27ಕ್ಕೆ3, ಲಿನ್ಸಿ ಸ್ಮಿತ್ 28ಕ್ಕೆ2). ಇಂಗ್ಲೆಂಡ್: 21 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 116 (ಎಮಿ ಜೋನ್ಸ್ ಔಟಾಗದೇ 46, ಟ್ಯಾಮಿ ಬ್ಯೂಮಾಂಟ್ 34, ನ್ಯಾಟ್ ಸ್ಕಿವರ್ ಬ್ರಂಟ್ 21). ಫಲಿತಾಂಶ: ಇಂಗ್ಲೆಂಡ್‌ಗೆ ಎಂಟು ವಿಕೆಟ್‌ಗಳ ಜಯ (ಡಿಎಲ್‌ಎಸ್ ಆಧಾರದಲ್ಲಿ). ಪಂದ್ಯದ ಆಟಗಾರ್ತಿ: ಸೋಫಿ ಎಕ್ಲೆಸ್ಟೋನ್

ಮ್ಯಾಂಚೆಸ್ಟರ್‌ನಲ್ಲಿ ನೈಜ ಪರೀಕ್ಷೆ

ಶುಭಮನ್ ಗಿಲ್ ನಾಯಕತ್ವದ ಬಗ್ಗೆ ಚಾಪೆಲ್ ಅಭಿಪ್ರಾಯ


ಗ್ರೇಗ್ ಚಾಪೆಲ್



ಭಾರತ ತಂಡದ ನಾಯಕ ಶುಭಮನ್ ಗಿಲ್, ಕರುಣ್ ನಾಯರ್ ಮತ್ತು ಪ್ರಸಿದ್ಧ ಕೃಷ್ಣ ತಾಲೀಮು ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಭಾರತ ತಂಡದ 'ಯುವ ನಾಯಕ' ಶುಭಮನ್ ಗಿಲ್ ಅವರಿಗೆ ನಿಜವಾದ ಪರೀಕ್ಷೆ ಈಗ ಎದುರಾಗಿದೆ ಎಂದು ಆಸ್ಟ್ರೇಲಿಯಾದ ಕ್ರಿಕೆಟ್ ದಿಗ್ಗಜ ಗ್ರೇಗ್ ಚಾಪೆಲ್ ಹೇಳಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಗಿಲ್ ನಾಯಕನಾಗಿ ಪದಾರ್ಪಣೆ ಮಾಡಿದ್ದಾರೆ. ಸರಣಿಯ ಮೊದಲ ಮೂರು ಪಂದ್ಯಗಳಲ್ಲಿ ಇಂಗ್ಲೆಂಡ್ 2–1ರ ಮುನ್ನಡೆಯಲಿದೆ. ಇನ್ನೆರಡು ಪಂದ್ಯಗಳು ಬಾಕಿ ಇವೆ.

ಅದರಲ್ಲೂ ಮ್ಯಾಂಚೆಸ್ಟರ್‌ನಲ್ಲಿ ನಡೆಯಲಿರುವ ನಾಲ್ಕನೇ ಪಂದ್ಯವು ಉಭಯ ತಂಡಗಳಿಗೂ ಮಹತ್ವದ್ದಾಗಿದೆ. ಇಂಗ್ಲೆಂಡ್ ಒಂದೊಮ್ಮೆ ಈ ಪಂದ್ಯದಲ್ಲಿ ಜಯಿಸಿದರೆ ಸರಣಿ ಕೈವಶ ಮಾಡಿಕೊಳ್ಳುವುದು. ಭಾರತ ಗೆದ್ದರೆ ಸರಣಿ ಸಮಬಲಕ್ಕೆ ಬರುವುದು. ಐದನೇ ಪಂದ್ಯವು ನಿರ್ಣಾಯಕವಾಗುವ ಸಾಧ್ಯತೆ ಇದೆ. ಆದ್ದರಿಂದ ಭಾರತವನ್ನು ಸರಣಿ ಸೋಲಿನಿಂದ ತಪ್ಪಿಸಲು ನಾಲ್ಕನೇ ಪಂದ್ಯದ ಜಯ ಅನಿವಾರ್ಯವಾಗಿದೆ.

ಈ ಕುರಿತು 'ಇಎಸ್‌ಪಿಎನ್‌ಕ್ರಿಕ್‌ಇನ್ಫೋ ಡಾಟ್ ಕಾಮ್ ವೆಬ್‌ಸೈಟ್ ಕಾರ್ಯಕ್ರಮದಲ್ಲಿ ಮಾತನಾಡಿರುವ ಚಾಪೆಲ್, 'ಇವತ್ತಿನ ಕ್ರಿಕೆಟ್‌ನಲ್ಲಿರುವ ವಾತಾವರಣದಲ್ಲಿ ಬೆಳೆಯುವುದು ಸುಲಭವಲ್ಲ. ಈ ಸವಾಲು ಎದುರಿಸಲು ಗಿಲ್ ಸಿದ್ಧರಾಗಿಯೇ ಇರಬೇಕು. ಅವರು ತಮಗೆ ಎಂತಹ ತಂಡ ಇರಬೇಕು ಎಂಬ ಸ್ಪಷ್ಟ ದೃಷ್ಟಿಕೋನ ಹೊಂದಿರಬೇಕು. ಮಾತುಗಳಿಂದಷ್ಟೇ ಅಲ್ಲ; ಕ್ರಿಯಾತ್ಮಕವಾಗಿ, ಗುರಿಯಲ್ಲಿ ಸ್ಪಷ್ಟತೆ ಮತ್ತು ಉತ್ತಮ ದರ್ಜೆಯ ನೋಟಗಳನ್ನು ಹೊಂದಿರಬೇಕು. ತಾತ್ಪರ್ಯ ಏನೆಂದರೆ, ಕಠುಕಠಿಣವಾದ ಶಿಸ್ತು ರೂಢಿಸಿಕೊಳ್ಳಬೇಕು. ಭಾರತ ತಂಡವು ಕಳಪೆ ಫೀಲ್ಡಿಂಗ್‌ನಿಂದಾಗಿ ಹಿನ್ನಡೆ ಅನುಭವಿಸುವುದು ಸಲ್ಲದು. ಸುಲಭವಾಗಿ ರನ್‌ಗಳನ್ನು ಬಿಟ್ಟುಕೊಡಬಾರದು. ಕ್ಯಾಚ್ ಅವಕಾಶಗಳನ್ನು ಬಿಡಬಾರದು' ಎಂದರು.

'ಆಯ್ಕೆಗಾರರು ಮತ್ತು ಗಿಲ್ ಜೊತೆಯಾಗಿ ತಂಡದ ಪ್ರಮುಖ ಆಟಗಾರರನ್ನು ಗುರುತಿಸಬೇಕು. ತಾವು ನಂಬಿಕೆ ಇಡಬಹುದಾದ ಆಟಗಾರರನ್ನು ಗಿಲ್ ಆಯ್ಕೆ ಮಾಡಿಕೊಳ್ಳುವುದು ಒಳಿತು. ಪಂದ್ಯದ ಯೋಜನೆಯನ್ನು ಸ್ಪಷ್ಟವಾಗಿ ರೂಪಿಸಿಕೊಳ್ಳಬೇಕು. ಪ್ರತಿ ಆಟಗಾರನಿಗೂ ತಂಡವು ತಮ್ಮಿಂದ ಏನು ನಿರೀಕ್ಷಿಸುತ್ತದೆ ಎಂಬುದರ ಸ್ಪಷ್ಟ ಅರಿವು ಇರಬೇಕು' ಎಂದು ಸಲಹೆ ನೀಡಿದರು.

'ಉತ್ತಮ ನಾಯಕರು ಶ್ರೇಷ್ಠ ಸಂವಹನಕಾರರಾಗಿರುತ್ತದೆ. ಗಿಲ್ ಅವರು ಅಂತಹ ನಾಯಕರಾಗಬಲ್ಲರು. ಅದೂ ಶೀಘ್ರ ಸಮಯದಲ್ಲಿ. ತಾಲೀಮು ಸಂದರ್ಭದಲ್ಲಿ, ಡ್ರೆಸಿಂಗ್ ರೂಮ್‌ನಲ್ಲಿ, ಪಂದ್ಯದ ನಡುವಿನ ವಿರಾಮದಲ್ಲಿ ಅವರು ಶಾಂತಚಿತ್ತದ ಸಂವಹನ ನಡೆಸುವುದರೊಂದಿಗೆ ತಮ್ಮ ಗುರಿ ಸಾಧಿಸಬಹುದು' ಎಂದು ಅವರು ಹೇಳಿದರು.

ಬ್ಯಾಡ್ಮಿಂಟನ್: ಕ್ವಾರ್ಟರ್ ಫೈನಲ್‌ಗೆ ಭಾರತ ತಂಡ

ಸೋಲೊ (ಇಂಡೊನೇಷ್ಯಾ) (ಪಿಟಿಐ):



ಭಾರತ ತಂಡವು, ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನ 'ಡಿ' ಗುಂಪಿನ ಪಂದ್ಯದಲ್ಲಿ ಶನಿವಾರ ಯುಎಇ ತಂಡವನ್ನು 110–83ರಿಂದ ಮಣಿಸಿ, ಕ್ವಾರ್ಟರ್ ಫೈನಲ್ ಟಿಕೆಟ್ ಖಚಿತಪಡಿಸಿಕೊಂಡಿತು.

'ಡಿ' ಗುಂಪಿನಲ್ಲಿರುವ ಹಾಂಗ್‌ಕಾಂಗ್ ಕೂಡ ಆಡಿರುವ ಎರಡೂ ಪಂದ್ಯಗಳನ್ನು ಗೆದ್ದಿದೆ. ಭಾನುವಾರ ಭಾರತ ಹಾಗೂ ಹಾಂಗ್‌ಕಾಂಗ್ ನಡುವೆ ಪಂದ್ಯ ನಡೆಯಲಿದ್ದು, ಗುಂಪಿನ ಅಗ್ರಸ್ಥಾನ ಪಡೆಯಲು ಪ್ರಬಲ ಪೈಪೋಟಿ ನಡೆಯುವ ನಿರೀಕ್ಷೆ ಇದೆ.

ಈ ಚಾಂಪಿಯನ್‌ಷಿಪ್‌ನಲ್ಲಿ ರಿಲೇ ಪಾಯಿಂಟ್ ಮಾದರಿಯ ವ್ಯವಸ್ಥೆ ಅಳವಡಿಸಲಾಗಿದೆ. ತಂಡವೊಂದು ಪಂದ್ಯ ಗೆಲ್ಲಬೇಕಾದರೆ 110 ಪಾಯಿಂಟ್ ಗಳಿಸಬೇಕಾಗುತ್ತದೆ.

ಚಿಟಿಕೆ ಸುದ್ದಿ

ಸ್ವಿಸ್ ಓಪನ್: ಖಾಡೆ–ಪ್ರಶಾಂತ್ ಜೋಡಿಗೆ ಸೋಲು


ಅರ್ಜುನ್ ಖಾಡೆ


ಪ್ರಶಾಂತ್

ನವದೆಹಲಿ (ಪಿಟಿಐ): ಭಾರತದ ಅರ್ಜುನ್ ಖಾಡೆ ಮತ್ತು ವಿಜಯ ಸುಂದರ್ ಪ್ರಶಾಂತ್ ಜೋಡಿಯು ಸ್ವಿಜರ್ಲೆಂಡ್‌ನ ಸ್ಟಾದ್‌ನಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಪರಾಭವಗೊಂಡಿತು.

ಖಾಡೆ–ಪ್ರಶಾಂತ್ ಜೋಡಿಯು ಶುಕ್ರವಾರ ನಡೆದ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ಅಲ್ಬಾನೊ ಒಲಿವೆಟ್ಟಿ (ಫ್ರಾನ್ಸ್) ಹಾಗೂ ಹೆಂಡ್ರಿಕ್ ಜೆಬೆನ್ಸ್ (ಜರ್ಮನಿ) ಜೋಡಿ ಎದುರು 5–7, 5–7ರಿಂದ ನೇರ ಸೆಟ್‌ಗಳಿಂದ ಮಣಿಯಿತು. ಈ ಮೂಲಕ, ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಎಟಿಪಿ 250 ಮಟ್ಟದ ಈ ಟೂರ್ನಿಯು ಒಟ್ಟು ₹6 ಕೋಟಿ ಬಹುಮಾನ ಹೊಂದಿದೆ. ಖಾಡೆ ಅವರು ಈ ಹಿಂದೆ ಒಂದು ಎಟಿಪಿ ಪ್ರಶಸ್ತಿ ಗೆದ್ದಿದ್ದರು. ಖಾಡೆ– ರಿತ್ವಿಕ್ ಬೊಲ್ಲಿಪಳ್ಳಿ ಜೋಡಿಯು ಅಲ್ಮಾಟಿ ಎಟಿಪಿ 250 ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು.

ಕೌಂಟಿ ಕ್ರಿಕೆಟ್ ಆಡದಿರಲು ಋತುರಾಜ್ ನಿರ್ಧಾರ



ಲಂಡನ್ (ಪಿಟಿಐ): ಭಾರತದ ಮಧ್ಯಮ ಕ್ರಮಾಂಕದ ಆಟಗಾರ ಋತುರಾಜ್ ಗಾಯಕವಾಡ ಅವರು ಕೌಂಟಿ ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

'ಋತುರಾಜ್ ಅವರು ವೈಯಕ್ತಿಕ ಕಾರಣಗಳಿಂದಾಗಿ ಈ ಬಾರಿ ನಮ್ಮ ತಂಡದ ಪರ ಆಡುತ್ತಿಲ್ಲ' ಎಂದು ಯಾರ್ಕ್‌ಶೈರ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ.

ಋತುರಾಜ್ ಅವರು ಯಾರ್ಕ್‌ಶೈರ್ ಕ್ಲಬ್ ತಂಡದ ಪರ ಐದು ಪಂದ್ಯಗಳನ್ನು ಆಡಲು ಒಪ್ಪಂದ ಮಾಡಿಕೊಂಡಿದ್ದರು. ಹಾಲಿ ಚಾಂಪಿಯನ್ ಸರ್ರೆ ಎದುರು ಸ್ಕಾರ್‌ಬರೊದಲ್ಲಿ ಮಂಗಳವಾರ (ಜುಲೈ 22) ನಡೆಯಲಿರುವ ಪಂದ್ಯದಲ್ಲಿ ಅವರು ಕಣಕ್ಕಿಳಿಯಬೇಕಿತ್ತು.

ಕ್ವಾರ್ಟರ್‌ಗೆ ಭಾರತದ ಮಿಶ್ರ ತಂಡ

ನವದೆಹಲಿ (ಪಿಟಿಐ): ಯುವ ಆಟಗಾರರನ್ನು ಒಳಗೊಂಡ ಭಾರತದ ಬ್ಯಾಡ್ಮಿಂಟನ್ ಮಿಶ್ರ ತಂಡವು ಜರ್ಮನಿಯಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಅಮೆರಿಕ ತಂಡದ ವಿರುದ್ಧ ಪಾರಮ್ಯ ಸಾಧಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಭಾರತದ ತಂಡವು ಶನಿವಾರ 3–1ರಿಂದ ಅಮೆರಿಕ ತಂಡವನ್ನು ಸೋಲಿಸಿತು. ಭಾರತ ಎಂಟರ ಘಟ್ಟದ ಹಣಾಹಣಿಯಲ್ಲಿ ಮಲೇಷ್ಯಾ ತಂಡವನ್ನು ಎದುರಿಸಲಿದೆ.

ಅಡ್ಕರ್‌ಗೆ ಗೆಲುವು: ಭಾರತದ ಟೆನಿಸ್ ಆಟಗಾರ್ತಿ ವೈಷ್ಣವಿಅಡ್ಕರ್ 6-2, 6-4ರಲ್ಲಿ ನೇರ ಸೆಟ್‌ಗಳಿಂದ ಫಿನ್ಲೆಂಡ್‌ನ ವೆನ್ನಾ ಎಲಿಸ್ ಅವರನ್ನು ಮಣಿಸಿ, ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾರತದ ಟೇಬಲ್ ಟೆನಿಸ್ ಮಹಿಳಾ ತಂಡವು 0–3ರಿಂದ ಚೀನಾ ತೈಪೆಗೆ ಮಣಿದು, ಕ್ವಾರ್ಟರ್ ಫೈನಲ್‌ನಲ್ಲಿ ಅಭಿಯಾನವನ್ನು ಮುಗಿಸಿತು.

ಫ್ರೀಸ್ಟೈಲ್ ಚೆಸ್ ಗ್ರ್ಯಾನ್‌ಸ್ಲಾಮ್: ಪ್ರಶಸ್ತಿಗಾಗಿ ಅಮೆರಿಕದ ಆಟಗಾರರ ಸೆಣಸಾಟ

ಅರೋನಿಯನ್‌ಗೆ ಮಣಿದ ಇರಿಗೇಶಿ


ಅರ್ಜುನ್ ಇರಿಗೇಶಿ


ಹ್ಯಾನ್ಸ್ ನೀಮನ್

ಲಾಸ್ ವೇಗಸ್ (ಪಿಟಿಐ): ಫ್ರೀಸ್ಟೈಲ್ ಚೆಸ್ ಗ್ರ್ಯಾನ್‌ಸ್ಲಾಮ್ ಟೂರ್‌ನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರ ಕನಸಿನ ಓಟವು ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು. ಯುವತಾರೆ 0–2 ಅಂತರದಿಂದ ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಲೆವೊನ್ ಅರೋನಿಯನ್ ಅವರಿಗೆ ಸೋತರು.

ಫ್ರೀಸ್ಟೈಲ್ ಗ್ರ್ಯಾನ್‌ಸ್ಲಾಮ್‌ನಲ್ಲಿ ಕೊನೆಯ ನಾಲ್ಕರ ಘಟ್ಟ ತಲುಪಿದ ಭಾರತದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾದ 21 ವರ್ಷದ ಅರ್ಜುನ್, ಅಮೆರಿಕದ ಅನುಭವಿ ಆಟಗಾರನ ವಿರುದ್ಧ ಮುಗ್ಗರಿಸಿದರು. ಎರಡು ರ್‍ಯಾಪಿಡ್ ಪಂದ್ಯಗಳನ್ನು ಒಳಗೊಂಡಿದ್ದ ಸೆಮಿಫೈನಲ್‌ನಲ್ಲಿ 42 ವರ್ಷದ ಅರೋನಿಯನ್ ಗೆಲುವು ಸಾಧಿಸಿದರು.

ಕ್ವಾರ್ಟರ್ ಫೈನಲ್‌ನಲ್ಲಿ 1.5– 0.5 ರಿಂದ ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಅವರನ್ನು ಮಣಿಸಿದ್ದ ಇರಿಗೇಶಿ, ಸೆಮಿಫೈನಲ್‌ನಲ್ಲಿ ಕಠಿಣ ಪರಿಸ್ಥಿತಿ ಎದುರಿಸಿದರು. ಚಾಣಾಕ್ಷ ನಡೆಯಿಂದ ಮೊದಲ ಪಂದ್ಯದಲ್ಲಿ ಮೇಲುಗೈ ಸಾಧಿಸಿದ್ದ ಅರೋನಿಯನ್ ಅವರಿಗೆ ಫೈನಲ್ ಹಾದಿ ಸುಗಮಗೊಳಿಸಲು ಎರಡನೇ ಪಂದ್ಯ ಡ್ರಾ ಮಾಡಿದ್ದರೆ ಸಾಕಿತ್ತು. ಆ ಪಂದ್ಯವು ಡ್ರಾನತ್ತ ಸಾಗುತ್ತಿರುವಾಗಲೇ ಇರಿಗೇಶಿ ಅವರ ತಪ್ಪು ನಡೆ ಅಮೆರಿಕದ ಆಟಗಾರನಿಗೆ ವರದಾನವಾಯಿತು.

ಮತ್ತೊಂದು ಸೆಮಿಫೈನಲ್‌ನಲ್ಲಿ ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಹ್ಯಾನ್ಸ್ ನೀಮನ್ 2.5–1.5ರಿಂದ ಸ್ವದೇಶದ ಫ್ಯಾಬಿಯಾನೊ ಕರುವಾನ ಅವರಿಗೆ ಆಘಾತ ನೀಡಿ ಫೈನಲ್ ಪ್ರವೇಶಿಸಿದರು. 22 ವರ್ಷದ ನೀಮನ್ ಮೊದಲ ಪಂದ್ಯಕ್ಕೆ ಸ್ವಲ್ಪ ತಡವಾಗಿ ಬಂದು, ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾದರು. ಎರಡು ಡ್ರಾ ಪಂದ್ಯಗಳ ಬಳಿಕ ಟೈಬ್ರೇಕರ್‌ನಲ್ಲಿ ನೀಮನ್ ಗೆಲುವು ಸಾಧಿಸಿದರು.

ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದ ಭಾರತದ ಆರ್. ಪ್ರಜ್ಞಾನಂದ ಅವರು 3ರಿಂದ 8ನೇ ಸ್ಥಾನಕ್ಕಾಗಿ ನಡೆದ ಪ್ಲೇ ಆಫ್‌ನಲ್ಲಿ 1.5- 0.5ರಿಂದ ಜರ್ಮನಿಯ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿದರು. ಮೊದಲ ಪಂದ್ಯವನ್ನು ಡ್ರಾ ಮಾಡಿಕೊಂಡ ಪ್ರಜ್ಞಾನಂದ, ಎರಡನೇ ಪಂದ್ಯದಲ್ಲಿ ಗೆಲುವು ಸಾಧಿಸಿದರು. ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ) ಕೂಡ ಇದೇ ಅಂತರದಲ್ಲಿ ಉಜ್ಬೇಕಿಸ್ತಾನದ ಜಾವೊಕಿರ್ ಸಿಂಧರೋವ್ ವಿರುದ್ಧ ಗೆದ್ದರು.

ರಾಷ್ಟ್ರೀಯ ಕ್ರೀಡಾ ಮಂಡಳಿ ಸ್ಥಾಪನೆಗೆ ಕೇಂದ್ರ ಪ್ರಸ್ತಾವ

ಕ್ರೀಡಾ ಆಡಳಿತ ಮಸೂದೆ

ನವದೆಹಲಿ(ಪಿಟಿಐ): ನೂತನ ಕ್ರೀಡಾ ಆಡಳಿತ ಮಸೂದೆಯನ್ನು ಮಂಡಿಸಲು ಸಜ್ಜಾಗಿರುವ ಕೇಂದ್ರ ಸರ್ಕಾರವು ರಾಷ್ಟ್ರೀಯ ಕ್ರೀಡಾ ಮಂಡಳಿ (ಎನ್‌ಎಸ್‌ಬಿ) ಸ್ಥಾಪಿಸುವ ಪ್ರಸ್ತಾವ ಹೊಂದಿದೆ. ಈ ಮಂಡಳಿಗೆ ಹಲವು ಮಹತ್ವದ ಅಧಿಕಾರಗಳನ್ನು ನೀಡಲಿದೆ. ಆ ಮೂಲಕ ಮಸೂದೆಗೆ ಸಾಂಸ್ಥಿಕ ರೂಪ ನೀಡಲಿದೆ.

ಮಸೂದೆಯಲ್ಲಿ 'ನಿಯಂತ್ರಣ' ಎಂಬ ಪದವನ್ನು ಕೈಬಿಡಲಾಗಿದೆ. ಆದರೆ ಈ ಮಂಡಳಿಯು ಕ್ರೀಡಾ ಫೆಡರೇಷನ್‌ಗಳ ಮೇಲೆ 'ಹತೋಟಿ' ಸಾಧಿಸುವ ಅಧಿಕಾರವನ್ನು ಹೊಂದಲಿದೆ ಎನ್ನಲಾಗಿದೆ. ದೂರುಗಳನ್ನು ಆಧರಿಸಿ ಫೆಡರೇಷನ್‌ಗಳ ಮಾನ್ಯತೆಯನ್ನು ಅಮಾನತು ಮಾಡುವ, ಚುನಾವಣೆ ಪ್ರಕ್ರಿಯೆಗಳಲ್ಲಿ ಲೋಪ ಮತ್ತು ಹಣದ ದುರ್ಬಳಕೆ ಮತ್ತಿತರ ಪ್ರಕರಣಗಳಲ್ಲಿ ಕ್ರಮ ಜರುಗಿಸುವ ಅಧಿಕಾರ ಈ ಮಂಡಳಿಗೆ ಲಭಿಸಲಿದೆ.

ಸೋಮವಾರ ಆರಂಭವಾಗಲಿರುವ ಮುಂಗಾರು ಸಂಸತ್ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲಾಗುತ್ತಿದೆ.

ಈ ಮಸೂದೆಯ ಪ್ರಕಾರ ಕ್ರೀಡಾ ಫೆಡರೇಷನ್‌ಗಳ ಪದಾಧಿಕಾರಿಗಳ ನಿವೃತ್ತಿಯ ವಯೋಮಿತಿಯನ್ನು 70 ರಿಂದ 75 ವರ್ಷಕ್ಕೆ ಹೆಚ್ಚಿಸುವ ಸಾಧ್ಯತೆ ಇದೆ. ಒಂದೊಮ್ಮೆ ಆಯಾ ಕ್ರೀಡೆಯ ಅಂತರ ರಾಷ್ಟ್ರೀಯ ಫೆಡರೇಷನ್‌ಗಳು ಸಮ್ಮತಿಸಿದರೆ ಅವರು ಚುನಾವಣೆಗೂ ಸ್ಪರ್ಧಿಸಲು ಅವಕಾಶ ನೀಡಬಹುದಾಗಿದೆ.

ಎನ್.ಎಸ್.ಬಿ.ಯ ಮುಖ್ಯಸ್ಥರು ಮತ್ತು ಸದಸ್ಯರನ್ನು ಕೇಂದ್ರ ಸರ್ಕಾರವು ನೇಮಕ ಮಾಡಲಿದೆ. 'ಸಾಮರ್ಥ್ಯ, ಸಮಗ್ರತೆ ಮತ್ತು ಪ್ರತಿಷ್ಠಿತ' ವ್ಯಕ್ತಿಗಳನ್ನು ಈ ಆಯ್ಕೆಗೆ ಪರಿಗಣಿಸಲಾಗುವುದು.

ಮಂಡಳಿಯ ಅಂಗಸಂಸ್ಥೆಗಳಲ್ಲಿ 'ಸಾರ್ವಜನಿಕ ಆಡಳಿತ, ಕ್ರೀಡಾ ಆಡಳಿತ, ಕ್ರೀಡಾ ಕಾನೂನು ಮತ್ತು ಇತರ ಸಂಬಂಧಿತ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಇರುವ ಪದಾಧಿಕಾರಿಗಳು ಇರಬೇಕು' ಎಂದು ಮಸೂದೆಯಲ್ಲಿ ಹೇಳಲಾಗಿದೆ.

ಈ ಎಲ್ಲ ನೇಮಕಗಳನ್ನು ಶೋಧ ಮತ್ತು ಆಯ್ಕೆ ಸಮಿತಿಯು ನಡೆಸಲಿದೆ. ಈ ಸಮಿತಿಯಲ್ಲಿ ಸಂಪುಟ ಕಾರ್ಯದರ್ಶಿ ಅಥವಾ ಕ್ರೀಡಾ ಕಾರ್ಯದರ್ಶಿಯು ಮುಖ್ಯಸ್ಥರಾಗಿರುತ್ತಾರೆ. ಭಾರತ ಕ್ರೀಡಾ ಪ್ರಾಧಿಕಾರದ (ಎಸ್‌ಎಐ) ಮಹಾನಿರ್ದೇಶಕ, ರಾಷ್ಟ್ರೀಯ ಕ್ರೀಡಾ ಸಂಸ್ಥೆಯ ಅಧ್ಯಕ್ಷ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಖಜಾಂಚಿಯಾಗಿ ಸೇವೆ ಸಲ್ಲಿಸಿದ ಇಬ್ಬರು ಕ್ರೀಡಾ ಆಡಳಿತಾಧಿಕಾರಿಗಳು ಮತ್ತು ದ್ರೋಣಾಚಾರ್ಯ ಅಥವಾ ಖೇಲ್ ರತ್ನ ಅಥವಾ ಅರ್ಜುನ ಪ್ರಶಸ್ತಿ ಪುರಸ್ಕೃತರಾಗಿರುವ ಒಬ್ಬ ಶ್ರೇಷ್ಠ ಕ್ರೀಡಾಪಟುವನ್ನು ಒಳಗೊಂಡಿರುತ್ತದೆ.

ಇದುವರೆಗೆ ಭಾರತ ಒಲಿಂಪಿಕ್ಸ್ ಸಮಿತಿ ನಿರ್ವಹಿಸುತ್ತಿದ್ದ ಎಲ್ಲ ಕಾರ್ಯಗಳೇ ಈಗ ಎನ್‌ಎಸ್‌ಬಿ ವ್ಯಾಪ್ತಿಗೆ ಬರಲಿವೆ. ಎಲ್ಲ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ನೋಡೆಲ್ ಸಂಸ್ಥೆಯಾಗಿತ್ತು. ಕಳೆದ ಕೆಲವು ದಿನಗಳಿಂದ ಐಒಎಯಲ್ಲಿ ಆಂತರಿಕ ಕಲಹ, ಭಿನ್ನಾಭಿಪ್ರಾಯ ಮತ್ತಿತರ ಲೋಪಗಳು ಹೆಚ್ಚು ಸುದ್ದಿಯಾಗುತ್ತಿವೆ.

ಬ್ಯಾಸ್ಕೆಟ್‌ಬಾಲ್: ಎಚ್‌ಬಿಆರ್ ಬಿ.ಸಿ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಬಿಆರ್ ಬಿ.ಸಿ ತಂಡ ಎಸ್. ರಂಗರಾಜನ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಸಿ' ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 82–58ರಿಂದ ಯಲಹಂಕ ನ್ಯೂ ಟೌನ್ ತಂಡವನ್ನು ಸೋಲಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಶನಿವಾರ ನಡೆದ ಲೀಗ್ ಪಂದ್ಯದಲ್ಲಿ, ಪ್ರಥಮಾರ್ಧದಲ್ಲಿ 8 ಅಂಕಗಳಿಂದ (41–33) ಮುನ್ನಡೆಯಲ್ಲಿದ್ದ ಎಚ್‌ಬಿಆರ್ ಬಿ.ಸಿ ತಂಡವು ಉತ್ತರಾರ್ಧದಲ್ಲಿ ಪಾರಮ್ಯ ಮೆರೆಯಿತು. ಎಚ್‌ಬಿಆರ್ ಪರ ಸಂಕೇತ್ 26 ಅಂಕ ಗಳಿಸಿದರೆ, ಶಶಿಧರ್ (13 ಅಂಕ) ಉತ್ತಮ ಸಾಥ್ ನೀಡಿದರು.

ಯಲಹಂಕ ನ್ಯೂ ಟೌನ್ ತಂಡದ ಚೆಗುವೆರಾ 27 ಹಾಗೂ ಪೂರ್ಣ 11 ಪಾಯಿಂಟ್ಸ್ ಕಲೆಹಾಕಿದರು.

ಮತ್ತೊಂದು ಪಂದ್ಯದಲ್ಲಿ ಸಿನ್ಸಿನಾಟೀಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 67–64ರಿಂದ ಅಪ್ಪಯ್ಯ ಬಿ.ಸಿ ಎದುರು ರೋಚಕ ಜಯ ಸಾಧಿಸಿತು.

ಪ್ರಥಮಾರ್ಧದಲ್ಲಿ 6 ಅಂಕಗಳಿಂದ ಹಿಂದಿದ್ದ ಸಿನ್ಸಿನಾಟೀಸ್, ಉತ್ತರಾರ್ಧದಲ್ಲಿ ಚುರುಕಿನ ಆಟದ ಮೂಲಕ ಮೇಲುಗೈ ಸಾಧಿಸಿತು. ಸಿನ್ಸಿನಾಟೀಸ್ ಪರ ಶಶಾಂಕ್ ಎಸ್. 28 ಹಾಗೂ ಕೃಷ್ಣಾ 11 ಅಂಕ ಸಂಪಾದಿಸಿದರು. ಅಪ್ಪಯ್ಯ ಬಿ.ಸಿ ತಂಡದ ವಿನೀತ್ 17 ಹಾಗೂ ಪ್ರದ್ಯುಮ್ನ 15 ಅಂಕ ಗಳಿಸಿ, ಪ್ರಬಲ ಪೈಪೋಟಿ ನೀಡಿದರು.

ಫಿಡೆ ಮಹಿಳಾ ವಿಶ್ವಕಪ್: ಹಾರಿಕಾ– ದಿವ್ಯಾ ಪಂದ್ಯ ಡ್ರಾ

ಚೆಸ್: ಹಂಪಿಗೆ ಆರಂಭಿಕ ಮುನ್ನಡೆ


ಕೋನೇರು ಹಂಪಿ


ಆರ್. ವೈಶಾಲಿ


ಡಿ. ಹಾರಿಕಾ


ದಿವ್ಯಾ

ಬಟುಮಿ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಕೋನೇರು ಹಂಪಿ ಅವರು ಶನಿವಾರ ನಡೆದ ಫಿಡೆ ಮಹಿಳಾ ಚೆಸ್ ವಿಶ್ವಕಪ್‌ನ ಕ್ವಾರ್ಟರ್ ಫೈನಲ್‌ನ ಮೊದಲ ಪಂದ್ಯದಲ್ಲಿ ಚೀನಾದ ಯುಕ್ಸಿನ್ ಸಾಂಗ್ ಅವರನ್ನು ಮಣಿಸಿದರು.

ಭಾರತದ ಅಗ್ರಮಾನ್ಯ ಆಟಗಾರ್ತಿ ಹಂಪಿ, ಎರಡನೇ ಪಂದ್ಯವನ್ನು ಡ್ರಾ ಮಾಡಿಕೊಂಡರೂ ಸೆಮಿಫೈನಲ್‌ಗೆ ಮುನ್ನಡೆಯಬಹುದು. ಒಂದು ವೇಳೆ ಆ ಪಂದ್ಯದಲ್ಲಿ ಯುಕ್ಸಿನ್ ಮೇಲುಗೈ ಸಾಧಿಸಿದರೆ, ಫಲಿತಾಂಶ ನಿರ್ಣಯಕ್ಕಾಗಿ ಟೈಬ್ರೇಕರ್‌ನ ಮೊರೆ ಹೋಗಲಾಗುತ್ತದೆ.

ಭಾರತ ಆಟಗಾರ್ತಿಯರ ವ್ಯವಹಾರವಾಗಿರುವ ಮತ್ತೊಂದು ಕ್ವಾರ್ಟರ್ ಫೈನಲ್‌ನ ಮೊದಲ ಪಂದ್ಯದಲ್ಲಿ ಐಎಂ ದಿವ್ಯಾ ದೇಶಮುಖ್ ಅವರು ಅನುಭವಿ ಡಿ. ಹಾರಿಕಾ ಅವರೊಂದಿಗೆ ಡ್ರಾ ಮಾಡಿಕೊಂಡರು. ಕೇವಲ 31 ನಡೆಗಳ ನಂತರ ಅವರು ಅಂಕ ಹಂಚಿಕೊಂಡರು.

ಭಾರತದ ಮತ್ತೊಬ್ಬ ಆಟಗಾರ್ತಿ ಆರ್.ವೈಶಾಲಿ ಅವರು ಮೊದಲ ಪಂದ್ಯದಲ್ಲಿ ಮಾಜಿ ವಿಶ್ವ ಚಾಂಪಿಯನ್ ಟಾನ್ ಝೊಂಗ್ಯಿ (ಚೀನಾ) ಅವರೊಂದಿಗೆ ಡ್ರಾ ಸಾಧಿಸಿದರು.

ಚೆನ್ನೈನ ಆಟಗಾರ್ತಿ, ಪ್ರಬಲ ಎದುರಾಳಿಯ ವಿರುದ್ಧ 73 ನಡೆಗಳ ನಂತರ ಅಂಕ ಹಂಚಿಕೊಂಡರು.

ಅಗ್ರ ಶ್ರೇಯಾಂಕದ ಟಿಂಗ್ಜಿ ಲೀ (ಚೀನಾ) ಆರಂಭಿಕ ಪಂದ್ಯದಲ್ಲಿ ಜಾರ್ಜಿಯಾದ ನಾನಾ ಜಾಗ್ನಿಡ್ಜೆ ಅವರನ್ನು ಸೋಲಿಸಿ, ಸೆಮಿಫೈನಲ್‌ಗೆ ಹತ್ತಿರವಾದರು.

ಭಾರತದ ನಾಲ್ವರು ಆಟಗಾರ್ತಿಯರು ಕ್ವಾರ್ಟರ್ ಫೈನಲ್‌ನಲ್ಲಿ ಆಡುತ್ತಿದ್ದು, ಟೂರ್ನಿಯ ಇತಿಹಾಸದಲ್ಲೇ ಒಂದೇ ದೇಶದ ನಾಲ್ಕು ಮಂದಿ ಎಂಟರ ಘಟ್ಟ ತಲುಪಿದ್ದು ಇದೇ ಮೊದಲು.

ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆದವರು ಕಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಗಳಿಸುವರು. ಟೂರ್ನಿಯು ಒಟ್ಟು ₹6 ಕೋಟಿ ಬಹುಮಾನ ಮೊತ್ತ ಹೊಂದಿದೆ.